TIGHT BINDING

UNIVERSAL
LIBRARY
OU_200716
UNIVERSAL
LIBRARY

KARNÂTA CHAMPOO MAHÂKÂVYAM

MYSORE MAHÂRÂJA CHARITRAM

ಕರ್ಣಾಟ ಚೆಂಪೂ ಮಹಾಕಾವ್ಯಂ

ಮಯಿಶೂರ ಮಹಾರಾಜ ಚರಿತ್ರಂ

ಮೈಸೂರು ಶ್ರೀಮನ್ಮಹಾರಾಜರವರ ಆಸ್ಥಾನ ಮಹಾ ವಿದ್ವಾಂಸರಾದ

ಕವಿತಿಲಕ, ಸೋಸಲೆ, ಅಯ್ಯಶಾಸ್ತ್ರಿಗಳಿಂದ

ವಿರಚಿತವಾದುದು.

MYSORE

PRINTED AT THE G. T. A. PRESS

1916

(Copyright Registered.)

PRICE RE. 1-4-0.] [ಕ್ರಯ ರೂ. ೧-೪-೦.



H. H. Sree Chamarajendra Wodeyar Bahadur, G.C.S.I.,
Late Maharaja of Mysore.

ಪೀಠಿಕೆ.

ಶ್ರೀಮತ್ಕರ್ಣಾಟದೇಶಾವತಂಸ ಮಹಿಶೂರರಾಜಧಾನೀರತ್ನಸಿಂಹಾಸನಾಧೀಶ್ವರರಾಗಿದ್ದ ಲೇಟ್ ಮಹಾರಾಜರು ಶ್ರೀಚಾಮರಾಜೇಂದ್ರಒಡೆಯರ್ ಬಹದೂರ್ ಜಿ.ಸಿ. ಎಸ್. ಐ. ಯವರು ತಮಗೆ ಸಂಸ್ಕೃತೋಪಾಧ್ಯಾಯರೂ ಆಸ್ಥಾನ ಮಹಾವಿದ್ವಾಂಸರೂ ಆಗಿದ್ದ ನಮ್ಮ ತಂದೆಗಳಾದ ಸೋಸಲೆ, ಗರಳಪುರೀಶಶಾಸ್ತ್ರಿಗಳವರ ಕಾಲದಿಂದಲೂ ನನ್ನಲ್ಲಿ ಸಾಭಿಮಾನರಾಗಿ ನಮ್ಮತಂದೆಗಳನಂತರ ತಮ್ಮ ಕುಮಾರಿಯರ ಮತ್ತು ಕುಮಾರರ ಸಂಸ್ಕೃತಕರ್ಣಾಟಭಾಷಾಪಾಠಕ್ಕೆ ನನ್ನನ್ನೇ ನೇಮಿಸಿದರು. ಈ ಕೃತಜ್ಞತೆಯಿಂದ ನಾನು ಅವರ ಚರಿತ್ರೆಯನ್ನು ಒಂದುಚಂಪೂಗ್ರಂಥವಾಗಿ ರಚಿಸಬೇಕೆಂದು ಉದ್ದೇಶಿಸಿದ್ದೆನು. ಹೀಗಿರುವಲ್ಲಿ ದರ್ಬಾರ್‌ಬಕ್ಷ್ಶಿಯರಾಗಿದ್ದ ರಾಯಬಹದೂರ್ ಮ|| ರಾ|| ಏ. ನರಸಿಂಹಯ್ಯಂಗಾರರೂಸಹ ಲೇಟ್ ಮಹಾರಾಜರವರ ಕಾಲಾನಂತರ ನನ್ನನ್ನು ಕುರಿತು-" ಲೇಟ್ ಮಹಾರಾಜರವರ ಚರಿತ್ರೆಯನ್ನು ನೀವೊಂದು ಗ್ರಂಥವಾಗಿ ಬರೆದರೆ ಚೆನ್ನಾಗಿರುವುದೆಂದು " ಪ್ರೋತ್ಸಾಹಗೊಳಿಸಿದ್ದರು. ಅಲ್ಲಿಂದ ಮುಂದೆ ಮಹಾಮಾತೃಶ್ರೀಯವರಾದ ಶ್ರೀಮದ್ರಾಣೀವಿಲಾಸ ಮಹಾರಾಣಿ ರೀಜಂಟ್ ಸಿ.ಐ.ಯವರೂ ಶ್ರೀಮನ್ಮಹಾರಾಜರವರಾದ ನಾಲ್ವಡಿ ಶ್ರೀಕೃಷ್ಣರಾಜಒಡೆಯರ್ ಬಹದೂರ್ ಜಿ.ಸಿ.ಎಸ್. ಐಯವರೂ ಸಹ ಲೇಟ್ ಮಹಾರಾಜರವರಂತೆಯೇ ಪೂರ್ಣಾಭಿಮಾನವಿಟ್ಟು ನನ್ನನ್ನು ಗೌರವದಿಂದ ಪುರಸ್ಕರಿಸುತ್ತಿರುವುದಕ್ಕಾಗಿಯೂ ನಾನು ಬಹಳ ಕೃತಜ್ಞನಾಗಿ ಇವರುಗಳ ವರ್ತಮಾನಕಾಲಿಕವಾದ ಚರಿತ್ರೆಯನ್ನೂ ಅದರೊಡನೆಯೇ ಸೇರಿಸಿ ಬರೆಯಬೇಕೆಂದೂ ಹೀಗೆ ಬರೆಯುವುದರಲ್ಲಿ ಈ ಮಹಾರಾಜವಂಶದ ಪೂರ್ವಚರಿತ್ರೆಯ ಮುಖ್ಯಾಂಶಗಳನ್ನೂ ಸೇರಿಸಿದರೆ ಚೆನ್ನಾಗಿರುವುದೆಂದೂ ಯೋಚಿಸಿ, ಆದಿಯದುರಾಯರು ಮಹಿಶೂರುಸಂಸ್ಥಾನಕ್ಕೆ ಬಂದುದು ಮೊದಲುಗೊಂಡು ಮುನ್ಮಡಿ ಕೃಷ್ಣರಾಜ ಒಡೆಯರು ಪುಕ್ರಸ್ವೀಕಾರಮಾಡಿಕೊಂಡ ವರೆಗೆ ಶ್ರೀಮನ್ಮಹಾರಾಜ ಚಾಮರಾಜೇಂದ್ರ ಒಡೆಯರವರ ಪಂಚರತ್ನಾಕರದಲ್ಲಿರುವಂತೆಯೂ ಅಲ್ಲಿಂದ ಮುಂದೆ ನಾನು ಪ್ರತ್ಯಕ್ಷವಾಗಿ ನೋಡಿ ತಿಳಿದಿರುವಂತೆಯೂ ಅವರಿವರ ಮುಖವಿಂದ ಕೇಳಿ ತಿಳಿದಿರುವಂತೆಯೂ ಈಮಹಾರಾಜರ ಚರಿತ್ರೆಯನ್ನು ಕರ್ಣಾಟ ಚಂಪೂಗ್ರಂಥವಾಗಿ ರಚಿಸಿರುವೆನು.

ಗುಣೈಕಪಕ್ಷಪಾತಿಗಳು ಇದರಲ್ಲೇನಾದರೂ ದೋಷವಿದ್ದರೆ ಅದನ್ನು ಗಣನೆಗೆ ತಾರದೆ ಕ್ಷಮಿಸುವರೆಂದು ನಂಬುತ್ತೇನೆ.

ಈ ಗ್ರಂಥವು ಸ್ತ್ರೀಯರಿಗೂ ಪಠನಯೋಗ್ಯವಾಗಿರಬೇಕೆಂಬ ಉದ್ದೇಶದಿಂದ ಇದರಲ್ಲಿ ಮಹಾಕಾವ್ಯಲಕ್ಷಣಾನುಸಾರವಾದ ಅಷ್ಟಾದಶವರ್ಣನೆಗಳೂ ಶೃಂಗಾರಾದಿ ನವರಸಗಳೂ ಮಿತವಾಗಿಯೂ ಗಂಭೀರವಾಗಿಯೂ ಇರುವುವು.

ಈ ಗ್ರಂಥದಲ್ಲಿ ಶಬ್ದಾನುಶಾಸನಕಾರನ ನವೀನಮತವನ್ನೂ ಗಿರಿಜಾಕಲ್ಯಾಣಾದಿಪ್ರಾಚೀನಗ್ರಂಥಗಳ ಪ್ರಯೋಗವನ್ನೂ ಪ್ರಮಾಣೀಕರಿಸಿ ವಿಶೇಷವಾಗಿ ಶ್ರುತಿವೈಗುಣ್ಯವಿಲ್ಲದುದರಿಂದ ಸುಖಬೋಧೆಗಾಗಿ ಱಱಿಕುಳಕ್ಷ್ಳಲಕಾರಗಳ ಮತ್ತು ರೇಫಱಕಾರಗಳ ಪರಸ್ಪರವ್ಯಾಸನಿಯಮವು ಅನುಸರಿಸಲ್ಪಟ್ಟಿರುವುದು. ಮತ್ತು ಱಿಕಾರವೂ ಱಕಾರವೂ ಬರುವಸ್ಥಳಗಳಲ್ಲಿ ಱಿಕಾರಕ್ಕೆ ಳಕಾರವೂ ಱಕಾರಕ್ಕೆ ರೇಫವೂ ಉಪಯೋಗಿಸಲ್ಪಟ್ಟಿರುವುವು.

ಈ ಗ್ರಂಥದಲ್ಲಿ ಮೊದಲಿಂದ ಅಯ್ದು ಆಶ್ವಾಸಗಳನ್ನು ಮೈಸೂರು ಗವರ್ನ್ಮೆಂಟ್ ಕನ್ನಡಸ್ಕೂಲ್ ಹೆಡ್ಮಾಸ್ಟರಾಗಿದ್ದ ಮ|| ರಾ|| ಬಿ. ಮಲ್ಲಪ್ಪನವರೂ ಅಲ್ಲಿಂದ ಮುಂದೆ ಅಯ್ದು ಆಶ್ವಾಸಗಳನ್ನು ಸೆಸ್ಸಿಯರ್ ಮಿಷನ್ ಸ್ಕೂಲ್ ಕನ್ನಡ ಪಂಡಿತರೂ ಆಸ್ಥಾನಪಂಡಿತರೂ ಆಗಿದ್ದ ವೇ|| ಲಕ್ಷ್ಮೀನರಸಿಂಹ ಶಾಸ್ತ್ರಿಗಳೂ ಅಲ್ಲಿಂದ ಮುಂದೆ ಎರಡು ಆಶ್ವಾಸಗಳನ್ನು ಮೈಸೂರು ನಾರ್ಮಲ್ ಸ್ಕೂಲ್ ಕನ್ನಡ ಪಂಡಿತರಾಗಿರುವ ವೇ|| ತಿಮ್ಮಪ್ಪಶಾಸ್ತ್ರಿಗಳೂ ಶೋಧಿಸಿ ನೋಡಿ ಸಮ್ಮತಿಸಿರುವುದಕ್ಕಾಗಿ ಕೃತಜ್ಞನಾಗಿರುವೆನು.

ನಳಸಂವತ್ಸರ ಜ್ಯೈಶ್ರಮಾಸ,
ಕವಿತಾವಿಲಾಸಂ
ಮೈಸೂರು.

ಸೋಸಲೆ, ಅಯ್ಯಂಕಾಸ್ತ್ರಿ.



H. H. Sree Krishna Raja Wodeyar Bahadur, G.C.S.I.,
Maharaja of Mysore.

ವಿಷಯಾನುಕ್ರಮಣಿಕೆ.

ಪ್ರಥಮಾಶ್ವಾಸ.

ಯದುರಾಯರು ಮಹಿಶೂರ ರಾಜ್ಯಾಧಿಕಾರಕ್ಕೆ ಬಂದುದು–ಬೆಟ್ಟದ ಚಾಮುರಾಜ ಒಡೆಯರ, ಆದಿ ತಿಮ್ಮರಾಜ ಒಡೆಯರ, ಹರೀಚಾಮರಾಜರಸ ಒಡೆಯರ ವಂಶಾನುಕ್ರಮವಾದ ರಾಜ್ಯಭಾರ—ಅಯ್ದನೆಯ ಬೆಟ್ಟದ ಚಾಮುರಾಜ ಒಡೆಯರೂ ಇಮ್ಮಡಿ ತಿಮ್ಮರಾಜ ಒಡೆಯರೂ ಬೋಳಚಾಮುರಾಜ ಒಡೆಯರೂ ಮುಮ್ಮಡಿ ಬೆಟ್ಟದ ಚಾಮುರಾಜ ಒಡೆಯರೂ ಚಿಕ್ಕಚಿಕ್ಕ ಪಾಳೆಯಗಾರರನ್ನು ಜಯಿಸಿ ರಾಜ್ಯವನ್ನು ವೃದ್ಧಿಪಡಿಸುತ್ತ ರಾಜ್ಯಭಾರ ಮಾಡಿದುದು.

ದ್ವಿತೀಯಾಶ್ವಾಸ.

ರಾಜಒಡೆಯರು ಸಿಂಹಾಸನವನ್ನು ಪಡೆದು ಶ್ರೀರಂಗಪಟ್ಟಣದಲ್ಲಿ ರಾಜ್ಯಭಾರ ಮಾಡುತ್ತ ನವರಾತ್ರೋತ್ಸವ ಕ್ರಮವನ್ನು ಏರ್ಪಡಿಸಿದುದು. ಚಾಮರಾಜ ಒಡೆಯರೂ ಇಮ್ಮಡಿ ರಾಜಒಡೆಯರೂ ಧರ್ಮದಿಂದ ರಾಜ್ಯಭಾರ ಮಾಡಿದುದು. ಕಂಠೀರವ ನರಸರಾಜಒಡೆಯರು ತಿರುಚನಾಪಲ್ಲಿಯ ಜಟ್ಟಿಯನ್ನು ಜಯಿಸಿ ರಾಜ್ಯಭಾರ ಮಾಡುತ್ತ ಅನೇಕ ಚೋರಭಟರನ್ನು ಸಂಹರಿಸಿ ಶ್ರೀರಂಗಪಟ್ಟಣವನ್ನು ಬಲಪಡಿಸಿದುದು—ದೇವರಾಜ ಒಡೆಯರು ರಾಜ್ಯವನ್ನು ವೃದ್ಧಿಪಡಿಸಿ ಶಾಶ್ವತ ಧರ್ಮಕಾರ್ಯಗಳನ್ನು ಮಾಡಿದುದು—ಚಿಕ್ಕದೇವರಾಜ ಒಡೆಯರು ಶತ್ರುಗಳನ್ನು ಜಯಿಸಿ ರಾಜ್ಯವನ್ನು ವೃದ್ಧಿಪಡಿಸಿ ರಾಜ್ಯದಲ್ಲಿ ಅನೇಕ ನಿಬಂಧನೆಗಳನ್ನು ಏರ್ಪಡಿಸಿ ದೆಹಲಿಯ ಪಾದಷಾಎನಿಂದ ಶಿಖಾಸರವನ್ನೂ ಇನ್ನೂ ಅನೇಕ ಬಿರುದುಗಳನ್ನೂ ಪಡೆದು ರಾಜಾಧಿರಾಜರೆನಿಸಿಕೊಂಡುದು—ಕಂಠೀರವ ಮಹಾರಾಜರು ಮೂಕರಾಗಿದ್ದರೂ ಪರಾಕ್ರಮಶಾಲಿಗಳೆನಿಸಿಕೊಂಡು ರಾಜ್ಯಭಾರ ಮಾಡಿದುದು—ದೊಡ್ಡಕೃಷ್ಣರಾಜ ಒಡೆಯರು ಶತ್ರುಗಳನ್ನು ಜಯಿಸಿ ಧರ್ಮಕಾರ್ಯಗಳನ್ನು ಮಾಡಿ ವೈಷ್ಣವಾಚಾರವನ್ನು ಅಂಗೀಕರಿಸಿದುದು—ಚಾಮುರಾಜ ಒಡೆಯರ ರಾಜ್ಯಭಾರ–ದಳವಾಯಿ ದೇವರಾಜಯ್ಯ, ನಂಜರಾಜಯ್ಯ ಮೊದಲಾದವರ ರಾಜದ್ರೋಹ—ಇಮ್ಮಡಿ ಕೃಷ್ಣರಾಜ ಒಡೆಯರ ಸ್ವತಂತ್ರರಾಜ್ಯಭಾರ—ಹೈದರಅಲಿಗೆ ಸರ್ವಾಧಿಕಾರ

ರವು ಒಂದುದು—ಬಾಲಕರಾದ ನಂಜರಾಜ ಒಡೆಯರ ಬೆಟ್ಟದ ಚಾಮರಾಜಒಡೆಯರ—ಖಾಸಾ ಚಾಮರಾಜಒಡೆಯರ ವಂಶ ಕ್ರಮ ರಾಜ್ಯಾಧಿಕಾರ—ಹೈದರಲಿಯ ಸರ್ವಾಧಿಕಾರ.

ತೃತೀಯಾಶ್ವಾಸ

ಹೈದರಲಿಯ ದಿಗ್ವಿಜಯ—ಟೀಪುವಿನ ದುರಾಗತ—ಲಕ್ಷ್ಮಮ್ಮಣ್ಣಿಯವರ ನಡಸಿದ ತಂತ್ರದಿಂದ ಆಂಗ್ಲೇಯರು ಯುದ್ಧದಲ್ಲಿ ಟೀಪುವನ್ನು ನಿಗ್ರಹಿಸಿ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಮಹಿಶೂರ ರಾಜ್ಯವನ್ನು ಕೈಸೇರಿಸಿದುದು.

ಚತುರ್ಥಾಶ್ವಾಸ.

ಮುಮ್ಮಡಿ ಕೃಷ್ಣರಾಜ ಒಡೆಯರು ಮಹಿಶೂರ ರಾಜಧಾನಿಯನ್ನು ಅಭಿವೃದ್ಧಿಪಡಿಸಿ ಅನೇಕ ಧರ್ಮಕಾರ್ಯಗಳನ್ನು ಮಾಡಿ ದುಷ್ಟರ ಹಾವಳಿಯಿಂದ ರಾಜ್ಯವನ್ನು ಆಂಗ್ಲೇಯರ ಅಧೀನಮಾಡಿದುದು. ಮತ್ತು ಚಾಮರಾಜೇಂದ್ರ ಒಡೆಯರನ್ನು ಪುತ್ರಸ್ವೀಕಾರ ಮಾಡಿಕೊಂಡುದು.

ಪಂಚಮಾಶ್ವಾಸದಿಂದ ದಶಮಾಶ್ವಾಸದವರೆಗೆ

ಚಾಮರಾಜೇಂದ್ರ ಒಡೆಯರ ಬಾಲ್ಯಚರಿತ್ರೆ, ವಿದ್ಯಾಭ್ಯಾಸ, ಉಪನಯನ, ವಿವಾಹ, ರಾಜ್ಯಾಧಿಕಾರ, ಸ್ವದೇಶಸಂಚಾರ, ಅನ್ಯದೇಶಸಂಚಾರ ಮೊದಲಾದ ಆದ್ಯಂತ ಚರಿತ್ರೆಗಳು.

ದಶಮಾಶ್ವಾಸ.


ನಾಲ್ವಡಿಕೃಷ್ಣರಾಜ ಒಡೆಯರ ಪಟ್ಟಾಭಿಷೇಕ—ವಾಣೀವಿಲಾಸ ಮಹಾರಾಣಿ ರೀಜಂಟರ ರಾಜ್ಯಭಾರ—ಇವರ ಧರ್ಮಕಾರ್ಯಗಳು—ರಾಜಕುಮಾರಿಯರ ಮತ್ತು ಮಹಾರಾಜ ನಾಲ್ವಡಿಕೃಷ್ಣರಾಜ ಒಡೆಯರ ಯುವರಾಜ ಕಂಠೀರವ ನರಸಿಂಹರಾಜ ಒಡೆಯರ ವಿದ್ಯಾಭ್ಯಾಸ—ಮಹಾರಾಜರವರ ಉಪನಯನ—ರಾಜಕುಮಾರಿಯರ ವಿವಾಹ.

ಏಕಾದಶಾಶ್ವಾಸ.

ಮಹಾರಾಜ ಯುವರಾಜರೊಡನೆ ಮಹಾರಾಣಿ ರೀಜಂಟರ ದೆಹಲೀನಗರಯಾತ್ರೆ—ನಾಲ್ವಡಿ ಶ್ರೀಕೃಷ್ಣರಾಜ ಒಡೆಯರ ರಾಜ್ಯಭಾರ—ಮತ್ತು ಇವರ ಗುಣಾತಿಶಯಗಳು.

ದ್ವಾದಶಾಶ್ವಾಸ.

ಹೊಸ ಅರಮನೆಯ ವರ್ಣನೆ—ಯುವರಾಜರವರ ವಿವಾಹಮಹೋತ್ಸವ—ಶ್ರೀಮನ್ಮಹಾರಾಜರವರ ರಾಜ್ಯಭಾರಾಭ್ಯುದಯ.



Kavithilaka, Mahavidwan, Sosale Ayya Sastry, Author.

ಶ್ರೀರಸ್ತು.

ಮಹಿಂಶೂರ ಮಹಾರಾಜ ಚರಿತ್ರಂ.

ಪ್ರಥಮಾಶ್ವಾಸಂ.

ಕಂ || ಶ್ರೀರಮಣ ಮುಖ್ಯ ನಾನಾ |
ಕಾರಂಗಳನಾಂತು ತೋರ್ಪ ದೇವನದೊರ್ವಂ ||
ಭೂರಿಪ್ರೇಮದೊಳೀಮಹಿ |
ಶೂರಮಹೀಂದ್ರಾನ್ವಯಕೊಡರ್ಚ್ಚಗೆ ಶುಭಮಂ ||೧||

ವೃ|| ಆವಳುಪೇಕ್ಷೆಯಿಂದೆ ಸುರಪಂಗಮಧೋಗತಿ ತಪ್ಪದಾದುದಿ |
ನ್ನಾವಳ ನಲ್ಮೆಯಿಂ ಪಡೆವನಾಯ್ಕಳಿಯುಂ ತ್ರಿಜಗತ್ಪ್ರಭುತ್ವಮಂ ||
ಸೇವಿಸುವರ್ಗೆ ತನ್ನಡಿಯನೊಲ್ದು ವಶಂಗತೆಯಾಗುವಾರಮಾ |
ದೇವಿ ನಿರೀಕ್ಷಿಸೆನ್ನನತಿವೇಲದಯಾರಸಪೂರ್ಣದೃಷ್ಟಿಯಿಂ ||೨||

ಆವಳ ಮೈಮೆಯಿಂ ಸಮನಿಸಿರ್ಪುದು ಶಕ್ತಿ ಸಮಸ್ತವಸ್ತುಗ |
ಳ್ಗಾವಳಿನುಣ್ಮತಿರ್ಕುಮುದಯಸ್ಥಿತಿಸಂಹೃತಿಗಳ್ಜಗಕ್ಕೆ ಮ ||
ತ್ತಾವಳ ಲೀಲೆ ನಿಳ್ಕದು ಪುರಾಣವಚಃಪ್ರಸರಕ್ಕಮಾಮಹಾ |
ದೇವತಪಃಫಲಾಕೃತಿ ದಯಾವತಿ ಪಾರ್ವತಿಯಾಗೆ ಭವ್ಯಮಂ ||೩||

ನಿರತಿಶಯಾನವದ್ಯಗುಣರೆಂದೆನಿಪೀಮಹಿಶೂರಮೇದಿನೀ |
ವರರ ಚರಿತ್ರಮಂ ಸರಸಭಾವಗುಣೋಜ್ವಲಗದ್ಯಪದ್ಯಬಂ ||
ಧುರಕೃತಿರೂಪದಿಂ ವಿರಚಿಸಲ್ಕೆ ಸಮುದ್ಯತನಾಗಿ ಬೇಡುವೇಂ |
ಸರಸಿರುಹಾಸನಪ್ರಣಯಿನೀ ಜನನೀ ಕುಡು ವಾಗ್ವಿಭೂತಿಯಂ ||೪||

ಶ್ರೀಮತ್ಕಾಶ್ಯಪ ವಂಶವಾರಿನಿಧಿ ರಾಕಾತಾರಕಾಧೀಶ್ವರಂ |
ಸಾಮಾಮ್ನಾಯ ಕಣಾದಪಾಣಿನಿವಚಸ್ಸಾಹಿತ್ಯಸಂಪತ್ಪದಂ ||
ಚಾವೋರ್ವಿಪತಿ ಸಂಸ್ಕೃತಪ್ರವಚನೋಪಾಧ್ಯಾಯನಿರ್ದ್ದಂ ಯಶೋ |
ಭೂಮಾಕ್ರಾಂತದಿಗಂತರಂ ಗರಪುರೀಶಾಖ್ಯಂ ಸುಧೀಶೇಖರಂ ||೫||

ಭೂಲೋಕಾಮರಭೂಜಭೋಜ ಕೃತಿಯೋಳ್ಕಾಂಡಂಗಳಯ್ದಿರ್ಪಿನಂ ।
ಲಾಲಿತ್ಯಂಮಿಗೆ ಷಷ್ಠಕಾಂಡಮನವಂ ಗೆಯ್ದುಂದದಿಂದಂ ನೆಗ ॥
ಳ್ದಾಲಂಕಾರಿಕರೊಲ್ದುನೋಡಿ ತಲೆದೂಗುತ್ತಿರ್ಪಿನಂ ಕೃಷ್ಣಭೂ ।
ಪಾಲೀಯಾಖ್ಯಮ ನಂಕೊಡರ್ಚಿದ ನಲಂಕಾರೋತ್ತಮಗ್ರಂಥಮಂ ॥೬॥

ಸುತನಾತಂಗೆ ತದಂಘ್ರಿಪದ್ಮಕೃಪೆಯಿಂ ಸಂಪ್ರಾಪ್ತವಿದ್ಯಾಧನಂ ।
ಕ್ಷ್ಮಾಪಾಲೋತ್ತಮಚಾಮರಾಜಸುತ ಕೃಷ್ಣಂ ಕ್ಷ್ಮೋಣಿಪಾಧ್ಯಾಪಕಂ ॥
ನುತಕರ್ಣಾಟಕಸಂಸ್ಕೃತೋಭಯ ಕವಿತ್ವಾಭಿಜ್ಞ ನಾಸಾಸ್ಥಾನಪಂ ।
ಡಿತರೊಳ್ವಿಶ್ರುತನಯ್ಯಶಾಸ್ತ್ರ ನೆಗಳ್ದಂ ತಾನೀಮಹಾಕಾವ್ಯಮಂ ॥೭॥

ಕಂ ॥ ಆವಂ ಮಜ್ಜನಕನೊಳಂ ।
ತೇವಾಸಿತೆಯಿಂದ ಮೆನ್ನನೊಡವುಟ್ಟಿಂಬಾ ॥
ಭಾವದೊಳೋವಿದ ನಾಚಾ ।
ಮಾವನಿಪ ನುದಾರಗುಣನಿಕಾಯಕ್ಕೊಲ್ದಾಂ ॥೮॥

ಕಂ ॥ ಸಮಸಂದ ಬಾಣಗುಣವಸು ।
ಹಿಮಕರಮಿತಶಾಲಿವಾಹ ವರ್ಷದೆ ಮಹಿಶೂ ॥
ರಮಹಾರಾಜಚರಿತ್ರಾ ।
ಖ್ಯಮಹಾಕಾವ್ಯಮನಿದಂ ನೆಗಳ್ದೆನಲಂಪಿಂ ॥೯॥

ವ॥ ಇಂತೀಮಹಾಕಾವ್ಯಮಂ ನೆಗಳುತ್ತಿರ್ಪಾಗಳೆನ್ನ ಕವಿತಾಶಕ್ತಿಗೆ ಮೆಚ್ಚೆ ॥೧೦॥

ಕಂ ॥ ಕವಿತಿಲಕನೆಂಬ ಬಿರುದಂ ।
ನವಮಣಿಕಟಕದೊಡ ನಿತ್ತ ನಾಕೃಷ್ಣನೃಪಂ ॥
ಪ್ರವಿದಿತಯಶ ನೆನಗೆ ಮನೋ ।
ಜವಸ ನದರ್ಕಂ ಕೃತಜ್ಞನೀಕೃತಿವೇಳ್ದಂ ॥೧೧॥

ಮತ್ತಂ, ಕಂ॥ ಸನ್ನುತ ಚಾಮನೃಪಾಲನ ।
ಸನ್ನಿಧಿ ಸಚಿವಾಧಿಕಾರಿ ನರಸಿಂಹಾರ್ಯಂ ॥
ತನ್ನಿರುಪಮ ಗುಣರಾಗದಿ ।
ನೆನ್ನಂ ಪ್ರೇರಿಸಲು ಮಾನಿದಂ ವಿರಚಿಸಿದೆಂ ॥೧೨॥

ವೃ|| ಧರೆಯೊಳ್ವಿಶ್ರುತಕೀರ್ತಿಯಾಂತ ಗುಣವರ್ಮಂ ರುದ್ರಭಟ್ಟಂ ಷಡ |
ಕ್ಷರಿನೇವಂ ನಯಸೇನ ನಾದಿಯೆನಿಪಾಪಂಪಂ ನವಂ ಪಂಪನುಂ ||
ದೊರೆವೆತ್ತಗ್ಗಳ ನಂತುರನ್ನ ನೆನಿಪೀಕರ್ಣಾಟಕಗ್ರಂಥಕ |
ರ್ತರ ಮಾರ್ಗಂಬಿಡಿದಿಂತು ನಾಂ ರಚಿಸುವೇ ನೀಕಾವ್ಯಮಂ ಭವ್ಯಮಂ ||೧೩||

ಭುವನಶ್ಲಾಘ್ಯ ಮೆನಿಪ್ಪ ಸಂಸ್ಕೃತಮಹಾಕಾವ್ಯಂಗಳಂ ಸಂಸ್ಕೃತೋ |
ಕ್ತಿವಿಶೇಷಜ್ಞ ರೆನಿಪ್ಪರೇ ತಿಳಿವರಾದಂ ದೇಶದೇಶಂಗಳೊಳ್ ||
ವ್ಯವಹಾರೋಚಿತಭಾಷೆಯಂ ತಿಳಿವರಲ್ಲರ್ ಸಂಸ್ಕೃತಗ್ರಂಥದಂ |
ತೆನ್ನೊ ಲ್ಲಂದದೊಳಾಗೆ ಭಾಷೆಯದು ಸರ್ವಗ್ರಾಹ್ಯ ಮೇನಾಗದೇ ||೧೪||

ಕಂ|| ಆದರಿಂ ಕರ್ಣಾಟಕದೇ |
ಶದೊಳಿಲ್ಲಜನರು ಮರಿಯಲೀಕೃತಿಯಸೊಡ ||
ರ್ಪಿದೆ ನೊಳ್ಗನ್ನಡನುಡಿಯೊ |
ಳ್ಪದಮಳಚಂಪೂಪ್ರಬಂಧರೂಪದಿ ನೀಗಳ್ ||೧೫||

ವೃ|| ಗಾವಿಲರುಂ ಗ್ರಹಿಸ್ಪ ತೆರದಿಂದಿರವೇಂ ಮಹಿಶೂರಸುಪ್ರಸಿ |
ದ್ಧಾವನಿಭೃನ್ಮಹಾ ಜನತೆಗಳ್ವಜನಂಗಳ ರೂಪದಿಂ ರಸ ||
ಜ್ಞಾವಳಿಮಾತ್ರಬೋಧ್ಯ ಮೆನಿಪೀಕೃತಿಯೇಕೆನೆ ಮುಗ್ಧರಿಂಪಿನಿಂ |
ತೀವಿದಭೋಜ್ಯಮೇಕುದರಪೂರಣಭೋಜ್ಯ ಮವರ್ಗೆ ಸಾಲದೇ ||೧೬||

ಕಂ|| ನೆಗಳನೆ ಕವಿ ಸತ್ಕೃತಿಯಂ |
ಸುಗಿದು ಕರಂ ದೂಷಿಪರ್ದುರಾತ್ಮರೆನುತ್ತುಂ ||
ವೊಗೆ ಕಣ್ಗಾವರಿಸುಗುಮೆಂ |
ದಗಿದೆಸಗನೆ ಸೋಮಯಾಜಿ ಯೌಪಾಸನಮಂ ||೧೭||

ಒಡಗೂಡಿದ ಕಲ್ಲಂ ಬೇ |
ರ್ಪಡಿಸಿ ಸುವರ್ಣಮನೆ ಕೊಳ್ವತೆರದಿಂ ಗಣಿಯೊಳ್ ||
ಕಡೆಸಾರ್ಚಿ ದೋಷಮಂ ಕೊ |
ಳ್ಗೊಡಗೂಡಿದ ಗುಣಮ ನರಿದರೆನ್ನೀಕೃತಿಯೊಳ್ ||೧೮||

ವೃ|| ಧರಣೀಮಂಡಲದೊ ಳ್ಪ್ರಸಿದ್ಧತರಜಂಬೂನಾಮಕದ್ವೀಪದೊ |
ಳ್ಭರತಕ್ಷೇತ್ರದೊಳೊಪ್ಪುತಿರ್ಪುದು ರೇವಾದಕ್ಷಿಣಶ್ರೀಂತದೊಳ್ ||

ಸ್ಫುರದುದ್ದಾಮಸಿತಾದ್ರಿಯಿಂ ಕಪಿಲೆಯಿಂ ಕಾವೇರಿಯಿಂ ಕೂಡಿ ಸುಂ |
ದರನಾನಾನಗರಂಗಳಿಂ ದವಿರಳಂ ಕರ್ಣಾಟಭೂಮಂಡಳಂ ||೧೯||

ಕಂ|| ಇದು ಭೂಕೈಲಾಸಂ ತಾ |
ನಿದು ಭೂವೈಕುಂಠ ಮೆನಿಪ ಗರಪುರದಿಂದಂ ||
ಯದುಗಿರಿಯಿಂದಂ ಕೂಡಿ |
ರ್ಪದರತಿಶಯ ವಿಳೆಯೊಳಾರ್ಗೆ ಪೊಗಳಲ್ಯಕ್ಯಂ ||೨೦||

ದಕ್ಷಿಣ ಕಾಶೀಕ್ಷೇತ್ರಮು |
ದೀಕ್ಷಿತೆಯೊಳಗೆಂದು ವಿದಿತಮಾಗಿರ್ಪವಿಲಾ ||
ಘಕ್ಷಯಕಾರಿ ಗಜಾರ |
ಣ್ಯಕ್ಷೇತ್ರದಿ ನೆಸೆವ ನಾಡದೇಂ ಪಾವನವೋ ||೨೧||

ಸುವಿಶಾಲ ತಟಾಕಂಗ |
ಳ್ವಿವಿಧವಿಚಿತ್ರತರ ದೇವತಾಯತನಂಗಳ್ ||
ಅಪರಳಫಲಪುಷ್ಪ ಯುತೋ |
ಪವನಂಗಳು ಮಿಲ್ಲದೆಡೆಗ ಳಿಲ್ಲಾನಾಡೊಳ್ ||೨೨||

ಸ್ವರ್ಣಾಕರ ಮೆಂಬುದರಿಂ |
ಕರ್ಣಯುಗಾಕರ್ಣನೀಯ ವಿಭವಮೆನಿಪ್ಪಾ ||
ಕರ್ಣಾಟ ಮಖಿಲಗುಣವ |
ದ್ವರ್ಣಾಶ್ರಿತಮಾಗಿ ತಾನದೇ ನೊಪ್ಪುಗುಮೋ ||೨೩||

ಮೊದಲಿಂ ತುದಿವರಮಿರ್ಪ |
ಕ್ಕದೊಳಂ ಕಣ್ಗೊಳಿಪ ಕರ್ವು ನೆಲ್ಗಳ ಬೆಳೆ ತೀ ||
ವದ ಕಾವೇರಿಯಿ ನೊಡಗೂ |
ಡಿದ ನಾಡದು ಧನ್ಯಮೆನಿಸಿ ಮೆರೆದಪು ದಿಳೆಯೊಳ್ ||೨೪||

ವ|| ಇಂತು ಸಕಲಜನಕ್ಕಂ ನಾಡೆ ಸೊಗವೀಡೆನಿಪ್ಪಾನಾಡೊಳ್||೨೫||

ಕಂ|| ಮೆರೆಗುಂ ಮಹಾಒಲಾದ್ರಿಯ |
ಪಸರದೊ ಳ್ಯದುನೃಪಾದಿ ಶಶಿವಂಶಜಭೂ ||
ವರಪಾಲಿತ ಮುರುವೈಭವ |
ಭರಿತಂ ಮಹಿಶೂರರಾಜಧಾನೀತಿಲಕಂ ||೨೬||

ಮಹಿಷಾಸುರ ನಿರ್ದ್ದಮಂ |
ಮಹಿಷಾಸುರನಗರಮೆಂದದಂ ಕೆಲರುಸಿರ್ವರ್ |
ಮಹಿಯೊಳ್ಮೂರರ ಪುರಮಿದು |
ಮಹಿಶೂರಪುರಾಖ್ಯೆಯಾಂತು ದೆಂಬ ರ್ಕೆಲಬರ್ ||೨೬||

ಮಹಿಯೊ ಳ್ಪ್ರಭೂತವಿಭವಂ |
ಮಹಿತಬುಧಾಸ್ಪಿತ ಮೆನಿಪ್ಪದಂ ಮತ್ತೆಕೆಲರ್ |
ಮಹಿಸುರಪುರ ಮೆಂದುಸಿರ್ವ |
ರ್ಸಹಜಂ ಪೆಸರಿಂತಿದರ್ಕೆ ಮೂರುಂ ನೋಡಲ್ ||೨೭||

ವ|| ಇಂತಪ್ಪೀರಾಜಧಾನಿಯೊಳ್ಪಿಂದೆ ಬಡಗಣಮಧುರಾಪುರಿಯಿಂದೆ ಯ್ತಂದು ಚಾಮುಂಡಾಂಬೆಯ ಪರಮಾನುಗ್ರಹದಿಂ ಲಬ್ಧವಾದ ಮಹಾನಿಧಿ ಯ ಬಲದಿಂ ದೀಮಹಿಶೂರರಾಷ್ಟ್ರದರಸುತನಮುಂ ಕಯ್ಕೊಂಡಿರ್ದ ಶೂರ ದೇವರಾಜನೆಂಬರಸನ ಕುಲದೊಳೊಗೆದ ಚಾಮರಾಜನೆಂಬರಸು ಪಲಕಾಲ ಮರಸುಗೆಯ್ಯುತುಮಿರೊಂದ್ದರ್ಕನ್ಯಾಮಣಿಯಂ ಪಡೆದು ವಿಧಿಯೋಗದಿಂ ಪುತ್ರಸಂತಾನಮಿಲ್ಲದೆ ಬರ್ದಿಲಮು ನಡರಲೊಡನಾಕನ್ನೆಯ ಪಾಣಿಗ್ರಹಣ ದೊಡ ನೀನಾಡಿನರಸುತನಮು ನೊತ್ತಂಬದಿಂ ದೆಳಸುತಿರ್ದ ಕೀಳ್ವಣ್ಣದ ಮಾರ ನಾಯಕನೆಂಬಾತನ ದಳಪತಿಗಳ್ಕಿ ರಾಜಪತ್ನಿ ನೀಡುಂ ಚಿಂತಾಕ್ರಾಂತೆಯಾಗಿ ಸಂತಪಿಸುತ್ತಿರ್ಪಿನೆಗಂ ||೯||

ಕಂ|| ದ್ವಾರವತಿಯತ್ತಣಿಂ ದತಿ |
ಶೂರಂ ಯಾದವಕುಲೋದ್ಭವಂ ಯದುವೆಂಬಂ ||
ಭೂರಮಣಂ ರಾಜ್ಯಾಪ್ತಿಮ |
ನೋರಥದಿಂ ಸಹಜನೊಡನೆ ಬಿಂಜಕೆ ಬಂದಂ ||೩೦||

ವ|| ಅಂತು ಬಂದು ವಿಂಧ್ಯವಾಸಿನಿಯೆನಿಸಿದ ಶ್ರೀಚಾಮುಂಡೇಶ್ವರಿ ಯಂ ಭಕ್ತಿಯುಕ್ತನಾಗಿ ಪೂಜಿಸಿ ನಮಸ್ಕರಿಸಿ ತದೀಯಪಾದಾರವಿಂದಸನ್ನಿ ಧಾನದೊಳೆ ನಿಯಮದಿಂ ರಾಜ್ಯಕಾಮನಾಗಿ ಕೆಲಕಾಲಂ ತಪಮಿರ್ದುದು ಮಾತನ ತಪಕ್ಕೆ ಮೆಚ್ಚಿ ಜಗನ್ಮಾತೃಕೆ ಚಾಮುಂಡಿಕೆ ನಿಜರೂಪಮಂ ತೋರಿ ಪುತ್ರವಾತ್ಸಲ್ಯದಿಂ ದೆಲೆವತ್ಸ, ಕನ್ನಡನಾಡೊ ಳ್ಕಪಿಲಾಕಾವೇರಿಗಳೆಡೆಯೊಳ

ರ್ವ ಮಹಾಬಲಗಿರಿಗೆ ನೀಂ ತಳರ್ದಲ್ಲಿ ರೂಪಾಂತರಂಗೊಂಡಿರ್ಪೆನ್ನಂ ಸೇವಿಸಿದೊಡೆ ನಿನ್ನಿಷ್ಟಸಿದ್ಧಿಯಹ್ಪುದೆಂದನುಗ್ರಹಿಸ ಲಾತನಸುಜಾತಂಬೆರಸಲ್ಲಿಂ ಪೊರಮಟ್ಟು ಮಹಾಬಲಾಚಲವನೆಯ್ದಿವಂದಲ್ಲಿ ಸನ್ನಿಧಿಗೊಂಡಿರ್ಪಾ ಮಹಾದೇವಿಯಂ ಕಂಡಖಂಡಭಕ್ತಿಯಿಂ ಸಾಷ್ಟಾಂಗವೆರಗಿ ನಿಯಮದಿಂದಾರಾಧಿಸಿ ತದೀಯಚರಣಾರವಿಂದಮನೆ ಜಾನಿಸುತ್ತಂದಿನಿರುಳಾಗಿರಿಯೊಳೆ ಪವಡಿಸಿರ ಲಾಮಹಿಷಾಸುರಮರ್ದಿನಿ ಕನಸಿನೊಳಾತನ ಕರ್ಣ್ಣಿಡಯೊಳ್ ನಿನಗೀ ಮಹಿಶೂರಪತ್ತನದರಸುತನಂ ಕಯ್ಗೂಡುವುದೆಂದು ವರಮಂ ಕರುಣಿಸುವುದು ಮಾರಾಜನೆಳ್ದತ್ತಾ ಪರದೇವತೆಯ ಪರಮಾನುಗ್ರಹಕ್ಕಚ್ಚರಿಗೊಂಡು ಕಡು ಸಂತಸಮಂ ತಳೆದಲ್ಲಿಂದಿಳಿತಂದೆಡೆಸಂದ ಮಹಿಶೂರಪತ್ತನಮಂ ಸಾರ್ತ್ತರೊಡೆ ನಿತ್ತಲಾರಾಜಪತ್ನಿ ಯಾತನಬರವುವಂ ಕುಲಶೀಲವೃತ್ತಂಗಳುಮಂ ಶೌರ್ಯ್ಯಮುಮಂ ಕೇಳ್ದೆಡೆಸಂದ ಕಾಳೋರಗದಿಂದಂಜಿದ ಜನ ಮಾನಿಪಿಸದೊಳಭ್ಯರ್ಣ್ಣಮುಂ ಸಾರ್ದಸುಪರ್ಣ್ಣನಂ ಕಂಡಂತೆ ಹರಿಸಂಗೊಂಡಾತನಂ ಒರಿಸಿ ಪಿರಿದು ಪತಿಕರಿಸಿ ಕುಶಲಮಂ ಕೇಳ್ದುಕ್ತಿಪ್ರಸಕ್ತಿಯಿಂ ಮಾರನಾಯಕನ ದುರಾಗತಂ ತನಗೊದವಿಸಿರ್ದಿರ್ದಿಯ ಬೇಗುದಿಯ ನಾತಂಗರಿಪಲೊಡ ನಾಯದುರಾಜಂ ॥೩೧॥

ಕಂ॥ ಕುಲಮಹಿಳೆ ರಾಣಿ ಬಿಡು ಮನ ।
ದಳಲಂ ಚಾಮುಂಡಿಕಾಂಬಿಕಾನುಗ್ರಹದಂ ॥
ಖಲನಪ್ಪ ಮಾರನಾಯಕ ।
ನಳವಿಂಗಾ ಪ್ರಮಥನಾಯಕಂ ತಾನಪ್ಪೆಂ ॥೩೨॥

ವ॥ ಎಂದುಬಿನ್ನವಿಸ ಲಾಪೂರ್ಣ್ಯೆಯಂ ಕೇಳ್ದು ಪಿರಿದುಂ ಹೃಷ್ಟಚಿತ್ತೆಯಾ ದಾರಾಜಪತ್ನಿ ಯದುವೀರ, ನಿನ್ನನ್ನನಪ್ಪ ಬೀರಂಗೀನುಡಿತಕ್ಕು ದಿಂತು ನೀನೀರಾಜಕಾರ್ಯಮುಂ ಸಾಧಿಸಿದೊಡೆನ್ನ ಕನ್ನೆಯುಮ ನೀರಾಜ್ಯಲಕ್ಷ್ಮಿಯುಮುಂ ನಿನಗಿತ್ತೀರಾಜಕುಲಮನುದ್ಧರಿಸಿ ನಾಂ ಸಮಾಹಿತಚಿತ್ತೆಯಪ್ಪೆನೆಂದು ನುಡಿವಿಸ ಮಾಯದುರಾಜ ನಂತಾಗಲಕ್ಕುಮೆಂದೊಡಂಬಟ್ಟಾಕೆಯಿಂ ದೆಕ್ಕಟಿಯೊಳನುಜ್ಞಾತರಾ ದಾಸ್ಥಾನಮುಖ್ಯಾಧಿಕಾರಿಗಳನೆರವಂಸಡೆದರಮನೆಯೊಳೆ ಕಟ್ಟೀಕಾಂತದೊಳಿರ್ದು, ರಾಜಕನ್ಯೆಯಂ ಪಸೆಸಿಲ್ವೆ ನೆಂಬೊಂದುಮದಾವ

ಪ್ಪಂಭದಿಂ ಮೆಯ್ಮರೆದು ವಿವಾಹಸನ್ನಾಹಂಮೆರೆಯುತ್ತಿರ್ದಾಮಾರನಾಯಕಂ ಬೇಹಿನವರಿಂ ರಾಜಕುಮಾರರಿರ್ವರರಮನೆಗೆ ಬಂದಿರ್ದರೆಂಬ ಸುದ್ದಿಯಂ ಕೇಳ್ದು ಕಡುಮುಳಿದಾಕ್ಷಣಮೆ ತನ್ನೆಡೆಯೊಳಿರ್ದನಿತಂಪಡೆಯನೊಡಂಗೊಂಡು ಯುದ್ಧಸನ್ನದ್ಧನಾಗಿ ಭೋರನರಮನೆಯಂ ಮುತ್ತುವನಿತರೊಳಾವಾರ್ತೆಕೊಡಂಕೆಯುಂ ಸೋಂಕುವಿನಮನುಜಂಬೆರಸುಮಹಿಷವರ್ದಿಸಿಯುಡಿದಾವರೆಯಂ ಪೂಜಿಸಿ ನಮಸ್ಕರಿಸಿ ವಿಜಯವಂ ಪ್ರಾರ್ಥಿಸಿ ಮುನ್ನಮೆ ನಿಗೂಢಮೆನೆ ಸನ್ನಣಂಗೊಳಿಸಿರ್ದ ಕೆಲಬರಿಂ ವೀರಭಟರಿಂದೊಡಗೂಡಿ ಕೈದುವಿಡಿದು ಕಾಲರುದ್ರಂಬೊಲುರವಣಿಸುತಿದಿರಂತು ಮಾರ್ವಡೆಯನೊಕ್ಕಲಿಕ್ಕೆ ದೆಸೆದೆಸೆಗೆ ಬಲಿಗೊಟ್ಟು ॥೩೩॥

ಕಂ॥ ನಿರುಪಮ ಭುಜಪ್ರತಾಪದೆ |
ಮೆರೆಯುತೆ ಸೋಲ್ವಾಯ್ವು ಮಾರನಾಯಕಸಂ ಕೇ ||
ಸರಿ ನಖರಾಯುಧದಿಂ ಮದ |
ಕರಿಯಂ ಕೊಲ್ವಂತೆ ಕೊಂದನುಗ್ರಾಯುಧದಿಂ ॥೩೪॥

ವ॥ ಇಂತು ಮದುರಾಜಂ ತಾನುಜ್ಜುಗಿಸಿದ ಕಜ್ಜಮಂ ಕಡೆಯನೆಯ್ದಿಸಿ ಜಯಸಿರಿಯಂ ಕಯ್ಕೊಂಡು, ಪೊಳಲ ಜನಮೆಲ್ಲಂ ಬೀದಿಬೀದಿಯೊಳಂ ಗುಜುಗುಜುನರಿದ ರಾಜತಂತ್ರಮಂ ತಿಳಿದು ನಿಜವಿಕ್ರಮಾತಿಶಯಮನೊಗುಮಿಗೆಯಿಂ ಬಗೆಬಗೆಯಾಗಿ ಪೊಗಳುತ್ತಿರಲನುಜನಪ್ಪ ಕೃಷ್ಣರಾಜನೊಡನಂತವುರದಬಾಗಿಲನೆಯ್ದಿ ನಿಜಪ್ರಣಾಮಮನರಿಪುವುದು ಮಾರಾಜಪತ್ನಿ ಸಂತಸಂಬಟ್ಟು ಶತ್ರುಜಯಮಂ ಕೇಳ್ದು ನಿಸ್ಮತೆಯಾಗಿ ತದೀಯಪರಾಕ್ರಮಮುಮಂ ವಿನಯಾತಿಭಾರಮುಮಂ ಪಿರಿದುಮುಪಿನಂದಿಸಿ ರಾಜಯೋಗ್ಯವಾದ ಸನ್ಮಾನದಿಂ ಪತಿಕರಿಸಿದಬಳಿಕ್ಕಂ ತಾಂ ಪೂರ್ವಮಾಳ್ಕೆಯಿಂದಾತಂಗೆ ನಿಜಕುಮಾರಿಯಪ್ಪ ದೇವಾಜಂಬೆಯಂ ಶುಭಮುಹೂರ್ತದೊಳಿತ್ತು ವಿವಾಹಮಹೋತ್ಸವಮುಂ ತದನಂತರಮೆ ರಾಜ್ಯಲಕ್ಷ್ಮಿಯನಿತ್ತ ಪಟ್ಟಾಭಿಷೇಕಮಹೋತ್ಸವಮುಮುಂ ನಿರವಧಿಕವಿಭವದಿಂ ಬಳೆಯಿಸಲೊಡಂ ॥೩೫॥

ಕಂ॥ ಚಾಮುಂಡಾನುಗ್ರಹದಿಂ |
ಶ್ರೀನುನ್ನೃಪಕನ್ಯೆಯೊಡನೆ ರಾಜ್ಯಶ್ರೀಯಂ ||

ಪ್ರೇಮದೆ ಕಯ್ವಿಡಿದಾ ಯದು |
ಭೂವಿಂದ್ರಂ ಸೊಗದಿನಿಳೆಯ ನಾಳುತ್ತಿರ್ದಂ ||೩೬||

ವ|| ಇಂತಾಯದುರಾಜಂ ನಿಜಸದ್ಗುಣಂಗಳಿಂ ಪ್ರಜಾನುರಾಗಕ್ಕೆ ಪಾತ್ರನಾಗಿ ರಾಜ್ಯಂಗೆಯ್ಯುತ್ತುಂ ತನ್ನೊಳಾರಡಿಗೊಂಡೆಡೆಸಂದಿರ್ದ ದುರುಳರಪ್ಪ ಕೆಲಬರಂ ಪಾಳೆಯಗಾರರಂ ಪಾಳೆಳೆಸಿ ಪರಿಪಿಡಿಯಿಂ ದವರವರಾಳ್ಕೆಯ ನುಯ್ದುಕೊಂಡು ನಿಜರಾಜ್ಯಮುಂ ಪೆರ್ಚಿಸಿ ದೈವಾನುಗ್ರಹದಿಂ ತನ್ನರಸಿಯೊಳ್ಪಿರಿಯುಬೆಟ್ಟದಚಾಮರಾಜನುಂಚಾಮರಾಜನುಮೆಂಬಿರ್ವರಂಕುವರರಂ ಪಡೆದು ಪುತ್ರಸಂತಾನಮಾದುದರ್ಕೆ ಮಹಾಬಲಾಚಲವಾಸಿನಿಯಪ್ಪ ಶ್ರೀಚಾಮುಂಡಾಂಬೆಯುಮಂ ಗರಳಪುರಾಧಿವಾಸಿಯಪ್ಪಶ್ರೀಕಂಠೇಶ್ವರನುಮಂ ಯದುಗಿರಿನಿವಾಸಿಯಪ್ಪಶ್ರೀನಾರಾಯಣನುಮಂ ಪರಮಭಕ್ತಿಯಿಂದಾರಾಧಿಸಿ, ಯದುಗಿರಿಯೊಳೊಂದು ಕೊಂಟೆಯುಂ ಕಟ್ಟಿಸಿ ಮೇಲ್ಕೊಂಟೆಯೆಂದದರ್ಕೆ ಪೆಸರನಿಟ್ಟಂತುದೇವತಾಸೇವೆಗೆಯ್ಯುತ್ತುಮಿರ್ದ ಮುಪ್ಪಿನೊಳ್ಪಿರಿಯಕುವರಂಗೆ ರಾಜ್ಯಾಧಿಕಾರದೊಳ್ಪಟ್ಟಾಭಿಷೇಕಂಗೆಯ್ದು ಬರ್ದಿಲಕ್ಕೆ ಸಲ್ವುದು ಮಲ್ಲಿಂಬಳಿಯ ವಾಬೆಟ್ಟದಚಾಮರಾಜನು ವಾದಿತಿಮ್ಮರಾಜನುಂ ಪಿರಿಯಚಾಮರಾಜರಸನು ಮನ್ವಯಕ್ರಮದಿಂ ದಾಯದುರಾಯನ ರಾಯಗಟ್ಟಲೆಗಳ ನೆಳ್ಳನಿತುಂ ಮೀರದೆ ವಿದ್ಯಾಬುದ್ಧಿಬಲಸಂಪನ್ನರಾಗಿ ಧರ್ಮದಿಂ ದರಸುಗೆಯ್ದು ಸುರಪುರವಿಹಾರಿಗಳಾಗಲಾ ಯದುಕುಲದೊಳಯ್ದನೆಯ ಬೆಟ್ಟದಚಾಮರಾಜಂ ಧರ್ಮದಿಂ ದರಸುಗೆಯ್ಯುತುಂ ||೩೭||

ಕಂ|| ಹರವು ಮೊದಲಪ್ಪ ಕೆಲವುಂ |
ಕುರುನಾಳ್ಗಳ ನೊತ್ತಿ ಧೀರನೆಂದೆನಿಸುತ್ತುಂ ||
ದೊರೆವಡೆದಂ ಮೇಣ್ಪಡೆದಂ |
ಧರೆಯೊಳ್ಮೃಂಗಾರಹಾರ ನೆಂಬಾಬಿರುದಂ ||೩೮||

ವ|| ತದನಂತರಮಾತನಪಿರಿಯನುಗನಿಮ್ಮಡಿಯತಿಮ್ಮರಾಜಂ ರಾಜನೀತಿವಿಶಾರದನಾಗಿ ಧರ್ಮದಿಂದರಸುಗೆಯ್ಯುತುಂ ಪಲಬರಂ ಪಾಳೆಯಗಾರರಂ ಕಟ್ಟದಟಿಂ ಗೆಲ್ದು ಬಾಯ್ಕೆಳೆಸಿ ನಿಜರಾಜ್ಯಕ್ಕವರವರ ಕುರುನಾಳ್ಗಳನೊಳಗಾಗಿಸಿ ಬಿರುದೆಂತೆಂಬರಗಂಡನೆಂಬಬಿರುದಂ ಪಡೆದನಂತುಮಲ್ಲದೆ ||೩೯||

ಕಂ|| ತನಗೆರಗಿದ ಸಾಮಂತಾ |
ವನಿಪತಿಗಳನೊಲ್ದು ಪೊರೆಯುತೆರಗದಖಿಳರೆಂ ||
ದೆನಿಸಿದರಂ ದಂಡಿಸುತಾ |
ಜನಪಂ ಮೊನೆಗಾರನೆಂಬ ಬಿರುದಂ ಪಡೆದಂ ||೪೦||

ವ|| ಇಂತರಸುಗೆಯ್ಯುತಾತಿಮ್ಮರಾಜನವಸಾನಕಾಲದೊಳ್ತನಗೆಪಿಂದೆ ಪಿತಾ ಜ್ಞೆಯಾಗಿರ್ದಂತೆ ನಿಜಸುತನಪ್ಪಿಮ್ಮಡಿಯಬೆಟ್ಟದಚಾಮರಾಜಂಗೆ ಹೆಮ್ಮನಹಳ್ಳಿವೊದಲೆನಿಸಿದ ಪಲವುಂಗ್ರಾಮಂಗಳಾಳ್ಕೆಯನಿತ್ತು ಮಹಿಕೂರ ರಾಜ್ಯದೊಳ್ನಿಜಾನುಜಾತನಪ್ಪ ಬೋಳಚಾಮರಾಜಂಗೆ ಪಟ್ಟಾಭಿಷೇಕಂಗೆಯ್ದು ಸುರನಗರಕ್ಕೆ ಪಯಣಂಬೋಗುವುದು ಮಾಬೋಳಚಾಮರಾಜಂ ಶೌರ್ಯೌದಾರ್ಯಗಾಂಭೀರ್ಯಾದಿಸುಗುಣಗಣಭೂಷಣನಾಗಿ ರಾಜ್ಯಂಗೆಯ್ಯುತುಂ, ತನಗೆ ಸರಿದೊರೆಯಾವನುಮಿಲ್ಲೆಂದು ದುರಭಿಮಾನದಿಂ ಮೆರೆಯುತ್ತಿರ್ದ ತೊರೆಮಾವಿನಹಳ್ಳಿಯ ವೆಂಕಟಾದ್ರಿನಾಯಕನೆಂಬ ಪಾಳೆಯಗಾರನಂ ಕಾಳಗದೊಳ್ಪರಿಭವಿಸಿದಪರಿ ಪೇಳಲಸದಳಮಂತುಮಲ್ಲದೆ ||೪೧||

ಕಂ|| ಅನಿತರಸಾಧಾರಣಮೆಂ |
ದೆನಿಸಿದ ಸುಗುಣಾಳಿಯಿಂದೆ ಗಾಂಭೀರ್ಯದೆ ಮೇ ||
ದಿನಿಯಲ್ಲಿ ಸುಗುಣಗಂ ಭೀ |
ರನೆಂಬ ಬಿರುದಾಂತು ಮೆರೆದನಾಭೂಕಾಂತಂ ||೪೨||

ವ|| ಇಂತು ನಿಜಧರ್ಮದಿಂದಾಧರಣೀಂದ್ರನರಸುಗೆಯ್ದು ಕಾಲಧರ್ಮಮುಂ ಪೊರ್ದಲೊಡವುಟಾತನ ಕುವರಂ ಮುಮ್ಮಡಿಯ ಬೆಟ್ಟದಚಾಮರಾಜಂ ಕೆಲಕಾಲಂ ಸುಖಸಾಮ್ರಾಜ್ಯಪದವಿಯನನುಭವಿಸುತ್ತಿರ್ದು ವೈರಾಗ್ಯರಾಜ್ಯಾಧಿಕಾರಕ್ಕೆಳಸಿ ನಿಜಾನುಜನಪ್ಪ ರಾಜರಾಜಂಗೆ ಪಟ್ಟಾಭಿಷೇಕಂಗೆಯ್ದು ನಿಜ ಕುಟುಂಬಂಬೆರಸು ತೆರಕಣಾಂಬಿಯೆಂಬ ವಾಗಣಿಯ ನೆಯ್ದಿವಂದು ||೪೩||

ಕಂ|| ಜ್ಞಾನಾಜ್ಞಾನವಿಚಾರದೆ |
ಮಾನಸಮಂ ಪುಗಿಸದಿಂದ್ರಿಯಾರ್ಥೋತ್ಕರದೊಳ್ ||
ಧ್ಯಾನಕ್ಕಧೀನಮಂ ಗೆ |
ಯ್ದಾನಿತ್ಯಾನಂದವಸ್ತುವಂ ತಪಮಿರ್ದಂ ||೪೪||

ಇದು ಜಗದ್ವಿದಿತ ಶ್ರೀಕಾಶ್ಯಪವಂಶಮುಕ್ತಾಮಣಿ ಶ್ರೀಗರಳಪುರೀಶಶಾಸ್ತ್ರಿ
ತನೂಭವನುಂ ಶ್ರೀಮದಖಂಡ ಮಹೀಮಂಡಲ ಮಂಡನಾಯಮಾನ
ಕರ್ಣಾಟಜನಪದಲಕ್ಷ್ಮೀವಿಹಾರೈಕರಂಗಮಹೀಭೂತ ಮಹಿಶೂರರಾಜಧಾನೀ
ರತ್ನಸಿಂಹಾಸನಾಧೀಶ್ವರ ಯದುಕುಲಪಯೋನಿಧಿಪೂರ್ಣಚಂದ್ರಾಯಮಾಣ
ಶ್ರೀಚಾಮರಾಜೇಂದ್ರ ತನಯ ಶ್ರೀಕೃಷ್ಣರಾಜಮಹಾರಾಜಸಂಸ್ಕೃತ
ಕರ್ಣಾಟೋಭಯಪ್ರವಚನೋಪಾಧ್ಯಾಯನುಂ ಮಹಾವಿದ್ವ
ತ್ಪದಲಾಂಛನನುಂ ತನ್ಮಹಾರಾಜ ಕೃಷ್ಣರಾಜವಿತೀರ್ಣ
ಕವಿತಿಲಕ ಬಿರುದಾಂಕಿತನುಮಪ್ಪ ಸೋಸಲೆ
ಅಯ್ಯಶಾಸ್ತ್ರಿಯಿಂ ವಿರಚಿತಮಾದ
ಮಹಿಶೂರಮಹಾರಾಜಚರಿತ್ರ
ಮೆಂಬ ಕರ್ಣಾಟಕಚಂಪೂ
ಮಹಾಕಾವ್ಯದೊಳ್
ಪ್ರಥಮಾಶ್ವಾಸಂ
ಸಂಪೂರ್ಣಂ.

ದ್ವಿತೀಯಾಶ್ವಾಸಂ.

ಕಂ|| ಪೊರೆಯಲ್ಸಾಧುಗಳಂ ನೆರೆ |
ದುರುಳರನಳಿಪಲ್ಕೆ ಧರ್ಮಮಂ ನೆಲೆಗೊಳಿಸಲ್ ||
ಧರೆಯೊಳ್ಯುಗಯುಗದೊಳುಮವ |
ತರಿಸುವ ಜಗದೀಶನೋವುಗೆಮ್ಮಯ ನೃಪನಂ ||೧||

ರಾಜಸಮಾಜಶಿರೋಮಣಿ |
ರಾಜಕುಲಾಂಭೋಧಿಕೌಸ್ತುಭಂ ದಿಕ್ತಟರಾ ||
ರಾಜದತಿವಿಮಲಯಶನಾ |
ರಾಜನೃಪಂ ಬಳಿಕಮರಸುಗೆಯ್ಯುತುಮಿರ್ದಂ ||೨||

ವಿಕ್ರಮಭೂಪತಿಯಂ ದಾ |
ನಕ್ರಮದಿಂದಮರಗುರುವನುತ್ತಮ ಮತಿಯಿಂ ||
ಶಕ್ರಕುಮಾರನನುಗ್ರಪ |
ರಾಕ್ರಮದಿಂ ರಾಜನೃಪನತಿಕ್ರಮಿಸಿರ್ದಂ ||೩||

ಇಂತಿಳೆಯಾಳ್ವಿನಮಾಭೂ |
ಕಾಂತಂ ಶ್ರೀ ಕ್ಷಾಂತಿ ಕೀರ್ತಿ ಸದ್ವಿದ್ಯಾ ವಿ ||
ಕ್ರಾಂತಿಗಳಯ್ದುಂ ಪರಿಜೆನೆ |
ಕಾಂತೆಯರೊಲ್ದಯ್ವರಾತನಂ ವರಿಸಿರ್ದರ್ ||೪||

ವ|| ಇಂತಿಪರ್ಗಳಾರಾಜರಾಜಂ ನರಸಿಂಹನಾಯಕಂ ಮೊದಲಪ್ಪಪದಿನೇಳ್ವರ್ಪಾಳೆಯಗಾರರಂ ಕಾಳಗದೊಳ್ಗೆಲ್ದು ನರಸಿಂಹಪುರಂ ಮೊದಲಪ್ಪವರವರ ರಾಜ್ಯಂಗಳಂ ಬಸಂಗೊಳಿಸಿ ಪಲವುಂ ಬಿರುದುಗಳಂ ಪಡೆದು ಬಳಿಕ ಮೊಂದುದಿವಸಂ ಶ್ರೀಕಂಠೇಶ್ವರನ ರಥೋತ್ಸವದ ಸಂದರ್ಶನಕ್ಕೆಂದು ಬಲಪರಿವಾರಂಬೆರಸು ಗರಳಪುರೀಕ್ಷೇತ್ರಕ್ಕೆ ಪೋಗಿವರ್ಪಾಗಳಾತನ ಸೈನಿಕರ್ಮಾರ್ಗದೊಳ್ವೀರರಾಜನೆಂಬರಸು ಮಹಿಶೂರಸಂಸ್ಥಾನದಿಂ ತನಗುಂಬಳಿಯಾಗಿ ಬಂದಿರ್ದ ಕಾರಗಳ್ಳಿಯೆಂಬೂರಿಂದಂದಣಮನೇರಿ ಮಹಾರಾಜೋಚಿತವಾದ ಬಿರುದಾವಳಿಯಂ ಪರಿಜನವುದ್ಘೋಷಿಸುತ್ತಿರ್ಪಿನಂ ಬಪ್ಪುದಂ ಕಂಡಿಂತೀ

ಬಿರುದಾವಳಿಯೆಮ್ಮಾಳ್ದಂಗಲ್ಲದೆ ನಿನಗೆ ಸಲ್ಲದೆಂದಂಜದಿಂದಾತನನಿಳಿಪ ತಮ್ಮಾಳ್ದನಿದಿರೆ ತರಲೊಡನಾರಾಜರಾಜಂ ಕಡುಮುಳಿದಾದುರಹಂಕಾರದೂ ಷಿತನಂ ಧಿಕ್ಕರಿಸಿ ತನ್ನಾಳ್ಗಳಿಂ ನೂಂಕಿಸಲೊಡಂ ॥೫॥

ಕಂ॥ ಅಪಮಾನಮನಿಂತಾಭೂ ।
ಪಿಪನಿಂದಾಂತಗಿದು ತಪ್ಪ ತಾಪಕ್ಕಲ್ಲಂ ॥
ದಪಸರಿಸಿದನವನಿರದನು ।
ತಪಿಸುತೆ ಖಮ್ಯೋತಕರ್ಕನೊಳ್ಪೋರಟೆಯೇ ॥೬॥

ವ॥ ಇಂತಪಮಾನಿತನಾದ ವೀರರಾಜನೆಂತುಂ ರಾಜರಾಜನಂ ಜಯಿಸಲ್ಕೆ ತನಗದಟಿಲ್ಲದೆ ಕಯ್ಗಣ್ಮಿದ ಪಗೆತನದಿಂ ಶ್ರೀನಿವಾಸಯ್ಯನೆಂಬದೇವಲಕನ ಕಯ್ಯಿಂದೆ ನಂಜನೂಡಿಸಲಿಕ್ಕಟಿಯೊಳ್ತಂತ್ರಮನೆಸಗಿದ ಸಮನಂತರನೊಳಾನುಹಾರಾಜನೊಂದುದೆವಸಂ ದೇವತಾಸೇವೆಗೆಂದು ಲಕ್ಷ್ಮೀರಮಣದೇವಾಲಯಕ್ಕೆ ಪೋಗಿರ್ಪಿನವಾದೇವಲಕಂ ಶ್ರೀನಿವಾಸಯ್ಯಂ ವಿಷಮಿಶ್ರವಾದ ಭಗವಚ್ಚರಣತೀರ್ಥಮನೀಯಲೊಡನಾಪಾರ್ಥಿವನದಂ ಕಯ್ಕೊಂಡು ನಿರತಿಶಯಭಕ್ತಿಯಿಂದೀಂಟಲೊಡಂ ॥೭॥

ವೃ॥ ಪರಮಂ ಶ್ರೀಹರಿಪಾದತೀರ್ಥಮಮಲಂ ತತ್ಕುಕ್ಷಿಯಂ ಪೊರ್ದಿತಾ ।
ಗರಳಂ ನಿಂದುದು ತತ್ಕರಾಬ್ಜತಲದೊಳ್ಪೋಲಂಬದಾಕಾರದಿಂ ॥
ಗರಮೇಗೆಯ್ವುದು ರಾಜಮೌಳಿಮಣಿಯಂ ಶ್ರೀಕಂಠಭೂಪಾಮನೋ ।
ಹರನಂ ಧಿಕ್ಕೃತಪುಷ್ಪಚಾಪತನುವಂ ನಿದ್ವಿಟ್ಪುರಧ್ವಂಸಿಯಂ ॥೮॥

ವ॥ ಅಂತು ಕರಗತವಾದ ಬಿಸಮಂ ದಿಟ್ಟಿಸಿ ಬಿಸವಂದಂಮಿಗೆ ತನ್ನಿದಾನಮಂ ಪಿರಿದುಂ ಭಯಮುದಿಂ ಕಂಪಿಸುತುಮಿರ್ದಾದೇವಲಕಂಗಭಯಮುನಿತ್ತಾತನಿಂದನೆ ತಿಳದಲ್ಲಿಂದವನಂ ಬೇರೊಂದು ದೇಗುಲಕ್ಕೆ ಪರಿವರ್ತನಂಗೆಯ್ದಾಪಾಪಾತ್ಮನಪ್ಪ ವೀರರಾಜನಂ ಕಿವಿಮೂಗರಿದು ಪಿರಿದುಂದಂಡಿಸಿ ನಿಜರಾಜ್ಯದಿಂ ಪೊರನುಡಿಸಲೊಡಂ ॥೯॥

ಕಂ॥ ಇಂತಿದು ಮೊದಲೆನಿಸಿದ ದೃ ।
ಷ್ಟಾಂತಂಗಳಿನಿಳೆಯೊಳೆಲ್ಲರಾರಾಜಮಹೀ ॥
ಕಾಂತನನಿವನುರುಮಹಿಮೆಯ ।
ನಾಂತಂ ಸಾಕಪ್ಪನ್ಮಹೇಶನೆಂದರಿದಿರ್ದರ್ ॥೧೦॥

ವ|| ಇಂತಿಪರ್ಾಗಳೀಮಹಿಶೂರರಾಜಧಾನಿಗನತಿದೂರದೊಳಿಕ್ಕೆಲದೊಳಂ ಶ್ರೀರಂಗನಾಥದೇವನಂ ಸೇವಿಸಲೆಂಬಂತೊಡೆದೆರಡಾಗಿ ಪರಿವ ಕಾವೇರೀಮಹಾನದಿಯು ನಟ್ಟಿಡೆಯೊಳ್ ||೧೦||

ಕಂ|| ಶ್ರೀರಂಗನಾಥದೇವನ |
ಪಾರಕ್ಯಪಾರಸಪಯೋಧಿ ನೆಲಸಿರ್ಪುದರಿಂ ||
ಶ್ರೀರಂಗಪತ್ತನಾಹ್ವಯ |
ರಾರಾಜದ್ರಾಜಧಾನಿಯೆಂ ರಂಜಿಸಿತೋ ||೧೨||

ಪವಡಿಸಿರೆ ಜಲಧಿಕನ್ಯಾ |
ಧವನಹಿಶಯನದೊಳೆ ತನ್ಮಹಾನದಿ ಕಡಲಂ ||
ತೆವ್ವೊಲಿರೆ ಸುತ್ತುಂ ಪುರಮದು |
ಧವಳದ್ವೀಪಂಬೊಲೇಂಮನಂಗೊಳಿಸಿದುದೋ ||೧೩||

ವೃ|| ಪರಿಖಾಮಂಡಲಮೆಂದೆನಲ್ಬಳಸಿದಾಕಾವೇರಿ ಲೋಕಂಗಳಂ |
ಪೊರೆಪಾಪನ್ನಗಶಾಯಿ ರಕ್ಷಿಸುತಿರಲ್ಶ್ರೀರಂಗನಾಥಂ ಪರಾ ||
ತ್ಪರನೊಲ್ದಾತನ ಸನ್ನಿಧಾನದೊಳೆ ಲಕ್ಷ್ಮೀದೇವಿ ತಾನಿಂಬುಗೊಂ |
ಡಿರಲಾರ್ಗಂ ಪೊಗಳಲ್ಕಸಾಧ್ಯಮೆನಿಸಿರ್ದತ್ತಾಮಹಾಪತ್ತನಂ ||೧೪||

ವ|| ಇಂತಪ್ಪಾರಾಜಧಾನಿಯೊಳಾನೆಗೊಂದಿಸಂಸ್ಥಾನದರಸನಪ್ಪ ತಿರುಮಲರಾಜನ ತನೂಜಂ ಶ್ರೀರಂಗರಾಜನೆಂಬರಸು ನಿಜವಂಶಕ್ರಮದಿಂ ತನ್ನಾಳ್ಕೆಗೆ ಬಂದ ಮಹನೀಯಮಪ್ಪ ತಪನೀಯಮಯಸಿಂಹಾಸನದೊಳ್ಕುಂಡಿಸಿ ಕೆಲವುಂಕನ್ನಡದನಾಡನಾಳುತ್ತೆ ಸುಖಮಿರ್ಪನ್ನಂ ವಿಧಿನಿಯೋಗದಿಂ ಪತ್ತಿದ ರಾಜರೋಗದಿಂ ಪೀಡಿತನಾಗಿ ಶರೀರಮುಳಿಯಲಾರದೆಂದು ಬಗೆದಪುತ್ರನಾದ ಕತದಿಂದೆಯುಂ ತನ್ನಿಂ ಮುಂದೆಂತುಂ ಪ್ರಬಲನಪ್ಪೆಡೆಸಂದರಾಜರಾಜಂ ನಿಜರಾಜ್ಯಮನಾಕ್ರಮಿಸದಿರನೆಂಬದೂರಾಲೋಚನೆಯಿಂದೆಯುಮಾತಂ ಪಲರ್ಮೆ ತನಗೊದವಿದ ಸಂಗರಸಂಕಟಂಗಳೊಳ್ತನಗೆ ನೆರವಾಗಿ ವಿಪಕ್ಷರಂ ಗೆಲ್ದು ಸಪಕ್ಷನಾಗಿರ್ದುದರಿಂದೆಯುಮೀಸಿಂಹಾಸನಮುಮೀರಾಜ್ಯಮುಮೀತಂಗೇ ಸಲ್ವುದು ತಕ್ಕುದೆಂದು ತರಿಸಂದು ಸಮುಚಿತರಾಜಮರ್ಯಾದೆಯಿಂದಾತನಂ ತನ್ನೆಡೆಗೆ ಕರೆಯಿಸಿ ಕುಶಲಪ್ರಶ್ನೆ ಬಳೆದಬಳಿಯಂ ರಾಜೇಂದ್ರಾ, ನೀನೆನಗತಿಹಿತನುಂ

ಪ್ರಿಯಮಿತ್ರನುಮಾಗಿರ್ದುದರಿಂ ನಿನ್ನೊಳಾಂ ಸೌಭ್ರಾತ್ರಮನೆಣಿಸುತೆನ್ನ
ಮನೋಗತಾಭಿಸಾಯಮುಂ ತಿಳಿಪುವೆನದೆಂತೆಂದೊಡೆ—ಬಲ್ಲಿತಪ್ಪಕುತ್ತಮೆ
ನ್ನೊಡಲಂ ಪಿಡಿದಿರ್ದುದರಿಂದೆನಗಂತಕಾಲಂಸಮನಿಸಿರ್ಕುಮೆನಗೆ ಪುತ್ರಸಂತಾ
ನಮಿಲ್ಲದಕಾರಣಮಿಾಕರ್ಣಾಟಸಿಂಹಾಸನಾಧಿಪತ್ಯಮುಂ ವಹಿಸಲಿಂದುಕುಲ
ಚೂಡಾಮಣಿಯೆನಿಸಿದನೀನೆ ಯೋಗ್ಯನುಂ ಶಕ್ತನುಮಾಗಿರ್ಪೆಯಾದುದರಿಂದಿ
ದೊ ನಿನಗೆನ್ನ ರಾಜ್ಯದೊಡನೀಕನಕಸಿಂಹಾಸನಮನಿತ್ತಿರ್ಪೆನೆಂದಧಿಕಾರ
ಮುದ್ರೆಯಂ ಕಯ್ಕೊಳಿಸಿ ಮಹಾರಾಜಾ, ಚೆತ್ತವಿಪುದೀಸಿಂಹಾಸನಂ ಧರ್ಮಪು
ತ್ರನ ಪೌತ್ರನಪ್ಪ ಪರೀಕ್ಷಿದ್ರಾಜಂ ಮೊದಲಪ್ಪಿನಂ ಪ್ರವೀಕರಾಜಂಬರಂ
ಕುರುಕುಲದರಸರಿಂದೆಯುಮನಂತರಂ ಮಗಧಪತಿಯಪ್ಪಸುಮಾಲಿರಾಜಂ
ಮೊದಲಪ್ಪಿನಂ ವಿಜಯನಗರದರಸನಾದ ಕಂಪಲರಾಜನವರೆಗಂ ಪಲಂಬರರಸ
ರಿಂದೆಯುಮಾಕಂಪಲರಾಜಂ ಕೆಲಕಾಲಂ ಪ್ರೌಢವಿಯೊಳ್ಪೊಳ್ದಿರೆ ಕಾಲಾಂತರ
ದೊಳ್ವಿದ್ಯಾರಣ್ಯಗುರುವರೇಣ್ಯಪ್ರೇರಣೆಯಿಂದಾಭೂಸಸ್ನಿವೇಶದಿಂ ಪೊರಮ
ಡಿಸಿ ಗಣನೀಯಭಾಗಧೇಯನೆನಿಸಿದ ಹಕ್ಕರಾಯನಿಂದೆಯು ಮಾತಂ ಮೊದ
ಲಪ್ಪಿನಮೆನ್ನವರೆಗಂ ಕೆಲಬರಿಳೆಯಾಣ್ಮರಿಂದೆಯುಮುಧಿಷ್ಠಿತಮಾದುದು ಸಾ
ಮಾನ್ಯಮೆಂದರಿಯಲಾಗದನೇಕಧರ್ಮತ್ಮರಿಂದಧಿಷ್ಠಿತಮಾದುದರಿಂದತಿಸಮ್ಮಾ
ನ್ಯಮಾದುದೆಮ್ಮಬೊಪ್ಪನಪ್ಪಾನೆಗೊಂದಿಯರಸನಾದ ತಿರುಮಲರಾಯನಿಂ
ಜ್ಯೇಷ್ಠಪುತ್ರನಾದೆನಗಿದು ಶ್ರೀರಂಗಪತ್ತನದರಸುತನದೊಡನೆ ಕಯ್ಸಾರ್ದುದು
ನೀನಿದನೇರಿ ಧರ್ಮದಿಂದರಸುಗೆಯ್ವುದೆಂದು ನುಡಿದು ರಾಜಮರ್ಯಾದಾನುಸಾ
ರದಿಂ ಮನ್ನಿಸಿ ಬೀಳ್ಕೊಟ್ಟು ತಾಂಪಿರಿದುಂ ಪಿರಕ್ತನಾಗಿ ತನ್ನರಸಿಯರಪ್ಪ
ಲಮೇಲಂಬೆರಂಗಂಬೆಯರಿಂದೊಡಗೂಡಿ ಪರಿಜನಂಬೆರಸು ಗಜಾರಣ್ಯಕ್ಷೇತ್ರ
ದೆಡೆಸಂದ ಮೂಲಂಗಿಯೆಂಬೂರನೆಯ್ದಿವಂದಲ್ಲಿ ಕೆಲಕಾಲಂ ವಿಷ್ಣುಭಾಗವತ
ನಾಗಿರ್ದು ಕೀರ್ತಿನಾರಾಯಣನಡಿದಾವರೆಯೊಳಲರ್ವಕ್ಕಿಯಾಗಲೊಡಮಿತ್ತಲಾ
ರಾಜರಾಜಂ ಶ್ರೀರಂಗರಾಜನವಸಾನಮುಂ ಕೇಳ್ದು ಮನಂಮರುಗಿ ಲೋಕ
ರೀತಿಯಿಂ ಸಮೂಹಿತಚೆತ್ತನಾಗಿ ಶುಭಮುಹೂರ್ತದೊಳ್ತನ್ಮಹಾಸಿಂಹಾಸನ
ಮನೇರಿ ತನ್ನ ಪಿರಿಯಕುವರನಪ್ಪ ನರಸರಾಜಂಗೆ ಯೌವರಾಜ್ಯಾಧಿಪತ್ಯ
ಮನಿತ್ತು ಬಿತ್ತರಂಗೊಂಡ ಕನ್ನಡದನಾಡಂ ನಾಡೆಸೊಗದಿನಾಳುತುಮಿರೆ
ಯಿರೆ ॥೧೫॥

ಕಂ|| ಕನ್ನಡದನಾಡು ನೆಗಳ್ದಾ |
ಸನ್ನುತಸಿಂಹಾಸನಾಧಿಪತಿಯಿಂ ಸೇರ್ದ ||
ತ್ಯುನ್ನತವಿಭವದೆ ಮಧುಮಾ |
ಸಂ ನೆರೆದಾರವೆಯವೋಲದೇಂ ಸೊಗಯಿಸಿತೋ ||೧೬||

ವ|| ಇಂತಿಪರ್ಜಾಗಳ್ಯುವರಾಜನಾದ ನರಸರಾಜಂ ಕಾಲಗತಿಯನೆಯ್ದ ಲಾರಾಜರಾಜಂ ನೀಡುಮಾತ್ಮಭವಶೋಕದಿಂ ಪೀಡಿತವಾದ ನಿಜಮನಮು ನಂತಿಂತು ವಿವೇಕದಿಂ ಸಂತವಿಟ್ಟು ಧರ್ಮದಿಂದರಸುಗೆಯ್ಯುತಿಪರ್ಜಾಗಳ್ಸಮನಿ ಸಿದ ಸವರಾತ್ರೆಯಮೊದಲದಿನದೊಳ್ನಿಯಮದಿಂ ಮುಂಗಳ್ಮಜ್ಜನಂಬೊಕ್ಕಾ ಸ್ಥಾನೋಚಿತಭೂಷಣಾಂಬರಾದಿಗಳಿಂದಲಂಕೃತಾಂಗನಾಗಿ ಕುಲದೇವತೆಯಂ ಕುಶಲಮುಂ ಪ್ರಾರ್ಥಿಸಿ ಸಿಂಹಾಸನಾರೋಹಣಕ್ಕೆ ಕಂಕಣಧಾರಣಪೂರ್ವಕಂ ದೀಕ್ಷೆಯಂ ತಳೆದವನಮಾಪ್ತಜನವಿತೀರ್ಣಕರಾವಲಂಬನಾಗಿ ತಮ್ಮ ಸಮುಚಿತಸ್ಥಾನಂಗಳೊಳ್ನಿರೆದಿರ್ಪ್ಪ ಪುರೋಹಿತಾಮಾತ್ಯಪ್ರಮುಖನಿಖಿಲ ವೈದಿಕಲೌಕಿಕಸಾಮಾಜಿಕರಿಂದೆಯುಮನೇಕಸಾಮಂತ ನರಪತಿಗಳಿಂದೆಯು ಮಿಡಿಕಿರಿದಾಸ್ಥಾನಮಂಟಪಕ್ಕೆ ನಡೆತಂದು ವಿಧಿವಿಹಿತವಾರ್ಗದಿಂ ಕಲಶದೇ ವತಾರಾಧನಂಗೆಯ್ದು ಕಾಳಿಕಾಪುರಾಣೋಕ್ತರೀತಿಯಿಂ ಸಿಂಹಾಸನಮನರ್ಚಿಸಿ ನಮಸ್ಕರಿಸಿ ಪಟ್ಟಕೃಪಾಣಮುಂ ಧರಿಸಿ ||೧೭||

ಕಂ|| ಕನಕಚ್ಛತ್ರಾವೃತಕಾಂ |
ಚನಸಿಂಹಾಸನಮನೇಱಿದಂ ಮೇಲುದಯಾ ||
ರ್ಕನಿರಲ್ತದ್ರುಚಿಕಪಿದುದ |
ಯನಗೇಂದ್ರಮನೇರುವಂದದಿಂ ಮೃಗರಾಜಂ ||೧೮||
ಪಲವುಂ ಶತಘ್ನಿಗಳ್ನೆರೆ |
ಮೊಳಗಿತು ಶುಭವಾದ್ಯನಾದದೊಡನಾಗಳ್ಪೂ ||
ವಳೆಗರೆದರ್ಮದದಿಂದಾ |
ಯಿಳೆಯಾಣ್ಮನ ಮೇಲೆ ಸಕಲಲೌಕಿಕಲೋಕಂ ||೧೯||

ವ|| ಸಮನಂತರದೊಳ್ಮಹಾರಾಜಂ ವೈದಿಕವಿದ್ವಜ್ಜನಮಾಶೀರ್ವಾದ ಪೂರ್ವಕಮರ್ಪಿಸಿದ ಫಲಮಂತ್ರಾಕ್ಷತೆಗಳುಮುಂ ಲೌಕಿಕಾಧಿಕಾರಿಗಳುಂ ಸಾಮಂತನರಪಾಲರುಂ ಚಮೂಪತಿಗಳುಂ ವಂದನಾಪೂರ್ವಕಮರ್ಪಿಸಿದ ಕಯ್ಗಾಣ್ಕೆಗಳುಮುಂ ಕಯ್ಕೊಳ್ವುದುಂ ಬಹಿರಂಗಣದೊಳೋರಣಂಗೊಂಡಿ

ಟ್ಟಣಿಸಿನೆರೆದಿರ್ದ ಚತುರಂಗಸೇನಾಜನಂ ಮರ್ದನಿಕ್ಕಿ ಪೊತ್ತಿಸಿದಶತಘ್ನಿಗಳ ಗಾವರಮುಂ ಕಯ್ಗೊವಿಗಳಬ್ಬರಮುಂ ದೆಸೆದೆಸೆಯೊಳ್ಮೊಳಗೆ ತಮ್ತಮ್ಮ ಕೈದುವಿಡಿದು ಮಹಾರಾಜಂಗೆ ವೀರಭಟೋಚಿತವಾದ ವಂದನೆಯಂ ಸಮರ್ಪಿಸಿ ವಿಜಯಕೋಲಾಹಲಂಗೆಯ್ದಬಳಿಯಂ ಮಹಾರಾಜಸಿದಿರೆ ಜಟ್ಟಿಗರ ಕಾಳಗಕ್ಕೆ ಮೊದಲಾಗೆ ॥೨೦॥

ವೃ॥ ಒಂದಂ ಮುಂಗಡೆನೀಡಿ ನೆಟ್ಟನಡಿಯಂ ಪಿಂದಣ್ಗೆ ನೀಳ್ದಿಟ್ಟು ಮ ।
ತ್ತೊಂದಂ ತಳ್ತಿರೆ ವಜ್ರಮುಷ್ಟಿ ಬಲಗಯ್ಯೊಳ್ನೀಡಿ ಮುಂದಣ್ಗೆ ಬೇ ॥
ರೊಂದಂ ಕಯ್ಯನಿದಿರ್ಚಿ ನಿಂದು ನೆರೆಬಿಂಕಂಬೆತ್ತು ನೋಡುತ್ತೆ ಕಾ ।
ಯ್ಪಿಂದೊರ್ವರನೊರ್ವರುಣ್ಮಿದದಟಿಂ ಪೋರಾಡಿದರ್ಜಟ್ಟಿಗರ್ ॥೨೧॥

ವ॥ ಅಂತು ಪೋರಾಡುತ್ತಿರ್ಪವರೊಳ್,

ಕಂ॥ ಗುರಿಗೆಯ್ದಿರಾಳೆರ್ದೆಯಂ ।
ಶಿರಮಂ ಘಟ್ಟಿಸಿದ ನೊರ್ವನಿನ್ನೊರ್ವಂತ ॥
ಚ್ಛಿರಮಂ ಗುರಿಗೆಯ್ದೆರ್ದೆಯಂ ।
ಕರಗತಖರವಜ್ರಮುಷ್ಟಿಯಿಂ ಘಟ್ಟಿಸಿದಂ ॥೨೨॥

ವ॥ ಆಗಳ್,

ವೃ॥ ಉರುತರವಜ್ರಮುಷ್ಟಿದಳಿತಾಂಗಗಳದ್ರುಧಿರೋಕ್ಷಿತರ್ಪರ ।
ಸ್ಪರಭುಜಯಂತ್ರಿತಾಂಗರತಿರೋಷಕಷಾಯಿತನೇತ್ರರೆಯ್ದೆ ಹೂಂ ॥
ಕರಿಸುತೆ ಬೀಳುತೇಳುತಿಳೆಯೊಳ್ಬಲಶಾಲಿಗಳಪ್ಪ ಮಲ್ಲಶೇ ।
ಖರರವಲೋಕಿಸರ್ಭಲರೆ ಭಾಪುರೆಯೆಂಬಿನೆಗಂ ಪೆಣಂಗಿದರ್ ॥೨೩॥

ವ॥ ಇಂತು ಕಾದಿ ತಮ್ತಮ್ಮ ಯುಕ್ತಿಶಕ್ತಿಸಾಹಸಂಗಳಂ ತೋರ್ದನೇಕಮಲ್ಲವೀರರ್ಗವರವರತಕ್ಕುಮೆಗೆ ತಕ್ಕಂತು ಮೆಚ್ಚುಗೊಟ್ಟಂತು ತಗರ್ಗಳ ಗೂಳಿಗಳ ಸಲಗಂಗಳ ಕಾಳಗನಮಂ ಮನೋವಿನೋದಂಮಿಗೆ ನಿಟ್ಟಿಸುತ್ತಿರ್ಪನಿತರೊಳ್ಜಲಾಧಾರತೀರಮಂ ಸಾರ್ದಲ್ಲಿ ಮಂಗಳಮಜ್ಜನಂಗೆಯ್ದು ವಿಚಿತ್ರತರಕುಸುಮಾಭರಣಾಂಬರಂಗಳಿಂದಲಂಕೃತಂಗಳಾಗಿ ರಾಜಮರ್ಯಾದೆಯಿಂದುತ್ಸವಮೆಸರೆದಿದಿರೆನಂದು ಪಟ್ಟವರ್ಧನಂಕರಮೆತ್ತಿಯುಂ ಪಂಚಪಲ್ಲವದವಾಜೆ ಮಣಿದುಂ ತನಗೆ ವಂದನಂಗೆಯ್ದರಮನೆಯಂ ಪ್ರಗುತಂದಬಳಿಯಂವಂದಿಜನಂ ಶ್ರೀರಂಗನಾಥಪಾದಾರವಿಂದಬಂಭರಾಯಿತಚಿತ್ತಾ ಮತ್ತರಿ ಪುಷಂಡಖಂಡನೋದ್ದಂಡದೋರ್ದಂಡಾ ಅರ್ಥಿಜನೇಪ್ಸಿತಾರ್ಥದಾನಕೌಂಡಾ

ಅಂಗನಾಜನಕುಸುಮಕೋದಂಡಾ ಮಿತ್ರಕುಲಕಮಲಮಾರ್ತಾಂಡಾ ರಾಜಕಂ
ದರ್ಪಾ ರಾಜಾಧಿರಾಜಾ ಎಂದು ಕಯ್ಯೆತ್ತಿ ನಿಜಬಿರುದಾವಳಿಯಂ ಪೊಗಳುತಿ
ರ್ಪಿನಂ ಸಭಾಸದರಂ ಪುಷ್ಪಹಾರತಾಂಬೂಲಾದಿಗಳಿಂ ಮನ್ನಿಸಿ ಬೀಳ್ಕೊಡು
ವುದುಂ ಮಹಾಮಾತ್ಯಶ್ರೀಯರ್ಕೊದಲನಿಸಿದಂತಃಪುರಸೀಮಂತಿನಿಯರೇಳ್ತಂ
ದು ಸಿಂಹಾಸನಕ್ಕೆ ಕುಂಬಿಡಲೊಡನೋಲಗಮಂ ಬೀಳ್ಕೊಟ್ಟು ಮಧ್ಯಂದಿನದ
ನಿಯಮವಂತೀರ್ದಿ ಸುಹಿತವೆನಲಿಷ್ಟಜನಂಬೆರಸಾರೋಗಣೆಯಂಮಾಡಿ, ಬಳ
ಕಮಂದಿನ ಬೈಗುಂಬೊಳ್ತಿನೊಳೆಳ್ಪಾಳ್ತಡವೆಂತಂತುಮಹಾವಿಭವದಿಂ ಸಿಂಹಾ
ಸನಾರೋಹಣಂಗೆಯೊದ್ದಲಗಂಗೊಟ್ಟಂತು ಮಹಾನವಮಿಯವರೆಗಮೊಂಬ
ತ್ತುಂದಿನಂ ಸಿಂಹಾಸನಾರೋಹಣಮಹೋತ್ಸವಂ ಬಳೆಯೆ, ವಿಜಯದಶಮಿಯ
ಪೊಳ್ತಡಂ ಕಾಳಿಕಾಪುರಾಣೋಕ್ತರೀತಿಯಿಂ ಪಿಂದಣಿನವಸಮೂವಾಹಿಸಿ ಪೂ
ಜಿಸಿರ್ದಾಯುಧಂಗಳ್ಗೆ ಮತ್ತೆ ಪೂಜಾಬಲಿಸ್ರದಾನಾದಿಗಳಂ ನಿರ್ವರ್ತಿಸಿ ನಡುವ
ಗಲ್ಬೀತಬಳಿಯಂ ಚತುರಂಗಸೇನೆಯಿಂದೆಯುಂ ವಂಶಕ್ರಮಾಗತಂಗಳುಂ ನಿಜ
ಭುಜವಿಕ್ರಮಾರ್ಜಿತಂಗಳುಮಪ್ಪ ಪಲವುಂಬಿರುದುಗಳಿಂದೆಯುಂ ಕೂಡಿ ಧವ
ಳಾತಪತ್ರಚಾಮರಾದಿರಾಜಲಕ್ಷ್ಮಣಂಮೆರೆಯೆ ಬಹುವಿಧನುಂಗಳವಾದ್ಯಕೋ
ಲಾಹಲಮುಂ ಪೆರ್ಗ್ಗಲಿಗಳಬ್ಬರಮುಂ ದೆಸೆದೆಸೆಯೊಳಂನೆರೆವೊಳಗೆ ಮಹಾ
ಗಜದಮೇಗೆ ರಾಜಾಸನದೊಳ್ಮಂಡಿಸಿ ಬಡಗಣಕೋಂಟೆವಾಗಿಲಂಪೊರಮಟ್ಟು
ಪೊಳಲಗಡಿಯೊಳರ್ಪಬನ್ನಿಯಮರಮಂ ಸಾರ್ದಲ್ಲಿ ಮನ್ನಿಸೋವಿನೋದಕ್ಕೆಂದು
ತರಿಸಿರ್ದ ಕೆಲವಾನುಂ ಕಾಳ್ಮಗಂಗಳಂ ಬೇಂಟೆಯಾಡಿ ಬಳಿಕೆ ನಿಜಾಯುಧಂ
ಗಳನಿರಿಸಿರ್ದಾಮರನಂ ಪೂಜಿಸಿ ರಾಜಮರ್ಯಾದೆಯಿಂ ತನಗೆವಂದನಂಗೆಯ್ದ
ಸೈನಿಕರುಮಂ ಸಾಮಾಜಿಕರುಮಂ ಪುಷ್ಪಹಾರಾದಿಗಳಿಂ ಮನ್ನಿಸಿ ರಜನೀಮು
ಖದೊಳ್ನಖಿಲಸೇನಾಪರಿವಾರಂಬೆರಸು ಮಗುಳೆ ಗಜಾರೂಢನಾಗಿ ಮುನ್ನಮೆ
ಬನ್ನಿಯಮರದೆಡೆಯಂ ಸಾರ್ತಂದಿರ್ದ ಪಟ್ಟದಾನೆಯುಂ ಕುದುರೆಯುಂ ಕೈದು
ಗಳಂ ಪಟ್ಟರಿಸಿದಂದಣಮುಂ ಜಯರಥಮುಂ ಮುಂತಳರೆ ಮಹೋತ್ಸವವಿ
ಲೋಕನಕೌತುಕದಿಂದಿರ್ಕೆಲದೊಳುಂ ನೆರೆದಿರ್ದನೇಕಸಹಸ್ರಪೌರಜಾನಪದ
ಜನಂಗಳಂದಿಡಿಕಿರಿದೆರಡುಂಪಕ್ಕದೊಳ್ಪತ್ತಿಸರ್ಪಗಣಿತದೀಪಶ್ರೇಣಿಗಳಿಂ ಕ
ಣ್ಗೊಳಪ ರಾಜವೀಧಿಯೊಳುತ್ಸವಮೆರೆದರಮನೆಯುಂ ಪ್ರಗುತಂದೋಲಗಂ
ಗೊಟ್ಟು ಸಭಾಸದರೆಲ್ಲರಂ ಬೀಳ್ಕೊಟ್ಟಲ್ಲಿಗೆ ನವರಾತ್ರಿಯಸಿಂಹಾಸನಾರೋ

ಹಣಮುಹೋತ್ಸವಮುಂ ಸಾಂಗವಾಗೆ ಬಳೆಯಿಸಿ ತನ್ನ ನಾಡೊಳಿರ್ಪ ಪಲವುಂ ಶಿವವಿಷ್ಣು ದೇವತಾಮೂರ್ತಿಗಳ್ಗಗಣಿತರತ್ನಾಭರಣಂಗಳನರ್ಪಿಸಿ ನಿರಂತರಂ ನಡೆವಂತು ಬಹುವಿಧಸೇವಾರ್ಥಂಗಳಂ ಕಲ್ಪಿಸಿ ನಿಗಮಾಗಮವಿದರಪ್ಪನೇಕ ಭೂಸುರರ್ಗೆ ವೃತ್ತಿಕ್ಷೇತ್ರಾಲಯಂಗಳನಿತ್ತುದಲ್ಲದೆ ಮೇಲ್ಗೊಂಟೆಯುನಾ ರಾಯಣಸ್ವಾಮಿಗೆ ತನ್ನಪೆಸರಿಂ ರಾಜವುಡಿಯೆಂಬನರ್ಘಮಾದ ಮಣಿಕಿರೀ ಟಮಂ ಸಮರ್ಪಿಸಿ ನೀಡುಂಸೊಗದಿನಿಳೆಯನಾಳುತುಮಿರ್ದನಂತುಮಲ್ಲದೆ ॥

ಕಂ ॥ ಪರಭೂವಿಪತಿಗಳನಾ ।
ನರಪತಿ ವಿಕ್ರಮದಿನೊಂದರಿಂದಲ್ಲದೆ ಸ ॥
ದ್ಗುರುದೈವತಭಕ್ತಿದಯಾ ।
ಪರತಾದಿಗುಣಂಗಳಿಂದೆಯುಂ ಮೀರಿರ್ದಂ ॥೨೫॥

॥ಮತ್ತಂ॥ ಕರವಾಳಮುಂ ಪಿಡಿದೊಡಾ ।
ನರಪತಿಯಂ ಮದುವೆಯಾದನೇಕಜಯಶ್ರೀ ॥
ಯರೊಳೊಗೆದ ಕೀರ್ತಿಸಂತತಿ ।
ಧರಣಿಯೊಳಿಲ್ಲೆಲ್ಲಿಯುಂ ಕರಂ ನೆರೆದಿರ್ಕುಂ ॥೨೬॥

ವ॥ ಇಂತಿವರ್ಗಳಾಯಿಳಾಪತಿ ದೇಹಾಲಸ್ಯಮಾಗೆ ತನ್ನಿಂಬಳಿಯುಂ ನಿಜಪುತ್ರನಪ್ಪ ಚಾಮರಾಜಂಗಮಾತನಿಂಬಳಿಯಮಾಗಳ್ಗರ್ಭವತಿಯಾಗಿರ್ದ ಕಿರಿಯರಾಣಿಯೊಳ್ಪುಟ್ಟುವಕುಮಾರಂಗಂ ರಾಜ್ಯಾಭಿಷೇಕಂಗೆಯ್ವುದೆಂದಾ ಸ್ಥಾನಮುಖ್ಯಾಧಿಕಾರಿಗಳ್ಗನುಮತಿಯುಸಿತ್ತು ಒದ್ದಲಮನಡರಲೊಡನಾನೃಪತಿ ಬೆಸನಿತ್ತಮಾಳ್ಕೆಯಿಂದಾತನಮೊಮ್ಮನಪ್ಪ ಚಾಮರಾಜಂಗೆ ಯಥಾವಿಧಿ ಪಟ್ಟಾಭಿಷೇಕಮಹೋತ್ಸವಂ ಬಳೆಯೆ ॥೨೭॥

ವೃ॥ ಪರಭೂನಾಯಕರಂ ಪಿತಾಮಹನನ್ವೀಲುದ್ದಂಡದೋರ್ದಂಡಭೀ ।
ಕರಶೌರ್ಯಕ್ರಮದಿಂದೆ ಗೆಲ್ದು ಪದನಮ್ರಾನೇಕ ಸಾಮಂತಭೂ ।
ವರನುಳಿಪ್ರಸವಾಯಿತಾಜ್ಞನೆನಿಸುತ್ತಾ ಚಾಮರಾಜಕ್ಷ್ಮಾತೀ ।
ಶ್ವರಚೂಡಾಮಣಿ ಧರ್ಮದಿಂ ಸಲಪಿದಂ ಕರ್ಣಾಟಭೂಚಕ್ರಮಂ ॥೨೮॥

ವ॥ ಇಂತರಸುಗೆಯ್ಯುತಾಚಾಮರಾಜಂ ತನ್ನವಸಾನಸಮಯದೊ ಳ್ಮನ್ನಮೆಪುಟ್ಟ ರಾಜ್ಯಭಾರಕ್ಷಮನಾಗಿರ್ದ ತನ್ನಕಿರುದಂದೆಯಪ್ಪಿಮ್ಮಡಿಯ

ರಾಜರಾಜಂಗೆ ರಾಜ್ಯಾಭಿಷೇಕಮನಾಗಿಸಿ ಕಾಲಗತಿಯಂಪೊರ್ದುವುದು ಮಾತ
ನಕಯ್ವಿಡಿದರ್ದರಸಿಯರನಿಬರುಂ ಸಹಗಮನಪುಣ್ಯದಿಂ ಪತಿಲೋಕಮುಂ
ಸಾರಲೊಡನಾಯಿಮ್ಮಡಿಯರಾಜರಾಜಂ ಧೈರ್ಯಶೌರ್ಯಗಾಂಭೀರ್ಯಾದಿ ನಿರುಪಮ
ರಾಜಲಕ್ಷಣೋಪಲಕ್ಷಿತನಾಗಿ ಕರ್ಣಾಟಕ್ಷ್ಮಾಣೀಮಂಡಲಮುಂ ಪ್ರಕೃತಿ
ಕ್ಷ್ಮೇಮೈಕನಿಹಿತೇಕ್ಷಣನಾಗಿ ಪರಿರಕ್ಷಿಸುತುಮಿರ್ದನಂತುಮಲ್ಲದೆ ॥೮೯॥

ಕಂ॥ ಎಣಿಕೆಯಿನೊಂದರಿನಲ್ಲಂ |
ಗಣನೀಯಗುಣಂಗಳಿಂದೆಯುಂ ರಾಜನೃಪಾ ||
ಗ್ರಣಿಗಿಮ್ಮಡಿಯೆಂದೀಜಗ |
ಮಣಿಯರಮಿಸ್ಮಡಿಯರಾಜನೃಪಸಂ ಪೊಗಳ್ಗಂ ॥೩೦॥

ವ॥ ಇಂತು ನೆಗಳ್ದೆವೆತ್ತಿಮ್ಮಡಿಯರಾಜರಾಜಂ ನವರಾತ್ರಮಹೋತ್ಸ
ವದೊಳ್ನಿಜಜನಕಂಪೊಗಳಿಸಿಕೊಳುತಿರ್ದಬಿರುದುಗಳಲ್ಲದೆ ವೀರ ಶೂರ ಮಲೆ
ವರಗಂಡ ಸಂಗೀತಲೋಲ ಸಾಹಿತ್ಯರತ್ನಾಕರ ಅಭಯಪ್ರತಾಪಾಧೀಶ್ವರ
ಎಂಬ ಬಿರುದುಗಳಿಂದೆಯುಂ ಪೊಗಳಿಸಿಕೊಳುತುಂ ಬಹುವಿಧ ಮಹಾರಾಜಮೈ
ಭವಂಗಳಿಂಮೆರೆಯುತುಂ ಬುದ್ಧಿಬಲಸಂಪನ್ನನಾಗಿ ರಾಜ್ಯಂಗೆಯ್ಯುತಿರ್ಪಿನಂ,
ತೆರಕಣಾಂಬಿಯೊಳಿರ್ದ ಬೆಟ್ಟದಚಾಮರಾಜನೆಂಬೀತನ ಕಿರುದಂದೆಯ ತನೂಜ
ನಪ್ಪಕಂಠೀರವನರಸರಾಜನಲ್ಲಿಗೆ ರಾಮೇಶ್ವರಾದಿಪುಣ್ಯತೀರ್ಥಯಾತ್ರೆಯನೆಸಗಿ
ಪಾರ್ವನೊರ್ವಂ ಬಂದು ಫಲಾಕ್ಷತೆಯನಿತ್ತುಪರಸಿ "ತೆಂಕಣಭರತಖಂಡ
ದೊಳಿರ್ಪ ತಿರುಚನಾಪಲ್ಲಿಯೆಂಬರಾಜಧಾನಿಯೊಳೊರ್ವಜಟ್ಟಗನಿರ್ಪನೆಂದು
ಮಾತನಪ್ರತಿವೀರನೆಂದುಮಲ್ಲಿಯರಸು ತನ್ನಬಳಿಯೊಳಾತನಂ ಪಿರಿದುಂ ಪತಿ
ಕರಿಸುತಿರ್ದಪನೆಂದುಮಿಂತಿದಲ್ಲಿರ್ಪರಾಜಬಂಧುಗಳ್ಗಂ ಧರಣಿಸುರರ್ಗಮೊಡಂ
ಬಡದಿಪ್ಪುದೆಂದುಂ" ತಿಳಿಪಲಾಸುದ್ದಿಯಂ ಕೇಳ್ದಾರಾಜನಾಜಟ್ಟಗನ ವೀರ
ಪ್ರಥೆಯುಂ ಸೈರಿಸದವನುರ್ಕಿನಸೊರ್ಕನಳ್ಕಾಡಿಸಲೆವೇಳ್ಕುಮೆಂದು ಬಗೆದುಜಟ್ಟ
ಗನ ಚೋಹದಿಂ ಕೆಲಬರ್ಪಸಾಯಿತರಿಂದೊಡವೆರೆದಾಪಾರ್ವಂಬೆರಸು ಗೂ
ಢವಾಗಿಪಯಣಂಬೋಗಿ ತಿರುಚನಾಪಲ್ಲಿಯಂಸೇರ್ದು ದೇಶಾಂತರದಿಂಮಲ್ಲ
ಕ್ಷೇಖರನೊರ್ವಂ ಬಂದಿರ್ಪನೆಂದಲ್ಲಿಯರಸಿಂಗೆನಿಜಾಗಮನಮನರಿಪಿದಬಳ
ಕಮಾರಾಯಂ ತನ್ನಲ್ಲಿಯಪೆಸರ್ವೆತ್ತಜಟ್ಟಗಂಗಮಿಾಕವಡುಜಟ್ಟಗಂಗಮಾ
ಸ್ಥಾನದಿದಿರಕಳನೊಳ್ಕಾಳಗಂನಡೆವಂತು ಸಮಕಟ್ಟಲೊಡಂ ॥೩೧॥

ಕಂ|| ಗಳಮಲರಸರದೆ ಕತ್ತುರಿ |
ತಿಳಕದೆ ಪಣೆ ಗಂಧದಿಂದೆ ಸಿರಿಮೆಯ್ಯಾಯ್ತಂ |
ಬುಲದಿಂ ಪರಿಕರದೆಕಟೀ |
ತಲಮೆಸೆದಿರೆ ಕಳಕೆ ಬಂದನಾಪುಸಿಮಲ್ಲಂ ||೩೨||

ವ|| ಆನಿತರೊಳಲ್ಲಿಯನಾಜಟ್ಟಗನುಮಂತಲ್ಲಿಗೆನಡೆತಪ್ಪುದುಮಾಸ್ಥಾನದೊಳ್ನಿಜಪರಿವಾರಂಬೆರಸಾರಾಯನುಂ ಬಹಿರಂಗಣದೊಳನೇಕಸಹಸ್ರಪುರಜನಮುಂ ಕಡಂಗಿನೋಡುತಿರ್ಪಿನಸಾಮಲ್ಲಂಗಮಿನ್ನಪಮಲ್ಲಂಗಂ ಕಾಳಗಕ್ಕೆ ಮೊದಲಾಗೆ ||೩೩||

ವೃ|| ಕಳನೊಳ್ದಂಡೆಯನಿಕ್ಕಿ ನಿಂದು ಕೊರಲಂ ಕಿತ್ತಿಟ್ಟುವೂಮಾಲೆಯುಂ |
ಸುಳಿದಾಡುತ್ತೊಳಪೊಕ್ಕು ಪಟ್ಟು ಪಿಡಿದೌಂಕುತ್ತುರ್ದುತುಂ ಡೊಕ್ಕರಂ ||
ಗಳಹತ್ತಂ ಮೊದಲಾದ ಪಟ್ಟುಗಳಚಾಣ್ಮೆಯ್ದೋರೆ ಸುತ್ತುಂಜನಂ |
ಭಳಿರೇಭಾಪೆನೆ ಭೀಮನಾಗಧರಪೋಲಾಪರರೇಂಪೋರ್ಪರೋ ||೩೪||

ವ|| ಇಂತುಕಾಳಗಂ ಬಳೆಯುತ್ತಿರಲಾಕವಡುಜಟ್ಟಗನಾಜಟ್ಟಗನಂ ನಡುಗಟ್ಟನೊಳ್ಬೃತಿಟ್ಟರ್ದ ಪಟ್ಟಸದಿಂದಾರುಮರಿಯದಂತೆ ಕೊರಲರಿದು ಜವನಲ್ಲಿಗಟ್ಟುವುದು ಮಾರಾಯನಚ್ಚರಿವಟ್ಟು ಗೆಲ್ಲಮಂ ಪಡೆದಾಕಪಟಮಲ್ಲಕೇಶರಂಗೆ ಮರುದೆವಸಮುಲ್ಲಾಸದಿಂ ಮೆಚ್ಚಗುಡಲಿರ್ಪನಿತರೊಳಾವೀರಕಂಠೀರವನರಸರಾಜನಾರಾಯನಿಂ ಜಟ್ಟಗಂಗುಚಿತಮುಪ್ಪುಚಿತಮಂ ಪಡೆವುದ ಸುಚಿತಮೆಂದು ಬಗೆದಂದಿನಿರುಳೊಳೆ "ಮಹೀಶೂರನಗರದಿಂದಾವನೋ ವೀರಂ ಬಂದೀಪುರದ ನೆಗಳ್ತೆವಡೆದಜಟ್ಟಗನಂ ಪೊಟ್ಟುಗುಟ್ಟದ" ನೆಂಬ ತನ್ನ ಕಟ್ಟಾಳ್ತನಮನೊಕ್ಕಣಿಸಿ ಬರೆಮೋಲೆಯೊಂದಂ ಕೋಂಟೆವಾಗಿಲೊಳಂಟಿಸಿ ನಿಲ್ಲದಲ್ಲಿಂದೆಕ್ಕಟಿಯೊಳೊಪ್ಪಿರಮಟ್ಟು ನಿಜವಾಸಮನೆಯ್ದಲತ್ತಲಾತಿರುಚನಾಪಲ್ಲಿಯ ಭೂವಲ್ಲಭನಾಮರುದೆವಸಮಾವೋಲೆಯಸುದ್ದಿಯಂಕೇಳ್ದ ಮನಂತರಂಬೇಹಿನವರಮುಖದಿಂದಿಂತಪ್ಪಾತನೆ ಮಲ್ಲವೇಷದಿಂತನ್ನಲ್ಲಿಗೆಬಂದಿರ್ದನೆಂದು ತಿಳಿದುನುದಂಸಡ್ಡಿಗೆಯ್ಯದಿರ್ಪಿನೆಗಮಿತ್ತಲಾಯಿಮ್ಮಡಿಯ ರಾಜರಾಜಂ ನಾಕಲೋಕಮನೆಯ್ದಲಾತಂಗೆಪುತ್ರಸಂತಾನಮಿಲ್ಲದಕತದಿಂ ರಾಜರಾಜನರಸಿತಿಮ್ಮಾಜಂಬೆ ನಿಖಿಲಪ್ರಜಾಸಮ್ಮತಿಯಿಂದಾಕಂಠೀರವನರಸರಾಜಂಗೆ ಪಟ್ಟಾಭಿಷೇಕಮಹೋತ್ಸವಮಂ ಬಳೆಯಿಸಲೊಡಂ ||೩೫||

ಕಂ|| ಕಂಠೀರವಪಡಂತಿಳೆಯೊಳ |
ಕುಂಠೀಭೂತೋಗ್ರವೀರ್ಯನೆಂದೆನಿಸುತ್ತುಂ ||
ಕಂಠೀರವಾಸನಮನಾ |
ಕಂಠೀರವನರಸರಾಜನಡರ್ದೆಸೆದಿರ್ದಂ ||೩೬||

ವ|| ಇಂತು ಕರ್ಣಾಟಸಿಂಹಾಸನಾಧಿಪತ್ಯಮುಂಕಯ್ಕೊಂಡಾಕಂಠೀರವನರಸರಾಜಂ ರಾಜನೀತಿಸಮಯಾಚರಣೈಕಸಮುತ್ಕಂಠನಾಗಿ ದುಷ್ಟರಂ ಶಿಕ್ಷಿಸುತ್ತುಂ ಶಿಷ್ಟರಂ ರಕ್ಷಿಸುತ್ತುಂ ಪ್ರಜಾನುರಾಗಂಪೆರ್ಚುವಿನಂ ನಿಜಾನ್ವಯಮರ್ಯಾದೆಯಂಮೀರದೆ ಧರ್ಮದಿಂದರಸುಗೆಯ್ಯುತುಂ ಪ್ರಬಲತರಚತುರಂಗಸೈನ್ಯಸಾಧನಂಗಳಿಂದೊಡಗೂಡಿ ಪಲರ್ಕೆದಾಳಟ್ಟು ತನ್ನನಾಡಿನಸುತ್ತುಮಲ್ಲಲ್ಲಿರ್ದಪಲಬರರಸರಂ ಬಂಡಣಿಗೊಳ್ಗೊಲ್ದವರವರ ನಾಳ್ಕಳಂ ಬಸಂಗೊಳಿಸಿನಿಜರಾಜ್ಯಮುಂಪಿರಿದುಂಬಿತ್ತರಿಸಿ ತನ್ನಿದಿರಾರುಮಿಲ್ಲೆಂದಿಳೆಯೊಳೆಲ್ಲೆಲ್ಲಿಯುಂ ನೆಗಳ್ತೆವಡೆದನಂತುಮಲ್ಲದೆ ||೩೭||

ಕಂ|| ತೃಣಕೆಬಗೆಯುತ್ತೆ ಶಾತ್ರವ |
ಗಣಮಂ ಲೀಲೆಯೊಳೆಜಯಿಸುತಿರ್ದುದರಿಂ ಧಾ ||
ರಿಣಿಯೊಳ್ತಾಂಪಡೆದಿರ್ದಂ |
ರಣಧೀರನೆನಿಪ್ಪಬಿರುದನಾಧರಣೇಂದ್ರಂ ||೩೮||

||ಮತ್ತಂ|| ಅತಿವೇಲರಣೋತ್ಸಾಹದಿ |
ನತಿಶಯಿತತ್ರಾಣದಿಂದಮಂತತಿಮಾತ್ರಾ ||
ಕೃತಿಯಿಂದಮಾಸೃಪಾಲಂ |
ಕ್ಷಿತಿಯೊಳ್ಕಲಿಭೀಮನೆಂಬು ಪೆಸರ್ವಡೆದಿರ್ದಂ ||೩೯||

ವ|| ಇಂತಿವರ್ಮಾಗಳನಿತರಸಾಧಾರಣರಣಕರ್ಮಧೌರೆಯನಪ್ಪಾಕಂಠೀರವನರಸರಾಜನೆಲ್ಲೆಲ್ಲಿಯುಂ ಗೆಲ್ಲಮನೆ ಪಡೆಯುತಿರ್ಪುದಂಕೇಳ್ದು ತಿರುಚನಾಪಲ್ಲಿಯರಸು ಪಿಂದೆನ್ನಮೆಯ್ಗಾಪಿನತುಳಿಲಾಳೆನಿಸಿರ್ದಿಷ್ಟಗನಂ ಮಡಿಪಿದಾತನೆಕನ್ನಡದನಾಡಿಂಗೊಡೆಯನಾಗಿ ತಿರೆಯೊಳೆಲ್ಲೆಲ್ಲಿಯುಂ ಗೆಲ್ಲಂಗೊಂಡನಾದುದರಿಂದೆನ್ನರಾಜ್ಯಮುಮುಂವೇಡ್ಕೈಸದಿರಂ ಕಾಳಗದೊಳ್ಗೆಲಬಾರನಾದುದರಿಂದೆಂತಾನುಮಿವನಂಗನ್ನಗತಕದಿಂಜವನಸನ್ನಿದಮಂಪೊರ್ದಿಸಲೆವೇಳ್ಕುಮೆಂದೆಣಿಸಿ ಹಿತವರಪ್ಪಿರ್ವತ್ತಯ್ವರುಂ ಚೋರಮಲ್ಲರನೆಕ್ಕಟಿಗರೆದು ಪಗೆಯುಂ

ಕೊಲ್ವುದೆಂದು ಬೆಸಸಿತ್ತು ಕಳಿಪಲೊಡಮವರಲ್ಲಿಂಪೊರಮಟ್ಟು ಪಲವಗೆಯ ಚೋಹದಿಂ ಶ್ರೀರಂಗಪತ್ತನಮನೆಯೆದ್ದವಂದು ಸಮಯಮಂ ಪಾರುತ್ತಿರ್ದಂ ದಿರುಳ್ತಮಗೆ ಪವಣಿಪ್ಪಸಮಯದೊಳರಮನೆಯಸೆಜ್ಜೆವನೆಯಂ ಪ್ರಣಾಳಿಯ ಕೆಲದೊಳ್ಕನ್ನವಿಕ್ಕಿಸಪ್ಪುಳಿಲ್ಲದೊಳಪೊಕ್ಕು ಕಂಬಂಗಳಂಮರೆಗೊಂಡು ಕೈದುವೆರಸುನಿಂದಿರ್ದಿನವಮಾರಾಜೇಂದ್ರಂ ವೀಳಯಂಗೊಂಡು ತನ್ನಬಲ್ಪಿಂಗಳವಟ್ಟಪಾಸರೆಯ ಮಂಚದೊಳ್ಪಡುವಾಗಳನಿತುಂಕಂಬಂಗಳಬಳಿಯೊಳ್ಮಾನಿಸರಮೆಯೆನ್ನಿಳಂ ಕಂಡಾರೊಪಗೆಗಳೆಯ್ತಂದು ಮೆಯ್ಗರೆದಿರ್ಪರೆಂದಾಕ್ಷಣಮೆ ಬಳಿಯೊಳಿರ್ದವೀರನಾರಸಿಂಹನಾಮಕಮಪ್ಪಕರವಾಳಮಂ ಕರದೊಳಾಂಪ್ತುದು ಮಾಚೋರಭಟರೊಗ್ಗಿಸಿಂ ಕಡಿದಲೆಯಂ ಜಡಿದು ಮೇಲ್ವಾಯಲೊಡಂ ।೪೦॥

ವೃ॥ ಕೆಲರಂಹೂರಸಿಯಿಂದೆ ಪೊಯ್ದು ಕಡುಪಿಂ ದುದ್ಯತ್ಪದಾಘಾತದಿಂ ।
ಕೆಲರಂಘಾತಿಸಿ ಗೋಣ್ಮಿಸುಂಕಿಕೆಲರಂ ಮೇಲ್ವಾಯ್ದರಂಮಾಣದಿಂ ॥
ಕೆಲರಂಕಂಕುಳೊಳೊಂಕಿ ಮರ್ದ್ದಿಸಿದನಿಂತಾರಾಯನಾಯೋಧಸಂ ।
ಕುಲಮಂ ಪಿಂದುಪಕೀಜಕಪ್ರಕರಮಂ ಕೊಂದಂತೆವಾತಾತ್ಮಜಂ ॥೪೧॥

ವ॥ ಇಂತಾಚೋರಮಲ್ಲರಂ ಸಂಹರಿಸಿ ॥೪೨॥

ಕಂ॥ ಅಸಮಯದೊಳಿಂತುವೈಸಿಕ ।
ಮೆಸಗಿದ ತಚ್ಚೋರಭಟರನಾಂತೊರ್ವನೆ ಘಾ ॥
ತಿಸಿದಕತದಿಂದೆ ಪಡೆದಂ ।
ವಸುಧೆಯೊಳಸಹಾಯಶೂರನೆಂಬಾಬಿರುದಂ ॥೪೩॥

ವ॥ ಇಂತಾನರಾಧಿಪನರಾತಿಕುಲದುರಾಸದಪರಾಕ್ರಮನಾಗಿಧರಾಮಂಡಲಮುಂಸಲಪುತ್ತೆ ನಿಜಾಧಿಪತ್ಯಕ್ಕೆತಕ್ಕಂತುದಾರವೈಭವದಿಂ ಪಲವೆಡೆಯೊಳ್ಪಲವುಂದೇವತಾಸೇವೆಗಳ್ನಡೆವಂತುಕಟ್ಟಲೆಗಳಂನೆಗಳ್ಚಿ ಪಲಂಬರಿಳೆಯಮರರ್ಗೆ ವೃತ್ತಿಕ್ಷೇತ್ರಾಲಯಂಗಳನಿತ್ತು ಸಕಲಜನೋಪಕಾರಾರ್ಥದಿಂಪಲವುಂ ಪೂರ್ತಂಗಳನಾಗಿಸಿ ಬಿತ್ತರಂಗೊಂಡನಿಜರಾಜ್ಯಮಂಪಗೆಗಳೊತ್ತದಂತೆ ಸೇನೆಯಂಪೆರ್ಚಿಸಿ ಗಡಿಗಡಿಯೊಳಮದಂನೆರಪಿ ಮುನ್ನಿರ್ದುದರ್ಕಿವ್ಮಡಿಯಾಗಿಸಮಗ್ರಸಮರಸಾಮಗ್ರಿಗಳಂಸಜ್ಜುಗೊಳಿಸಿ ಬಳಿಕಂ ಶ್ರೀರಂಗಪತ್ತನದಕೋಂಟೆಯಂಬಲ್ಲಿತ್ತಾಗಿ ಬಿತ್ತರಂಗೊಳಿಸಿ ಗೆಂಟನೊಳ್ಬರ್ಪಾಗಳೆಪಗೆವರಪಡೆಯಂ

ಗುಂಡುಗಳಿಂದಿಡಲ್ಕೆ ಪವಣಪ್ಪಂತು ಸುತ್ತುಂಕೊತ್ತಳಂಗಳೊಳ್ಪಲವುಂಶತ ಘ್ನಿಗಳಿಂನೆಲೆಗೊಳಿಸಿ ನಗರಕ್ಕೆಳ್ಗಿಯನಾಗಿಸಿದಾಗಳ್ ||೪೪||

ಕಂ|| ಸೇಸಂ ರಂಗಸ್ವಾಮಿಗೆ |
ಪಾಸೆನಿಸಿದನೆಂಬಪುರುಡಿನಾತನಕಾಪಿಂ ||
ಗೋಸುಗವೆ ಮಂಡಲಿಸಿದಾ |
ವಾಸುಕಿಯೆನೆ ಮೆರೆದುದಾಪುರಪ್ರಾಕಾರಂ ||೪೫||

ವೃ|| ಸುರುಚಿರಮಂದಿರಾಳಿವಿಲಸನ್ನೃಪವೀಥಿಗಳಿಂ ವಿಚಿತ್ರಮಾ |
ದುರುತರರಾಜಮಂದಿರದಿನುತ್ತಮಪಣ್ಯವಿತಾನದಿಂ ನಿರಂ ||
ತರಮೆಸೆಯುತ್ತುಮಿರ್ಪ ಪಲವುಂ ಪಸರಂಗಳಿನಂತುದಗ್ರಗೋ |
ಪುರಶಿಖರಾನ್ವಿತಾನುಪಮದೇವಗೃಹಂಗಳಿಸೊಪ್ಪಿತಾಪೊಳಲ್ ||೪೫||

ಕೆಂ|| ಮನೆಮನೆಯಂಗಳದೊಳ್ಕೆಡೆ |
ದನರ್ಘರತ್ನಂಗಳಂ ಗುಡಿಸಿ ಕವದೊಡನಂ ||
ಗನೆಯರ್ಕಳಲ್ಲಿ ಲೆಕ್ಕಿಸ |
ದನುದಿನಮುಂ ಬಿಸುಡುತಿರ್ದರಾಸಿರಯೆಸಿಪೋ ||೪೬||

ಕಂ|| ಪರಿಜರಿಸಲ್ಪಂಗೇಶ್ವರ !
ನರಸಿಯನೆಯ್ತಂದು ಮರಲದಲ್ಲಮಿಸುಗೊ ||
ಲ್ದಿರುತಿರ್ಪಮರಿಯರೆಂಬಂ |
ತಿರೆ ತತ್ಪುರದಿಂದುಮುಖಿಯರೇನೊಪ್ಪಿದರೋ ||೪೭||

ವ|| ಮತ್ತಮಾಗಳಾಪುರಮಿಡಿಕಿರಿದತಸಿವರ್ಣಳಂತಳೆದಗ್ಗಳಿಸಿದೈಸಿರಿಯೊಳಾರುಮಿಂತು ಮಣಿದಿರನೇಳ್ಕುಮೆಂದು ಲೋಕಕ್ಕೆ ನೀತಿಯನರಿಪಲೆಂಬಂತಿರೆ ಕರಂಬಾಗಿಯುಂ ಬಿರಯಿಗಳೆರ್ದೆಯುಂಬಿರಿಯಿಸುವಬಿರಿಮುಗುಳ್ಗಳಿಂ ತೀವಿಯುಂ ಕಣ್ಗೊಳಿಪಪರಿಪರಿಯುತರುಲತೆಗಳೊಳಂ ಮುಗಮುಗಿಸುವರೆವಿರಿದಪೂಗಳೊಳ್ಗಂಪನಪಹರಿಸಿನೆರೆಸುಗಿದು ಕುಸುಂಗಿಮೆಲ್ಲೆಲ್ಲನತ್ತಿತ್ತಣಸಂದುಸಂದುಗಳೊಳ್ನುಸುಳ್ದು ಪೊರಸಾರುತಿರ್ಪಕಿರುವೆಲರಂ ಕಂಡೆವ್ಮೊಡಮೆಯಂಕಳ್ದುಯ್ದಪನೆಂದು ಝುಂಕಾರವಿರಾವದಿಂಗಾವರಿಸುತೊಡನೊಡನೆಬೆಂಗೊಂಡುಪಿಡಿಯಲೆಂಬಂತೆ ಗಡಣಂಗೊಂಡರೆಯಟ್ಟುತಿರ್ಪಕಂಪುಣಿಗಳೊಳಂ ದೆಸೆದೆಸೆಯಿಂದತಿಥಿಗಳೆಂಬಂತೆ ಸಾರ್ತಂದು ಸವಿವರ್ಣಳಂಸವಿದಣಿಯರಂ

ತಣಿಪಾಂತುಣಿಸಿತ್ತರಂಪರಸುತಿರ್ಪುವೆಂಬಂತೆ ಸಂಚುಗೂಡಿದಿಂಚರದಿಂದುಲಿ
ವಪಲತೆರದಪಕ್ಕಿಗಳೊಳಂ ನಾಡೆಮನೋಭಿರಾಮುಂಗಳೆನಿಸಿವಾರಾಮುಂಗಳಿಂಕ
ಣ್ಗೊಳಿಸುತ್ತುಂ ದ್ವಾರಕಾನಗರದಂತೆ ಶೌರ್ಯಾಶ್ರಯಪ್ರಮುದಿತಯದುಕುಲ
ನರಪಾಲಪಾಲಿತಮುಂ ಲಂಕಾಪುರದಂತೆ ವಿಭೀಷಣಚರಿತಾಹ್ಲಾದಿಪುಣ್ಯಜನಾ
ಧ್ಯುಷಿತಮುಂ ಸಾಕೇತನಗರದಂತಲಕಾಪುರದಂತೆ ಸದಾರಾಜರಾಜೋಪಭು
ಕ್ತಮುಂ ಪೂರ್ವದಿಗ್ಭಾಗದಂತೆ ಪ್ರತಿನಿಶಾಂತಮಸಂತಮಣಿಸಮುದಯಶೋ
ಭಿತಮುಮೆನಿಸುತ್ತುನ್ನಾದಮೊಪ್ಪುತಿರ್ದ್ದಂತುಮಲ್ಲದೆ ॥೪೯॥

ಕಂ॥ ಚೋರರುಮೀತಿಗಳುಂ ತಲೆ ।
ದೋರದಿರಲ್ಭೀತಿಯಿಲ್ಲದಣಮನಿತರಸಾ ।
ಧಾರಣವಿಭವಮನೆಯ್ದಿದ ।
ಪೌರರ್ಕಳದೆಂದುಮಲ್ಲಿ ಸೊಗವಡುತಿರ್ದರ್ ॥೫೦॥

ವ॥ ಇಂತು ಮಹಿಶೂರನಗರಮುಮನೇಳ್ಗೆವಡೆಯಿಸಿ ಕಂದುಕುಂದು
ಗಳೇನೊಂದುಮಿಲ್ಲದೆ ಸಿಜರಾಜ್ಯಂ ನಿಷ್ಕಂಟಕಮಾಗಿರ್ಪಂತು ಸಾಮಂತರು
ಮಧಿಕೃತರುಂ ಚಮೂಪತಿಗಳುಂ ಪ್ರಜೆಗಳುಮಿಂತಿಂತು ನಡೆಯುವೇಳ್ಕ
ಮೆಂದು ಪಲವುಂಪೊಸತಪ್ಪರಾಯಗಟ್ಟಲೆಗಳಂ ಸಮಗಟ್ಟಿ ಸುಖಸಾಮ್ರಾಜ್ಯ
ಪದವಿಯನನುಭವಿಸುತ್ತಿರೆಯಿರೆ ॥೫೧॥

ವೃ॥ ಪಗೆಗಳ್ಬಾಯೊಳಗಾವಗಂಬಿಡದೆ ಪುಲ್ಲಚ್ಚಿರ್ದರೆಲ್ಲೆಲ್ಲಿಯುಂ ।
ಬಗೆಯೊಳ್ತನ್ನ ನೃಪನಾಜ್ಞೆಯಂ ನನೆಯುತಿರ್ದರ್ಮಂತ್ರಿಮುಖ್ಯಾಧಿಕಾ ।
ರಿಗಳಾತ್ಮೋಚಿತಧರ್ಮಮಾರ್ಗದೊಳೆ ನಾಲ್ಕುಂವರ್ಣಮಿರ್ದತ್ತು ಮಾ ।
ಸೊಗದಿಂದಾಗಳಧರ್ಮಮಾನೆಲದೆ ಬೈತೆಲ್ಲಿರ್ದುದೋ ಕಾಣೆನಾಂ ॥೫೨॥

ವ॥ ಇಂತಿರ್ಪಾಗಳಾಮಹಾರಾಜಂ ನಿಜದೇಹದೊಳನಾರೋಗ್ಯಮು
ಣ್ಮುವುದುಂ ಸ್ವಗೋತ್ರಜ್ಞಾತಿಯಾದ ಮುಪ್ಪಿನದೇವರಾಜನ ತನೂಜನಪ್ಪ
ದೇವರಾಜನೆಂಬ ಕುಮಾರನಂ ಪುತ್ರಭಾವದಿಂ ಸ್ವೀಕರಿಸಿ ನಾಕಲೋಕಮನೆ
ಯ್ದಲೊಡಂ ॥೫೩॥

ವೃ॥ ದೇವಕೀಸುತಮುಖಾಹ್ವಯಭಾಸ್ವ ।
ದ್ದೇವದೇವಚರಣಾರ್ಪಿತಚಿತ್ತಂ ।
ದೇವರಾಜಸಮವೈಭವಯುಕ್ತಂ ।
ದೇವರಾಜಸವನುರ್ವಿಯನಾಳ್ದಂ ॥೫೪॥

ವ॥ ಇಂತರಸುಗೆಯ್ಯುತುಮಾದೇವರಾಜಂ ಧನಂಜಯಪ್ರತೀಕಾಶ ಭುಜಪ್ರತಾಪನಾಗಿ ನಾಲ್ಕುಂದೆಸೆಯೊಳ್ಪಲಬರಂರಾಜ್ಯಾಧಿಪತಿಗಳಂ ರಣಮು ಖದೊಳ್ಗೆಲ್ದವರವರರಾಜ್ಯಂಗಳಂ ನಿಜರಾಜ್ಯಕ್ಕೊಳಗುವಾಡಿ, ರಾಜಕುಲ ತಿಲಕ ರಾಜಾಧಿರಾಜ ರಾಜಪರಮೇಶ್ವರ ದೇವಬ್ರಾಹ್ಮಣಪರಿಪಾಲಕ ಎಂಬ ಬಿರುದುಗಳಿಂ ಪೊಗಳಿಸಿಕೊಳುತ್ತುಮಿರ್ದು ನಿಜಕುಲದೇವತೆ ನೆಲಸಿರ್ಪವು ಹಾಬಲಾಚಲಕ್ಕೆ ನಿರಂತರಮುಂ ದೇವತಾಸೇವೆಗೆ ಪೋಗಿವರ್ಪಜನಂ ಸುಖ ದಿಂದೆ ಸಂಚರಿಸಲೆಂದಡಿಯಿಂದೆ ತುದಿವರಮಾಯಸವೊಂದಿನಿಸುಮಿಲ್ಲದೆ ಪ ಸುಳಿಗಳುಮೇರಲ ರ್ಪತೆರದಿಂ ಸಮೆದು ತರವೇರಿಸಿದ ಪಾಸರೆಗಳಿಂದಾಕಲ್ಪ ಮಿರ್ಪಂತು ಕುಶಲರಪ್ಪಶಿಲ್ಪಿಗಳಿಂ ಸೋಪಾನಸರಣಿಯಂ ಮಾಡಿಸುವುದುಂ॥

ಕಂ॥ ಜಗದುಪಕೃತಿಗಾನೃಪನಾ ।
ನಗಕ್ಕೆ ಕಟ್ಟಿಸಿದ ಚಾರುಸೋಪಾನಮದೇಂ ॥
ಸೊಗಯಿಸಿತೊ ಧರ್ಮಗಿರಿಮೌ ।
ಳಿಗೆ ತಾನೇರಲ್ಕೆ ಕಟ್ಟಿಸಿದ ಮೆಟ್ಟಿಲೆಸಲ್ ॥೫೬॥

ವ॥ ಅಂತುಮಲ್ಲದಾಭೂವಲ್ಲಭನಾಭೂಧರದಸೋಪಾನಸರಣಿಯಾ ನಟ್ಟಿಡೆಯೋವರಿಯೊಳಾಗಿರಿಯ ಕಿರುಗೂಸೆಂಬಂತಿರ್ಪ ಸುಂದರಮಾದ ವೃಷ ಭೇಶ್ವರನ ಶಿಲಾಮಯವಿಗ್ರಹಮಂ ನಿರ್ಮಾಣಂಗೆಯಿಸಿ ನೀಡುಂಭಕ್ತಿಯಿಂದಾ ಗಮೋಕ್ತವಿಧಾನದಿಂ ಪ್ರತಿಷ್ಠೆಗೆಯಿಸಲೊಡಂ ॥೫೭॥

ವೃ ॥ ಹರನಿನ್ನಾಜ್ಞೆಯಿನನ್ನಮಂ ಸೃಜಿಸಿದೇನೆಳ್ತಾಗಿಲೋಕಾಳಿಗೀ ।
ಧರೆಯೊಳ್ಕಜ್ಜಮಿದಂ ಮದನ್ವಯಭವರ್ಪೋತ್ತಿರ್ಪರೆಂದಾಮಹಾ ॥
ಗಿರಿಕೂಟಸ್ಥಮಹೇಶ್ವರಂಗರಿಪಿ ತದ್ಭೂಮಿಾಧರಾರ್ಧಾಧ್ವದೋ ।
ವರಿಯೊಳ್ವಿಶ್ರಮವಾಂಪ ನಂದಿಯೆನೆ ತೋರ್ಕುಂ ತದ್ವೃಷಾಧೀಶ್ವರಂ॥೫೮॥

ವ॥ ಅಂತುಮಲ್ಲದಾನರಪತಿ ಲೋಕೋಪಕಾರೈಕಮತಿಯಿಂ ಮಹಿಶೂರನಗರಕ್ಕಂ ಮಹಾಬಲಭೂಧರಕ್ಕಂ ನಡುವೆ ತನ್ನಪೆಸರಿಂ ದೇವಾಂಬುಧಿಯೆಂಬ ಮಹಾತಟಾಕಮಂ ಕಟ್ಟಿಸಲ್ಕೆ ॥೫೯॥

ವೃ ॥ ಮೆರೆಗುಂ ಸಂಚರಣಾರ್ಹಮಂಜುಳಶಿಲಾಸೋಪಾನದಿಂದಂತುಕಂ ।
ಡರಸಿರ್ವೊಳ್ಪಿನಕಲ್ಗಳಿಂ ಸಮೆದ ತೂಬಿಂದಂ ತಟೋಪಾಂತಮೇ ॥

ದುರನಾನಾತರುರಾಜಿಯಿಂದೆ ತಿಳಿನೀರಿಂದಂ ತ್ರಿಸಂಧ್ಯಕ್ರಿಯಾ |
ಕರಸನ್ಮಂಟಪದಿಂ ತಟಾಕಮದು ಜೀವವ್ರಾತಜೀವಾತುಕಂ ||೬೦||

ವ|| ಅಂತುಮಲ್ಲದಾಸ್ತಿಕಶಿರೋಮಣಿಯೆನಿಸಿದಾಧರಣಿಪತಿ ಮಹಾ ಬಲಾಚಲವಾಸಿನಿಯಾದ ನಿಜಕುಲದೇವತೆಗಂ ಶೇಷಾದ್ರಿಯೊಳಿರ್ಪ ಶ್ರೀನಿವಾಸ ಸ್ವಾಮಿಗಂ ಗರಳಪುರಿಯೊಳಿರ್ಪ ಶ್ರೀಕಂಠೇಶ್ವರಂಗಮಂತಲ್ಲಲ್ಲಿ ಸನ್ನಿಧಿ ಗೊಂಡಿರ್ಪನೇಕದೇವತಾವಿಗ್ರಹಂಗಳ್ಗಂಬಹುವಿಧರತ್ನಾಭರಣಕನಕಾಂಬರಾ ದಿಮಹಾನರ್ಘವಸ್ತುಗಳಂ ಸಮರ್ಪಿಸಿ ನಿಜನಾಮದಿಂದನೇಕಸೇವಾರ್ಥಂಗ ಳಂಕಲ್ಪಿಸಿಯುಂ ತನ್ನನಾಡೊಳಿಪ್ಪೂರೂರದಾರಿಯೊಳ್ವಾರಿಗರ ಬಳಲ್ಕೆಯಂ ಕಳೆಯಲ್ಕೆ ಪಲವುಮನ್ನಸತ್ರಮಂಟಪಾರಾಮಂಗಳಂ ಪೊಸತೆನಲಾಗಿಸಿಯುಂ ನೆಗಳ್ತೆವಡೆಯೆ ||೬೧||

ಕಂ || ಈರೀತಿಯಿಂದಮಿಾಮಹಿ |
ಶೂರನೃಪಾನ್ವಯದೆ ಧರ್ಮಕಾರ್ಯಂಗಳನೊ ||
ಲಾ ದಾರುಮೊಡರ್ಚಿದರಿಲ್ಲಂ |
ದಾರಾಯನನೀಗಳುಂ ಜನಂ ನೆರೆಪೊಗಳ್ಗುಂ ||೬೨||

ವ|| ಇಂತಿಪರ್ಮಗಳಾದೇವರಾಜಂ ರಾಜಕಾರ್ಯದಾರಯ್ಕೆಗೆಂದು ಚಿಕ್ಕನಾಯಕನಹಳ್ಳಿಯೆಂಬ ಗಡಿಯನೆಯ್ದೆವಂದಲ್ಲಿ ಬಲ್ಲಿತ್ತಾದಕುತ್ತದಿಂ ಜೀವಸಂಬಟ್ಟನುಲ್ಲಂಘನೀಯವಿಧಿನಿಯೋಗದಿಂದವಸಾನಂಪಲ್ಲವಿಸೆ ತನ್ನಿಂಬಳಿಯಂ ಯುವರಾಜದೇವರಾಜಂಗೆ ರಾಜ್ಯಾಭಿಷೇಕಂಗೆಯ್ವುದೆಂದು ಬಳಿಸಂದ ಮಂತ್ರಿ ಸಚಿವಾದಿಗಳ್ಗಾಣತಿಯನಿತ್ತು ಗೀರ್ವಾಣನಗರಿಯಂ ಕಾಣಲೊಡನಾ ಬಳಿಯಂ ಕೆಲವಾನುಂದಿನದೊಳ್ ||೬೩||

ಕಂ || ಶುಭದಿನದೆ ರಾಜ್ಯಪದವಿಯೊ |
ಳಭಿಷೇಕಂಬಡೆದು ಸಿಂಹಪೀಠದೆ ಕುಳ್ಳಿ ||
ರ್ದಭಿರಕ್ಷಿಸುತವನಿಯನತಿ |
ವಿಭವದೊಳಾಚಿಕ್ಕದೇವರಾಜಂ ಮೆರೆದಂ ||೬೪||

ವ|| ಇಂತುಪಟ್ಟಾಭಿಷಿಕ್ತನಾಗಿ ದಟ್ಟೈಸಿದರಾಜತೇಜದಿಂ ವಿರಾಜಿಸುತ್ತಾದೇವರಾಜಂ ಸಿಂಹಾಸನಮನೇರಿ ಸಂತತಿಕ್ರಮದಿಂಚಿಕ್ಕದೇವರಾಜನೆ

ನಿಸಿರೊಡ್ಡಂ ಕವಿಜನಸ್ತುತ್ಯಸಂಗೀತಸಾಹಿತ್ಯಮುಖನಿರವದ್ಯಾನೇಕವಿದ್ಯಾವಿಭೂತಿಯೊಳಂ ಪ್ರತಿಭಟಪಟಲಾಟವೀಪಟುತರದಾವಾನಲಾಯಮಾನಚಂಡತರಭುಜದಂಡವಿಕ್ರಮಪ್ರಕ್ರಮದೊಳಮಿತನೆ ದೊಡ್ಡದೇವರಾಜನೆಂದೆನಿಸುತ್ತುಂ ಪ್ರಾಜ್ಯವಿಭವದಿಂ ರಾಜ್ಯಂಗೆಯ್ಯುತುಮಿರ್ಪಂದು, ಮಹಾರಾಜನಾದ ನೊಳ್ಸಿರಿಯೊಲ್ದಿರ್ದುದೊಂದಚ್ಚರಿಯಲ್ತಳ್ಕಜಮಿಲ್ಲದೆ ಸರಸತಿಯುಮಂ ತೊಲ್ದಿರ್ದುದು ಪಿರಿದುಂಬಿಸವಂದಮೆಂದು ಜನಮೆಲ್ಲಮಾನಾಡೊಡೆಯನ ಬಿಜ್ಜೆಯಜಾಣಂ ನಾಡೆಕೊಂಡಾಡುತಿರ್ದುದಂತುಮಲ್ಲದೆ ॥೬೫॥

ಕಂ ॥ ಈತಿರೆಯೊಳ್ವಿದ್ವತ್ಪ್ರಭು ।
ನೀತಿಜ್ಞಂ ಚಿಕ್ಕದೇವರಾಜೇಂದ್ರನೆನು ॥
ತತ್ತತನನಿನ್ನುಂಮುನ್ನುಂ ।
ಖ್ಯಾತಕವೀಂದ್ರಪ್ರಣೀತಕೃತಿಗಳ್ಪೊಗಳ್ಗುಂ ॥೬೬॥

ವ॥ ಇಂತು ದಿಮ್ಮಿದನಾದಕ್ಕರಿಗನೆಂದು ನೆಗಳ್ತೆವಡೆದಾಪೊಡವಿಯೂಣ್ಮನಂದಂದು ದೆಸೆಗೆಲ್ಲಮನೆಳಸಿ ನಿರವಧಿಕಚತುರಂಗಬಲಪರಿವಾರಂಬೆರಸುದಾಳಿಡುತುಮಿರ್ದಾಗಳ್ ॥೬೭॥

ಕಂ ॥ ಭರದಿಂದೆಯ್ದುವ ತುರಗೋ ।
ತ್ಕರದ ಖುರಾಹತಿಯಿನೆಳ್ದ ಬಲ್ದೂಳ್ನಭದೊಳ್ ॥
ಬರಿಸಿದುದು ಕಾರಬರವಿನ ।
ತೆರದಿಂದಂ ರಾಜಹಂಸಮಂಡಲಕಳ್ಕಂ ॥೬೮॥

ಕಂ ॥ ಖಂಡಿಸಿ ರಿಪುಗಳ ತಲೆಯಂ ।
ಸೆಂಡಾಡಿಪೆನಾಡಿಪೆಂ ಕಬಂಧಮನೆಂದು ।
ದ್ದಂಡತೆಯಿಂದಾರುತೆ ಮುಂ ।
ಕೊಂಡೆಯ್ದಿತಖಂಡಮಾಗಿ ಸುಭಟರತಂಡಂ ॥೬೯॥

ವ॥ ಇಂತಣಿಯರಂ ರಣಸಮುತ್ಸಾಹದಿಂ ಸನ್ನಣಂಗೊಂಡೆಯ್ದುವೆಣಿಕೆಯಿಲ್ಲದಣಿಯಿಂ ಸಂಗಡಿಸಿ ದಾಳಿಟ್ಟಾಧರಣಿಪತಿ ತನ್ನಪೆಟ್ಟುವೆರ್ಚ್ದಂಗೆಕಟ್ಟಳ್ಕುಗೊಂಡು ಶರಣೊಕ್ಕ ಪಲಬರ್ಪೆರರಾಯರಂ ಸಾಮಂತರನಾಗಿಸಿಮಲೆದುಮಾರಾಂತಕೆಲಬರಂ ಕೊಳುಗುಳದೊಳ್ಗೆಲ್ದುಬಾಯ್ತೀಳಿಸಿ ಸಿರಿಯ

ಸೊರ್ಕಿನುರ್ಕಿಂದೆಯುಂ ತೋಳ್ವಲದಕೊರ್ವಿನುರ್ವಿಂದೆಯುಮುರ್ವಿಗೆಲ್ಲಂ
ಕೇಡನೊಡರಿಸುವ ದುರುಳರಪ್ಪಕೆಲಬರಂ ಬಂಡೞದೊಳ್ದಿಂಡುರುಳ್ಚಿ ತತ್ತ
ದ್ರಾಜ್ಯಂಗಳಂ ಬಸಂಗೊಳಿಸಿದನಂತುಮಲ್ಲದೆ ॥೭೦॥

ವೃ ॥ ನತಸಾಮಂತಶತೋತ್ತಮಾಂಗಕಲಿತೋತ್ತಂಸೋಲ್ಲಸದ್ರತ್ನದೀ ।
ಧಿತಿನೀರಾಜಿತಪಾದಪೀಠತಟನಂತಾತ್ಮೀಯನಾಮಾಕ್ಷರ ॥
ಶ್ರುತಿಸಂಭ್ರಾಂತವಿಪಕ್ಷನೆಂದೆನಿಸಿ ತಾನಕ್ಷೀಣದೋರ್ವಿಕ್ರಮೋ ।
ದ್ಧತಿಯಿಂದಪ್ರತಿವೀರನೆಂಬಬಿರುದಂ ಕಯ್ಕೊಂಡನಾಭೂಮಿಪಂ ॥೭೧॥

ವೆ॥ ಇಂತಿಪರ್ಮಗಳ್ಮಹಾರಾಷ್ಟ್ರದೇಶಮನಾಳ್ವಶಾಹಜಿರಾಜನವಾಹಿ
ನೀಪತಿಗಳಪ್ಪ ಜಯಾಜಿಘಾಟೆಂದುಂ ನಿಂಬಾಜಿಘಾಟೆಂದುಂ ಪೆಸರ್ವ
ಡೆದ ಮಹಾವೀರರಿರ್ವ್ವರುವತ್ತುಂಸಾಸಿರದೆಣಿಕೆಯ ವಾರುವದಣಿಯಿಂದೆಯು
ಮದಕ್ಕೆ ತಕ್ಕನಿತುಂಕಾಲಾಳ್ಗಳಸಂದಣಿಯಿಂದೆಯುಮೊಡಗೂಡಿ ದೆಹಲಿಯ
ರಾಜ್ಯದಮೇೞಲೆದಾಳಿಯಿಟ್ಟದಂ ಬಸಂಗೊಳಿಸಲಸದಳಮಾಗಲಿತ್ತಲೀಶ್ವರಂ
ಗಪತ್ತನದೊಳ್ಮಹಾರಾಜನಪ್ಪ ಚಿಕ್ಕದೇವರಾಜನ ವೀರಸೇನೆ ವೈರಿಭೂಪಾಲ
ರುದ್ದುರುಟುತನಮಂ ನಿವಾರಿಸಲ್ಕೆ ದೂರಮೆಯ್ದಿರ್ಪುದೆಂಬಸುದ್ದಿಯಂ
ಚಾರರಮುಖದಿಂ ತಿಳಿದಿತ್ತಲೀಪತ್ತನಮಂ ಮುತ್ತಲಿದೆಸಮಯಮುತ್ತಮ
ವೆಂದು ಒಗೆದಿತ್ತಣ್ಗೆದಾಳಿಟ್ಟು ಬರುತ್ತಿರಲಾವಾರ್ತೆಯಂ ಬೇಹಿನವರಿಂ
ಕೇಳ್ದ ಚಿಕ್ಕದೇವರಾಜನಾಕ್ಷಣಮೆ ದೂರದೊಳಿರ್ಪನಿಜಸೇನೆ ತುರಿಪದಿಂ
ರಾಜಧಾನಿಗೆಯ್ತರ್ಪುದೆಂದು ಚರರನಟ್ಟುವುದುಮಾಸೇನೆಯಲ್ಲಿಂಪೊರಮಟ್ಟು
ನಿಜರಾಜಧಾನಿಯಂ ಮುಟ್ಟುವನಿತರೊಳಾಮರಾಟರಥಟ್ಟು ಥಟ್ಟನೇಳ್ತಂದು
ರಾಜಧಾನಿಗನತಿದೂರದೊಳಿೞಂಬಿಡಲೊಡನಿತ್ತಲುಪಾಯಕುಶಲನಾಚಿಕ್ಕ
ದೇವರಾಯಂ ॥೭೨॥

ವೃ ॥ ಪಲವುಂಗೊಂದೆಯ ಕೋಡುಗಳ್ಗುರಿವಪೆಂಜಂ ಸಾರ್ಚಿಯತ್ತಿತ್ತಲಾ ।
ಳ್ಗಳಿನೋಡಾಡಿಸುತಿರ್ಪಿನಂ ಪೊಳಲಸುತ್ತುಂ ರಾತ್ರಿಯೊಳ್ತದ್ವಿಷ ॥
ದ್ಬಲಮೆಮ್ಮೊಳ್ಪೊಣರಲ್ಕಗಣ್ಯರಿಪುಸೈನ್ಯಂ ಸನ್ನಣಂಗೊಳ್ವುದೆಂ ।
ದಲಘುಭ್ರಾಂತಿಯಿನಿರ್ದತಾಣದೊಳೆ ತಾನಿರ್ದತ್ತು ನಿಶ್ಚೇಷ್ಟಿತಂ ॥೭೩॥

ವೆ॥ ಅನಿತರೊಳ್ದೇಶಾಂತರದಿಂದೆಯ್ತಂದ ಮಹಾಸೇನೆಯುಂ ರಾಜ
ಧಾನಿಯೊಳಿರ್ದಸೇನೆಯುಮೊಂದುಗೂಡಿಬಂದು ವೇೞ್ಪೈಸಲೊಡನಾಮರಾಟರ
ಸೈನ್ಯಮೆೞ್ಚತ್ತು ಯುದ್ಧಸನ್ನದ್ಧಮಾಗೆ ॥೭೪॥

ಕಂ | ಕಡುಗಿ ಪಳಂಚುವ ಕುದುರೆಯ |
ಪಡೆಯಿಂದಿಕ್ಕುತಿರ್ಪ ಗುಂಡುಗಳ ಗಾವರದಿಂ ||
ಕಡುವೊಯ್ಲ ಕೈದುಗಳಿನಾ |
ಪಡೆಯೆರಡರ್ಗಾಯ್ತು ದಾರುಣಂ ತುಮುಲರಣಂ ||೭೫||

ವ|| ಇಂತು ಕಾದುವಾಗಳಾವುರಾಟರಪಡೆ ಶ್ರೀರಂಗಪತ್ತನದ ಪೆರ್ಬಾಡೆಯ ಪೊಂಯ್ಲನುರ್ಬಳಿಯು ಪಡಲಿಡೆ ||೭೬||

ಕಂ || ಆರಣದೆ ಚಿಕ್ಕದೇವಮ |
ಹೀರಮಣಂ ಬಸಸಿದಂದದಿಂ ಭಟರಿರ್ವರ್ ||
ಕೂರಸಿಯಿಂದಂ ತರಿದಾ |
ವೈರಿಬಲಾನೀಪರ ತಲೆಗಳೆರಡಂ ತಂದರ್ ||೭೭||

ವ|| ಅಂತು ತಂದಾತಲೆಗಳೊಳೊಂದಂ ಚಿಕ್ಕದೇವರಾಜಂ ಶ್ರೀರಂಗಪತ್ತನದಕ್ಕೋಂಟೆಯಬಾಗಿಲ್ಗಂ ಪೆರತೊಂದಂ ಮುಹಿಕೂರನಗರದಕ್ಕೋಂಟೆಯಬಾಗಿಲ್ಗಂ ಕಟ್ಟಿಸಲಂತಂ ನಿಟ್ಟಿಸಿದ ಜನಮೆಲ್ಲಮಾರಾಯನ ಕಟ್ಟದಟಿಂಗಾದಮಚ್ಚರಿವಡುತ್ತಿರ್ಪಾಗಳ್ ||೭೮||

ಕಂ | ಎಂತು ದಶರಥಕುಮಾರನ |
ದೆಂತು ಪುರಂದರತನೂಜನೆಂತುಗುಹಂ ತಾ ||
ನಂತು ಸುರಾರ್ಚ್ಯನಿವನೆಂ |
ದಾಂತನುರಾಪ್ರಥೆಯನಿಳೆಯೊಳಾಪೃಥಿವೀಂದ್ರಂ ||೭೯||

ವ|| ಇಂತು ನೆಗಳ್ತೆವಡೆದಾಚಿಕ್ಕದೇವರಾಜಂ ತನ್ನನಾಡೊಳಿಲ್ಲೆಲ್ಲಿಯುಂ ಪಲವುಂ ರಾಜಕಾರ್ಯಾಧಿಷ್ಠಾನಂಗಳಂ ಪೊಸಪೊಸತೆನೆಕಲ್ಪಿಸಿ ಪಲಬರಧಿಕಾರಿಗಳನಲ್ಲಲ್ಲಿ ನೇಗೊಳಿಸಿ ಕೃಷಿಜೀವಿಗಳ್ಗೆ ಕೃಷಿಯಂಪೆರ್ಚಿಸಿ ರಾಜಾಯಂ ಪೆರ್ಚುವಂತುಂ ವಣಿಜರ್ನಿಜನಾಮಾಕ್ಷರದ ರಾಜಮುದ್ರೆಯಿಂದಂಕಿತಮಾದ ಮಾನಂ ಬಳ್ಳಂ ಕೊಳಗಂ ಮೊದಲೆನಿಸಿದ ಬೇಹರದಮುಟ್ಟುಗಳಂ ವಾಣಿಯಂಗೆಯ್ವಂತುಂ ಸಾಮಂತಭೂಪಾಲರೆಲ್ಲರುಂ ಗಡುವಂಮಿಂರದೆ ಸಿದ್ಧಾಯವನೀವಂತುಂ ಪ್ರಜೆಗಳೆಲ್ಲರುಂ ಕಿರುಕಳರಿಂದೆಯುಂ ಕಳ್ಳರಿಂದೆಯುಮಿನಿಸುಂ ಕೋಟಲೆಗೊಳ್ಳದೆ ಸೊಗವಾಳ್ವಂತುಂ ಪಲವುಂ ಪೊಸಗಟ್ಟ

ಲೆಗಳಂ ಸಮಕಟ್ಟ ದುಷ್ಟಶಿಕ್ಷಣಶಿಷ್ಟರಕ್ಷಣವಿಚಕ್ಷಣನಾಗಿ ಸುಕ್ಷೇಮದಿಂ ದರಸುಗೆಯ್ಯುತುಮಿರ್ದಂದು, ತಾನೆನಿತುಬಲವಂತನಾದೊಡಂ ತನ್ನೊಳಾರಡಿ ಗೊಂಡಿಪ್ಪ ಪಲಬಸರ್ಹಮಂತರಾಜರೊಂದುಗೂಡಿ ತನಗೇನಾನುಂ ಕೇಡ ನೊಡಚರ್ಕುಗುಮೆಂದು ಮಂತಣಂಗೆಯ್ದು ತಾನೆಳಸಿದಂದು ನೆರವಾಗಿರಲ್ಕೆ ಸಮಾನಬಲನಪ್ಪುತ್ತರಭರತಖಂಡದೊಳರ್ಪ ದೆಹಲಿಯ ಪಾದಷಹನೆನಿಸಿದ ರಾಜಾಧಿರಾಜನಂ ಕೆಳೆಗೊಂಡಾತಂ ತನ್ನಮೇಲೆ ದಾಳಿಟ್ಟರ್ದ ಪಗೆವರಂ ಬಗೆ ಗೊಳ್ಳದೆ ನಿಗ್ರಹಿಸಿದ ಮಹಾವೀರನಪ್ಪ ರಾಜಾಧಿರಾಜನ ಕೆಳೆತನಂ ತನಗೆ ದೊರೆಕೊಂಡುದೆಂದು ನೆರೆಸಂತಸಂಬಟ್ಟು ರಾಜಮರ್ಯಾದೆಯಿಂ ಕಳಿಪಿದ ಹಸುವದ್ಧ್ವಜ ಗರುಡಧ್ವಜ ಮಕರ ಮತ್ಸ್ಯ ಸಾಳ್ವ ಗಂಡಭೇರುಂಡ ಶಂಖ ಚಕ್ರ ಕುಠಾರಾಂಕುಶ ಧರಣೀ ವರಾಹಾದಿಬಿರುದಾಂಕಂಗಳ್ವೆರಸುಂ ಪಲವುಂ ತೆರದ ಮಂಗಳವರೆಗಳ್ವೆರಸುಂ ರಾಜಯೋಗ್ಯಮಾದನರ್ಘ್ಯರತ್ನಾಭರಣಾಂಬ ರಾವಿಗಳ್ವೆರಸುಂ "ರಾಜಗಜದೇವ" ಎಂಬ ಬಿರುದಿನಲೇಖಮನಂತು ಗೌರ ವಾತಿಶಯಮುಂ ಸೂಚಿಸುವರಾಜಮುದ್ರೆಯುಮುಂ ಸಂತಸಮಿಗೆ ಸಮುಚಿತ ರಾಜಮರ್ಯಾದೆಯಿಂ ಕಯ್ಕೊಂಡೊಡ್ಡೋಲಗದೊಳ್ಪಟ್ಟರಿಂ "ಶ್ರೀಮನ್ಮಹಾ ರಾಜ ರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪಾಪ್ರತಿಮಜಗದೇಕ ವೀರ ಭುವನೈಕಶೂರ ರಾಗದ್ವೇಷರಹಿತ ದುಷ್ಟನಿಗ್ರಾಹಕ ಶಿಷ್ಟಪರಿಪಾಲಕ ಬೃಹಸ್ಪತಿಸಮಾನಧಿಷಣ ಮಹೇಂದ್ರಸಮವಿಕ್ರಮ ಮಹೇಶ್ವರಸಮಾನಮ ಹಾಪ್ರತಾಪ ತಾರತಮ್ಯವೇದನವಿಚಕ್ಷಣ ಧುರೀಣ ರಾಜಸತಾಮಸಸಾತ್ವಿಕ ಜನಸತ್ರೈಗುಣ್ಯಪರಿಜ್ಞಾನಪಟುತಮ ಹಸ್ತತಾಳಪಟಹಭೇರೀಮೃದಂಗಶಂಖ ಕಾಹಳೀವೀಣಾವೇಣುತಂತ್ರೀಗುಣಲಕ್ಷಣಪ್ರಜ್ಞಾನ ವೀರನರಪತಿ ಶೂರಾ ಗ್ರಗಣ್ಯ ಮಲೆವರಗಂಡ ಅರಿಹರಿಭೇರುಂಡ ಕರ್ನಾಟದೇಶಮಂಡನ ಮ ಹೀಶೂರನಗರಾಧಿರಾಜವಂಶೋತ್ತಂಸ ಅರ್ಥಿಜನಕಲ್ಪಶಾಖಿ ಪ್ರತ್ಯರ್ಥಿವ್ರಜಪ ರ್ವತಪಕ್ಷವಜ್ರ ರಾಜಕುಲಾಬ್ಧಿಶಶಾಂಕ ಧರಣೀವರಾಹಾದಿಬಿರುದಾಂಕ ಅಭಯಪ್ರತಾಪಾಧೀಶ್ವರ" ಎಂಬುದ್ದಂಡಬಿರುದಾವಳಿಯಿಂ ಪೊಗಳಿಸಿಕೊ ಳುತ್ತುಮಾಯಿಳೆಯಾಳ್ದಂ ಕಾವೇರಿಯಿತ್ತಡಿಯೊಳಂ ಚಿಕ್ಕದೇವರಾಜಸಾಗ ರಮೆಂದುಂ ದೇವನಾಲೆಯೆಂದುಂ ನಿಜನಾಮಾಂಕಿತಂಗಳಪ್ಪೆರಡುಂಪರಿಕಾಲ್ಗ ಳಂ ತೆಗೆಯಿಸಿ ಬಹುದೂರಂಬರಂ ಜಲಸಮೃದ್ಧಿಯನಾಗಿಸೆ ॥೪೦॥

ಕಂ ॥ ಕನ್ನಡದ ನಾಡಿನಾ ಸಿರಿ |
ಗನ್ನೆಯ ತಾಂಡವವಿಹಾರರಂಗಸ್ಥಳಮೆಂ ॥
ಬನ್ನಂ ಕಳಮಕ್ಷೇತ್ರಂ |
ತನ್ನದಿಯಿತ್ತಡಿಯೊಳೆಂದುಮೆಸೆಯುತ್ತಿರ್ಕುಂ ॥೮೧॥

ವ॥ ಅಂತುಮಲ್ಲದೆ,

ಕಂ ॥ ಪಲವುಂ ದೇವಕುಲಕ್ಕಂ |
ಪಲಬರ್ಗುರುಗಳ್ಗೆ ಪಲಬರಿಳೆಯಮರರ್ಗಂ ॥
ಪಲವುಂವೃತ್ತಿಗಳಂ ಮನ |
ದೊಲವಿಂದಾರಾಜಶೇಖರಂ ಕಲ್ಪಿಸಿದಂ ॥೮೨॥

ವ॥ ಇಂತುದಾರಮತಿಯಾಗಿ ವಸುಮತಿಯಂ ಪರಿಪಾಲಿಸುತಿರ್ದಾ ಜಿಕ್ಕದೇವನರಪಾಲಂ ದೇಹದೊಳ್ಪಾಟವಂಕುಂದೆ ಕಾಲಗತಿಯುಮುಂ ನಿಜತನೂಜಂ ಕಂಠೀರವರಾಜಂ ಮೂಕಭೂವಮಿಲ್ಲದೊಡಂ ಮೌನಿಯಾಗಿರ್ಪುದುಮಂ ಜೆಂತಿಸಿ ಮರುದಿವಸವೋಲಗದೊಳ್ನೆರೆದಿರ್ದಮಾತ್ಯಮುಖ್ಯಸಾನಾಜಿಕರಂ ನೋಡಿ ಕೇಳಿರೈ ಪೂರ್ವಾಪರವಿದರೆನಿಸಿದ ಸಭಾಸದರಿರಾ ಯುವರಾಜಂ ಕಂಠೀರವರಾಜಂ ಪುಟ್ಟಿದಂದಿನಿಂದೇನೊಂದುಮಂ ನುಡಿಯದಯ್ದನೆಯ ಬರಿಸದೊಳೆನ್ನಸುಕೃತದಿಂ ನಡೆತಂದೊರ್ವಸೂರ್ಯೋಪಾಸಕನಪ್ಪ ಪಾರ್ವನ ಮಂತ್ರಪುರಶ್ಚರಣಬಲದಿಂ " ದೆನ್ನಪಿಂಬುಟ್ಟಿನ ಪಾತಕವಿಶೇಷಮೆನಗೆ ವಾಗ್ಗಂಧಮನೊಡರಿಸಿರ್ಪುದು ಮುಂದೆನ್ನರಸುತನದೊಳಾಂ ಕರನಯನಾದಿಸಂಜ್ಞೆಗಳಿಂದೆಯುಮೆನಗಕ್ಷರಜ್ಞಾನಮಿರ್ಪುದರಿಂ ಲೇಖನಮುಖದಿಂದೆಯುಮೆನ್ನಭಿಪ್ರಾಯಮಂ ಸೂಚಿಸುವೆನಿನ್ನಾಂ ನುಡಿಯಲೊಲ್ಲೆ " ನೆಂದಿಂತೊಮ್ಮೆ ನುಡಿದು ಮಗುಳ್ದಂ ಮೌನಿಯಾಗಿರ್ಪುದು ನಿಮ್ಮೆಲ್ಲರ್ಗಂ ವಿದಿತಮಾಗಿರ್ಪುದೈಸೆ ಕೇಳಿಮೆನ್ನ ಮನದರಿಕೆಯುಮನೆನ್ನಿಂಬಳಿಯವಿಾತಂಗೆ ಪಟ್ಟಾಭಿಷೇಕಂಗೆಯಿ್ದಾತನಾಜ್ಞಾನುಸಾರದಿಂ ನೀಮೆಲ್ಲರುಮಧಿಕರಿಸುತುಮಿರ್ಪುದೆಂದುಬೆಸನಿತ್ತು ಕೆಲವಾನು ಂದಿನದೊಳ್ಸಗ್ಗದೊಳಂ ಜಿಕ್ಕದೇವರಾಜನೆನಿಸೆ॥

ಕಂ ॥ ಶ್ರೀಮಾನಿತ ಕರ್ಣಾಟಕ |
ಭೂಮಿಪರೊಳ್ಜಿಕ್ಕದೇವನೃಪನವೊಲೊಳ್ಪಿಂ ॥
ಭೂಮಿಯನಾಳ್ದರದಾರೆಂ |
ದೀಮಹಿ ತನ್ನೃಪನನೀಗಳುಂ ನೆರೆ ಪೊಗಳ್ಗುಂ ॥೮೪॥

ವ॥ ಬಳಿಕವುಾಕಂಠೀರವರಾಜಂಯಥಾವಿಧಿಯಿಂ ಪಟ್ಟಾಭಿಷಿಕ್ತನಾಗಿ,

ಕಂ॥ ಮೌನಿಯೆನಿಸಿರ್ದೊಡಂ ಕೆಲ |
ವಾನುಂ ಕುರುನಾಳ್ಕಳಂ ಪರಾಕ್ರಮದಿಂ ಸ್ವಾ ॥
ಧೀನಂಗೆಯ್ದವನಿಯೊಳತಿ |
ಮಾನಿತಗುಣನೆನಿಸಿ ರಾಜ್ಯವಾಳುತ್ತಿರ್ದಂ ॥೮೫॥

ವ॥ ಇಂತು ನಿಜಧರ್ಮದಿಂದರಸುಗೆಯ್ಯುತುವುಾಕಂಠೀರವವುಹಾರಾಜನಾವುಯಗ್ರಸ್ತನಾಗಿ ಭೂಯುಸ್ತರಸುಕೃತದಿಂ ದೇವಭೂಯಂಬಡೆವುದುವುಾತನ ತನೂಜಂ ಜಿಪ್ಣುಸವುತೇಜಂ ಕೃಷ್ಣರಾಜಂ ಯಥಾಶಾಸ್ತ್ರಂಪಟ್ಟಾಭಿಷಿಕ್ತನಾಗಿ ನಿಜಸದ್ಗುಣಂಗಳಿಂದನುರಕ್ತಸವುಸ್ತಪ್ರಕೃತಿಯಾಗಿ ಧರ್ಮದಿಂದರಸುಗೆಯ್ಯುತುವುಿರ್ದಿನಂ ಸಾದುಲ್ಲಾಖಾನನೆಂಬಾಖ್ಯಾಡಿನ ತುರುಷ್ಕರಾಜನ ಕಡೆಯ ಸಿದ್ದೋಜಿಸೈನ್ಯಾರ್ಪಡೆಯೆಂಬ ಪಡೆವಳ್ಕಂ ಪ್ರಬಲತರಸೈನ್ಯಸನಾಹದಿಂ ದಾಳಿಟ್ಟು ಹೌವನೆ ಶ್ರೀರಂಗಪತ್ತನವುನೊತ್ತಲೆಂದು ಕಾವೇರಿಯ ಹೊರಸುತ್ತಿನೊಳಲ್ಲಲ್ಲಿ ಬೀಡಂಬಿಡಲಾಸೇನೆಯ ಕಲಕಲವುಂ ಕೇಳ್ದಾನಿವಿಷದೊಳೆ ಕೋಂಟೆಯ ಬಾಗಿಲ್ಗಳಂ ಬಂಧಿಸಿ ಕೃಷ್ಣರಾಜನುಷ್ಣೀಷಕವಚಂಗಳಂ ಧರಿಸಿ ಕೈದುವಿಡಿದು ತೇಜಿಯನಡರ್ದು ಬೆಟ್ಟುದಪ್ಪಲೊಳಾನೆವಿಂಡಿನ ಸೊಪ್ಪುಳಂ ಕೇಳ್ದೆಳ್ತ್ತು ಗವಿಯಂಪೊರವುಡುವ ಸಿಂಗಂಬೊಲರಮನೆಯಂ ಪೊರಮಟ್ಟು ನಿಜವಾಹಿನಿಗಾಹವಾರಂಭವುಂ ಸೂಚಿಸುವ ಭೇರಿಯಂ ವೊಯಿಸಲೊಡಂ ॥೮೬॥

ಕಂ॥ ಕಿವಿಮುಟ್ಟುವುದುಂ ಭೇರೀ |
ರವಮಾಯುಧಮಾಂತು ಸನ್ನಣಂಗೊಂಡು ರಣೋ ॥
ತ್ಸವದಿಂ ಕೋಂಟೆಯಬಳಸಿನೊ |
ಳವಗಡಿಸುತಿದಿರ್ಚಿತಂದು ಪಡೆ ಮಾರ್ಪಡೆಯಂ ॥೮೭॥

ವ॥ ಅನಿತರೊಳಾತುರುಷ್ಕಬಲಂ ಕಾವೇರಿಯಂ ದಾಂಟಿ ಭೋಂಕನೆ ಕೋಂಟೆಯಂ ಲಗ್ಗೆಯೇರಲ್ಸನ್ನಣಿಸೆ ॥೮೮॥

ವೃ | ಸುತ್ತುಂ ಕೋಂಟೆಯಮೇಲೆ ನಿಂದು ಪಲವುಂಪೆರ್ಗೋವಿಯಿಂ ಕೋವಿಯಿಂ |
ದೆತ್ತಿತ್ತಂ ಪಟುಯೋಧರೆಣ್ದೆಸೆಯೊಳಂಪ್ರೋಚ್ಚಂಡನಿರ್ಘೋಷಮುು ||
ಣ್ಮುತ್ತಿರ್ಪನ್ನಮಿಡಲ್ಕೆ ಗುಂಡುಗಳನಾವೊಯ್ಲಿಂಗಣಂ ಸೈಸದ |
ತ್ತತ್ತಂ ಪಿಂಜರಿದೋಡಿತೊಗ್ಗಳಿದಗುರ್ವಿಂ ನಿಲ್ಲದಾಮಾರ್ಬಲಂ ॥೮೯॥

ವ॥ ಬಳಿಕಂ ಕೃಷ್ಣರಾಜನ ವೀರಬಲವಮಾಮಾರ್ಬಲಮನರಿಯಟ್ಟಿ ಕೆಲ ಬರಂ ಸದೆಬಡಿದು ಕೆಲಬರಂ ದೆಸೆದೆಸೆಗೋಡಿಸಿ ಕೆಲಬರಂಪಿಡಿಪಿಡಿದವರವರು ತ್ತಮವಸನಾಭರಣಾದಿಗಳನೀಳ್ದುಕೊಂಡು ಜಯಸಿರಿಯಂ ಕಯ್ಕೊಂಡುದ ಲ್ಲಿಂಬಳಿಯಂ ಕೆಲವಾನುಂದಿನದೊಳೆ ಮಹಾರಾಷ್ಟ್ರದೇಶಾಧೀಶ್ವರನ ಕಡೆಯ ಬಾಜೀರಾಯನೆಂಬಸೇನಾನಿ ಬಲವತ್ತರಸೇನೆಯಿಂದೊಡಗೂಡಿ ದಾಳಿಟ್ಟು ಕಟ್ಟಿದಟಂ ಶ್ರೀರಂಗಪತ್ತನಮಂ ಮುತ್ತಲೆಯ್ತರ್ಪನೆಂಬಸುದ್ದಿಯಂಕೇಳ್ದು ದುಂ. ಕೃಷ್ಣರಾಜಂ ನಾಲ್ಕುಂಕೋಂಟೆಯಬಾಗಿಲ್ಗಳಂ ಬಂಧಿಸಿ ತನ್ನಯ ಸಿಂಧುರಬಲಮುಮಂ ಸೈಂಧವಬಲಮುಮನಲ್ಲಲ್ಲಿ ಕಾಪಿಟ್ಟು ಪಲಬರ್ಮಡಾ ವೀರರಪ್ಪಪದಾತಿಗಳ ಬಲಮಂ ಸುತ್ತುಂಕೋಂಟೆಯನೇರಿಸಲೊಡಮನಿತ ರೊಳಾಮರಾಟರಪಡೆ ಕೋಂಟೆಯನಾಲ್ಕುಂದೆಸೆಯೊಳಿಗ್ಗೊಗ್ಗಾಗಿ ಲಗ್ಗೆ ಯೀರಲ್ಬರೆವರೆ, ಕೋಂಟೆಯಮೇಲಿರ್ದವೀರಭಟರಾಮೈರಿಭಟರ ತಂಡತಂಡ ಮನೆ ಪೆರ್ಗ್ಗಲಿಗಳಿಂದೆಯುಂ ಕಯ್ಗ್ಗವಿಗಳಿಂದೆಯುಮೆಡೆವಿಡದೊಡನೊಡ ನುಗಿಸಿದ ಸೀಸದ ಕರ್ಬೊನ್ನಕರ್ಗಲ್ಲ ಗುಂಡುಗಳಿಂದಿಟ್ಟಿಟ್ಟುರುಳ್ದ ತಿರೆಯಿರೆ॥

ವೃ॥ ನೆರೆದಭಟಾಳಿ ಗುಂಡಿನೊಡನೇರಿಸಿ ಕೋವಿಯಮರ್ದನೆತ್ತಲುಂ ।
ಪಿರಿಯಶತಘ್ನಿಗಳ್ಗೆ ಕಿವಿಯೊಳ್ಕಿಡಿಯಂ ನೆರಪಲ್ಕೆ ಪಾರೆ ಗುಂ ।
ಡುರಿಪರೆಯಲ್ಕೆಕಲ್ಬೊಗೆ ಛಡಾಳಿಸೆ ಕಂಡಗಿದಿಂತಿದಗ್ನಿಯಿಂ ।
ಪರಿವೃತಮಾದ ಬಾಣಪುರಮೆಂದರಿದಾರಿಪುಯೋಧರೋಡಿದರ್ ॥೯೧॥

ವ॥ ಇಂತು ಬೆಬ್ಬಳಂಗೊಂಡು ನಾಮೆಲ್ಲರುಂ ಮುಂಡಲಾಗ್ರಶರಚಾ ಪಭಿಂಡಿವಾಳಾದಿಶಸ್ತ್ರಂಗಳಿಂ ಕಾದುವೆವೀಪೊಳಲಭಟರಾದಂ ಕೋವಿಗಳಿಂದು ಗಿಸುವ ಗುಂಡುಗಳಿಂದಮೆ ಕಾದುವರಿವರಂ ಗೆಲ್ವುದೆಮಗರಿದೆಂದೆಣಿಸಿ ನಿಲ್ಲ ದಲ್ಲಿಂ ಪೆಡಂಮೆಟ್ಟಿ ದಾವಾರ್ಪಡೆಯನೆಳ್ಬಟ್ಟ ಕೃಷ್ಣರಾಜನಪೀರಬಲಂ ಕೆಲ ಬರಂಬಲ್ಲಿಂಪಿಡಿದವರೊಳಿರ್ದ ಧನಕನಕಾಯುಧಾಭರಣಂಗಳಂ ಸುಲಿದು ಕೊಂಡು ಗೆಲ್ಲಮಂ ಕಯ್ಕೊಂಡ ಸಮನಂತರದೊಳ್ ॥೯೦॥

ಕಂ॥ ಮಿಾರಿ ನಿಜಾಜ್ಞೆಯನದಟಿಂ ।
ಸ್ವೈರಿಗಳಾಗಿರ್ದಧೀನನೃಪರಂ ಕೆಲರಂ ॥
ವೀರಾಗ್ರಣಿಯಾಧರಣೀ ।
ದಾರಂ ನಿಗ್ರಹಿಸಿ ರಣದೆ ಬಾಯ್ಕೇಳಿಸಿದಂ ॥೯೩॥

ವ|| ಇಂತಾ ಮಹೀಭುಜಂ ನಿಜಭುಜಪ್ರತಾಪ ದಾವಾನಲಭಸ್ಮೀಕೃತಮದೋನ್ಮತ್ತಸಾಮಂತ ಭೂಕಾಂತದುರಹಂಕಾರಕಾಂತಾರನಾಗಿ ರಾಜಾಧಿರಾಜನೆಸಿಸಿ ಪೂರ್ವಾಚಾರದವೋರೆಯಂಮಿರದೆ ಪಲವುಂಧರ್ಮಕಾರ್ಯಂಗಳನೆಸಗಿ ತಿರುಪತಿಯಿಂದಾದಿಪರಕಾಲಯತೀಂದ್ರಸಂಕರೆಯಿಸಿ ತಾನಾತಂಗೆ ಶಿಷ್ಯನಾಗಿ ವೈಷ್ಣವಾಚಾರಮುಂಕಯೊಂಡು ಭೂತಸಾಮಾನ್ಯದೊಳಂ ದಯಾಪರನಾಗಿಯುಂ ಸಂಗೀತಸಾಹಿತ್ಯಲೋಲನಾಗಿಯುಂ ರಸಿಕಶಿರೋಮಣಿಯಾಗಿಯುಂ ಸುಖಸಾನಾಜ್ಯಪದವಿಯನನುಭವಿಸುತುಮಿರ್ದನಂತುಮಲ್ಲದೆ||

ಕಂ|| ಧೀರಾಗ್ರಗಣ್ಯನೆಂದುಂ |
ಸೇರಾಗ್ರಣಿಯೆಂದುಮಂಪುಟಾನ್ಯಪತಿ ಮಹೋ ||
ದಾರಾಗ್ರೇಸರನೆಂದುಂ |
ಧಾರಣಿಯೋಳ್ಪಿಮಲಕೀರ್ತ್ತಿಯುಂ ಪಡೆದಿರ್ದಂ ||೧೫||

ವ|| ಇಂತಿಪ್ಪಿನಂ ತನಗಂತಕಾಲಂ ಸಮಿಸಿಸಿದಮದಂ ತಿಳಿದಾಭೂಕಾಂತನೆನಿಸಿತು ವಿಭವಮಿರ್ದೊಡಂ ತನಗಿಂ ಸಂತಾನಸುಖಕ್ಕೆ ತಾಂ ನೋಂತೆನಿಲ್ಲಮೆಂದು ಮನಂಮರುಗಿ ದೇವಾಜಂಬೆ ಮೊದಲೆನಿಪ ತನ್ನರಾಣಿಯರ್ಗಿನ್ನಿಂಬಳಿಯಮೆಮ್ಮಸಗೋತ್ರಜ್ಞಾತಿಯಾದಂಕನಹಳ್ಳಿಯ ದೇವರಾಜನ ಕುಮಾರನಪ್ಪ ಚಾಮರಾಜನಂ ಪುತ್ರಭಾವದಿಂ ಸ್ವೀಕರಿಸಿ ಸೀಮಾತಂಗೆ ಪಟ್ಟಾಭಿಷೇಕಮಂ ಬಳೆಯಿಸುವುದೆಂದಾಜ್ಞಾಪಿಸಿ ದಿವ್ಯಸುಖಾನುಭವಕ್ಕೆ ದೇವಲೋಕಮನೆಯ್ದಿದಬಳಿಕ್ಕಂ ಕೆಲವಾನುಂದಿನದೊಳಾವಾಣಿದೇವಾಜಂಬೆ ದಳವತಿ ದೇವರಾಜಂ ಸರ್ವಾಧಿಕಾರಿನಂಜರಾಜಂ ಮೊದಲಾದ ಮುಖ್ಯಾಧಿಕಾರಿಗಳ್ಗೆ ಪತಿಯಾಜ್ಞೆಯಂ ತಿಳಿಪಿ ಸಗೋತ್ರಜ್ಞಾತಿಪುತ್ರನಾದಚಾಮರಾಜನಂ ರಾಜಮರ್ಯಾದೆಯಿಂಕರೆಯಿಸಿ ಯಥಾವಿಧಿಯಿಂ ಪುತ್ರಭಾವದಿಂಸ್ವೀಕರಿಸಿ ಮಹಾವಿಭವದಿಂವಾತಂಗೆ ಪಟ್ಟಾಭಿಷೇಕಮಹೋತ್ಸವಮುಂ ಬಳೆಯಿಸುವುದುಂ ||

ಕಂ|| ಎಸೆವಪರಿಷೇತದೊಳ್ಮಂ |
ಡಿಸಿ ಪೂರ್ವನೃಪಾಲಜನಿತಮಾರ್ಗಮನುಲ್ಲಂ ||
ಘಸದಿನಿಸುಂಕರ್ಣಾಟಕ |
ವಸುಧೆಯನಾಚಾಮರಾಜನಾಳುತುಮಿರ್ದಂ ||೧೭||

ವ|| ಇಂತಿಪ್ಪಾಗಳ್ದಳಪತಿ ದೇವರಾಜಂ ಸರ್ವಾಧಿಕಾರಿ ನಂಜರಾಜಂ ಮಹಾಮಾತ್ರಂ ಕರಾಚೂರ ನಂಜರಾಜನೆಂಬಧಿಕಾರಿಮುಖ್ಯರ್ಮ್ಮವರೊಪ್ಪಿಸಂ

ಬನಪ್ಪಳ್ದಂಗೆ ರಾಜ್ಯದಾಯವ್ಯಯಂಗಳಂ ಯಥಾಸ್ಥಿತಿಯಿಂದರಿಪದೆ ನಿರ್ದೆ
ರಂ ಭಯೋತ್ಪಾತಮನೊಡರಿಸುತುಂ ರಾಜಾಯದೊಳ್ಪಲವುಂಲಕ್ಕದೆಣಿಕೆ
ಯ ಪೊನ್ಗಳನಪಹರಿಸುತುಂ ಸ್ವಾಮಿದ್ರೋಹಿಗಳಾಗಿರಲೀಜತ್ತುಕಮಂತಿಳಿ
ದು ಮೂರಾಯನವರನಧಿಕಾರಸ್ಥನದಿಂ ತೆಗೆಯಲಾಮೂವರುಂ ದುರಾತ್ಮ
ರಂತಃ ಪುರನಿವಾಸಿನಿಯಾಗಿ ಪೊರಗಣಾಸುದ್ದಿಯೊಂದುಮಂ ಕಾಣದ ಮೂರಾ
ಣಿದೇವಾಜಂಬೆಗೆ ರಾಯಸಹೇಲೆ ಪಿಸುಣಂ ನುಡಿದು ಪಿರಿದುಂಕಿಸಿಸನುಣ್ಮಿಸಿ
ವಿನಯಾಭಿನಯದಿಂದಾಕೆಯಸುಮತಿಯಂಪಡೆದು ಧನಬಲದಿಂದೆಯುಮುಧಿ
ಕಾರಬಲದಿಂದೆಯುಂ ಮೂರಾಯನೊಳಿಲ್ಲದಪೊಲ್ಲೆಯಮಂ ಪೊರಿಸಿ ಮಹಾ
ಸೇನೆಯಂ ಬಸಂಗೊಳಿಸಿ ತವ್ಮಾಳ್ದನಂಬಲ್ಪಿಂದರಸುತನದಿಂತೆಗೆದು ಕಟುಂ
ಬಪರಿವಾರಂ ಬೆರಸುಕಲಾಳದುರ್ಗದೊಳ್ನೆರೆಯಿಸಿ ಚಿಕ್ಕಸಹಳ್ಳಿಯ ಸಗೋ
ತ್ರಜ್ಞಾತಿಯಾದ ಚಾವರಾಜನ ಮೂರುಂಬರಿಸದ ಕೃಷ್ಣರಾಜನೆಂಬುಗ
ನಂ ಮೂರಾಣಿದೇವಾಜಂಬೆಗೆ ಪುತ್ರಭಾವದಿಂಸ್ವೀಕಾರಂಗೆಯಿಸಿ ಶುಭಮು
ಹೂರ್ತದೊಳಾತಂಗೆ ಸಟ್ಟಾಭಿಷೇಕಮಮಹೋತ್ಸವಮಂ ಬಳೆಯಿಸಿ ಬಾಲನ
ಪ್ಪರಸನವೆಸರಿಂ ತಾಮೆ ಸಿಕಾಮನೈಭವದಿಂ ರಾಜ್ಯಂಗೆಯ್ಯುತುಂ ಸುಖರಸಾ
ಮ್ರಾಜ್ಯಪದವಿಯನನುಭವಿಸುತಿರೆಯಿರೆ ॥೯೮॥

ಕಂ॥ ಮದಮತ್ತದೇವರಾಜಂ |
ಮೊದಲೆನಿಸಿದ ಮೂವರೆಸಗಿದಾರಾಜದ್ರೋ ॥
ಹದ ದುಷ್ಕೀರ್ತಿಯೆ ನೆಲೆಸಿಂ |
ದುದು ಧರೆಯೊಳ್ನಿಂದರಲ್ಲಸೂಕಟಿಲಾತ್ಮರ್ ॥೯೯॥

ವ॥ ಇಂತಾದುರಾತ್ಮರ್ಮೂವರುಂ ರಾಜದ್ರೋಹೈಕಪರಾಯಣರಾಗಿ
ವಿಸಟಂಬರಿದಧಿಕರಿಸುತ್ತಿರ್ದೊಡಂ ಶ್ರೀಚಾಮುಂಡಾಂಬೆಯಸುಗ್ರಹದಿಂದಿ
ಮ್ಮಡಿಯಕೃಷ್ಣರಾಜಂ ದಿನದಿನಕ್ಕಮೆಳಸಿಯಂತೇಳ್ವಡೆದು ನಿಜಬುದ್ಧಿ
ಯಿಂಸ್ವತಂತ್ರನಾಗಿ ರಾಜ್ಯಂಗೆಯ್ಯುತಿರ್ಪಿನಂ ಸರ್ವಾಧಿಕಾರಿ ನಂಜರಾಜಂ ತನ್ನ
ವಸಾನಸಮಯದೊಳ್ಕೀಡುಗಾಲಕ್ಕೆಕಪ್ಪೆಗೆ ಚಂಡಿಕೆಮೂಡಿದಂತೆ ರಾಜಭಕ್ತಿ
ಯುದಯಿಸೆ ತಾನಪುತ್ರನಾದುದರಿಂ ತನ್ನಾಳ್ದಂಗೆ ಸರ್ವಸ್ವಮಂಸಮರ್ಪಿಸಿ
ಕೆಲವಾನುಂಹಿತೋಕ್ತಿಗಳಂನುಡಿದು ಮಡಿದ ಸಮನಂತರದೊಳಾಮಹಾರಾ
ಜಂಗೆ ಪಯಿನ್ನಾಸಿರದೆಣಿಕೆಯಪೊನ್ಗೆನಿಜಸಹೋದರನೊಡನಾತ್ಮವಿಕ್ರಯಂಗೆ

ಯ್ದು ಹೈದರಲೀಖಾನನೆಂಬತುರುಷ್ಕವೀರನಂ ಮಹಾರಾಜನವಂ ತನ್ನ ಮಹಾಸೈನಿಕರೊಡಗೂಡಿಸಿ ಪೋಷಿಸುತುಮಿರ್ದು ಪಲವ್ರುಂ ಪೊಣರ್ಕೆಯೊಳಾತನದಟಿಂಗೆಮೆಚ್ಚಿ ನಿಜಒಲಾಧ್ಯಕ್ಷತೆಯನಾತಂಗಿತ್ತುಂ ರಾಜದ್ರೋಹಿಗಳೆಂದು ತನ್ನವಗಾಹನೆಗೆ ಬಂದ ದೇವರಾಜನುನು ನವನಸೋದರನುಮನಧಿಕಾರದಿಂ ತೆಗೆಯಲೊಡನಾಹೈದರಲೀಖಾನಂ ॥೧೦೦॥

ವೃ॥ ಸ್ವಾಮಿನಿದೇಶವರ್ತಿ ಸುಜನಾಗ್ರಣಿ ನೀತಿವಿಚಕ್ಷಣಂ ರಿಪು |
ಸ್ತೋಮಭಯಂಕರೋದ್ಧತಪರಾಕ್ರಮನಾಹವಕೋವಿದಂ ಯಶ ||
ಸ್ಕಾಮನುದಾರಬುದ್ಧಿಯುತನಾದುದರಿಂ ಸುತನಿರ್ವಿಶೇಷದಿಂ |
ದಾನುನುಜೇಂದ್ರನೊಲ್ಮೆಗೆಡೆಯಾಗಿ ನೆಗಳ್ತೆಯನಾಂತನೇಳ್ಗೆಯಿಂ ॥೧೦೧॥

ಮತ್ತಂ, ಕಂ॥ ಅರಿದಿರ್ದನೇಕಭಾವದೊ |
ಳಾವನದಾವನವನಮಮ ತನ್ನಾಳ್ದನುಮಂ |
ಪರಮೇಶ್ವರನುಮನವನಿಯೊ |
ಳಾವನದಾವನವನಮೊಲಸದ್ಗುಣಗಣಮಂ ॥೧೦೨॥

ವೆ॥ ಇಂತಿಪರ್ಜಾಗಳಾಹೈದರಲೀಖಾನಂ ನಿಜಸೇನೆಯನಿರ್ಮಡಿಯಾಗೆಪೆರ್ಚಿಸಿ ಬರಿಸಂಬರಿಸಂ ಬೆಸೆಗೆಲ್ಲಕ್ಕ ಪಯಣಂಬೋಗಿ ಪಲವುಂಪರರಾಜ್ಯಂಗಳಂ ಗೆಲ್ದು ದಿನದಿನಕ್ಕಂ ತನ್ನಾಳ್ದನ ರಾಜ್ಯಮನೆತ್ತೆತ್ತಲುಂ ಬಹುದೂರಂಬರಂ ಬಿತ್ತರಿಸುತ್ತಿರಲಾಮೂರಾಯುನಾತನರಾಜಭಕ್ತಿಗಂ ನಿರತಿಶಯಬಾಹುಶಕ್ತಿಗಂ ರಾಜಕಾರ್ಯಸಾಧನಯುಕ್ತಿಗಂ ಸ್ವರಾಷ್ಟ್ರಸಂವರ್ಧನಾನುರಕ್ತಿಗಂ ಪಿರಿದಂ ಮೆಚ್ಚಿ ಸಂತಸಂಬಟ್ಟೋಲಗದೊಳ್ಸನ್ಮಾನಂಗೆಯ್ದಾತನಂ ನಿಜರಾಜ್ಯದ ಸರ್ವಾಧಿಕಾರಪದವಿಯೊಳ್ನಿಯಮಿಸಿ ಪಲಕಾಲಂ ನಿರತಿಶಯಸಾಮ್ರಾಜ್ಯಸುಖಮನನುಭವಿಸುತುಮಿರ್ದಮರಪುರಕೆ ಯಾತ್ರೆಗೆಯ್ವುದುಮದರ್ಕೆ ಕಡುದುಗುಡಂಗೊಂಡಾಹೈದರಲೀಖಾನಂ ಸ್ವಾಧೀನರಾಜ್ಯನಾದೊಡಂ ಸ್ವಾಮಿಕುಲಹಿತಾಕಾಂಕ್ಷಿಯಾಗಿ ನಿಜಸೇವಕಭಾವದ ಮೇರೆಯಂಮೀರದೆ ರಾಜಪತ್ನಿಯರಂ ತಃಪುರೈಕನಿವಾಸಿನಿಯರಾಗಿರ್ದೊಡಂ ನೀಡುಂಕೃತಜ್ಞತೆಯಿಂ ತದಾಜ್ಞೆಯಂ ತಲೆಯೊಳಾಂತು ರಾಜಕುಮಾರನಪಟ್ಟಾಭಿಷೇಕಕ್ಕೆ ಸನ್ನಣಂಗೆಯ್ವುದುಂ॥

ಕಂ॥ ಉರಾಯನೆಳೆಯನಪ್ಪಕು |
ಮಾರಂ ಶ್ರೀನಂಜರಾಜನಾಗಮವಿಹಿತಾ ॥
ಚಾರದೆ ರಾಜ್ಯಮನಾಳ್ವಧಿ |
ಕಾರಕೆ ಪಟ್ಟಾಭಿಷಿಕ್ತನಾದನಲಂಪಿಂ ॥೧೦೪॥

ಕಂ|| ತನ್ನಂಪೊರೆದರಸಂ ಸಲೆ|
ಯುಂ ನೆರೆ ತದ್ದಾರಸುತರೊಳಂತುಟುನೃಪಭ ||
ಕ್ತ್ಯನ್ನತಿಯಂ ತೋರಿದನೆಂ |
ಬನ್ನೆಗಮೇಹೈದರಲಿಯವೋಲ್ಪೆರರುಂಟೇ ||೧೦೫||

ವ|| ಇಂತುಪಟ್ಟಾಭಿಷಿಕ್ತನಾದರಾಜಕುಮಾರನೆಳೆಯನಾದುದರಿಂದಾ ತಂಗೆ ಪಡಿಯಾಗಿ ಹೈದರಲೀಖಾನಂ ಸಕಲರಾಜಕಾರ್ಯಂಗಳೊಳಮಧಿಕೃತನಾಗಿ ಧರ್ಮದಿಂರಾಜ್ಯಂಗೆಯ್ಯುತಿರ್ಪಿನಮಾಬಾಲಕಂ ನಂಜಭೂಪಾಲಕಂ ಸಾಲ್ಕುಂಬರಿಸಮೆ ಸಿಂಹಾಸನಮನಲಂಕರಿಸಿ ದಿವ್ಯಲೋಕಲೀಲಾಲೋಲನಾದಬಳಿಕಂ ಕೆಲವಾನುಂದಿನದೊಳಾತನಸಹೋದರಂಬೆಟ್ಟದಚಾಮರಾಜಂ ಯಥಾವಿಧಿಯಿಂ ಪಟ್ಟಾಭಿಷಿಕ್ತನಾಗಲಾತನೊಳಮೆಂದಿನಂತೆ ಪಿರಿದುಂ ರಾಜಭಕ್ತಿಯನಿರಿಸಿ ಹೈದರಲೀಖಾನಂ ಪ್ರಬಲದಶೆಯೊಳಧಿಕರಿಸುತುಮಿರ್ಪಾಗಳ್||

ಕಂ|| ಅದಟಿಂ ಒಹುಬಲಸನ್ನಾ |
ಹದೆ ದಾಳೆಯಸಿಟ್ಟರಂ ತ್ರಿಯಂಬಕಮಾವಂ ||
ಮೊದಲೆನಿಸಿದ ಪಡೆವಳರಂ |
ಸದೆಬಡಿದೋಡಿಸಿದನಾತನೇಂ ಕೇವಳನೇ ||೧೦೬||

ವ|| ಮತ್ತಮಾಹೈದರಲೀಖಾನನಸಂಖ್ಯಾಕಮಪ್ಪನೀಕದಿಂದೊಡಗೂಡಿ ಪಲರ್ಕೆದೆಸೆಗೆಲ್ಲಕ್ಕೆ ದಾಳಿಟ್ಟಲ್ಲಲ್ಲಿವೈರಿವೀರರೊಡನೆ ಪೋರಾಡಿ ಕಲ್ಲಿ ಕೋಂಟೆಯಂತಲ್ಲಣಂಗೊಳಿಸಿ ಕೊಳ್ಳಾಗಾಲಮುಂಕೊಳ್ಳಿಗೊಂಡು ಕೊಡಗಂ ನಡುಗಿಸಿ ಬಳ್ಳಾರಿಯಂಜೆಳ್ಳಾಗಿಸಿ ಧಾರವಾಡಮನೇರುವಡೆಯಿಸಿ ಗುತ್ತಿಯಂ ತುತ್ತುಗೊಂಡಿಂತಿನ್ನುಮೀದಕ್ಷಿಣಭರತಖಂಡದೊಳ್ಕೃಷ್ಣಾಪಗೆವರಂ ಪಗೆವರಂ ಕಾಳಗದೊಳ್ಗೆಲ್ದು ಸಾಧಿಸಿದ ಪಲವುಂನಾಡುಗಳಂ ತನ್ನಾಳ್ದನ ನಾಡಿಂಗೊಳಗಾಗಿಸಿ ಮಹಾವೀರನೆಂಬನೆಗಳ್ತಿಯಂ ಪಡೆದು ||೧೦೯||

ಕಂ|| ಅನುಪಮಶೌರ್ಯದೆ ತನ್ನಾ |
ಳ್ದನನಾಡಂ ಮುನ್ನಮಿರ್ದುದರ್ಕಮ್ಮಡಿಯೆಂ ||
ಬಿನೆಗಂ ಪೆರ್ಚಿಸಿ ನಾಡಿನ |
ಜನಕೆಲ್ಲಮುದಾರಸೌಖ್ಯಮಂ ಪೆರ್ಚಿಸಿದಂ ||೧೧೦||

ವ|| ಇಂತಿಪ್ಪಾಗಳಾಬೆಟ್ಟದಚಾಮರಾಜಂ ಮುಂಬರೆಯುಂಮೂಡುವ ನಿತರೊಳ್ ಧರಣೀತಲಭೋಗಮುಂನೀಗುವುದುಂ ಸರ್ವಾಧಿಕಾರಿಹೈದರಲೀಖಾನಂ ಪಿರಿದಾನುಂದುವ್ಯಾಸಂಗೊಂಡು ಬಳಿಕ್ಕೆಕೆಲವಾನುಂದಿನದೊಳಿಮ್ಮಡಿಯ ಕೃಷ್ಣರಾಜನ ಪಿರಿಯಮಾರಾಣಿಯಪ್ಪಲಕ್ಷ್ಮಮ್ಮಂಬೆಗರಿಕುತಾರದನೇವರಾಜನ ಕುಮಾರನಪ್ಪ ಚಾಮರಾಜನಂ ಪುತ್ರಭಾವದಿಂ ಸ್ವೀಕಾರಂಗೆಯಿಸಿ ಸಿರವಧಿ ಕೋತ್ಸವದಿಂದಾತಂಗಾಮಾರಾಣಿಯಮ್ಮಣಿತಿಯಿಂ ಪೂರ್ವಾಚಾರಮುಂಮೀರದೆ ಪಟ್ಟಾಭಿಷೇಕಮುಂ ಬಳೆಯಿಸಿದ ಸಮಸಂತರದೊಳಾತನೆಳಮೆ ಕಳೆವನ್ನೆವರಂ ಹೈದರಲೀಖಾನಂ ಮುನ್ನಿನಂತರಸುಗಜ್ಜಮನೆಸಗುತ್ತುಮಿರೆ ರಾಜಕುಮಾರಂ ದಿನಕ್ರಮದಿಂ ಜವ್ವನಸಮಸಿಸಲೊಡಂ ||೧೧೦||

ಕಂ|| ಅವನೀತಲವಿಶ್ರುತಯಾ |
ದವಕುಲಕಲಶಾಬ್ಧಿಸೋಮನಾಚಾಮನೃಪಂ ||
ದಿವಿಜಾಧಿರಾಜಸಮನೈ |
ಭವಸೊಲ್ದಾನಾಡೊಳರಸುಗೆಯ್ಯುತ್ತಿರ್ದಂ ||೧೧೧||

ಇದು ಜಗದ್ವಿದಿತ ಶ್ರೀಕಾಶ್ಯಪವಂಶಮುಕ್ತಾಮಣಿ ಶ್ರೀಗರಳಪುರೀಶಶಾಸ್ತ್ರಿ ತನೂಭವನುಂ ಶ್ರೀಮದಚಂಡ ಮಹೀಮಂಡಲ ಮಂಡನಾಯಮಾನಕ ರ್ಣಾಟಜನಪದಲಕ್ಷ್ಮೀವಿಹಾರೈಕರಂಗಮಹೀಭೂತಮಹೀಶೂರರಾಜಧಾನೀ ರತ್ನಸಿಂಹಾಸನಾಧೀಶ್ವರ ಯದುಕುಲಪಯೋನಿಧಿ ಪೂರ್ಣಚಂದ್ರಾಯಮಾಣ ಶ್ರೀಚಾಮರಾಜೇಂದ್ರ ತನಯ ಶ್ರೀಕೃಷ್ಣರಾಜಮಹಾರಾಜಸಂಸ್ಕೃತ
ಕರ್ಣಾಟೋಭಯಪ್ರವಚನೋಪಾಧ್ಯಾಯನುಂ ಮಹಾವಿದ್ವ
ತ್ಪದಲಾಂಛನನುಂ ತನ್ಮಹಾರಾಜ ಕೃಷ್ಣರಾಜವಿತೀರ್ಣ
ಕವಿತಿಲಕಬಿರುದಾಂಕಿತನುಮಪ್ಪ ಸೋಸಲೆ
ಅಯ್ಯಶಾಸ್ತ್ರಿಯಿಂ ವಿರಚಿತವಾದ
ಮಹಿಶೂರಮಹಾರಾಜಚರಿತ್ರ
ಮೆಂಬ ಕರ್ಣಾಟಕ ಚಂಪೂ
ಮಹಾಕಾವ್ಯದೊಳ್
ದ್ವಿತೀಯಾಶ್ವಾಸಂ
ಸಂಪೂರ್ಣಂ.

ತೃತೀಯಾಶ್ವಾಸಂ.

ಕಂ|| ಸುರಪಸುತನಂ ನಿಮಿತ್ತೀ |
ಕರಿಸಿ ನಿವೃತ್ತಿಪ್ರವೃತ್ತಿಲಕ್ಷಣಮಾಗಿ ||
ಪ್ಪುರುಧರ್ಮವನೀಲೋಕ |
ಕ್ಕರಿಪಿದ ಪರಮಾತ್ಮನೋವ್ರಗೆನ್ಮಯನ್ನಪನಂ ||೧||

ವ|| ಆಗಳಕ್ಷೀಣಭುಜಪರಾಕ್ರಮನಾದುದರಿಂದಾರಾಜೇಂದ್ರನ ಲಕ್ಷ
ಸೇನೆಗಧ್ಯಕ್ಷನಾಗಿರ್ದ ಹೈದರಲೀಖಾನಂ ತನ್ನೊಡೆಯನಾಜ್ಞೆಯಿಂ ಪಲರ್ಮೈ
ದಿಗ್ವಿಜಯಕ್ಕೆ ಪೊರಮಟ್ಟು ನಿಜಮತಿನೈಪ್ರಜ್ಞೆಯಿಂದನೇಕರಾಜ್ಯಂಗಳಂ
ಗೆಲ್ದಾಕುಂಭಿನೀಪತಿಯವಿಸ್ರಂಭಕ್ಕೆ ಪಾತ್ರನಾಗಿರ್ಪಗಳ್ ||೨||

ಕಂ|| ಅನುಭವಿಸುತಿರ್ದನಾನಾ |
ವಿಸಸುಖಸಾಮ್ರಾಜ್ಯಪದಮಯಂ ಸಾಮುಂತಾ ||
ವನಿಪತಿಶತವಂದುತಪದ |
ವನಜಂ ತಾನಾಗಿ ಧರಾಸುಧೂಮಿಪಾಲಂ ||೩||

ಮತ್ತಂ, ||ವ|| ಸತತಂಭಕ್ತಿಸಮೇಶಪಾದಸುಭಗಪತ್ರಾಪಾಬ್ಜದೊಳ್ಪತ್ನಶೋ |
ಭಿತಸಿಂಹಾಸನದಲ್ಲಿ ಮಂಡಿಸಿ ಸಯೊಳಾಸಾರಂ ಗಭೀರಂ ಜಗ ||
ನ್ನುತಕೀರ್ತಿಪ್ರಸರಂ ಧರಾತಲಸಮುಂ ಶ್ರೀಹಾಮರಾಜೇಂದ್ರನಾ |
ಳುತಿರಲ್ಕನ್ನಡನಾಡು ಸಗ್ಗಮಿದು ನೀರೆಂದೆಂದರಂದೆಲ್ಲರುಂ ||೪||

ಇಂತಿಪ್ಪಿನನಮೂವೀರಪ್ರಧಾನಂ ಹೈದರಲೀಖಾನಂ ಮತ್ತೊರ್ಮೆ ದಿಗ್ವಿ
ಜಯಂಗೆಯ್ಯಲೆಂದು ಪೊರಮಟ್ಟು ಚೆದಂಬರಂಮೊದಲಪ್ಪ ಕೆಲನಾಡುಗಳ
ನಾಕ್ರಮಿಸಿ ಮೇಲ್ವಾಯ್ದಿರ್ಪಿದ ಪರಸೇನೆಯೊಡತಲಲ್ಲಲ್ಲಿ ನೆತ್ತರ್ವೊನಲೆ
ತ್ತೆತ್ತಲುಂಪರಿಯೆ ಪೋರ್ದು ಪಲವೆಡೆಯೊಳ್ಪಿದಿವಸದಿಂ ಪರಾಜಯವಾಗೆ
ಮನದಂಡಲೆಗೊಂಡಾರ್ಕ್ಕಾಡನೆಯ್ದಿವಂದಲ್ಲಿ ಪಾಳಯಂಬಿಟ್ಟಿರ್ಪುದುಂ ಪ್ರಬಲ
ಮಪ್ಪನಾರೋಗ್ಯದಿಂ ಶರೀರಮುಮಯಲಾದದೆಂದು ಬಗೆದು ಪೊರ್ದುಗೆಗೊಂ
ಡಿರ್ದ ಪೂರ್ಣಯ್ಯಂಮೊದಲಪ್ಪ ಸಚಿವರಕಯ್ಯಿಂದೆ ನೀನೆಂದುಮೊಡೆಯಂಗೆರ
ಡಂಬಗೆಯದೆನ್ನಂತಿಪ್ಪುದೆಂದು ತನ್ನಮಕ್ಕಳೊಳ್ಪಿರಿಯಂಗೆ ಕಡುಮೊನೆ

ಗಾರಂಗೆ ಟೀಪುಕುವಾರಂಗೆ ಶಾಸನಮುಮುಂ ಮುಂದೆತನ್ನಧಿಕಾರಮುಂತನ್ನ
ಕುಮಾರಂಗೆಯೆ ದಯಗೆಯ್ಯಲ್ವೇಳ್ಕುಮೆಂದು ತನ್ನೊಡೆಯಂಗೆ ಬಿನ್ನವತ್ತಲೆ
ಯುಮುಂ ಬರೆಯಿಸಿ ಪರಲೋಕಮನೆಯ್ದಲೊಡಂ ದೇಶಾಂತರದೊಳಿರ್ದ ಟೀ
ಪುವಾಸುದ್ದಿಯಂಕೇಳ್ದ ಕಡುಬೇಗನೆ ರಾಜಧಾನಿಗೆಯ್ತಂದು ಮುನ್ನಮೆ
ತನ್ನ ತಂದೆಯಮರಣವಾರ್ತೆಯಂಕೇಳ್ದಳಲುತಿರ್ದನುಬಂಧಿವರ್ಗಮುಂ ಸಂತ
ವಿಟ್ಟು ಬಳಿಕ್ಕೆ ದುಷ್ಟಪರಿವಾರದಿಂದೊಡಗೂಡಿ ನಷ್ಟವಿವೇಕನಾಗಿ ತಂದೆಯ
ಬುದ್ಧಿವಾದಮುಂ ಲೆಕ್ಕಿಸದೆ ಕಟ್ಟದಟಿಂದನಿತುಂಕಾಟುಂಬದೊಡನೆತನ್ನಾಳ್ದನಂ
ಸೆರೆಯೊಳಿಟ್ಟು "ವಿಕ್ರಮಾರ್ಜಿತಸತ್ವಸ್ಯ ಸ್ವಯಮೇವಮೃಗೇಂದ್ರತಾ"
ಎಂಬಲೋಕವಾರ್ತೆಗನುಸಾರಮಾಗಿ ನಿರ್ನಿರಮಾತನರಾಜ್ಯಮನಾಕ್ರಮಿಸಿ
ತಾನೆ ಕರ್ಣಾಟದೇಶಾಧೀಶ್ವರನಾಗಿ ಧರೆಯನಧರ್ಮದಿಂದಾಳಲುಜ್ಜುಗಿಸಿದನದೆಂ
ತೆನೆ ॥೫॥

ವೃ॥ ಖಲರಂ ಘಾತುಕರಂ ದುರಾತ್ಮರನಸನ್ಮಾರ್ಗಸ್ಥರಂ ಮೂಢರಂ।
ಸಲಪುತ್ತೆಯ್ದೆಪರೋಪಕಾರಪರರಂ ಸದ್ಧರ್ಮನೀತಿಜ್ಞರಂ॥
ಕುಲಶೀಲೋನ್ನತರಂ ಕ್ರಿಯಾಕುಶಲರಂ ಸತ್ಯಾತ್ಮರಂ ಬಲ್ಪಿನಂ।
ಜಲೆಯುತ್ತಂಜಿಸುತೆಲ್ಲರಂ ದುರುಳನಾಗಿರ್ದಂ ಬಲೋದ್ರೇಕದಿಂ॥೬॥

ಕಂ॥ ವರದೇವಾಗಾರಂಗಳ।
ನಿರದೆಮತದ್ವೇಷದಿಂದೆ ಪಾಳ್ಗೊಳಿಸುತ್ತುಂ॥
ಧರಣೀಸುರವೃತ್ತಿಗಳಂ।
ನೆರೆಕೊಂಡಂ ಬಲ್ಪಿನಿಂದದೇಂಘಾತುಕನೋ॥೭॥

ಅವನೀಭಾರಮನಾಖಿಲ।
ಯವನಂ ವಿಹಿತಪ್ರಕಾರದಿಂ ತಳೆಯದೆತಾ॥
ನೆ ವಿಚಾರಿಸಲೆಲ್ಲಂದದೊ।
ಳವನೀತಲಭಾರಭೂತನೆಂದೆನಿಸಿರ್ದಂ॥೮॥

ವೃ॥ ಅರಸಂಗಂ ಸುಜನರ್ಗಮಂತಖಿಲದೇವರ್ಗಂ ಮಹಾದ್ರೋಹಿಯೆಂ।
ದುರುದುಷ್ಕೀರ್ತಿಯನಾಂತು ಸಾಸದಿನವಂ ಭೂಮಾಶನಾಗಲ್ಕೆ ಭೂ॥
ಸುರ ರುದ್ವಾಸಿತವೇದಪಾತ ರರಸರ್ತ್ತೇಜೋವಿಹೀನರ್ವಣಿ।
ಗ್ವರರಾದರ್ಕೃಶಸಂಪದರ್ಪದಭವರ್ನಾನಾಭಯವ್ಯಾಕುಲರ್॥೯॥

ವ॥ ಪಲವಾತುಗಳಿಂದೇನೊಂದೆ ನುಡಿಯಿಂ ಪೇಳ್ವೊಡೆ,

ಕಂ ॥ ಜಗಮಂ ಗೋಳಿಡಿಸಲ್ಪಿಂ ।
ದೊಗೆದಿರ್ದ ಹಿರಣ್ಯಕಶಿಪು ಲಂಕಾಧೀಶಾ ॥
ದಿಗಳಂದದಿಂದವಿಾಕಲಿ ।
ಯುಗಮುಖದೊಳ್ಪೀವು ಜನ್ಮಮಂ ಪಡೆದಿರ್ದಂ ॥೧೦॥

ವ॥ ಇಂತು ಯೌವನಮದದಿಂಸೊರ್ಕಿ ಧನಮದದಿಂದುರ್ಕಿ ಬಲಮದದಿಂಕೊಬ್ಬಿ ರಾಜ್ಯಮದದಿಂದುಬ್ಬಿ ಸಾಕ್ಷಾತ್ಕಲಿಯುರೂಪು ತಾನೆನಿಸಿದಾಟೀಪು ರಾಜಾಧಿರಾಜನಾವೆನೆಂದು ಪಿರಿದುಂಬೀಗಿ ನಿರವಧಿಕರಾಜಭೋಗದಾಭೋಗದಿಂ ಮೆಯ್ಮರೆದು ನಾಡಜನಕೆಲ್ಲಮಹಿತನಾಗಿ ಧರೆಯನಾಳುತಿರ್ಪ್ಪನ ಮಾದುರುಳಸಿಂ ಸರ್ವಪ್ರಕಾರದಿಂದೆಯುಂ ವಂಚಿತನಾದ ಚಾಮರರಾಜನಪಾರಚಿಂತಾರ್ಣವದೊಳ್ಮಳುಂಗಿ ಪರತಂತ್ರನಾಗಿರ್ದುದರಿಂದಾದುರ್ಮತಿಯಂ ನಿಗ್ರಹಿಸಲೆಂತೆಂತು ಬಗೆದೊಡಮಾವುದೊಂದುಪಾಯಮುಮುಮಂ ಕಾಣದೆ ॥

ಕಂ ॥ ಧನಸಂಪದಮುಂ ನವಯೌ ।
ವನಮುಂ ಪ್ರಬಲಾಧಿಕೃತಿಯುಮುನಿವೇಕಿತೆಯುಂ ॥
ಜನಿಯಿಪುದೊಂದೊಂದುಂ ಪಿರಿ ।
ದನರ್ಥಮನೆನಲ್ಕೆ ನಾಲ್ಕುಮಿರಲೇವೇೞ್ಪಂ ॥೧೨॥

ವ॥ ಎಂಬನೀತಿವಚನಮುಂ ನೆನೆದೀಲೋಕಕಂಟಕಂ ಬಹುಕಾಲಮಿಂತು ಬಾೞ್ದರನೆಂದು ತರಿಸಂದು ನಿಗಮಾಗಮೋಕ್ತಪ್ರಕಾರದಿಂದುತ್ತರೋತ್ತರಶುಭಾವಹಂಗಳಪ್ಪ ಸತ್ಕರ್ಮಂಗಳನಾಚರಿಸುತ್ತುಮೇಕಭಕ್ತಿಯಿಂ ಭಗವಚ್ಚರಣಾರವಿಂದಯುಗಳಮಂ ಜಾನಿಸುತ್ತುಮಖಿಲದುರಿತಾಪಹರಣಧುರೀಣಂಗಳೆನಿಸಿದ ಪುರಾಣೇತಿಹಾಸಂಗಳಂ ಶ್ರದ್ಧೆಯಿಂದಾಕರ್ಣಿಸುತ್ತುಂ ಕಾಲಮಂ ನೂಂಕುತ್ತರಸಿಯರೇೞ್ವರ್ವೆರಸೇೞ್ವರಿಂ ಜಗನ್ಮಾತೃಗಳಂದೊಡಗೂಡಿದ ಮೃಡನಂತೆಸೆಯುತ್ತಿರ್ಪಿನಮವರೊಳ್ಮಾವರಲ್ಲಿ ನೂವರಣುಗರ್ಪ್ಪುಟ್ಟಿದ ಕೆಲಕೆಲವುಂದಿನಮಿರ್ದಲ್ಪಾಯುಗಳಾಗಿ ಪೊಂದಿದಸನುನಂತರದೊಳಾಯುಷ್ಮಂತಂ ವಂಶಕರಂ ಕುಮಾರನಾದಸಿಲ್ಲಮೆಂದತ್ಯಂತಚಿಂತೆಯಂತಳದು ಗುರೂಪದಿಷ್ಟನಾಗಿ ಶತ್ರುನಿರಾಕರಣಕಾರಣೀಭೂತನುಮಾಯುಷ್ಮಂತನುಮಪ್ಪಕುಮಾರನಂ ಪಡೆಯಲ್ಕೆ ಸಂಕಲ್ಪಿಸಿ ಕಲೊಪ್ಪೀಕ್ತಪ್ರಕಾರದಿಂ ಪಂಚಾಕ್ಷರೀಜಪತರ್ಪಣಾ

ಹೋಮಂಗಳನಾಚರಿಸಿ ಚಾಮುಂಡೇಶ್ವರಿಯ ಪರಮಾನುಗ್ರಹಮಂ ಪಡೆಯ ವೇಳ್ಕುಮೆಂದೊರ್ವಶಿವಯೋಗಿಯಿಂ ನವಾಕ್ಷರೀಮಂತ್ರೋಪದೇಶಮಂ ಕ ಯ್ಕೊಂಡದಂ ಪಿರಿದುಂನೇಮದಿಂ ಪನ್ನಿರಡುದಿವಸಂ ಪುರಶ್ಚರಿಸಿ ತದಂಗಹೋ ಮಾದಿಕರ್ಮಂಗಳಂನಿರ್ವರ್ತಿಸಿ ತನ್ನರಸಿಯರ್ವೆರಸು ಸಂತಸಮಿಪ್ಪಾಗಳ್ಕರಿ ದುದಿನದೊಳ್ ॥೧೩॥

ಕಂ ॥ ತಳೆದೆಸೆದಲ್ಗರ್ಭನುನಾ ।
ಯಿಳೆಯಾಣ್ಮನರಾಣಿ ಕೆಂಪುನಂಜಾಂಬಿಕೆ ಮಂ ॥
ಗಳಲಗ್ನದೆ ಸತ್ಕಳಾಮಿತ ।
ಫಲದಶಿವಾಮ್ಬುಡರ ಪರಶರಾನುಗ್ರಹದಿಂ ॥೧೪॥

ವ॥ ಅಂತಾಕೆ ಗರ್ಭವತಿಯಾಗಲಾರತ್ನಗರ್ಭಾಧಿಪತಿ ನಿರ್ಭರಾಮೋ ದದಿಂವನೈಕಮಂಗಳೋತ್ಸವಂಗಳಂ ಬಳೆಯಿಸೆ ತಂ ಳೊಂಬತ್ತುಂತುಂಬೆ ಶಾಲಿವಾಹಶಕವರ್ಷಂಗಳೊಳ್ ಸೋಂದುಗಿರಿಧರಾಪರಿಗಣಿತಮಪ್ಪನಂದ ಸಂವ ತ್ಸರದೊಳ್ ॥೧೫॥

ಕಂ ॥ ಅಕೆಯು ಗರ್ಭಸುಧಾರ ।
ವ್ಯಾಕರದೊಳ್ಪುಟ್ಟಿದಂ ಜಗತ್ಕೋದಕರಂ ॥
ಶ್ರೀಕರಕುಮಾರರತ್ನಂ ।
ಲೋಕಕಾಹಿಟ್ಟೀಪುನೆಂಬ ತನಯರತ್ನಂ ಕಳೆಯಲ್ ॥ ೬॥

ವ॥ ಆಗಳ್,

ಶ್ಲೋ॥ ಸರೆಯಲ್ಲಿರ್ಪ್ಪಂತು ದೈತ್ಯಾಂತದೊಳೊಗೆದ ದುರಾಶಂಸನಂ ಕಂಸನಂ ಸಂ ।
ಹರಿಸಲ್ಕೃಷ್ಣಾಖ್ಯೆಯಿಂದುದ್ಭವಿಸಿದ ತೆರದಿಂ ದೇವಕೀಗರ್ಭದೊಳ್ಪೀ ॥
ಕರದೈತೇಯಾಂಶನಂ ಟೀಪುವನಡಗೆಡಸಲ್ಕೆಂದು ದಲ್ಸಿಂಧುಕನ್ಯಾ ।
ವರನೇ ಚಾಮೇಂದ್ರನಾರಾಣಿಯೊಳೊಗೆದನೆನುತ್ತಿರ್ದರೆಲ್ಲಾ ಜನಂಗಳ್ ॥೧೭॥

ವ॥ ಅಂತರಸಂಗ ಪುತ್ರಸಂತಾನಮಾದುದಂ ಟೀಪು ಕೇಳ್ದು ತನ್ನ ಮನದೊಳ್ಮಚ್ಚರಂ ಮಸಗುತಿರ್ದೊಡಂ ಜನಮೆಚ್ಚಿಕೆಗೆ ಮುಖಲೋಲ್ಲಾಸ ಮಂವೆರೆದು ಪೂರ್ವಾಚಾರಪ್ರಕಾರದಿಂ ಶತಘ್ನೀರವಂಗಳಂ ಮೆರೆಯಿಸಿ ಕೇರಿಕೇರಿಗಂ ಸಕ್ಕರೆಯಂ ಬೀರಿಸಿದೊಡನಾಚಾಮರಾಜಂ ತನೂಜುಂಗತ್ಯಂತ

ಸಂತೋಷದಿಂದಾಗವೋಕ್ತವಿಧಾನದಿಂ ಜಾತಕಕರ್ಮೋತ್ಸವಮುಮಂ ನಂಜರಾಜನೆಂಬಪೆಸರಿಂ ನಾಮಕರಣೋತ್ಸವಮುಮಂ ಬಳೆಯಿಸಿದಾಗಳ್ ॥೧೯॥

ಕಂ ॥ ಆನೃಪಸುತನೊಗೆದಬ್ದಮ ।
ದಾನಂದಾತ್ಮಕತೆಯಾಂತುದನಿತೇ ತಾನ ॥
ಲ್ತಾನಾಡಿನ ಜನಮೆಲ್ಲಮು ।
ಮಾನಂದಾತ್ಮಕತೆಯಿಂದೆ ಮೆರೆದತ್ತಮಮಾ ॥೧೯॥

ವೃ ॥ ಚಾಮೋರ್ವೀರಮಣಂಗೆ ತನ್ಮಹಿಷಿಯಾದಾಕೆಂಪನಂಜಾಂಬೆಗಂ ।
ಶ್ರೀಮತ್ಪುತ್ರನುದಾರಲಕ್ಷಣಯುತಂ ಸಂಜಾತನೆಂದೆಂಬ ನಿ ॥
ಸ್ಸೀಮಾನಂದಮುಮಂದದುಃಖಮುಡಸಿಪರ್ಪಾವೇಳೆಯೊಳ್ಪೇಳ್ವೆನಾ ।
ನೇಮಾತಂ ವಿಷಮಿಶ್ರಮಾದಮೃತಮಾಯ್ತಾಗ್ಮೀರುನರ್ದೈವಮುಂ ॥೨೦॥

ಕಂ ॥ ಬಳಿಕಾಚಾಮುಧರಾಮುಂ ।
ಡಲೇಂದ್ರನಮರಾಧಿಪತಿಯ ಸಿರಿಯಂನೋಡ ॥
ಲ್ಕೆಳಸಿದನೋ ಎಂಬಂತಿರೆ ।
ನಳಾಬ್ದಮೊಳ್ದೀವಪುರಿಗೆ ಪಯಣಂಬೋದಂ ॥೨೧॥

ವ॥ ಅಂತು ಪರಲೋಕಮನೆಯ್ದಿದಾಲೋಕಪತಿಗತಿವಾಸಶೋಕಪವಮಾನಸಖಜ್ವಾಲಾಕಲಾಪದಂದಹ್ಯಮಾನಮಾನಸರಪ್ಪ ಬಂಧುಸಂಬಂಧಿಗಳ್ವಿಧಿಪ್ರೋಕ್ತಸರಣಿಯನನುಸರಿಸಿ ಪುತ್ರಕರ್ತವ್ಯತೆಯಿಂದೂರ್ಧ್ವದೇಹೋಚಿತಂಗಳಪ್ಪ ಕರ್ಮಂಗಳನಾಗಿಸಿದ ಬಳಿಕಾಟೀಪು ನಿರಾಶಂಕನುಂ ನಿರಂಕುಶನುಮಾಗಿ ತನ್ನಾಳ್ದನರಮನೆಯೊಳಿರ್ದನರ್ಘ್ಯವಸ್ತುಗಳಂ ಪಲವುಂನೆವದಿಂ ಕವರ್ದುಕೊಂಡಿಮ್ಮಡಿಸಿದ ನಿಜಮತಾಭಿಮಾನದಿಂ ತನ್ನನಾಡಿನ ಪ್ರಜೆಗಳೆಲ್ಲರಂ ತುರುಷ್ಕರಂಗೆಯ್ಯಲೆಳಸಿ ಪೂರ್ವರ್ಮೊದಲೆನಿಪನೇಕರಂ ಬಲ್ಪಿಂತುರುಷ್ಕಮತಾವಲಂಬಿಗಳನಾಗಿಸುತ್ತುಮೆಲ್ಲೆಲ್ಲಿಯುಂ ಪ್ರಜೆಗಳ್ಗೆ ಸುಖಾವಹಂಗಳಾಗಿರ್ದ ರಾಯಗಟ್ಟಲೆಗಳಂ ಪಲ್ಲಟಿಸಿ ದುಃಖಾವಹಂಗಳೆನಿಸಿದ ಪೊಸಗಟ್ಟಲೆಗಳಂ ಸಮಕಟ್ಟುತ್ತುಮೆನಗಾರುಮಿದಿರಿಲ್ಲಮೆಂದಹಂಕಾರಪರ್ವತಾರೂಢನಾಗಿರ್ಪ್ಪನಮಿತ್ತಲ್ಪಿಂದೆ ಹೈದರಲೀಖಾನನಿರ್ದಂದಿನಿಂದೆಯುಂ ತಮಗಂ ತಮ್ಮ ಪ್ರಜೆಗಳ್ಗಂ ದಿನದಿನಕ್ಕಂ ದಳವೇರುತೊದವಿದ ಯವನಾಧಿಪತ್ಯಮೆಂಬುತ್ತರಾಯಣದ ಬಿಸಿಲುಪಟಳಮನಾಗಳೀಭರತಖಂಡದೊಳಖಂಡಿತಪರಾಕ್ರಮರೆ

ನಿಸುತಲ್ಲಲ್ಲಿ ಜಯಶಾಲಿಗಳಾಗಿ ನೆಗಳ್ತೆವಡೆಯುತ್ತಿರ್ದಾಂಗ್ಲೇಯರ ಸತ್ತಿಗೆ
ಯ ನೆಳಲೊಳ್ಕಳೆಯಲೆಳಸಿ ನಂಬುಗೆವೆತ್ತ ತಿರುಮಲರಾಯನಾರಾಯಣಾ
ಯರೆಂಬ ಪಳೆಯರಪ್ಪ ಸಚಿವರ ಮುಖದಿಂದವರ್ಗೆ ಶರಣೊಕ್ಕು ರಹಸ್ಯ
ದೊಳ್ತಂತ್ರಮನೆಸಗುತಿರ್ದಮ್ಮಡಿಯ ಕೃಷ್ಣರಾಜನರಸಿಯುಮರಿಕುಠಾರಚಾ
ಮರಾಜನ ಪಿತಾಮಹಿಯುಮಪ್ಪ ಲಕ್ಷ್ಮಮ್ಮಣ್ಣಿಯೆಂಬ ನಿಪುಣತರಪ್ರಜ್ಞಾ
ವೇಣಿ ಮೂರಾಣಿ ಯಾಲೋಕಕಂಟಕನಿಂದುಂಟಾದಸೆರೆಯತೊಡರುಮರವು
ನೆಯು ಬಲ್ವೆಲವಾಳ್ವಪಲವೊಡಮೊಗಳಾಕೇಡಾಳಿಯ ಕಯ್ಸೇರ್ದತೊಳಲುಂ
ಮೊಮ್ಮಂ ಚಾಮರಾಜನಳಿದಳಲುಂ ವೆಗ್ಗಳಿಸಿ ದಿಜ್ಮೂಢತೆಯನೊಡರಿಸಿರೊ
ಡಂ ವಿವೇಕಶಾಲಿನಿಯಾದುದರಿಂ ಪಳದಪ್ಪಕೃತ್ತಮುಮಂ ರೂಢಮೂಲನಪ್ಪರಿ
ಯುಮಂ ಪರಿಹರಿಸಲರಿದೆಂಬನೀತಿಶಾಸ್ತ್ರಮನರಿದಳಾದುದರಿಂ ತಡೆಯದೆ ನಾ
ವಿಗಳೀದುರದುಂಬಿತನದೆಳಮೆಯೊಳೆ ಬಲ್ಲಿದರಪ್ಪಾಂಗ್ಲೇಯರನೆರವಂ ಪಡೆ
ದೆಂತಾದೊಡಂ ಟೀಪುವಂ ನಿಗ್ರಹಿಸಿ ಗುರುದೇವತಾನುಗ್ರಹದಿಂ ಪುಟ್ಟಿರ್ಪ
ಕುಮಾರಂಗೆ ವಂಶಕ್ರಮಾಗತನಾದ ರಾಜ್ಯಂಕಯ್ಗೂಡುವುದಕ್ಕೆ ತಕ್ಕಂತ
ಯತ್ನವಂ ಮಾಡಲೆವೇಳ್ಕುಮೆಂದು ಬಗೆದಾಂಗ್ಲೇಯರಲ್ಲಿಗೆ ಗೂಢಚಾರರಂ
ಕಳಿಪಿ ತಮ್ಮಮನದುಮ್ಮಳಮುಮಂ ತನ್ನೊಳ್ಪ್ರಜಾಸುರಾಗಮುಸಿದಾಗಿ
ರ್ಪುದರಿಂದೀಗಳೀರಿಪು ದುರ್ಬಲನಾಗಿರ್ಪನೆಂಬಂಶಮುಮುಂ ಮುಂದಿವಂ
ತಾನೇಳ್ಗೆವಡೆಯಲ್ಕೆಂದು ನಿಮ್ಮೊಳಾರಡಿಗೊಂಡಿರ್ಪ ಫ್ರೆಂಚರನೆರವಂ ಗಳಿಸ
ಲ್ಕೆ ತಕ್ಕಂತು ತಂತ್ರಮಂ ನಡೆಯಿಸುತಿರ್ಪನೆಂದು ಕರಂಸ್ರಕೋಪಗೊಳ
ಸುವಭಿಪ್ರಾಯಮುಮನವಗೆ ತಿಳಿಪುವುದುಮಂತದಂ ಕೇಳ್ದು ಶರಣಾಗತರ
ಕ್ಷಣಧುರೀಣರಪ್ಪವರ್ಮಂತಣಂಗೆಯ್ದು ಬಲವತ್ತರದ್ವೇಷದಿಂ ವೊದಲೆ ದು
ಷ್ಟಾತ್ಮನಪ್ಪಟೀಪುವಂ ನಿಗ್ರಹಿಸವೇಳ್ಕುಮೆಂದಿರ್ದೆಮಗೆ ಶಿಷ್ಟಪರಿಪಾಲನೆಯು
ವೊಂದುಗೂಡಿರ್ಪುದೀಗಳಿವೆರಡುಂ ಕರ್ತವ್ಯಮೆಂದು ತರಿಸಂದು ಮರಿವೊ
ಕ್ಕ ಮೂರಾಣಿಗಭಯವಿತ್ತು ತಳ್ವದೆ ಹಾರೀಸೆಂಬ ಸೇನಾಪತಿಪ್ರಧಾನಂಗೆ
"ನೀನೆಮ್ಮಪಡೆಯನೊಡಗೊಂಡೆಮಗೆ ಕೆಳೆಯನೆನಿಸಿರ್ಪ ಹೈದರಾಬಾದಿನ
ಮಹಾರಾಜನಪ್ಪ ನಿಜಾಮದ್ದವಲನ ಕಡೆಮುಸೈನ್ಯದನೆರವಂಪಡೆದೆಳ್ಚಿರಿಂದಾಳಿ
ಟ್ಟು ಶ್ರೀರಂಗಪತ್ತನಮಂ ಮುತ್ತಿ ಟೀಪುವಂಗೆಲ್ದು ಬಾಯ್ಕೀಳಿಸುವು" ದೆಂ
ದು ಬೆಸನೀಯಲಾನಿದೇಶಮಂ ಶಿರದೊಳಾಂತಕ್ಷ್ಮೀಶರಾಕ್ರಮನೆನಿಸಿದಾಸೇ

ನಾಧ್ಯಕ್ಷನಾಕ್ಷಣದೊಳೇ ಮಹೋತ್ಸಾಹದಿಂ ಸ್ರಬಲಬಲಸನ್ನಾಹದಿಂ ಯು
ದ್ಧಕ್ಕೆ ಸನ್ನದ್ಧನಾಗಿ ಚೆನ್ನಪುರಿಯಂ ಪೊರಮಡಲಾಪೆರ್ಬಡೆ ದಾಳಿಟ್ಟು ನಡೆತ
ಪ್ಪ್ರಗಳ್ ॥೦೦॥

ಕಂ ॥ ಖರತರಹಯಖುರಹತಿಯಿಂ ।
ದಿರದಿಳೆಯಿಂದೆದ್ದ ದೂಳ್ನ ಭೋಮಾರ್ಗಮನಾ ॥
ವರಿಸಿ ಮುಸುಂಕುವುದುಂ ಭಾ ।
ಸ್ಕರನಂ ದಿಙ್ಮೂಢಮಾಯ್ತು ಖೇಚರನಿಕರಂ ॥೨೩॥

ಕಂ ॥ ತೆರಪಿಲ್ಲದಿಡಿದು ಕಿವಿಯೊ ।
ಳ್ನಿರವಧಿಕಶತಘ್ನಿಕಾರಥಧ್ವನಿ ಬಧಿರೇ ॥
ಕರಿಸಿದುದೀಲೋಕಮನೇ ।
ನೊರೆದಪೆನಾಂಗ್ಲೇಯವೀರಬಲದಾರ್ಭಟಮಂ ॥೨೪॥

ಕಂ ॥ ತಳೆದ ನಳಿಕಾಯುಧಂಗಳ ।
ತಲೆಯೊಳ್ಕೀಲಿಸಿದ ಭಲ್ಲೆಯಂಗಳ್ನಭದೊಳ್ ॥
ವೊಳೆಯೆ ಬರುತಿರ್ದ ಕಾಲಾ ।
ಳ್ಗಳ ಪಡೆಪಡೆಯಾ ಭರಕ್ಕೆ ಕುಸಿದತ್ತು ನೆಲಂ ॥೨೫॥

ವ॥ ಇಂತಾಪಡೆ ತಡೆಯಿಲ್ಲದೆಯ್ತರುತಿರಲೀಸುದ್ದಿಯಂ ಬೇಹಿನವ
ರಿಂಕೇಳ್ದ ಸಮುಧಿಕಕ್ರೋಧದಿಂದಾಟೀಪು ವಿರೋಧಿಬಲಮಂ ನಿರೋಧಿಸ
ಲ್ಕೆಡೆಯೊಳಿಟ್ಟರ್ದ ಸೈನ್ಯಮಂ ಲೆಕ್ಕಿಸದೊಕ್ಕಲಿಕ್ಕಿ ಮುಂಬರಿದು ರಾಜಧಾನಿ
ಗನತಿದೂರದೊಳ್ಕಾಪಿಟ್ಟರ್ದಪಾರಸೈನ್ಯಮಂ ವಂಚಿಸಿ ಬೇರೊಂದುಬಟ್ಟೆಯೊ
ಳೆಡೆವಿಡದಾಥಟ್ಟು ನೆಟ್ಟನೆ ಕೋಂಟೆಯಂ ಮುಟ್ಟೆವರಲೊಡಮಂತದಂ ಟೀಪು
ಚರರಮುಖದಿಂತಿಳದು ಕೋಂಟೆಯ ಬಾಗಿಲ್ಗಳಂ ಬಂಧಿಸಿ “ದ್ವೀಪಾಂತರ
ಮೃಗಪ್ರಾಯರಾದಾಂಗ್ಲೇಯರಿಂತು ಕಾವೇರಿಯುಂ ದಾಂಟಿ ಬರ್ಪರೊಮ್ಮೆ
ದಾಂಟಿ ಕೋಂಟೆಯಂಮುತ್ತಿದೊಡಂ ಲಗ್ಗೆಯೇರುವ ಬಗೆಯಾವುದನ್ನೆವರ
ಮೇವಾಳ್ತೆ ಕೋಂಟೆಯು ಪೊರಗಿರ್ಪೆಮ್ಮ ಪಲವಂಗಡದ ಚತುರಂಗಬಲಂ
ಬಡಿದೋಡಿಸದೆ ಮಾಣ್ಬುದೇನನುಪಮಶೌರ್ಯಾತಿಶಯನಪ್ಪೊಡೆಯಂಗಿದೇಸರ
ಸುದ್ದಿಯೆನುತ್ತುರ್ಬಿಸುವ ತನ್ನೊಡನಾಡಿಗಳಪ್ಪ ದುರ್ಮಂತ್ರಿಗಳ ಪೊಗಳ್ಕೆಗೆ
ಮೆಯ್ವೆರ್ಚೆ ವಿವೇಕಿಗಳಪ್ಪ ಮಂತ್ರಿಪ್ರಧಾನರೊಡನೆ ಕಾಲೋಚಿತಮನಾ

ಲೋಚಿಸದುಪೇಕ್ಷೆಯೊಳಿರ್ದನಮತ್ತಲಾಂಗ್ಲೇಯರಪಡೆ ಗೌತಮಕ್ಷೇತ್ರದ ಬಡಗಣ ಬಯಲೊಳಿಂಬುಗೊಳಿಸಿ ಮರ್ದನಿಕ್ಕಿ ಪೊತ್ತಿಸಿದ ಪಲವುಂಪೆರ್ಗ್ಗೀ ವಿಗಳಿಂದುಗಿಸಿದ ಕಬ್ಬೊನ್ನ ಪೆಗ್ಗುಂಡುಗಳಿಂ ಧಡಧಡನೆಡೆವಿಡದೆ ಘಟ್ಟಿಸು ತೆಲಗೊಂಟಿನತ್ತಸಿದಾಗಿರ್ದ ಕೋಂಟೆಯುಗೋಡೆಯಂ ಪಾಡಿದಪಗಲೊಳೆ ಕೆಡಹಲ್ಕೆ ತೊಡಗಲಂತಜಾಂಡಮೊಡೆದುದೆಂಬ ವಿಭ್ರಾಂತಿಯನೊಡರಿಸುತೆ ಹೌವನುಣ್ಮಿದ ಶತಘ್ನೀರವದಾರ್ಭಟಮುಂ ಕೇಳ್ದು ಲಕ್ಷ್ಮಣ್ಣ ಕಾರ್ಯ್ಯ ಗಿಲ ಗಾವರಮುಂ ಕೇಳ್ದ ನವಿಲಂತೆ ಸಮುಲ್ಲಾಸನುಮುಂ ಜಯಪರಾಜಯಂ ಗಳ್ದೈವಾಯತ್ತಂಗಳೆಂದು ಕಳವಳಮುಮುಂ ತಳೆದಾಂಗ್ಲೇಯರ್ಗೆ ಜಯಮು ಕ್ಕೆಂದು ತನ್ನುಪಾಸ್ಯದೇವತೆಯಂ ಪ್ರಾರ್ಥಿಸುತ್ತಿಪ್ಪರ್ಗಳ್ಮಹೂರ್ತಮಾತ್ರ ದೊಳಾಕೋಂಟೆ ಭಿನ್ನವಾಗಿ ದಾರಿವಿಟ್ಟುದೆನೆ ಮಿಳ್ತು ಬಂದು ಟೀಪುವಂ ಸಂದಿಸಿದ ಮಾರ್ಗಮನೇನೊರೆವೆನದಂಪೇಳ್ವೊಡೆ ॥೨೬॥

ವೃ ॥ ಸುರಿದೊಡಮೊಂದುವರ್ಷದವರಂ ನೆರೆ ಗುಂಡಿನ ವರ್ಷಮಳ್ಕದಂ ।
ತುರುಗಿರಿಸಾರಮೆಂದೆನಿಪ ಕೋಂಟೆಯದೊಂದೆಡೆ ಭಿನ್ನಮಾಯ್ತೆನ ॥
ಲ್ಲಿರುಪಮಸಾರವಜ್ರಮಯಮೆಂದೆನಿಸಿರ್ದೊಡಮುಂಗಮೆಲ್ಲಮುಂ ।
ಕುರುಪತಿಗೂರುಭಾಗದೊಳೆ ಮಿಳ್ತೆಡೆಸಂದಪೊಲಾದುದಕ್ಕಟಾ ॥೨೭॥

ವ॥ ಅಂತುಸಾಸಿರಸಿಡಿಲ್ಗಳೊರ್ಮ್ಮೊದಲ್ಕೆಡೆದಪುವೆನೆ ಲೋಕಮುಂ ಬೆ ಬ್ಬಳಂಗೊಳಿಸಿದಾಪೆಗೋವಿಗಳಬ್ಬರದುಬ್ಬರಮುಂ ಕೇಳ್ವುದುಂ ಕೌವರಿ ಗೊಂಡಿತ್ತಲೊಂದುಗಳಿಗೆಯೊಳಿಂತು ಕೇಡು ಸಂದಿಸುಗುಮೆಂದರಿಯದುಣಿಸು ಗೊಳುತಿರ್ದಾಟೀಪು ಕಯ್ಯೊಳಿರ್ದತುತ್ತಂ ಬಿಸುಟು ಕಯ್ಯಲುಂಬಿ ತಾನೆ ಮಿ ಳ್ತಿಂಗೆ ತುತ್ತಾಗಲ್ಕೆ ತನ್ನೆಡೆಯೊಳಿರ್ದ ಸೇನೆಯನೊಡಗೊಂಡು ತತ್ಕಾಲದೊ ಳ್ತೋರ್ಕೆವಡೆದ ಪಲವುಂ ದುಶ್ಯಕುನಂಗಳಂ ಕೊಲ್ರೀಧಾಂಧನಾಗಿ ಲಕ್ಷ್ಯಕ್ಕೆ ತಾರದಾಂಗ್ಲೇಯರೊಡನೆ ಪೋರಾಡಲನೇಕವಿಧಾಯುಧಸಹಾಯನಾಗಿ ಕೋಂ ಟೆಯುನಡರ್ವನಿತರೊಳತ್ತಲಾನುಹಾಸೇನಾನಿಯಪ್ಪಹಾರೀಸಿನದೊಂದುಶಾಸನ ದಿಂದಾಂಗ್ಲೇಯರಥಟ್ಟು ಥಟ್ಟುನೊಗ್ಗುಗೊಂಡನುಕೂಲದೈವಯೋಗದಿಂ ಕಾ ಲ್ವೊಳೆಯಾಗಿರ್ದ ಕಾವೇರಿಯಂ ಪಾಯ್ದೊಡೆದಕೋಂಟೆಯ ಕಡೆಯಿಂದೊ ರ್ಮೊದಲೆ ಭೋಂಕನೆ ಭೋಎಂದಾರುತ್ತ ಕಡುಸಾಸದಿಂ ಲಗ್ಗೆಯುಂಗೆಯ್ಯ ಲೊಡಂ ॥೨೮॥

ಕಂ || ಒಡೆದಂತಿರೆನ್ನೋಲ್ಕೊಂಟೆಯ |
ದೊಡೆದುದು ಕಡುವೆಟ್ಟಿತೆನಿಸಿದೆರ್ದೆ ಟೀಪುವಿನಾ ||
ಬಿಡದಾವೊಳಲಂ ಪೊಕ್ಕ |
ರ್ಗಡಸಿಸುತಾವೈರಿಭಟರುಮಂತಕಭಟರುಂ ||೨೯||

ವ|| ಅಂತಾಗ್ಲೀಯರಪಡೆಲಗ್ಗೆಯಂ ಗೆಯ್ದಟ್ಟಳವನೇರಿ ಮೂರಾಂತ ಕೋಂಟೆಗಾವರ ಥಟ್ಟಂ ಕಂಪ್ಲೀವಿಗಳಿಂ ಸುಟ್ಟು ತಾರುಥಟ್ಟನಾಗಿಸಿ ತೆಂಕಣ ಡೆಂಕಣಿಯೊಳಾಂಗ್ಲೀಯರಾಜ್ಯನ ಕುರುಪಿನ ಪಳವಿಗೆಯನೇರಿಸಲೊಡವುಂತದಂ ಕಂಡು ಟೀಪುವಿನ ಸೇನೆ ಕಡುಬೇಗನತ್ತಿತ್ತಣಿಂದೊದವಿಮೇಲ್ವಾಯಲಿತ್ತಂಡದಾಳ್ಗಳುಂ ಕನಕನಲ್ದುರವಣಿಸುತಲ್ಲಲ್ಲಿ ನಿಂದು ||೩೦||

ಕಂ || ನಿಡುಸಬಳದಿನಿರಿಯುತ್ತುಂ |
ಖಡುಗದೆ ಪೊಯ್ಯುತ್ತೆ ಗಂಡುಗೊಡಲಿಗಳಿಂದಂ ||
ಕಡಿಯುತ್ತುಂ ಗುಂಡುಗಳಿಂ |
ಪೊಡೆಯುತ್ತುಂ ಬಿಡದೆ ಕೆಡಹಿದರ್ಮಾರ್ಪಡೆಯಂ ||೩೧||

ವ|| ಆಗಳ್,

ಕಂ || ನಿರವಧಿಕಪ್ರಳಯಘನ |
ಸ್ಫುರದಶನಿಸಮುದ್ಭಟಾರವಪ್ರತಿಭಟಮಾ ||
ಧುರದಲ್ಲಿ ಕೇಳಿಪಟ್ಟುದು |
ತೆರಪಿಲ್ಲದೆ ಪೊಣ್ಮವಬ್ಬರಂ ಕೋವಿಗಳಾ ||೩೨||

ಕಂ || ಮುಸುಕಿರ್ದುದು ಕೋಂಟೆಯನಿ |
ರ್ಪಸರದೊಳಾರ್ಭಟಿಪ ಕೋವಿಗಳಿನೊಗೆದೆತ್ತಂ ||
ಪಸರಿಪ ಮರ್ದಿನ ಕರ್ವೊಗೆ |
ಮಸಗಿದ ಮುಗಿಲೊಡ್ಡಿ ಬೆಟ್ಟುವಂ ಮುಸುಕಿದವೋಲ್ ||೩೩||

ಕಂ || ತರಿದಿಕ್ಕಿದಾಳ್ಗಳೊಡಲಿಂ |
ನೆರೆಬಸಿದರುಣಾಂಬು ಕೋಂಟೆಯಟ್ಟಳದಿಂದಂ ||
ಸುರಿದುದು ಧಾತುವಿಶೇಷದಿ |
ನರುಣತೆಯಂ ಪಡೆದ ಬೆಟ್ಟುವೊನಲೆಂಬಿನೆಗಂ ||೩೪||

ಕಂ || ಪೊಡೆಬಗಿದ ಬದಿಯಿರಿದ ನಡು |
ಗಡಿದೆರ್ದೆಬಿಚ್ಚಿದ ಕೊರಲ್ಕಳಲ್ಚಿದ ಕಯ್ಯಾ ||
ಲುಡಿದ ಮೊಗಂಕೆತ್ತಿದ ತಲೆ |
ಯೊಡೆದಾಳ್ಗಳ್ವಲಬರಲ್ಲಿ ಪಡಲಿಟ್ಟಿರ್ದರ್ ||೩೫||

ವ|| ಇಂತುಸಂವರ್ತಸಮಯದಂತತಿಭಯಂಕರಮಪ್ಪ ಸಂಗ್ರಾಮ ದೊಳಾಟೀಪ್ರ ದುರ್ನಿಗ್ರಹಸಮರಾಗ್ರಹವ್ಯಗ್ರನಾಗಿ ಮಹೋಗ್ರಮೆನೆ ವೀರ ಭಟರಿಂದೊಡಗೂಡಿವೈರಿಭಟರೊಡನೆ ಪೋರಾಡುತಿರ್ದೊಡಂ ನಿಜಾನೀಕಮ ನಿಕ್ಕಿಕ್ಕಿ ತೊತ್ತಳದುಳಿದೆತ್ತಿತ್ತವುಂ ಮುತ್ತಿಮುಸುಕುತ್ತಿರ್ದ ಪಗೆವರೊಡ್ಡ ನಡ್ಡವಿಸಿ ಪೊಣರಲ್ಕೆ ತಕ್ಕನಿತು ಪಡೆಯೆಡೆಯೊಳಿಲ್ಲದುದರ್ಕಾದಂಬೇಗುದಿ ಗೊಂಡು ಝಳಕ್ಕನೆ ಕೋಂಟೆಯಿಂದಿಳಿದು ರಾಜವಾಹವನೇರಿ ಬಡಗಣದಿಡ್ಡಿ ವಾಗಿಲನೆಯ್ದಿವಂದತ್ತಿತ್ತಲ್ಲದರಿರ್ದಸೈನಿಕರಂ ಮೇಳೈಸುತಿರ್ಪವಸರದೊಳ್||

ಕಂ || ಅರಿಭಟನೊರ್ವಂ ನೃಪನೆಂ |
ದರಿಯದೆ ಹುಳಿದಿಟ್ಟ ಕೋವಿಗುಂಡೆರ್ದೆವುಗೆಸಂ ||
ಗರಧರೆಯೊಳ್ಸಿಡಿಲೆರಗಿದ |
ಪುರಗೋಪುರಶಿಖರದಂದದಿಂದಂ ಕೆಡೆದಂ ||೩೭||

ವ|| ಅಂತೆಣಿಕೆಯಿಲ್ಲದ ಪೆಣಗಳಟ್ಟಿಡೆಯೊಳ್ಕೆಡೆದು,

ಕಂ || ನಡುಗಟ್ಟಿನ ಪೊಂಬಟ್ಟೆಯ |
ತುಡುಕಲ್ಕಿನ್ನೊರ್ವರಿಪುಭಟಂ ಕಯ್ನೀಡಲ್ ||
ಪಿಡುಗವನಾಗಳುಮವನಂ |
ಕಡಿಯಲ್ಬೀಸಿದನೆನಲ್ಕದೇಂ ಕಡುಗಲಿಯೋ ||೩೮||

ವ|| ಅಂತಾಕೂರಸಿಯ ಪೊಯ್ತಕ್ಕೋರೆಯಾಗಿ,

ಕಂ || ಆವೈರಿಭಟಂ ತನ್ನಯ |
ಕೋವಿಯಿನಿರದುಗಿಸಿದೊಂದು ಗುಂಡುರವಣೆಯಿಂ ||
ಗಾವರಿಸಿ ಪಗೆಗೆ ತಾಗೆ ಮ |
ಹಾವೀರನುರುಳ್ದನಲ್ಲಿ ನಿಲೆ ನಾಮಮವಂ ||೩೯||

ವ|| ಆಗಳಿಂತು ಟೀಪ್ರ ಕೊನೆಗಂಡನೆಂಬ ಸುದ್ದಿಯಂ ತಿಳಿಪುವನೊರ್ವನುಮಿಲ್ಲದಂತವನಕೆಲಬಲದೊಳಿರ್ದ ವೀರಭಟರೆಲ್ಲರುಂ ಪ್ರತಿಭಟರಿಂ

ದಾಹತರಾಗಿ ಬೀಳ್ವುದುಮಾಕೋಂಟೆಯನಿತುಂದೆಸೆಯೊಳಣಿಕೆಯಿಲ್ಲದೊ
ಡ್ಡೊಡ್ಡಾಗಿ ಕೆಡೆದಿರ್ದ ಪೆಣಗಳಿಂದಿಟ್ಟಣಿಸಿದಾರಣರಂಗಮನೇಕವಿಧಭೂತಸಂ
ಘಾತದ ಜೀವಣಸಾಲೆಯಂತಳಯಂಬಂ ಭಯಾನಕಮಾಗಿರ್ದುದೆಂತೆನೆ ॥೪೦॥

ಕಂ॥ ಹತಯೋಧರಂಗಮಾಂಸವ |
ನತಿಮುದದೆ ಕುರುಂಕಿ ತಣಿದು ಪಾರಾಡುತಿನ ||
ದ್ಯುತಿಯೊಳವುಗದಂತಾವರಿ |
ಸಿತು ಕೂಗುತೆ ಕಾಕಗೃಧ್ರಕುಲಮಾಪೊಳಲಂ ॥೪೧॥

ಮತ್ತಂ, ಕಂ॥ ಆರಣದೆ ಪೊಯ್ದುರುಳ್ದಿದ |
ವೀರರ್ಕಳ ಮೆಯ್ಯಿನೊಕ್ಕುಪರಿವಗ್ಗದ ಕೆ ||
ನ್ನೀರಿಂದೊಡಗೂಡಿದ ಕಾ |
ವೇರಿ ಕರಂ ರಂಜಿಸಿತ್ತು ಶೋಣನದಂಬೋಲ್ ॥೪೨॥

ವ॥ ಆಗಳಾರಾಜಧಾನಿಯೊಳ್,

ಕಂ॥ ವಿನಿಹತಪತಿಸುತರಾದಂ |
ಗನೆಯರ ಶೋಕರವದುರ್ಬು ಮಥನಕ್ಷುಬ್ಧ ॥
ದ್ವನನಿಧಿಯ ಸಮುದ್ಘೋಷಮ |
ನನುಕರಿಸಿತ್ತಕಟ ರಣಮದೇಂ ದಾರುಣಸೋ ॥೪೩॥

ವ॥ ಬಳಿಕ್ಕವಾಂಗ್ಲೇಯರ ಪಡೆ ಕೈದುವಿಡಿವಿದಿರಾಂತರಂ ಸವೆಬಡಿ
ಯುತ್ತಗಿದು ಕೆಕ್ಕಳಿಸಿ ದಿಕ್ಕುದಿಕ್ಕಿಗೆ ಪೊರಮಾರುತಿರ್ದರಂ ಲೆಕ್ಕಿಸದಾರಾಜ
ಧಾನಿಯು ನೊಳಪೊಕ್ಕರಮನೆಯಂ ಮುತ್ತಿಟೀಪುನಂ ಸೆರೆವಿಡಿಯಲರಸುತಿ
ಪ್ಪಾಗಳವನ ಬರ್ದುಗೆಯಂ ಕೇಳ್ದವನ ತನಯರಂ ಸೆರೆವಿಡಿವುದಂ ॥೪೪॥

ಕಂ॥ ಕೃತಲೋಕತಾಪನಸ್ತಂ |
ಗತನಾದಂತಿರೆ ಸಸೈನ್ಯನಾಟೀಪುನೃಪಂ ||
ಶತಪತ್ರಮಿತ್ರನಸ್ತಂ |
ಗತನಾದಂ ದೀಧಿತಿಪ್ರತಾನಸಮೇತಂ ॥೪೫॥

ಅವಸೆಯ ಕಳ್ತಲೆ ಕಣ್ಣಂ |
ಕವಿದಂತಿರೆ ಟೀಪುವಳಿದ ಕಡುದುಗುಡಂ ತ ||

ದ್ಯುವತೀಬಾಂಧವರೆರ್ದೆಯಂ |
ಕವಿಯಲ್ದಿಜ್ಮೂಢರಾದರೆಲ್ಲರುಮಾಗಳ್ ||೪೬||

ವ|| ಅಂತಪ್ಪ ಕರ್ಗಳ್ತಲೆಯೊಳ್,

ಕಂ|| ಸೂರೆಗೊಳಲ್ತೊಡಗಲ್ಕಾ |
ವೈರಿಮಹಾಸೇನೆ ಹರುಸದಿಂದಾಪುರಮಂ ||
ಪೌರರ್ಗವಸೆಯ ರಾತ್ರಿಯ |
ದೀರಂದದೆ ಕಾಳರಾತ್ರಿಯೆನಿಸಿದುದಕಟಾ ||೪೭||

ವ|| ಅಂತಾನಗರಮಂ ಸೂರೆಗೊಳಲ್ತೊಡಗಿದಾಂಗ್ಲೇಯಸೈನಿಕರ ನೆರವಿಯು ಗಾವರಮಂ ಕೇಳ್ದು ಮಾರಾಣಿ ಲಕ್ಷ್ಮಕಂಬಿಕೆ ವಿಜಯವಮದೋನ್ಮತ್ತರೀಹೂಣಭಟರಿಂತು ದುರ್ದೆಯೊಳಿರ್ಪೆವ್ಮನಿನ್ನರೆಂದರಿಯದೆ ಧನದಾಶೆಯಿಂದಟ್ಟುಳಿಗೆಯ್ವರೆಂದು ಸುಗಿಮ ನಿಜಪರಿವಾರದಿಂನೊಡಗೂಡಿ ರಂಗನಾಥ ದೇವಾಲಯಂ ಬೊಕ್ಕು ||೪೮||

ಕಂ|| ಅಂತರಭಕ್ತಿಯೊಳಾಶ್ರೀ |
ಹರಿಯಡಿದಾವರೆಯ ನೆನೆಯುತಿರಲಾ ಯಿರುಳೊಳ್ ||
ಪರಿಪಾಲಿಸಿದಂ ಜಗದೀ |
ಶ್ವರನವನಸಾರಾಜಕುಲವನಸಾಹಾವಳಿಯಿಂ ||೪೯||

ವ|| ಅಂತು ಸಮನಿಸಿದ ಭಸುಂಕರಮಪ್ಪ ಸಮಯದೊಳಾಪುರಜನಂಗಳೆತ್ತೆತ್ತಲುಮಾಸೂರೆಗೊಳ್ವರಬ್ಬರಮಂ ಕೇಳ್ದು ಬೆಚ್ಚಿ ಬೆಪ್ಪಳಂಗೊಂಡು ಕಡುಚೆಚ್ಚರಂ ನಿಜನಿಜಸತೀಸುತರ್ವೆರಸು ನಿಳಯಂಗಳಂ ಪೊರಮಟ್ಟು ಪಿಂತಿಲೋವರಿಯೊಳಂ ಪ್ರಾಕಾರಜಲಮಾರ್ಗಂಗಳೊಳಗುಂ ಪಾಳ್ದೀಗುಲಂಗಳೆಡೆಯೊಳಗುಂ ಮೆಯ್ಗರೆದವಸೆಯಕಳ್ತಲೆಯಂ ಮನದೊಳ್ಕೊಂಡಾಡುತುಂ ಜಗದೀಶನಂ ಜಾನಿಸುತುಮುಂತಿಂತಾಯಿರುಳಂ ಕಳೆದು ||೫೦||

ಕಂ|| ಪುದುಗಿಟ್ಟು ಭುವನಮನೆ ತ |
ನ್ನುದರದೊಳೋವುವನದಾವನಾಫಣಿಶಯನೇ ||
ಪದುಳದೊಳೆಮ್ಮಂ ಕಾಪಾ |
ಡಿದನಳಲೆವು ಸೂರೆವೋದ ಸಿರಿಗೆನುತಿರ್ದರ್ ||೫೧||

ವ|| ಇಂತಾ ನಗರಂ ಸೂರೆವೋಗುವುದುಂ,

ಕಂ|| ಕಳೆದಂತಿರೆ ಟೀಪುವಿನುಪ |
ಟಳಮಿಲೋಕಕ್ಕೆ ಕಳೆದುದಾಯಿರುಳರ್ಕಂ ||
ಕಳೆವೆತ್ತು ಚಾಮಭೂಮುಂ |
ಡಳಪತಿತನಯಂಬೊಲಾದನುದಯಾಭಿಮುಖಂ ||೫೨||

ವ|| ಅಂಬಾಮಹಾಸೇನಾಧಿಪತಿಯಪ್ಪ ಹಾರೀಸು ಟೀಪುವಿನಧೀನವಾಗಿರ್ದ ರಾಜ್ಯಕೋಶಾದಿಗಳಂ ಬಸಂಗೊಳಿಸಿಕೊಂಡು ಜಯಸಿರಿಯಂ ಮೆರೆದು ಬಂಗಾಳದೊಳಿಪ್ಪಾಂಗ್ಲೇಯಸರ್ವಾಧಿಕಾರಿಗೀವಿಜಯವಾರ್ತೆಯಂ ತಿಳಿಪಿದ ಬಳಿಕಮಾತನಿಟ್ಟಿದ ಶಾಸನದಂತೆ ಟೀಪುವಿನ ಕುವರರರ್ಗಂ ರಾಣಿವಾಸಕ್ಕಂ ತಕ್ಕನಿತು ಜೀವನಾಂಶಮಂ ಕಲ್ಪಿಸಿ ನೇಲೂರೆಂಬಾಂಗ್ಲೇಯರಾಜ್ಯಕ್ಕವರೆಲ್ಲರುಮಂ ಕಳಿಪಿ ಟೀಪುವಿನಧೀನವಾಗಿರ್ದ ರಾಜ್ಯಮುಂ ಪಿಂದೆ ಪುಟ್ಟಿರ್ದ ಕಟ್ಟಡಕದಂತೆ ಮೂವಸುಗೆಯುಂಗೆಯ್ದೊಂದನಾಂಗ್ಲೇಯರುಂ ಪೆರತೊಂದಂ ಹೈದರಾಬಾದಿನರಸನುಂ ಪಚ್ಚುಗೊಂಡಬಳಿಕುಳಿದುದು ಮಹಿಶೂರರಾಜ್ಯದರಸಂಗೆಸಲ್ಗುಮೆಂದು ನಿರ್ಣಯಿಸುವುದುಂ ||೫೩||

ಕಂ|| ಆವಾರ್ತೆಯನಾಲಿಸಿ ಚಾ |
ಮಾವನಿಪನ ಮಾತೆಯಾದ ಲಕ್ಷ್ಮಮ್ಮಂಬಕೆ ತಾ ||
ನೇವೇಳ್ದಪೆನಾಸಂದನು |
ಧಾವಾರಿಧಿಯಲ್ಲಿ ಮೂಡಿ ಮುಳುಗುತ್ತಿರ್ದಳ್ ||೫೪||

ವ|| ಇಂತು ನಿರ್ಣಯಿಸಿದೊಡನಾಮಹಾಸೇನಾಧಿಪತಿ ಹಾರೀಸು ಪೂರ್ಣಪ್ರಜ್ಞಾಶಾಲಿಯಪ್ಪ ಪೂರ್ಣಯ್ಯನನೊಡಂಗೊಂಡರಮನೆಯುಂ ಪೊಕ್ಕು ಚೆತಪ್ರಕಾರದಿಂ ರಾಜಕುಮಾರನಂ ಕಂಡಾತನುದಾರರಾಜಲಕ್ಷಣಕ್ಕೆ ಸಂತಸಂಬಟ್ಟು ಮಾರಾಣಿಲಕ್ಷ್ಮಮ್ಮಂಬೆಗೆ ನಿಮ್ಮಿಷ್ಟಮಿರ್ದಂತೆ ದೈವಾನುಗ್ರಹದಿಂ ಟೀಪುವಂ ನಿಗ್ರಹಿಸಿ ಜಯಸಿರಿಯುಂ ಕಯ್ಕೊಂಡೆವಿನ್ನೀಮಿನಿಸಾನುಂ ಭಯುಂಗೊಳ್ಳದೆ ಮನೋವ್ಯಥೆಯುಂ ಮಾಣ್ದು ನಿಶ್ಚಿಂತಮಿರ್ಪುದೆಂದರಿಪಿಯುಮಾಕೆ ತಿಳಿಪಿದ ಕೃತಜ್ಞತಾಪೂರ್ವಕಮಾದ ಮನ್ನಣೆಯ ನುಡಿಯಂ ಕಯ್ಕೊಂಡು ಮುಜಿತಪ್ರಕಾರದಿಂದಾಕೆಯುಂ ಬೀಳ್ಕೊಂಡುಂ ಬಳಿಸಂದ ಪೂರ್ಣಯ್ಯಂಗನ್ವಯಕ್ರಮಾಗತಮಪ್ಪ ಮಹಿಶೂರ ರಾಜಧಾನಿಯೊಳ್ಪೂರ್ವಾಚಾರಾನುಸಾರ

ದಿಂ ನಂಜರಾಜಕುಮಾರನ ಪಟ್ಟಾಭಿಷೇಕಮಹೋತ್ಸವಕ್ಕೆ ಸಿಂಹಾಸನಾದಿ ಸಮಸ್ತ ವಸ್ತುಗಳಂ ಸಜ್ಜುಗೆಯ್ವುದೆಂದು ಸೆಲವೀವುದುಮಾಸಚಿವಾಗ್ರೇಸರಂ ॥೫೫॥

ಕಂ॥ ಹಾರೀಸಿನಾಣತಿಯನಾ |
ಮಾರಾಣಿಗೆ ತಿಳಿಪಿ ಬೆಸಸಿದಂತಾಕೆ ಮಹೀ ॥
ಶೂರಪುರದೊಳ್ಸಕಲಸಂ |
ಭಾರಸನಭಿಷೇಚನಕ್ಕೆ ಸಜ್ಜಂಗೆಯ್ದಂ ॥೫೬॥

ವ॥ ಅಂತಭಿಷೇಕಸಂಭಾರಮೆಲ್ಲಮುಂ ಸಜ್ಜವಾಗೆ,

ಕಂ॥ ಮಾರಾಣಿ ನಂಜರಾಜಕು |
ಮಾರನನೊಡಗೊಂಡು ಒಂಭುಜನದೊಡನೆ ಮಹೀ ॥
ಶೂರಪುರಪರಸುನೆಗೆ ಪರಿ |
ವಾರದ ಚತುರಂಗಸೈನ್ಯಮೊಡವರೆ ಬಂದಳ್ ॥೫೭॥

ವ॥ ಆಗಳಾಮಹಿಶೂರ ರಾಜಧಾನಿಯೊಳ್,

ಕಂ॥ ಪರಿಪಟಿಯಹ ಸಿಂಗರದಿಂ |
ಪರಿಶೋಭಿಸೆ ಬೀದಿಬೀದಿಯುಂ ಮನೆಮನೆಯುಂ ॥
ನಿರುಕಿಸಲಾವೃತ್ಸವಮಂ |
ಪರಮೋತ್ಸಾಹದೆ ಕಡಂಗುತಿರ್ದತ್ತು ಜನಂ ॥೫೮॥

ವ॥ ಬಳಿಕಾ೪ಂಗ್ಲೇಯಸೇನಾಧ್ಯಕ್ಷನಾಹಾರೀಸುಂ ಹೈದರಾಬಾದು ಮಹಾರಾಜನಪ್ಪ ನಿಜಾಮದ್ದವಲನ ಕಡೆಯ ಮಿಾರಲಂನಾಮಕನಪ್ಪ ಚಮೂಪತಿಯುಂ ತಮ್ಮ ಸೈನ್ಯಪರಿವಾರದಿಂದೊಡಗೂಡಿ ಶ್ರೀರಂಗಪತ್ತನಮಂ ಪೊರಮಟ್ಟು ಮಹಿಶೂರ ನಗರಮಂ ಸಾರ್ದಲ್ಲಿ ಬೀಡಂಬಿಟ್ಟು ರಾಜಕಾರ್ಯಪ್ರವೀಣನೆನಿಸಿದ ಪೂರ್ಣಯ್ಯನ ಮುಖದಿಂ ಶಾಲಿವಾಹಶಕವರ್ಷಂಗಳೊಳ್ಟಕ್ಕು ರಾತ್ಮಗಿರಿಧರಾಸರಿಗಣಿತಮಪ್ಪ ಸಿದ್ಧಾರ್ಥಿವತ್ಸರದೊಳ್ಶುಭತಮ ಜ್ಯೇಷ್ಠಕೃಷ್ಣತ್ರಯೋದಶಿಯೊಳ್ಮಹನೀಯಶ್ರೀಲಕ್ಷ್ಮೀರಮಣದೇವಾಲಯದೊಳ್ವಿಜಿತ್ರತರಬಹುವಿಧವಚನೆಯಿಂದೊಪ್ಪುವಭಿಷೇಕಮಂಟಪದೊಳ್ಸಕಲವೈದಿಕಲೌಕಿಕಸಾವಾಜಿಕರುಮಂತಃಪುರಸೀವಂತಿನಿಯರುಂಸಾರ್ತಂದು ಸಮುಚಿತಸ್ಥಾನಂಗಳೊಳ್ನೆರೆದಿರಲಾನಂಜರಾಜಕುಮಾರಂಗೆ ಪೂರ್ವಾಚಾರಪ್ರಕಾರ

ದಿಂದೆ ಯುಮತಿವಿಭವದಿಂದೆ ಯುಮಭಿನಂದನೀಯರಜತಮಯಭದ್ರಾಸನಾ
ರೋಹಣಪೂರ್ವಕಮಾಗಿ ಕಂಕಣಧಾರಣಾದಿಸಮಸ್ತಶುಭಕಾರ್ಯಂಗಳಂ ಬಳೆ
ಯಿಸಿದ ಸಮನಂತರದೊಳ್ತಾಮಿರ್ವರುಂ ಬಲಪರಿವಾರದಿಂದೊಡವೆರೆದಲ್ಲಿಗೆ
ಯ್ತಂದು ನಿಜನಿಜಪ್ರಮುಖಾಧಿಕಾರಿಗಳೊಡನುಭಯಪಾರ್ಶ್ವದೊಳುಂನಿಂದು
ಸುಮುಹೂರ್ತದೊಳಾರ್ಜಕುಮಾರನೆರಡುಂತೋಳ್ಗಳಂ ಪಿಡಿದು ವಂಶಕ್ರಮಾ
ಗತಮಪ್ಪ ರತ್ನಸಿಂಹಾಸನಮನೇರಿಸಿದಾಗಳ್ ||೫೯||

ಕಂ|| ಸುರುಚಿರಸಿಂಹಾಸನಮಂ |
ಹರಿಸಂ ಮಿಗೆ ಧೀರನಂಜರಾಜಕುಮಾರಂ ||
ನಿರವಧಿಕತೇಜನಡರ್ದಂ |
ಸರಸಿಜಸಖನುದಯಗಿರಿಯನೇರಿದತೆರದಿಂ ||೬೦||

ಆಸಮಯದೊಳೊಲವಿಂ ನಿಂ |
ಹಾಸನದೊಳ್ಮಂಡಿಸಿರ್ಪ ನಂಜಧರಿತ್ರೀ ||
ವಾಸವನ ಮೇಲೆ ಕರೆದುದು |
ಪೂಸರಿಯಂ ಭೋಂಕನಖಿಲಲೌಕಿಕಲೋಕಂ ||೬೧||

ವೃ|| ಸಿರಿಯ ಜಂಜಲಭಾವನಿಮುತ್ತಮಂ |
ಪರಮದುರ್ಯಶಮಂ ಬಡಿದೋಡಿಪಂ ||
ತುರುತರೋದ್ಧತಿಯಿಂದೆ ಶತಘ್ನಿಕೋ |
ತ್ಕರಮೊಡರ್ಚಿತು ಘಂಗಮಶಬ್ದಮಂ ||೬೨||

ಕಂ|| ಪಟಹಬಹುರೂಪಕಹಳೋ |
ದ್ಭಟಭೇರೀಝರ್ಝರಾದಿವಾದ್ಯಧ್ವನಿಯುಂ ||
ಪಟುವಂದಿಜನಸ್ತುತ್ಯಾ |
ರ್ಭಟಮುಂ ಘಮ್ಮಡಿಸಿದತ್ತು ಗಗನಾಂತರಮಂ ||೬೩||

ಆಗಿಸಿದರಾಕುಮಾರಂ |
ಗಾಗಮವಿಧಿಪಥದೊಳಾಮಹಾಬಲಪತಿಗಳ್ ||
ಸಾಗರಸರಿಜ್ಜಲಂಗಳಿ |
ನಾಗಳೆ ರಾಜ್ಯಾಭಿಷೇಕಮಂ ಮುದದಿಂದಂ ||೬೪||

ತರತರದಿಂ ಮುಂಗಡೆ ನಿಂ |
ದೆರಗಿದರಧಿಕೃತರುಮರಸರುಂ ವೈಶ್ಯರುಮಾ||
ಧರಣೀಶಂಗೊಡನೊಡನೆಯೆ |
ಸರಾಕ್ಪರಾಕೆಂದು. ಪೊಗಳೆ ಕಯ್ಯೆತ್ತಿ ಭಟರ್ ||೬೫||

ವೈದಿಕವಿದ್ವಜ್ಜನಮ ।
ತ್ಯಾದರದಿಂ ಕರದೊಳಿತ್ತು ಫಲಮುಂ ಶಿರದೊಳ್ ॥
ವೇದೋಕ್ತಾನರ್ಘಾಶೀ ।
ರ್ವಾದಮನುಚ್ಚರಿಸಿ ತಳಿದರೆಸೆವಕ್ಷತೆಯಂ ॥೬೬॥

ಒಳಿಕರಸನಾಜ್ಞೆಯಿಂದಂ ।
ಸುಲಕ್ಷಣದಿ ಸೂಪ್ಪವಾನೆಗಂ ವಾರುವಕಂ ॥
ಬಳೆಯಿಸಿದನಾಮುಹೂರ್ತದೊ ।
ಳೊಲವಿಂ ಪಟ್ಟಾಭಿಷೇಕಮಂ ಪೂರ್ಣಯ್ಯಂ ॥೬೭॥

ವ॥ ಮತ್ತಮಂತಭಿಷಿಕ್ತನಾದ ಪಟ್ಟವರ್ಧನಕ್ಕೆ ಹಂಸರಾಜನೆಂದುಂ ಪಂಚಪಲ್ಲವದ ವಾಜಿಗೆ ಜಯರಾಮನೆಂದುಂ ಪಟ್ಟಾಭಿಷೇಕನಾಮಧೇಯಂ ಗೆಯ್ದ ಸಮನಂತರದೊಳಾಂಗ್ಲೇಯಮಹಾಸೇನಾಧ್ಯಕ್ಷನಾಹಾರೀಸು ರತ್ನ ಸಿಂಹಾಸನದೊಳ್ಕಂಡಿಸಿದಾಕುಮಾರಮಹಾರಾಜಂಗೆ ರತ್ನಾಭಿಷೇಕಂಗೆಯ್ದಾಂ ಗ್ಲೇಯಮಂಡಲೇಶ್ವರಂ ಕಳಿಪಿರ್ದ ಪತ್ರಿಕೆವೆರಸು ರಾಜ್ಯಾಧಿಕಾರಮುದ್ರೆ ಯುಮಂ ಪಟ್ಟಗತ್ತಿಯುಮಂ ಕಯ್ಕೊಳಿಸಿ ಕೃಷ್ಣರಾಜನೆಂದು ಪಟ್ಟಾಭಿಷೇಕ ನಾಮಧೇಯಮುಂ ನೆಗಳ್ದ ರತ್ನಾಭರಣಗಜವಾಜಿರಥಾದಿಗಳಪಸಾಯಮನಿತ್ತು ವಂದಿಸಿ ಪೂರ್ಣಯ್ಯಂ ಮೊದಲಪ್ಪಧಿಕಾರಿಗಳುಂ ಪೌರಮುಖ್ಯರುಮನುಬಂ ಧಿಗಳಪ್ಪರಸರುಂಕಯ್ಗಳ್ಕೆಗಳನೊಪ್ಪಿಸಿದಬಳಿಯಂ ಮಹಾರಾಜಂಗೆ ಹಿತಮಂ ಬಯಸಿ ಪೂರ್ವಾಪರಜ್ಞನೆನಿಸಿದಾಪೂರ್ಣಯ್ಯಸಂಮಂತ್ರಿಪದವಿಯೊಳಿರಿಸುವು ದುಂ ಶ್ರೀಮನ್ಮಹಾರಾಜನಾಕೃಷ್ಣರಾಜನಾಹಾರೀಸುಃಖೊದಲಪ್ಪಮಹಾಸೇ ನಾಧಿಪತಿಗಳಂ ಸುಮನೋಜ್ಞವಸ್ತ್ರಾಭರಣಪುಷ್ಪಹಾರತಾಂಬೂಲಂಗಳನಿತ್ತು ಮನ್ನಿಸಿ ಬೀಳ್ಕೊಟ್ಟುಳಿದಸಭಾಸದರೆಲ್ಲರ್ಗಮುಚಿತಪ್ರಕಾರದಿಂ ಪುಷ್ಪಹಾರ ತಾಂಬೂಲಂಗಳನಧಿಕೃತರಿಂ ಕೊಡಿಸಿ ಮಹಾಮಾತ್ಯಸಪ್ತ ಪೂರ್ಣಯ್ಯನ ಹಸ್ತಾವಲಂಬದಿಂ ಸಿಂಹಾಸನಮನಿಳಿದು ನಿಜವಧಿಕರಾಜತೇಜದಿಂ ವಿರಾಜಿಸು ತ್ತೊಡ್ಡೋಲಗಮುಂ ಬೀಳ್ಕೊಡಲೊಡಂ ಮಹಾರಾಣಿಯು ಲಕ್ಷ್ಮಾಂಬೆಯ ನಿಯೋಗದಿಂದುದಾರಗುಣಪೂರ್ಣನಾಪೂರ್ಣಯ್ಯಂ ॥೬೮॥

ಕಂ॥ ತಣಿಯಿಸಿದಂ ಮೇಲೆಸಿಪೌ ।
ತಣದಿಂದುಚಿತಪ್ರಕಾರದುಡುಗೊರೆಯಿಂ ದ ।

ಕ್ಷಿಣಿಯಿಂ ನಾಲ್ಕುಂವರ್ಣಮ ।
ನಣಿಯರಮುತ್ಸವಮದಾರ್ಗೆ ಪೊಗಳಲ್ಕಕ್ಕುಂ॥೬೯॥

ಇಂತಭ್ಯುದಯಂಬಡೆದು ನಿ ।
ತಾಂತಾಹ್ಲಾದಮನೊಡರ್ಚುತಿಳೆಗಾಧರಣೀ ॥
ಕಾಂತಂ ಬಾಲದಿವಾಕರ ।
ನಂತಿರೆ ತೇಜೋವಿಶೇಷದಿಂದೆಸೆದಿರ್ದಂ ॥೭೦॥

ವ॥ ಇಂತು ತಮ್ಮೆತ್ತಿದ ಕಜ್ಜಮಂ ಕಡೆಯನೆಯ್ದಿಸಿ ಶರಣ್ಗೊಕ್ಕರಂ ಲೋಕಮೆಲ್ಲಂಪೊಗಳುತಿರ್ಪಿನಂ ಸಲಹಿದಾಂಗ್ಲೇಯರುದ್ದಾಮಗುಣಂಗಳಂ ಪೊಗಳ್ವೊಡೆ ॥೭೧॥

ವೃ॥ ಬುದ್ಧಿಪ್ರಾಭವದೊಳ್ಮಹೇಂದ್ರಗುರುವಂ ಶ್ರೀರಾಮಸಂ ಸತ್ಯದೊ ।
ಳ್ಯುದ್ಧಪ್ರಕ್ರಮದೊಳ್ಸುರೇಂದ್ರಸುತನಂ ಸಂಪತ್ತಿನೊಳ್ಕ್ರೀದನಂ॥
ಸದ್ಧರ್ಮವ್ರತದಲ್ಲಿ ಧರ್ಮಸುತನಂ ಪೊಲ್ವಪ್ಪತಿಸ್ಪಂಧುಮ ।
ಗ್ನೋದ್ಧಾರದೊಳಿಂದಿರಾಪತಿಯನಾಂಗ್ಲೇಯರ್ಕಳೇಂ ಶಕ್ತರೋ॥೭೨॥

ಇದು ಜಗದ್ವಿದಿತ ಶ್ರೀಕಾಶ್ಯಪವಂಶಮುಕ್ತಾಮಣಿ ಶ್ರೀಗರಳಪುರೀಶಶಾಸ್ತ್ರಿ ತನೂಭವನುಂ ಶ್ರೀಮದಖಂಡ ಮಹೀಮಂಡಲ ಮಂಡನಾಯಮಾನಕರ್ನಾಟಜನಪದಲಕ್ಷ್ಮೀವಿಹಾರೈಕರಂಗಮಹೀಭೂತ ಮಹೀಶೂರರಾಜಧಾನೀ ರತ್ನಸಿಂಹಾಸನಾಧೀಶ್ವರ ಯದುಕುಲಪಯೋನಿಧಿ ಪೂರ್ಣಚಂದ್ರಾಯಮಾಣ ಶ್ರೀಚಾಮರಾಜೇಂದ್ರ ತನಯ ಶ್ರೀಕೃಷ್ಣರಾಜಮಹಾರಾಜಸಂಸ್ಕೃತ
ಕರ್ಣಾಟೋಭಯಪ್ರವಚನೋಪಾಧ್ಯಾಯನುಂ ಮಹಾವಿದ್ವ
ತ್ಪದಲಾಂಛನನುಂ ತನ್ಮಹಾರಾಜ ಕೃಷ್ಣರಾಜವಿತೀರ್ಣ
ಕವಿತಿಲಕಬಿರುದಾಂಕಿತನುಮಪ್ಪ ಸೋಸಲೆ
ಅಯ್ಯಶಾಸ್ತ್ರಿಯಿಂ ವಿರಚಿತವಾದ
ಮಹಿಶೂರಮಹಾರಾಜ ಚರಿತ್ರ
ಮೆಂಬ ಕರ್ಣಾಟ ಚಂಪೂ
ಮಹಾಕಾವ್ಯದೊಳ್
ತೃತೀಯಾಶ್ವಾಸಂ
ಸಂಪೂರ್ಣಂ.

ಚತುರಾಶ್ವಾಸಂ.

ಕಂ॥ ಸಕಲಬ್ರಹ್ಮಾಂಡನಿಯಾ ।
ಮಕನಂತರ್ಯಾಮಿ ಸಕಲಶಕ್ತಿಸಮೇತಂ ॥
ವಿಕೃತಿರಹಿತಂ ಮಹೇಶ್ವರ ।
ನಕಳಂಕಂ ಬಳಿಯಿಕೆಮ್ಮ ರಾಯನಕುಲಮಂ ॥೧॥

ವೃ॥ ಬಳಿಕಾಚಾಮವಸುಂಧರಾಧಿಪಕುಮಾರಂ ಬಾಲ್ಯದೊಳ್ಬುದ್ಧಿ ಕೌ ।
ಶಳದಿಂದಂ ಕ್ರಮದಿಂದನೊಲ್ದಖಿಳಸದ್ವಿದ್ಯಂಗಳಂ ಕಲ್ತು ದಿ ॥
ಗ್ವಳಯಾಭಿಶ್ರುತಕೀರ್ತಿಯಾಗಿ ರಿಪುಲೋಕಾರಣ್ಯರಾಜೀದವಾ ।
ನಳದೋರ್ವಿಕ್ರಮನಾಗಿ ಮಂತ್ರಿವರಸಾಳುತ್ತಿರ್ದನಾರಾಜ್ಯಮಂ ॥೨॥

ವ॥ ಇಂತು ಕರ್ಣಾಟರಾಜ್ಯಧುರೀಣನೆನಿಸಿದಾಕೃಷ್ಣರಾಜೇಂದ್ರಂ ಬೆಸ ನಿತ್ತಮಾಳ್ಕೆಯಿಂದಳ್ಕರಿಂದಮಾತ್ಯವರ್ಯಂ ಪೂರ್ಣಯ್ಯಂ ಪಿಂದೆ ಟೀಪು ರೂಪು ಗಿಡಿಸಿರ್ದ ಪಳೆಯರಮನೆಯುಂ ಚೆಲ್ವಿಂದಮುರೇಂಪ್ರಸರಮನೆಯಂ ಕಡೆಕಣ್ಣಿ ವಂದದಿಂ ಪೊಸತನಾಗಿಸಿ ರಾಜಧಾನಿಯೆಸಿಸಿದ ಮಹಿಂಶರನಗರಮಂ ಪಿಂದೆ ಪುಂಡರೀಕಾಕ್ಷಂ ಖಾಂಡವಪ್ರಸ್ಥಮಂ ವಿಶ್ವಕರ್ಮನಿಂ ವಿಶ್ವಾತಿಶಾಯಿರಾಮ ಣೀಯಕದಿಂಬೊಪ್ಪುವಿಂದ್ರಪ್ರಸ್ಥಮೆಂಬ ಖಾಂಡವರಾಜಧಾನಿಯನಾಗಿಸಿದಂತೆ ತ್ತೆತ್ತಮುಂ ಬಿತ್ತರಿಸಿ ಮಹಾರಾಜನಿವಾಸಕ್ಕೆ ತಕ್ಕಂತು ಶಿಲ್ಪಸೂತ್ರಜ್ಞರಿಂ ವಿಚಿತ್ರಮೆನೆ ರೂಪುಗೊಳಿಸುವುದುಂ ॥೩॥

ಮಂದಾನಿಲರಗಳೆ ॥ ಅನವರತಂ ಬಂಡವಗಾಹಿಸ ಪುರ ।
ಜನದಮಲತರಾಚಾರದ ಬಂಧುರ ।
ಚಾರುಶಿಲಾಸೋಪಾನಾಳಿಗಳುಂ ।
ತೀರತಲಸನ್ಮಂಟಪಶಾಲೆಗಳುಂ ।
ಸುಹಿತಚ್ಛಾಯಾಮಂಡಲದಿಂದಂ ।
ಬಹುವಿಧಖಗಮ್ಮಂಜುಳರವದಿಂದಂ ।
ಸೊಗಯಿಪ ತಟವೃಕ್ಷಂಗಳು ಮೊಪ್ಪಿರೆ ।
ಬಗೆಗೊಳಿಸುವ ತಾವರೆಗಳ್ತಳ್ತಿರೆ ।
ಬಳಗಂಬೆರಸುಣ್ಮಿದಮದಭರದಿಂ ।
ಮುಳುಗುತ್ತೇಳುತೆ ಲೀಲಾಕ್ರಮದಿಂ ।

ನಲಿನಲಿದಾಡುತ್ತಿರೆ ಕೊಂಜೆಗಳುಂ |
ಕಲಮಧುರಧ್ವನಿದೋಷ್ಪಂಜೆಗಳುಂ |
ಪರಿಶೋಭಿಪ ನಿರ್ಮಲಜಲದಿಂದಂ |
ನಿರುತಂತೀವಿದ ಸರಸಿಗಳಿಂದಂ, |
ದೆಸೆದೆಸೆಯಂ ಪುದಿದುಳಿದ ಮಹೀಸುರ |
ವಸುಧಾಧೀಶಾನರ ಪಾಂಡರತರ |
ಯಶದಾ ಖಂಡಂಗಳೆನಿಪ್ಪುಜ್ವಳ |
ಶಶಿಧವಳಸುಧಾಲಿಪ್ತಗೃಹಂಗಳ |
ನಿವಹಂಗಳಿನಂಬರಜುಂಬಿಗಳಿಂ |
ವಿವಿಧಪ್ರಾಸಾದಶ್ರೇಣಿಗಳಿಂ, |
ತೊಳತೊಳಗುವ ರನ್ನದ ತುಡಿಗೆಗಳಿಂ |
ಕಳಿಯೇರಿದ ಪಲತೆರದುಡಿಗೆಗಳಿಂ |
ಪರಿವಡೆದೊಗ್ಗೊಗ್ಗಳಿಯದೆ ಮುದದಿಂ |
ಚರಿಸುವ ಸಚ್ಚರಿತದ ಪುರಜನದಿಂ |
ನಡೆವದ್ರಿಗಳೆಂಬಂತಿರೆ ತೋರುತೆ |
ನಿಡುಜಂತಂಗಳಿನುರೆ ಕಣ್ಗೊಳಿಸುತೆ |
ತೊನೆಯುತ್ತಿರ್ಕೆಲದೊಳ್ಪಂಥಣಿಸುವ |
ಘನತರಘಂಟಾಯುಗಳದಿಸೊಪ್ಪುವ |
ಮೆಲ್ಲನೆ ಚರಿಸುವ ಪಲವಾನೆಗಳಿಂ |
ಸಲ್ಲಕ್ಷಣಲಕ್ಷಿತಮೂರ್ತಿಗಳಿಂ |
ಗತಿಭೇದಜಮತ್ಕೃತಿಶಾಲಿಗಳಿಂ |
ದತಿಮಾತ್ರಮನೋಹರವಾಜಿಗಳಿಂ |
ದನುಪದಮುಂ ಘನನಿನದಭ್ರಾಂತಿಯ |
ಜನಿಯಿಪ ಚಕ್ರಧ್ವನಿಯ ಮಹಾರಯ |
ಶಾಲಿಗಳಪ್ಪ ರಥಾಳಿಗಳಿಂದಂ |
ಶ್ರೀಲಕ್ಷಣಯುತಧೇನುಗಳಿಂದಂ |
ನೆರೆದಿಟ್ಟಣಿಸಿದ ನೀಡುಂನೀಡಿದ |
ನರಪತಿಸರಣಿಗಳಿಂ, ಸಂಗಡಿಸಿದ |

ಮಿಸುಪ ಹಿರಣ್ಮಯಕಲಶೋತ್ಕರದಿಂ |
ಪ್ರಸರಿಪ ಕಿರಣಂಗಳ ಸಂಕುಲದಿಂ |
ಗಗನಮನುದ್ಯೋತಿಪ ಗೋಪುರದಿಂ |
ಸೊಗಯಿಪ ಪಲವುಂ ಸುರಮಂದಿರದಿಂ, |
ಪ್ರವಿದಿತವರವಿದ್ಯಾಶಾಲೆಗಳಿಂ, |
ಸುವಿಹಿತವಿವಿಧೌಷಧಶಾಲೆಗಳಿಂ, |
ಸುಚಿರಸ್ಥಿತಿಯಂ ಪಡೆದತಿಶಯದೊಳ್ |
ರುಚಿರದ್ಯುತಿಯಿಂದೆ ನಭೋಂತರದೊಳ್ |
ಪ್ರಚುರತೆಯಿಂದಾವಗಮುಂ ಪೊಳೆಯುತು |
ಮಚಿರಚ್ಛಿಕಾಂತಿಯನತಿಗಳೆಯುತು |
ಮಿರುತಿಪ್ಪೊಳ್ಕಿಸುನಿಯ ಪಳಯಿಗೆಯಿಂ |
ಸುರುಚಿರಕಾಂಚನಕಲಶಾವಳಿಯಿಂ |
ದೆಸೆನೆರಮನೆಯಿಂ, ಕಿಸಲಯಚಯದಿಂ |
ಕುಸುಮೋಚ್ಚಯದಿಂ ಫಲಸಂಚಯದಿಂ |
ದಿಡಿದಿಪ್ಪ ಲತಾತರುಸಮುದಯದಿಂ |
ಗಡಣಿಸುವಳಿಗಳ ಕಲಗಳರವದಿಂ |
ನರುಗಂಪಿಂಪೊರೆದೆಳಗಾಳಿಗಳಿಂ |
ನೆರೆ ಬಗೆಗೊಳ್ಪುಪವನಭೂಮಿಗಳಿಂ, |
ತಳತಳಿಸುವ ಪೊಂದೊಡವುಗಳಿಂದಂ |
ಬೆಳಗುವ ಮಣಿಗಳ ಪಸರಗಳಿಂದಂ |
ಪೊಸಪೊಸತಪ್ಪನುವಾದುಡಿಗೆಗಳಿಂ |
ಪಸರಿಸಿದ ಪರೀಮಳವಸ್ತುಗಳಿಂ |
ಪಲವುಂ ಪಾತ್ರಂಗಳ ಮಳಿಗೆಗಳಿಂ |
ಫಲರಾಶಿಗಳಿಂ ಸುಮಮಾಲೆಗಳಿಂ |
ದೆಡೆವಿಡದೊಪ್ಪುತೆ ಜನವಿತತಿಗಳಿಂ |
ದಿಡಿಕಿರಿದಿಪ್ಪಂಗಡಿವೀದಿಗಳಿಂ, |
ಪ್ರತಿದಿವಸದೊಳಂ ಪ್ರತಿನಿಮಿಷದೊಳಂ |
ಪ್ರತಿಮಾರ್ಗದೊಳಂ ಪ್ರತಿಭವನದೊಳಂ |

ಕಿವಿಗಳ್ಗಮರ್ದಿನ ಮಳೆಯೆನೆ ಸವಿಯಿಂ |
ತವೆ ಪುದಿದುತ್ತಮವಾದ್ಯಧ್ವನಿಯಿಂ, |
ದಧಿನವವಿಭವಪ್ರಸರಣದಿಂದಂ, |
ಶುಭತಮವಿವಿಧಮಹೋತ್ಸವದಿಂದಂ, |
ಸೊಗಯಿಸಿದುದು ಸಿರಿಗಿಂಬೆನಿಸಿ ಮಹಾ |
ನಗರಮದೇನೆಂದಪೆನಾನಹಹಾ ||೪||

ಅಂತುಮಲ್ಲದೆ,

ಕಂ|| ಪರಿಶೋಭಿಸುತ್ತುಮಿರೆ ಬಿ |
ತ್ತರಮಾಳಾದ್ರಾಮರಾಜಿಯೆತ್ತೆತ್ತಮುಮಾ ||
ಪುರಲಕ್ಷ್ಮೀ ಪಸುರ ಸೀರೆಯ |
ಧರಿಸಿರ್ದಪಳೆಂಬವೋಲದೇಸೊಪ್ಪಿದುದೋ ||೫||

ಮತ್ತಂ,

ವೃ|| ಪೆಸರಿಂದಂ ದೇವರಾಜಾರ್ಣವಮೆನಿಪ ಸರಂ ಪ್ರಾಂಶುಚಾಮುಂಡಿಕಾಂಬಾ |
ವಸಥಕ್ಷ್ಮಾಣೀಧ್ರದಿಂದಾಧರಣಿಧರಮುಮಾರಮ್ಯಕಾಸಾರದಿಂದಾ ||
ವಸುಧಾಧ್ರಾಬ್ಜಾಕರಂಗಳ್ಮಹಿಷನಗರದಿಂದಂತು ತತ್ಪತ್ತನಂ ದಿ |
ಟ್ಟಿಸಲೇನೊಪ್ಪಿರ್ದುದೋ ತದ್ವಿಪುಲಸರಸಿಯಿಂದಂ ತದುರ್ವೀಧ್ರದಿಂದಂ ||೬||

ವ|| ಇಂತಿಪ್ಪರ್ಪಾಗಳಾಮಹೀಕಾಂತಂ ಬಸಂತನೆಯ್ತರೆ ತಳಿರ್ತೆಸೆವ ಬಂದಮಾಮರನಂದದಿಂ ಕಡುಜವ್ವನಂ ಮೂಡೆ ಮುಂಗಳಮೂರ್ತಿಯಾಗಿ ನಾಡೆ ಕಣ್ಗೊಳಿಸುತ್ತನುಕ್ರಮದಿಂದಲರಂಬನಯ್ದಂಬುಗಳೆಂಬಂತಳ್ಬಂಬಂ ಚೆಲ್ವುವೆತ್ತೊಪ್ಪುವ ರಮಾವಿಲಾಸದ ಚೆಲ್ವಾಜಮ್ಮಣ್ಣಿ ಸೀತಾವಿಲಾಸದ ದೇವಾಜಮ್ಮಣ್ಣಿ ವೊದಲೆನಿಸಿದರಸಿಯರಯ್ವರಂ ಪಸೆನಿಲ್ವುದುಂ ||೭||

ಕಂ|| ಆದೇವಿಯರಯ್ವರುಮಾ |
ಮೇದಿನಿಯೊಳ್ಪಚ್ಚರಿತ್ರಕರುಣಾಸೌಜ ||
ನ್ಯೋದಾರ್ಯದೇವಗುರುಭ |
ಕ್ತ್ಯಾದಿಗುಣಂಗಳ್ಗೆ ತೌರುಮನೆಯೆನಿಸಿರ್ದರ್ ||೮||

ವ|| ಇಂತವರಯ್ವರ್ವೆರಸಾರಸಾಖಂಡಲನಖಂಡಸಾಮ್ರಾಜ್ಯಪದವಿಯನನುಭವಿಸುತ್ತಾದುರುಳನಾದ ಟೀಪುವಳ್ಕಡಿರ್ದ ದೇವದಾಯಬ್ರಹ್ಮದಾ

ಯುಂಗಳಂ ಮೊದಲಿರ್ದಂತೆ ನೆಲೆಗೊಳಿಸು ಮತ್ತಂ ತನ್ನಾಧಿಪತ್ಯಕ್ಕನುರೂಪ
ಮಪ್ಪುದಾರಭಾವದಿಂದೀನಾಡೊಳಗೆ ನೆಲೆಗೊಂಡಿರ್ಪನೇಕಮಹಾಧಿಪತಿಗ
ಳ್ಗಂ ತತ್ತನ್ಮಹಂಗಳೊಳ್ಸನ್ನಿಧಿಗೊಂಡಿರ್ಪ್ಪ ದೇವರ್ಗಂ ಪಿಂಜರಿಯಿಂದಮುಂ
ಮಿಸುನಿಯಿಂದಮುಂ ಸಮೆದ ಪರಿಪರಿಯುಪಚರಣೋಪಕರಣಂಗಳುಮುಂ
ನವರತ್ನಕಿರೀಟಹಾರಕಟಕಾದ್ಯನರ್ಘ್ಯಾಭರಣಂಗಳುಮುಂ ತತ್ತದ್ದೇವತಾರಾ
ಧನಾನ್ನದಾನಾದಿಗಳ್ಗನುಕೂಲಂಗಳಪ್ಪಂತನೇಕಗ್ರಾಮಭೂಮಿಸುವರ್ಣ್ಣದಾ
ಯಂಗಳುಮುಂ ಮನವಾರೆ ಸಮರ್ಪಣಂಗೆಯ್ದಿಂತಪ್ಪ ಪಲವುಂಧರ್ಮ್ಮಕಾರ್ಯಂ
ಗಳನೆಸಗುತ್ತಿರ್ದನೆಂಬೆಡೆಯೊಳ್ ॥೯॥

ಕಂ॥ ಕುಡುವರೊಳರ್ದ್ಧರೆಮೆಚ್ಚ |
ಲ್ಕುಡುವರೊಳರ್ಪ್ಪೇಳ್ವರಾಸೆ ಮುಗಿಪಿನಮಾವಂ ||
ಕುಡುವಂ ಸಾಜದೊಳಾನಾ |
ಡೊಡೆಯಂಬೊಲುದಾರನಿಜಮನಂ ತಣಿವನ್ನಂ ॥೧೦॥

ವ॥ ಮತ್ತಮಾನರೇಂದ್ರಕುಲತಿಲಕಂ ತುಲಾಭಾರದಾನಾದ್ಯನೇಕಮ
ಹಾದಾನಂಗಳಂ ಮಾಡಿ ನಾಡೊಳೆಲ್ಲೆಲ್ಲಿಯುಂ ತನ್ನ ಪೆಸರಿಂದೆಯುಂ ತನ್ನ
ತಾಯ್ವೀರ ಪೆಸರಿಂದೆಯುಂ ರಾಣಿಯರ ಪೆಸರಿಂದೆಯುಮುತ್ತಮವೃತ್ತಿಕ್ಷೇ
ತ್ರಂಗಳೊಡನೆ ಪಲವಗ್ರಹಾರಂಗಳಂ ವೇದಶಾಸ್ತ್ರಸಂಪನ್ನರಪ್ಪನೇಕಭೂಸು
ರರ್ಗ್ಗೆ ದಾನಂಮಾಡೆ ॥೧೧॥

ಕಂ॥ ನಿರುಕಿಪೊಡೆಲ್ಲೆಲ್ಲಿಯುಮಾ |
ನರಪತಿಯಿತ್ತಗ್ರಹಾರವೃತ್ತಿಗಳೇತ ||
ತ್ಪರಮೌದಾರ್ಯಮನೀಗಳು |
ಮುರಿ ಪೊಗಳ್ದಪುವನುಭವಕ್ಕೆ ಸಂದೆಯಮುಂಟೇ ॥೧೨॥

ವ॥ ಅಂತುಮಲ್ಲದಾಭೂವಲ್ಲಭನೀನಾಡೊಳೆಲ್ಲೆಲ್ಲಿಯುಂ ಪಲವುಂ
ದೇವಾಯತನಂಗಳಂ ಪ್ರತಿಷ್ಠಿಸಿಯುಂ ಪುರಾತನಂಗಳಪ್ಪ ಕೆಲವಂ ಜೀ
ರ್ಣೋದ್ಧಾರಂಮಾಡಿಯುಂ ಪಲವರ್ಕ್ಕೆ ಸಮುತ್ತುಂಗವಿಚಿತ್ರತರಗೋಪುರಶಿಖ
ರಂಗಳಂ ಕಟ್ಟಿಸಿಯುಮನೇಕಮೂರ್ತಿಭೇದದಿಂ ನೆಗಳ್ತ್ತವಡೆದಿರ್ಪ್ಪ ಪಲವುಂ
ದೇವರ್ಕ್ಕೆ ನಿತ್ಯೋತ್ಸವಪಕ್ಷೋತ್ಸವಮಾಸೋತ್ಸವಸಂವತ್ಸರೋತ್ಸವಂಗಳತ
ಥಾಭೀಕ್ಷ್ಣಯಿಲ್ಲದಾವಗಂ ನಡೆವಂತನುಪಮರಥವಾಹನೋಪಕರಣಾಭರಣ

ಗ್ರಾಮಭೂಮಿಸುವರ್ಣ್ಣದಾಯಂಗಳಂ ಸಲಿಸಿಯುಮಂತು ಪೆರನಾಡೊಳಪ್ಪ ಶಿವವಿಷ್ಣುಮೂರ್ತಿಗಳ್ಗಂ ಪಲವುಂ ಸೇವಾರ್ಥಂಗಳಂ ನಿರಂತರಂ ನಡೆವಂತು ನೇಮಿಸಿಯುಂ ಗಳಸಿದಗ್ಗಳಸಿದಾಧರ್ಮ್ಮಕೀರ್ತಿಗಳಂ ಪೊಗಳ್ವೊಡಾಸಹಸ್ರಮುಖನಪ್ಪನಂತಂಗಮಸದಳಮಂತುಮಲ್ಲದೆ ॥೧೩॥

ವೃ॥ ಅರಿದವದಾವನಾನೃಪನುಮಾಪತಿ ಬೇರೆ ಮುರಾರಿ ಬೇರೆನು ।
ತ್ತರಿದವನೀಶನಲ್ತು ಯದುಶೈಲನಿಕೇತನಚಕ್ರಪಾಣಿಗಂ ॥
ಗರನಗರಾಧಿವಾಸಿಗಿರಿಶಂಗಮಭೇದದಿನೊಲ್ದು ಸತ್ಯಸಂ ।
ಗರನಗಣೀಯಸಂಪದಮನಿತ್ತುದೆ ಸೇವೆಗವಂ ನಿದರ್ಶನಂ ॥೧೪॥

ವ॥ ಮತ್ತಮಾನಾಡೊಡೆಯನೀನಾಡೊಳೆಲ್ಲಿಲ್ಲಿಯುಂ ಪರಿವ ಕಾವೇರಿ ಕಪಿಲೆ ಮೊದಲಪ್ಪ ನದಿಗಳೊಳ್ಪಥಿಕರ ಸುಖಸಂಚಾರಕ್ಕೆ ಪಲವುಂ ಮಹಾಸೇತುಗಳಂ ಬಂಧಿಸಿಯುಂ ಪ್ರಜೆಗಳ ಜೀವನಾರ್ಥದಿಂದೆಣೆಕೆಯಿಲ್ಲದ ಕಳವೆಯ ಗರ್ದ್ದೆಗಳ್ಗೆ ನೀರಂ ತಿರುಪಲ್ಕೆ ಕಟ್ಟೆಗಳಂ ಕಟ್ಟಿಸಿಯು ಮೂರೂರ ದಾರಿದಾರಿಯೊಳ್ ದಾರಿಗರ್ಗ್ಗನ್ನಪಾನದಾನಮೆಂದುಂನಡೆವಂದದಿಂದನ್ನಸತ್ರಂಗಳಂ ಕಲ್ಪಿಸಿಯುಂ ಬೇಸಗೆಯೊಳತ್ತಿತ್ತಣಿಂ ನಡೆತಪ್ಪ ಸಕಲಪ್ರಾಣಿಗಳುಂ ಪಥಪರಿಶ್ರಮವನಾರಿಸಲೆಂದು ವಿವಿಧತರುನಿವಹಾಭಿರಾಮಂಗಳಪ್ಪಾರಾಮಂಗಳಂ ಸ್ಥಾಪಿಸಿಯುಂ ಪೊಚ್ಚದಾಸರೆಯಿಲ್ಲದೆಡೆಗಳಲ್ಲಿ ನಿರ್ಮ್ಮಲಜಲಸಮೃದ್ಧಿಯಿಂದೊಪ್ಪುವನೇಕವಾಪೀಕೂಪತಟಾಕಂಗಳಂ ನಿರ್ಮ್ಮಿಸಿಯುಮಖಂಡಧರ್ಮ್ಮಸಂಪದಮಂ ಕಯ್ಕೊಳಲೊಡಂ ॥೧೫॥

ಕಂ॥ ಅವಿರತಮುಮಾಧರಿತ್ರೀ ।
ಧವನ ಬಹುಪ್ರದನ ಕೀರ್ತಿಜಂದ್ರಿಕೆ ಜಗಮಂ ॥
ಧವಳಿಸಿರೆ ಕೃಷ್ಣಪಕ್ಷ ।
ವ್ಯವಹೃತಿ ಪಂಚಾಂಗಮೊಂದರೊಳೆ ನೆಲಸಿರ್ಕುಂ ॥೧೬॥

ಮತ್ತಂ,

ಕಂ॥ ಕ್ಷಿತಿನುತನಾಸಿಂಹಾಸನ ।
ಪತಿ ಸಹಜಪರೋಪಕಾರಗುಣನಾದುದರಿಂ ॥
ಸತತಂ ಸುರತರುವಂತಾ ।
ಶ್ರಿತಫಲದಂ ಸದ್ವಿಜಾಶ್ರಯನುಮೆನಿಸಿರ್ದಂ ॥೧೭॥

ವ॥ ಇಂತಾವುಂಡಲೇಂದ್ರಂ ದಾನಕೊಂಡನೆನಿಸಿ ಜಗತ್ತಿನೊಳೆಲ್ಲಂನೆಗ
ಳ್ತೆವಡೆದಿರೆಯಿರೆ ॥೧೯॥

ವೃ॥ ಮಳೆಯಕ್ಕುಂ ಕಾಲಕಾಲಕ್ಕುರುತರಕಣಿಶಂದಾಳ್ದದೆಲ್ಲೆಲ್ಲಿಯುಂ ಬ ।
ಲ್ಲೆವಳಿಯಕ್ಕುಂ ಲೋಕಮೆಲ್ಲಂ ಬಹುಳವಿಭವದಿಂ ಕ್ಷೇಮದಿಂ ಬಾಳುತಿರ್ಕ್ಕುಂ॥
ಕಳವುಂ ಕಾರ್ಪಣ್ಯಮುಂ ದುರ್ವಿಷಯಪರತೆಯುಂ ಶತ್ರುಸಂತ್ರಾಸಮುಂ ಪು ।
ಚ್ಚಳಿಯುಂ ಕಷ್ಟಂಗಳುಂ ತನ್ನೃಪತಿತಿಳಕನಾ ರಾಜ್ಯದೊಳ್ಕಂಡುದಿಲ್ಲಂ॥೧೯॥
ಸಿರಿಯುಂ ವಾಣಿಯುಮೀಶಭಕ್ತಿಸತಿಯುಂ ಭೂದೇವಿಯುಂ ಬಂದು ತ ।
ದ್ಧರಣೀಪಾಲನ ದೃಷ್ಟಿಯಂ ವದನಮಂ ಹೃತ್ಪದ್ಮಮಂ ಬಾಹುವಂ ॥
ಪಿರಿದೊಲ್ದಾಶ್ರಯಿಸಲ್ಕೆ ಕೀರ್ತಿವಧು ತಾನೆಯ್ತಂದಿರಲ್ಕಾಣದಾ ।
ಪರಿಯಿಂದಿರ್ಕೆಯ ದೂರಲೆಂಬಿನಮದಂ ಸಾರ್ದಬ್ಧಿಶಾಭ್ಯರ್ಣಮಂ ॥೨೦॥

ಅಂತುಮಲ್ಲದೆ,

ಕಂ॥ ಆವಂ ಸಿಂಹಾಸನಪತಿ ।
ಯಾವಂಮಕರಾದ್ಯನೇಕಬಿರುದಾಂಕಿತನಿ ॥
ನ್ನಾವಂ ವೀರಾಗ್ರಣಿ ಮ ।
ತ್ತಾವಂ ಬಿನ್ನಣಿಗನಿರ್ದನವನಂತಿಳೆಯೊಳ್ ॥೨೧॥

ಖಳಸುಜನರ ಭಾವಮನಾ ।
ಯಿಳೆಯಾಣ್ಮಂ ಗ್ರಹಿಸುತಿರ್ದನಾಲೋಕಿಸಿದಾ ॥
ಗಳೆ ತನ್ನ ಹೃದಯಮಂ ತೋ ।
ರ್ಪ್ಪಿಸನದೇಂ ರಾಜನೀತಿಯೊಳ್ಪಂಡಿತನೋ ॥೨೨॥

ಬಿದಿಗಂ ತನ್ನೃಪಮೌಳಿಗ ।
ಮೊದವಿರ್ದುದಿದೊಂದು ಕಲಹಮಾಧರಣೇಂದ್ರಂ ॥
ಬಿದಿ ಸೃಜಿಸಿದ ದುರ್ಗತರಂ ।
ಸದುದಾರಂ ಗೆಯ್ಯುತಿರ್ದನುರುಸಂಪದರಂ ॥೨೩॥

ಆವನನಾಶ್ರಯಿಸಿರ್ದ ಸು ।
ಧೀವರರ ಗೃಹಾಂಕಣಂಗಳೊಳ್ಕಟ್ಟಿದುವೋ ॥
ಪೀವರಗಜಂಗಳಾ ಭೂ ।
ಮೀವರನೌದಾರ್ಯಗುಣವನೇವಣ್ಣಿಪೆನಾಂ ॥೨೪॥

ನಿರುಪಮಶೌರ್ಯದೊಳರ್ಜುನ |
ನರುಣಂ ತೇಜಸ್ಸಿನಲ್ಲಿ ಸಾಕಕ್ಷಾತ್ಕಪಿಲಂ ||
ನಿರವದ್ಯಜ್ಞಾನದೊಳಾ |
ಧರಣೀಶಂ ಕೃಷ್ಣನೆನಿಸಿದೊಡಮಿದು ಚಿತ್ರಂ ||೨೫||

ಕಾಮನವೋಲ್ಕಮನೀಯಂ |
ರಾಮನವೋಲ್ಸತ್ಯವಾಕ್ಯನಾಹ್ಲಾದಕರಂ ||
ಸೋಮನವೋಲಮಮಾ ಸು |
ತ್ರಾಮನವೊಲ್ಭೋಗವಂತನಾಭೂಕಾಂತಂ ||೨೬||

ಆತನನುದ್ದೀಪಿಸಿ ಧರ |
ಣೀತಲದೊಳನೇಕರೂಪಕೃತಿಗಳನಾಗಳ್ ||
ನೂತನನೂತನಮೆನೆ ಸಂ |
ಪ್ರೀತಿಯೊಳಾರಚಿಸದಿಪ್ಪ ಕಬ್ಬಿಗರಿಲ್ಲಂ ||೨೭||

ವ|| ಮತ್ತವಾನರೇಂದ್ರಂ ಗಜೇಂದ್ರನಂತೆ ಯಾಚಕಕಾಳಪ್ರಿಯದಾನ ವಿಭವನುಂ ಚಂದ್ರನಂತೆ ಭಾಸುರವಸುಗಣಪ್ರಪೂರಿತಾಖಿಲಾಶನುಂ ಬಾಲ ಸೂರ್ಯನಂತನುರಕ್ತಮಂಡಲನುಂ ಧರ್ಮರಾಜನಂತೆ ಭೀಮಸೇನಾನ್ವಿತನುಮಾ ಗಿರ್ದನಂತುಮಲ್ಲದೆ ರಾಮನಂತೆ ಸೀತಾವಿಲಾಸಲೋಲನಾದೊಡಂ ಧರ್ಮಭೂ ಜಕನಲ್ತು ನಾರಾಯಣನಂತೆ ರಮಾವಿಲಾಸನಿರತನಾದೊಡಂ ಭುಜಂಗಪ್ರಂಗ ವೈತಾದರನಲ್ತು ಮಹೇಶ್ವರನಂತೆ ಕಂದರ್ಪದರ್ಪಹರನಾದೊಡಂ ದೋ ಷಾಕರಾನುಷಂಗಿಯಲ್ತಂತುಮಲ್ಲದೆಯುಂ ||೨೮||

ಕಂ|| ಸಾರಸನೇತ್ರಂ ಕುಲಗಿರಿ |
ಸಾರನುದಾರಗುಣಗಣವಿಭೂಷಣನಮೃತಾ ||
ಸಾರಸುಭಾಷಂ ದ್ವಿಷದಪ |
ಸಾರಣಪಟುಶೌರ್ಯನೆನಿಸಿ ನೆರೆ ಮೆರೆದನವಂ ||೨೯||

ವ|| ಇಂತು ನೆಗಳ್ತೆವೆತ್ತಾ ಭೂಕಾಂತನಮಾತ್ಯಪರಿವೃಢನಪ್ಪಪೂರ್ಣ ಯ್ಯನೊಡನೆಳವರೆಯದೊಳ್ಸಜೀವಾಯತ್ತಸಿದ್ಧಿಯಾಗಿಯುಂ ಬಳಿಕ್ಕಿನಸುಕಾ ಲಮುಭಯಾಯತ್ತಸಿದ್ಧಿಯಾಗಿಯುಮೇರುಂಜವ್ವನದೊಳ್ಸಾವಯತ್ತಸಿದ್ಧಿ ಯಾಗಿಯುಂ ಪ್ರಾಜ್ಯವಿಭವದಿಂ ರಾಜ್ಯವನಾಳುತ್ತುಮಿರೆಯಿರೆ ||೩೦||

ಕಂ|| ಬಂದುದು ವಸಂತಸಮಯಂ |
ಬಂದುದು ಮನ್ಮಥನ ಕರಕೆ ಪುಷ್ಪಶರಾಸಂ ||
ಬಂದುದು ಬನಸಿರಿಗೈಸಿರಿ |
ಬಂದುದು ಪಥಿಕರ್ಗೆ ವಿರಹತಿಖಿಸಂತಾಪಂ ||೩೧||

ಆಗಳ್, ಕೋಗಿಲೆಗಳ್ತೋರಿದುವಾ |
ರೋಗಿಸಿ ಮಾವುಗಳ ಚೆಂದಳಿರನಿಂಚರಮಂ ||
ಪೂಗೊಂಜಲ ತನಿವಂಡಂ |
ರಾಗದೆ ಪೀರ್ದಳಿಗಳೆಸಗಿದುವು ಝಂಕೃತಿಯಂ ||೩೨||

ಮತ್ತಂ,

ಕೆರೆಗಳ್ತಣ್ಗಂಪಿನ ಪರಿ |
ಪರಿಯಹ ನೀರ್ವೂಗಳಿಂದಮಂಕುರಿಸಿದ ತಾ ||
ವರೆಗಾವನಾಹರಿಸಿ ನಲಿ |
ವರಸಂಜೆಗಳಿಂದಮಾಗಳೇನೊಪ್ಪಿದುವೋ ||೩೩||

ವ|| ಮತ್ತವಾಗಳೆಲ್ಲೆಲ್ಲಿಯುಂ ಬನಬನಮುಮೊಳ್ಗಂಪನಾಳ್ದಮಲ್ಲಿ ಗೆಯ ನರುಗಂಪನಾಳ್ದರುವಂತಿಯ ಕಡುಗಂಪನಾಳ್ದದಿರ್ಗಂತಿಯ ಮೆಲ್ಗಂ ಪನಾಳ್ದಗೋರಟೆಯ ಬಲ್ಗಂಪನಾಳ್ದಸಂಪಗೆಯ ತನಿಗಂಪನಾಳ್ದಸುರಗಿಯ ತೆಳ್ಗಂಪನಾಳ್ದಸುಗೆಯ ನಿಡುಗಂಪನಾಳ್ದಪಾದರಿಯ ಪೂಗಳಂತೀವಿ ಕಮ್ಮೆಂ ಗಣೆಯನ ಕೈದುಸಾಲೆಯೆಂಬಂತೆ ಕಣ್ಗೊಳಿಸುತ್ತಿರ್ಪಿನಂ ||೩೪||

ಕಂ|| ದರವಿದಳಿತನಾನಾಸುಮ |
ಪರಿಮಳಭರವಾಂತು ಮಂದಮಂದಸ್ಪಂದಂ ||
ಚರಿಸುತಿರೆ ಮಲಯಪವನಂ |
ಪರಿಮಳದ ಕರಂಡಕಂಬೊಲಾಯ್ತಾಭುವನಂ ||೩೫||

ಮತ್ತಂ,

ಗಿಳಿಗಳ್ಪರಿಣತದಾಡಿಮ |
ಫಳಬೀಜಂಗಳತಿಮಧುರರಸಮಂ ಪೀರ್ದ ||
ಗ್ಗಳಿಸಿದ ಮದದಿಂದೇಂಕ |
ಣ್ಗೊಳಿಸದುವೋ ತೊಂಡುಗೆಡೆಯುತುಂ ಬನಬನದೊಳ್ ||೩೬||

ವ ॥ ಅಂತು ವಸಂತೋದಯಮಾಗಲಾಮೇದಿನೀಕಾಂತನಂತಃಪುರ ಸೀಮಂತಿನಿಯರ್ವೆರಸು ಲೋಕರಂಜನಮೆಂಬ ಕೇಳೀವನದೊಳ್ವನವಿಹಾರ ಕ್ಕೆಳಸುವುದುಮಾನೃಪಾಂಗನೆಯರೊಡನೊಡನೆ ಕಡುರಾಗದಿಂ ಸಿಂಗರಂಗೊಂ ಡು ತಮ್ತಮ್ಮ ರಾಣಿವಾಸದ ಪೊಂದೇರ್ಗಳನಡರಿ ಸಡಗರಿಸೆ ರಾಜವಾಹಮ ನೇರಿ ॥೩೭॥

ಕಂ ॥ ಶ್ರೀಕೃಷ್ಣನೃಪಂ ನಿಜರಮ ।
ಣೀಕುಲದೊಡಗೂಡಿ ಕೇಳಿವನಕೊಲವಿಂದಂ ॥
ಶ್ರೀಕೃಷ್ಣಂ ಗೋಪಸ್ತ್ರೀ ।
ಲೋಕಂಬೆರಸಂದು ಬಂದತೆರದಿಂ ಬಂದಂ ॥೩೮॥

ವ॥ ಅಂತು ಬಂದೆತ್ತೆತ್ತಮುಂ ತಣ್ಪುವೆತ್ತಾಪೂದೋಂಟಮುಂ ಬಳ ಸುವಾಗಳ್ಕೆಲಬಲದೊಳಿರ್ದರಸಿಯರಂ ನೋಡಿ ॥೩೯॥

ಕಂ ॥ ಪಲವುಂ ಬಣ್ಣಂ ಕಣ್ಗೊಳಿ ।
ಪಲರ್ದಲರ್ಗಳನಾಂತು ಸೋಡಲೀಬನಸಿರಿಯುಂ ॥
ಪಲವು ಮಣಿಭೂಷಣಂಗಳಿ ।
ನಲಂಕೃತೆಯರಾದ ನಿಮ್ಮವೋಲ್ಸೊಗಯಿಸುಗುಂ ॥೪೦॥

ವ॥ ಎಂಬುದುಮಾಬನದ ಸೊಬಗಂ ಕಟ್ಟಿರಕದಿಂದೆಲ್ಲರುಂ ನಿಟ್ಟಿ ಸುತ್ತಿರ್ದವಸರದೊಳೊರ್ವ ಸರಸವತಿಪುರಸನಂ ನಿರುಕಿಸಿ ಬಳಸಂದು ॥೪೧॥

ಕಂ ॥ ಅರಲಾಂತೆಸೆವೀಮಲ್ಲಿಗೆ ।
ಯರಸ ಕವಲ್ತೆರಡು ಬಳ್ಳಿಗಳಿನಿಂತೀಮಾ ॥
ಮರನಂ ಬಿಗಿದಪ್ಪಿದುದೆಂ ।
ದೆರಡುಂ ನಳಿತೋಳ್ಗಳಿಂದಮಪ್ಪಿದಳೊಲವಿಂ ॥೪೨॥

ವ॥ ಅಂತಾಲಿಂಗಿಸಿದ ಲತಾಂಗಿಯ ಮೆಲ್ಪುವೆತ್ತ ಸಿರಿಮೆಯ್ಯ ಸೋಂ ಕಿಗೆ ಮೆಯ್ಮರೆದು ಪೊಂಪುಳಿವೋದ ಮಾರಾಯನ ಕಯ್ದಾವರೆಯಂ ಪಿಡಿದು ಮುತ್ತೊರ್ವ ಮತ್ತಕಾಶಿನಿ ॥೪೩॥

ಕಂ ॥ ಮಾರಾಯನೆ ಬಿಜಯಂಗೆ ।
ಯ್ಸಾರಭವತ್ಪುಷ್ಪಗುಚ್ಛವಿಹರನ್ಮದಭೃಂ ॥

ಗಾರವದಿಂ ಬಗೆಗೊಳ್ವೀ |
ಗೋರಟೆಯಡಿಯಲ್ಲಿ ಪೂಡಿದುಯ್ಯಲ್ಲೊಲವಿಂ ||೪೪||

ವ|| ಎಂದು ಮೆಲ್ಲೆಲ್ಲನಡಿಯಿಡುತ್ತಾಮುರನಂ ಸಾರ್ದು ಕಡುರಾಗದಿಂದರಸಂಬೆರಸು ಪೊನ್ನುಯ್ಯಲೊಳ್ಕಂಡಿಸಿ ಮಿರುಮಿರುಗುವತ್ತಿತ್ತಣ ಪಿಂಜರಿಯ ನೇಣ್ಗಳನೆರಡುಂ ಕರಪಲ್ಲವಂಗಳಿಂ ಪಿಡಿದು ಲೀಲೆಮಿಗೆ ಮೆಲ್ಲಡಿಗಳಿಂ ಪೊಡವಿಯಂ ಮೆಟ್ಟಮೆಟ್ಟಿ ||೪೫||

ಕಂ|| ಅಲರುಗೆ ಮುಡಿಯಿಂ ನೂಪುರ |
ವಲಯಾರವಮುಣ್ಮೆ ಪಟ್ಟಳಿಗೆಯಾ ನೆರಗು ||
ಚ್ಚಲಿಸಲೆಡೆಯಾಡೆ ಹಾರಂ |
ಲಲಿತಾಂಗಂ ಬಳ್ಕಲುಯ್ಯಲಂ ತೊನೆಯಿಸಿದಳ್ ||೪೬||

ವ|| ಅಂತಾಮಹೀಕಾಂತನಾಕಾಂತೆಯ ಮೆಲ್ಮೆಯ್ಯ ತನಿಸೋಂಕಿಗಾದಂ ಸೊಗವಡುತ್ತೆ ಕಂಠಾಲಿಂಗನಂಗೆಯ್ದು ||೪೭||

ಕೆಂ|| ಅಲರ್ವಕ್ಕಿಗಳಿಂಚರದಿಂ |
ದಲರ್ದಲರೊಳ್ಗಂಪಿನಿಂದೆ ನಿನ್ನೀವೊನ್ನು ||
ಯ್ಯಲ ತೂಗಾಟದಿನೆಲೆಕೋ |
ಮಲೆಯೇನಾಳ್ದಪುದೊ ಸೊಗಮನೆನ್ನೊಡಲಮಮಾ ||೪೮||

ವ|| ಎಂದು ನುಡಿವುದುಮಾನಳಿನಮುಖಿ ಶಿಳೀಮುಖಬಾಧೆಯಿಂ ಬೆಳ್ಪಳಸಲಾಯಿಳಿಯಾಣ್ಮನೆಲೆಭೀರುವೆ ಬೆದರಬೇಡ ಬೆದರಬೇಡ ನೋಡು ನೋಡು ||೪೯||

ಕಂ|| ಬಗೆದಬ್ಜಮೆಂದು ನಿನ್ನಯ |
ಮೊಗಮಂ ತೊನೆತೊನೆವ ಪೂದೊಡಂಬೆಗಳಿಂ ಸಾ ||
ರ್ದಗಿದಿದೊ ನಾಸಿಕಮಂ ಸಂ |
ಪಗೆಗೆತ್ತಳಿಗಳ್ಮರಲ್ದುವೀಗೋರಟೆಯೊಳ್ ||೫೦||

ವ|| ಎಂದು ಸಂತವಿಟ್ಟಾಕಾಂತೆವೆರಸುಯ್ಯಲನಿಳದಲ್ಲಲ್ಲಿ ಕಿರಿದುಪೊಳ್ತು ಬಳ್ಳಮುಂಟಪಂಗಳೊಳ್ಮೆಯ್ಗರೆದಿರ್ದರಸಿಯರನರಸರಸಿ ಪಿಡಿಪಿಡಿದು ಸಮುಲ್ಲಾಸದಿಂ ಕೋಲಾಹಲಂಗೆಯ್ಯುತುಮನಿತರೊಳ್ಪರಿಮೆಯ್ಯೆಲ್ಲಂ ಬೆಮ

ರೆ ನೆರೆಬಳ್ದಲ್ಲಿಯ ವಿಜೆತ್ರತರವಾದ ಮುಂಟಪಸ್ಥಾನದೊಳ್ಕರಿದುಪೊಳ್ತು ವಿ
ಶ್ರಾಂತಿಯಂ ಪಡೆದಾವಿಧುಮುಖಿಯರಿಂದೊಡವೆರೆದು ಮಧುರತರಫಲಭಕ್ಷ್ಯ
ಭೋಜ್ಯಂಗಳನಾಹರಿಸಿ ವೀಳಯಂಗೊಂಡು ಸರಸಪರಿಹಾಸಂಗೆಯ್ಯುತುಂ
ಕಿರಿದುಪೊಳ್ತಲ್ಲಲ್ಲಿ ಮೆಲ್ಲಲ್ಲನಡಿಯಿಡುತ್ತರೆವಿರಿದಪಲವ್ವುಮಲರ್ಗಳ ನಡು
ಗಂಪಸುಯ್ತರ್ಪ ಬೈಗುಂಬೊಳ್ತಿನ ತೆಂಬೆಲರ ಮೆಲ್ಪೊಂಕಿನಿಂ ಸುಹಿತನಾ
ಗಿ ವಾಯುಸಂಚಾರಂಗೆಯ್ಯುತುಮಿರ್ದಿಂತು ವನವಿಹಾರಮಂ ತೀರ್ಚಿ ಮು
ಗುಳ್ದ ನೆಲೆವನೆಯಂ ಪುಗುತಂದಲ್ಲಿಂಬಳಿಯಮೊಂದುದೆವಸಂ ವಸಂತೋತ್ಸ
ವಮುಂ ಮನದಂದಂತಃಪುರಪುರಂಧ್ರಿಯರಿಂದೊಡವೆರೆದರಮನೆಯ ವಸಂತಶಾ
ಲೆಯಂ ಪೊಕ್ಕನಂತವಿಭವದಿಂ ವಸಂತಪೂಜೆಯನಾಗಿಸಿ ರಾಗದುದ್ರೇಕದಿಂ
ದೋಕುಳಿಯನಾಡಿಯುಮಂತು ಮಗುಳ್ದೊಂದು ದೆವಸಮುಳ್ಳಿಯಿಂದರವೆಂಗ
ಳಿಂದೊಡಗೂಡಿ ಚಂದ್ರಶಾಲೆಯೊಳ್ಸರಸಸಲ್ಲಾಪಂಗೆಯ್ಯುತೆ ಬೆಳ್ದಿಂಗಳೂಟ
ಮುಂ ಮಾಡಿಯುಂ ಮನೋವಿನೋದಮುಂ ಪಡೆದು ಭೋಗದೇವೇಂದ್ರನೆನಿಸಿ
ನಿರತಿಶಯಸುಖಸಾಮ್ರಾಜ್ಯದೊಳಿರ್ದನೆಗಂ ॥೫೧॥

ಕಂ ॥ ಸಲಿಲಾಶಯಂಗಳೊಳ್ಕೀ ।
ತಳಭಾವಮದೃಶ್ಯಮಾಗೆ ಬೆಂಗಾವಲಿವೋಲ್ ॥
ನೆಲನುರೆ ಕಾಯ್ವೇರೆ ಬಿಸಿ ।
ಲ್ದಳವೇರೆ ಬೆದರ್ಚಿತಹಹ ಬೇಸಗೆ ಜಗಮಂ ॥೫೨॥

ವ॥ ಆಗಳ್,

ಕಂ ॥ ಬಿರಯಿಗಳಂ ಮಧುಮಾಸದೆ ।
ಪರಿತಪಿಸಲ್ಕವರ ಶಾಪದಿಂ ಯಕ್ಷ್ಮಗದಂ ॥
ದೊರೆಕೊಂಡುದೆನಲ್ಬಂದನ ।
ಗಿರಿತಲ್ಪಂಬತ್ತಿ ಮಿಡುಕದಿರ್ದಂ ಪವನಂ ॥೫೩॥

ವ॥ ಅಂತಪ್ಪಾಕಡುವೇಸಗೆಯ ಬೇಗೆಯಂ ತಾಳಲಾರದಾಮುಂಡಲೇಂ
ದ್ರನ ಪೆಂಡವಾಸಮರಮನೆಯ ವಿಲಾಸವನದೊಳ್ಜಲಕೇಳಿಗೆಳಸುವುದುಮಾ
ಮರುದೆವಸಮೆ ॥೫೪॥

ಕಂ ॥ ನಿರವಧಿಕೊಲ್ಲಾಸದೊಳಾ ।
ನರಪಾಲೋತ್ತಂಸರತ್ನನಾನಿಖಿಲಾಂತಃ ॥

ಪುರಕಾಂತೆಯರೊಡನಾಸುಂ |
ದರಮಾದ ವಿಲಾಸವನಕೆ ಬಿಜಯಂಗೆಯ್ದುಂ ||೫೫||

ವ|| ಅಂತು ನಡೆತಂದು ಸಲ್ಲೀಲೆಯಿಂದಲ್ಲಲ್ಲಿ ಸಂಚರಿಸುತ್ತಲಂಪಿನಿಂ ಸೊಂಪುವೆತ್ತ ಬಳ್ಳಿಗಿಡುಗಳೊಳ್ಬಗೆಗೊಳ್ವ ಬಗೆಬಗೆಯ ಕಮ್ಮಲರ್ಗಳಂ ಚೆಂದಳಿರ್ಗಳಂ ಕೊಸ್ಯುತ್ತೆ ಬಿನದಿಸುತ್ತಿಪ್ಪರಸಿಯರೊಳ್ಕಿರಿದುಪೊಳ್ತು ಸರಸಪರಿಹಾಸಂಗಳಂ ಗೆಯ್ದು ಬಳಿಕಮವರೊಡನೆ ಕಟ್ಟರಕದಿಂದಾಬನದ ನಟ್ಟನಡುವೆ ಕಣ್ಗೆಡ್ಡವಾದ ಲೀಲಾಸರೋವರಮನೆಯ್ದೆವಪ್ಪುದುಂ ||೫೬||

ಕಂ || ತಾರುಣ್ಯವತಿಯರೆನಿಸಿ |
ದರ್ಯಾರಾಜಾಂಗನೆಯರಾಸರೋವರತಟದೊ ||
ಳ್ಕಾರಾಜಿಸಿದರ್ತಟರುಹ |
ಚಾರುತರಸ್ವರ್ಣಲತೆಗಳೆಂದೆಂಬಿನೆಗಂ ||೫೭||

ವ|| ಅಂತರಸನೊಡನೆ ನಡೆತಂದಾಮಡದಿಯರಡಿಗಡಿಗೆ ನೇವುರಂಗಳಿಂಚರಂ ಗೆಯ್ಯೆ ಮೆಲ್ಕೆಲ್ಲನೆ ಸಲ್ಲೀಲೆಯಿಂಸುಮನೋರಮಸೋಪಾನಪಙ್ತಿಯಸಿಳದನತಿಗಂಭೀರಮಪ್ಪ ವಾರಿಯೊಳಗೆ ನಿಂದು ಕಡುರಾಗದಿಂ ನೀರಾಟಕ್ಕೆ ತೊಡಗಲೊಡಂ ||೫೮||

ಕಂ || ಒಲವಾಂತ ರಾಜಹಂಸೀ |
ಕುಲದಿಂದೊಡಗೂಡಿ ವರ್ಣನೀಯಗುಣಾಢ್ಯಂ ||
ಕೊಳನೊಳಗೆ ಸಾಧುಪಕ್ಷಂ |
ವಿಲಾಸದಿಂ ರಾಜಹಂಸನೇಂವಿಹರಿಕುಮೋ ||೫೯||

ವ|| ಆಗಳ್,

ಕಂ || ಪರಿಹಾಸಮೆಸಗುತರಸಂ |
ಕರತಳದಿಂ ದೊಲ್ದು ಸೂಸಿದಮಲಾಂಬುಕಣೋ ||
ತ್ಕರಮೊರ್ವರಸಿಯ ಮುಖಹಿಮ |
ಕರಬಿಂಬದ ಸುತ್ತುಮೆಸೆದುದುಡುವಿತತಿಯೆನಲ್ ||೬೦||

ಕಂ || ಸರಿಸವತಿಯೊಳೋಲಾಡು |
ತ್ತಿರಲರಸನದೊರ್ವಮಹಿಳೆ ಮುಳಿದಾತನ ಮೇ ||

ಗರುಣನಯನಾಂತರುಚಿಬಂ |
ಧುರತರಮಂ ಸೂಸಿದಳ್ಕಟಾಕ್ಷೋತ್ಕರಮಂ ||೬೧||

ಕಂ || ಅರಸನದಂ ಕಂಡೆಳನಗೆ |
ನೆರಸೆಲ್ಲರೊಳಂ ಸಮಾನಮಪ್ಪೊಲವಿಂದಂ ||
ಸರಸಪರಿಹಾಸಮೆಸಗು |
ತ್ತೆರಡುಂಕಯ್ಗಳಿನಿದಿರ್ಚಿ ಸೀರಂತಳಿದಂ ||೬೨||

ವೃ || ಬಾರಿಸಲಾರದೊರ್ವರಸಿ ತಜ್ಜಲಶೀಕರಘಾತಮಂ ಮುಖಾಂ |
ಭೋರುಹಮಂ ಮಗುಳ್ಚಿ ನಸುಕೊಂಕಿದಪಾಂಗದೆ ಮೆಚ್ಚಿ ನೋಡಿದ ||
ಳ್ನೀರನನೊರ್ವಬಾಲೆ ತಲೆವಾಗಿ ಕರಂಗಳನೊಡ್ಡಿ ಲೀಲೆಯಿಂ |
ಭೋರನೆ ಸಾರ್ದು ಕಯ್ಗಳೆರಡಂ ಪಿಡಿದಳ್ನಗೆಗೂಡಿ ರಾಯನಾ ||೬೩||

ವ|| ಆಸಮಯದೊಳ್,

ವೃ || ಮಣಿಮಯಕಂಕಣಂಗಳುಲಿದಾಡೆ ನೃಪಾಂಗನೆಯರ್ಕಳೆಲ್ಲರುಂ |
ಕ್ಷಣರುಚಿಯಂದದಿಂದೆ ಸಿಲುಮೆಯ್ಯೊಲೆದಾಡೆ ಮನೋಜ್ಞರತ್ನಭೂ ||
ಷಣಕಿರಣಂಗಳಿಂ ಸುರಪಚಾಪಮನಾಗಿಸುತೊಲ್ದು ಕಯ್ಗಳಿಂ |
ದಣಿಯರಮಂಬುವಂ ನೆರೆ ನಗುತ್ತವನೀಂದ್ರನ ಮೇಗೆ ಸೂಸಿದರ್ ||೬೪||

ವ|| ಇಂತಾನೃಪಕಾಂತಾಜನಂ ನೀರಾಟಮನಾಡಿ ನೆರೆ ಬಳಲ್ದು ತಟಗತವಾದ ವಿಚಿತ್ರತರಲೀಲಾಭವನಮಂ ಸಾರ್ದು ನಾಂದು ಮೆಯ್ಗೆ ಪತ್ತಿರ್ದುಡಿಗೆಯಂ ತೆಗೆದು ಸಿರಿವಿಡಿದಿಟ್ಟಿರ್ದ ಬೆಲೆಯೇರಿದ ಪಟ್ಟಣಿಗೆಯನುಟ್ಟನು ಪದವೆ ಪರಿಜನಂ ಮಂಡೆಯನಾರಿಸಿ ಯಾವನಧೂಪದಿಂ ಹಸನಾದ ಪೊಸಗಂ ಪನೇರಿಸಿ ಪರಿವಡೆದ ತುದಿಜಡೆಯಂ ಪೆಣೆವುದುಂ ಬಳ್ನಡುಗೆ ಮುತ್ತಿನುಡೆನೂಲನಳವಡಿಸಿ ಸಡಿಲ್ದ ಮಣಿಭೂಷಣಂಗಳಂ ಸಾವಗಿಸಿ ಮನವೊಪ್ಪಿದಂತೆ ಪೆರೆವಣಿಗೆ ಕುಂಕುಮದ ಬೊಟ್ಟನಂದಂಗೊಳಿಸಿ ನುಣ್ಗೊರಲ್ಗೆ ನಿರತಿಶಯಪರಿಮಳಾನುಬಂಧಮಂ ಗಂಧಮಂ ತಿಗುರಿ ಸೋರ್ಮಡಿಗೆ ಕಮ್ಮಲರಂ ಸೂಡಿ ಸಿಂಗರಂಗೊಳೆ ತಾನುಮಾಯಿಳೆಯಾಣ್ಮಂ ತೀರಮಂ ಸಾರ್ದು ಮಡಿಯುಟ್ಟು ತಿಲಕಾದಿಗಳಿಂದಲಂಕೃತಶರೀರನಾಗುವುದುಮೆಲ್ಲರುಂ ಸರಸಸಲ್ಲಾಪಂಗೆಯ್ಯುತ್ತೆ ಸಾರತರಾಭ್ಯವಹಾರತಾಂಬೂಲಂಗಳಂ ಪರಿಗ್ರಹಿಸಿ ಸಮುಗ್ರಸವ್ಮೋದದಿಂ ತಮ್ತಮ್ಮ ನೆಲೆವಾಡಮನೆಯ್ದಲಲ್ಲಿಂಬಳಿಯಂ ||೬೫||

ಕಂ || ದಿನದಿನಮಿಂತೇರುಂಜ |
ವ್ವನದುರ್ಕಿಂ ವಿಪುಲರಾಜ್ಯವಿಭವದ ಸೊರ್ಕಿಂ ||
ದನುಪಮಶೃಂಗಾರಮಹಾ |
ವನಧಿಯೊಳೋಲಾಡುತಿರ್ದನಾನಾಡೊಡೆಯಂ ||೬೬||

ವ|| ಇಂತಿಪರ್ಕಾಗಳ್ಕಂದುಪನಪ್ಪ ಪೂರ್ಣಾಯ್ಯಂ ವಿಶ್ರಾಂತಿಸುಖಕ್ಕೆಳಸಿ ಮಾರಾಯನಿಂ ಮನ್ನಣೆಗೊಂಡು ರಾಜಧಾನಿಯಂ ಪೊರಮಟ್ಟಾತ್ಮಜನ್ಮಸ್ಥಾನಮಂ ಶ್ರೀರಂಗಪತ್ತನಮಂ ಸೇರ್ದಲ್ಲಿ ಕಿರಿದುಕಾಲಂ ಸೊಗದಿನಿರ್ದು ಸುರಲೋಕಸೋಪಾನಸರಣಿಯನಡರಲೊಡನಾಮಾರಾಯಂ ರಾಮರಾಯನೆಂಬ ಸೇನಾಧ್ಯಕ್ಷನಂ ಮಂತ್ರಿಪದವಿಯೊಳಿರಿಸಿ ನಿಜಮತಿನೈಪುಣ್ಯದಿಂ ಸ್ವಾಯತ್ತಸಿದ್ಧಿಯಾಗಿ ರಾಜ್ಯಭಾರಂಗೆಯ್ಯುತ್ತಿರ್ಪನಂ ||೬೭||

ಕಂ || ಈವೀರಕೃಷ್ಣನೃಪನಂ |
ತೀವಸುಧೆಯನಿಂತು ನಿರವಧಿಕಸುಖದಿಂದೊ ||
ಲ್ದೋವಿದನಿನ್ನೆವರಂ ನೃಪ |
ನಾವನುಮಿಲ್ಲೆಂದು ಪೊಗಳುತಿರ್ದುದು ಲೋಕಂ ||೬೮||

ವ|| ಇಂತು ಕೆಲಕಾಲಮಾನರಪಾಲನರಸುಗೆಯ್ಯುತುಮಿರ್ದಮಾತ್ಯನಪ್ಪ ರಾಮರಾಯನ ರಾಜಭಕ್ತಿಗಂ ರಾಜ್ಯಭಾರಧುರಂಧರತೆಗಂ ಸತ್ಯಸಂಧತೆಗಂ ಮೆಚ್ಚಿ ನಚ್ಚಿ ಸನ್ಮಾನಂಗೆಯ್ದಖಂಡರಾಜ್ಯದ ಸರ್ವಾಧಿಕಾರಪದವನ್ಮತಂಗಿತ್ತು ಯೌವನಪ್ರಾಭವದಿಂ ಶೃಂಗಾರಲೋಲನಾಗಿ ಸುಖಸಾಮ್ರಾಜ್ಯಪದವಿಯನನುಭವಿಸುತ್ತಿರ್ಪನೆಗಂ ||೬೯||

ಕಂ || ಖಳರೇಳ್ಗೆಯಪಾದುದಾಸಾ |
ಡೊಳಗೆ ಜನಂ ದುಷ್ಕರ್ಮಿಗಳದುರುಳಿಂ ಕೋ ||
ಟಳೆಗೊಂಡಿಳೆಯಾಣ್ಮನ ಕ |
ಟ್ಟಳೆಯನತಿಕ್ರಮಿಸಿ ನಡೆಯಲಾರಂಭಿಸಿದರ್ ||೭೦||

ವ|| ಮತ್ತಂ,

ಕಂ || ರಾಯಂಗೆ ತಕ್ಕಂ ಕುಡುವ ಸಿ |
ದ್ಧಾಯಮನೊಪ್ಪಿಸದೆ ನಿಖಿಲಸಾಮಂತಮಹೀ ||

ನಾಯಕರಂದಂದಿರದ |
ನ್ಯಾಯದಿನೂರೂರ ಸೂರೆಗಾರಂಭಿಸಿದರ್ ||೭೧||

ವ|| ಇಂತಾರಾಜ್ಯದ ಕಟ್ಟು ಸಡಿಲೆ ನಾಡೊಳೆಲ್ಲೆಲ್ಲಿಯುಂ ಮೂಡಿದ ಕೇಡುಗಳಂ ಕೇಳ್ದು ಬಂಗಾಳದೊಳಿರ್ದಾಂಗ್ಲೇಯಸರ್ವಾಧಿಕಾರಿ ಶತ್ರುನಿಗ್ರಹಂಗೆಯ್ವಾಮಿತ್ತ ರಾಜ್ಯಂ ಪೂರ್ಣಾಯ್ಯನವಸಾನದಿಂದೆಯುಮಂತಪ್ಪಮೃತ್ಯಂ ಪೆರನೊರ್ವನಿಲ್ಲದುದರಿಂದೆಯುಮತ್ಯುದಾರಶೀಲನಾಭೂಮಿಪಾಲಂ ಕಂಡಕಂಡರ್ಗವರವರೆಳಸಿದಂತೆ ಮಿತಿಮೀರಿದೈಸಿರಿಯಂ ಕೂಡಲ್ಕೆ ತೊಡಗಿದುದರಿಂದೆಯುಂ ಬಹುನಾಯಕಮಾಗಿ ಕಟ್ಟಳಿದು ಕಿಡುತ್ತೆ ಬಂದುದಾಮಿಗಳುದಾಸೀನರಾಗಿರ್ದೊಡೆಲ್ಲೆಲ್ಲಿಯುಮಿನ್ನುಂ ಕೇಡಾಳಿಗಳ ಹಾವಳಿಪೆರ್ಚುಗುಮಾಗಳದಂ ತಿರ್ದುವುದೆಮಗಮಸದಳವುಕ್ಕುಮದಲ್ಲದೆಯುಂ ದಾನಕೌಂಡನೆನಿಪಾಮುಂಡಲೇಂದ್ರಂ ನಾಡೆಲ್ಲಮಂ ಪಲವಸುಗೆಯುಂ ಮಾಡಿ ಪಲಬರ್ಗೆ ನೀಡಿ ನಿರಾಧಾರನಾಗಲೇನುಂ ಸಂದೆಯಮಿಲ್ಲವುದರಿಂದಾರಾಯಂಗಪಾಯನಿಲ್ಲದಂತುಪಾಯದಿಂದದನೀಗಳೆ ನೇರ್ಪಡಿಸವೇಳ್ಕುಮೆಂದು ಹಿತಜೆಂತನಂಗೆಯ್ದಾತನಭಿಮತಿಯಿಂದಾರಾಜ್ಯಮನಾತ್ಮಾಯತ್ತಮಂ ಮಾಡಿಕೊಂಡಾತ್ಮೀಯನಪ್ಪೊರ್ವಹೂಣಾಧಿಕಾರಿಯಂ ಪ್ರಬಲತರಸೇನೆಯೊಡನುಪರಾಜಧಾನಿಯೆನಿಸಿದ ಬೆಂಗಳೂರೊಳ್ಕರ್ಣಾಟರಾಜ್ಯದ ಸರ್ವಾಧಿಕಾರಪದವಿಯೊಳ್ನಿರಿಸುವುದುಮಾತಂ ದುಷ್ಟರಂ ನಿಗ್ರಹಿಸಿಯುಂ ಶಿಷ್ಟರಂ ಪರಿಗ್ರಹಿಸಿಯುಂ ಮುನ್ನಿರ್ದರಾಯಗಟ್ಟಲೆಗಳಂ ಕಟ್ಟಳಿಯದಂತು ನೆಲೆಗೊಳಿಸಿಯುಂ ಕಡುಜೇಗನಾನಾಡೆಲ್ಲಮಂ ತನ್ನಾಜ್ಞೆಗೊಳಗಾಗಿಸಿ ಕಂದುಕುಂದುಗಳೇನೊಂದುಮಿಲ್ಲದಂದದಿಂ ನೇರ್ಪಡಿಸಿದನೆಂಬೆಡೆಯೊಳ್ ||೭೦||

ಕಂ || ಮರೆವೊಕ್ಕವರಂ ಬಿಡದ |
ಳ್ಕರಿನಿಳೆಯೊಳದೊರ್ಮೆ ಕಾದ ಪಲಬರನಾಂ ಕೇ ||
ಳ್ದರಿದಪೆನಿಂತಾಂಗ್ಲೇಯರ |
ತೆರದಿಂ ನೆರವಾಗಿ ಪಲವುಸೂಳ್ತಾದರದಾರ್ ||೭೫||

ವ|| ಇಂತು ನಿಜರಾಜ್ಯದ ಸರ್ವಾಧಿಕಾರಪದವಮಾಂಗ್ಲೇಯರಧೀಸಮಾಗಲತ್ಯುದಾರಪ್ರಕೃತಿಯುಪ್ಪನಪತಿ ನಾಡಿನ ರಾಜಾಯದೊಳ್ಸಲ್ವ ಧನಭಾಗದಿಂದಳಮುಸೊಮ್ಮ ಜೇಷಾಪದಮಂ ಪೊದಲುತನೇಕಸಜೆವರಮುಖದಿಂ ನ

ಡೆಯಿಸುತ್ತೆ ನಿರಂತರಮುಂ ಕೆರಿದುಪೊಳ್ತಂಸರಮೇಶ್ವರಪರ್ಯುಪಾಸನಸುಖಾ
ನುಭವದೊಳಂ ಕೆರಿದು ಪೊಳ್ತನಾಸ್ಥಾನಮಂಟಪದೊಳನೇಕವಿದ್ವನ್ಮಣಿಗಳೊ
ಡವೆರೆದು ವೇದವೇದಾಂತಪುರಾಣೇತಿಹಾಸಾರ್ಥಸಾರವಿಚಾರದೊಳಂ ಕೆರಿದು
ಪೊಳ್ತಂ ರಾಣಿವಾಸಂಬೊಕ್ಕ ಮನೋವಿನೋದಂಮಿಗೆ ತನ್ನರಸಿಯರ ಕೂ
ಟದೊಳಾಟಪಾಟಂಗಳೊಳಂ ಪ್ರಮದಾವನವಿಹಾರಾದಿಗಳೊಳಂ ನಿಡಿದು ಪೊ
ಳ್ತಂ ಬಹುಕಾಲದಿಂದರಮನೆಯೊಳಿರ್ದಪಾರಧನಸಂಪತ್ತಿಯಿಂದರ್ಥಿಜನವ
ನೋರಥಪೂರಣದೊಳಮಾಶ್ರಿತಜನಪರಿಪಾಲನವ್ಯಾಸಂಗದೊಳಂ ನೂಂಕು
ತ್ತೆ ಶಿವಪೂಜಾಧುರಂಧರನುಂ ನಿಖಿಲಕಲಾವಿಚಾರದನುಂ ರಸಿಕಜನಶಿರೋಮ
ಣಿಯುಮರ್ಥಿಜನಪ್ರತ್ಯಗ್ರಕಲ್ಪದ್ರುಮನುಂ ಶರಣಾಗತಪರಿತ್ರಾಣಧುರೀಣನು
ಮೆನಿಸಿರ್ದನಿಂತಿಪರ್ವಾಗಳ್ ॥೭೪॥

ಕಂ॥ ಜನಪದಜನಪದದಿಂದಾ ।
ಜನಪತಿಯೆಡೆಸಂದ ವಿಬುಧರಾತನ ಸನ್ಮಾ ॥
ನನಕೊಲ್ದಾಮಹಿಸುರಪ ।
ತ್ತನದೊಳೆ ತಮ್ತಮ್ಮ ದೇಶಮಂ ಮರೆದಿರ್ದರ್ ॥೭೫॥

ವೆ॥ ಅಂತಾಗಳ್,

ಕಂ॥ ಪಲವುಂ ನಾಡುಗಳಿಂದಂ ।
ಪಲಬರ್ನಡೆತಂದು ನೆಲಸಿದುದರಿಂ ಸುಧಿಗಳ್ ॥
ನೆಲದೊಳ್ಮಹಿಶೂರಪುರಂ ।
ಸಲೆವಿದ್ವದ್ರಾಜಧಾನಿಯೆಂದೆನಿಸಿರ್ಕುಂ ॥೭೬॥

ವೆ॥ ಇಂತಿಪರ್ವಾಗಳಾಯಿಳಾಪತಿಶೇಖರಂ ಲೋಕಾನುಗ್ರಹಾರ್ಥದಿಂ
ಸಂಸ್ಕೃತದೊಳಂ ಕನ್ನಡದೊಳಂ ಶ್ರೀತತ್ವನಿಧಿ, ಗಣಿತಸಂಗ್ರಹಂ, ಸ್ವರ
ಚೂಡಾಮಣಿ, ಸೌಗಂಧಿಕಾಪರಿಣಯಂ, ಸವ್ಯಾಖ್ಯಾನಂಸಂಖ್ಯಾರತ್ನಕೋಶಂ,
ಶ್ರೀಕೃಷ್ಣಕಥಾಸಾರಸಂಗ್ರಹಂ, ಆರ್ಯಾರಾಮಾಯಣಂ, ಮಹಾಕೋಶಸು
ಧಾಕರಂ, ಚಾಮುಂಡೇಶ್ವರೀತ್ರಿಶತಿ, ಶ್ರೀಕಂಠೇಶ್ವರತ್ರಿಶತಿ, ಮಹಾವಿಷ್ಣು
ತ್ರಿಶತಿ, ಗಣಪತಿತ್ರಿಶತಿ, ಮೊದಲಪ್ಪನೇಕಗ್ರಂಥಂಗಳಂ ಸುಲಭಶೈಲಿಯಿಂ
ವಿರಚಿಸಿಯುಂ ಶ್ರೀಮದ್ಭಾಗವತ ಭಾರತರಾಮಾಯಣಾದಿಮಹನೀಯಗ್ರಂ

ಥಂಗಳಂ ಕನ್ನಡನುಡಿಯಿಂಬೇಕಿಸಿಯುಂ ಧರಣಿಯೊಳ್ನಿರುಪಮಪ್ರಖ್ಯಾತಿ
ಯಂ ಸಂಪಾದಿಸಿದನಿಂತು ಕೆಲಕಾಲಂ ಕಳೆಯೆ ॥೩೩॥

ವೃ ॥ ಅಸದೃಶಗುಣನಂ ಶ್ರೀಕೃಷ್ಣರಾಜೇಂದ್ರನಂ ದಿ ।
ಟ್ಟಿಸಲೆನೆ ಮಗುಳ್ದಂ ಬಂದತ್ತು ಸಿದ್ಧಾರ್ಥಿವರ್ಷಂ ॥
ಲಸದಮೃತಮಯೂಖೋದ್ಗಾರನಂ ಸುತ್ತಿಮತ್ತೀ ।
ಕ್ಷಿಸಲೆಳಸನದಾವಂ ಪೂರ್ಣಿಸೂಚಂದ್ರನಂ ತಾಂ ॥೩೪॥

ವೆ॥ ಅಂತಾಸಂವತ್ಸರಂ ಬಹ್ವರ್ಥವುಮೂಮುಹಾರಾಜಂ ವಿಧಿವಿಹಿತ
ವಾರ್ಗದಿಂದತಿವೈಭವದಿಂ ವರ್ಷವೃದ್ಧ್ಯಭಿಷೇಕೋತ್ಸವಮಂಗಳಮುಂ ಪಡೆ
ದು ಭೂಸುರರ್ಗೆ ನಾನಾವಿಧಮಹಾದಾನಸಂಗಳಂ ಮಾಡಿ ನೀಡುಂ ಸಂತಸದಿಂ
ಕನಕಮಯಸಿಂಹಾಸನವನೆಸೆವಿ ಬಹುವಿಧರಾಜೋಪಚಾರದಿಂ ಮೆರೆಯು
ತ್ತೊಡ್ಡೋಲಗಂಗೊಟ್ಟುರುತರಭಕ್ತಿಯಿಂದಖಿಲದೇವತಾರಾಧನಂಗೆಯ್ದು ದೇ
ಶದೇಶಂಗಳಿಂದೇಳ್ತಂದಸಂಖ್ಯಾಕರಪ್ರಾರ್ಥಿಗಳಂ ದಾನಮಾನಂಗಳಿಂದಾದಂಸ
ತ್ಕರಿಸಿ ನಿರವಧಿಕಧರ್ಮಕೀರ್ತಿಗಳನುಪಾರ್ಜಿಸಿದಂ ॥೩೫॥

ವೆ॥ ಇಂತಾಗಳ್,

ಕಂ ॥ ಎರೆಯಲ್ತಾರ್ಥಿವಶೇ ।
ಖರನಂ ಬಂದರ್ಥಿಪತತಿಸಾಧಿಸಿಸಲಿಮು ॥
ಸ್ತರಧನವನಾಗೆಸಿದ್ಧ ।
ರ್ವೊರೆದುದು ಸಿದ್ಧಾರ್ಥಿವರ್ಷಮುನ್ಪರ್ಥತೆಯಂ ॥೩೦॥

ಕಂ ॥ ಅಂತಿಪ್ಪಿನಮಾಧರಣೀ ।
ಕಾಂತನಕಮನೀಯಪಗ್ರಹಂ ಸುದುಪಿಂದಾ ॥
ಕ್ರಾಂತಂ ತಾನಾದುದು ಹೇ ।
ಮಂತದಿನಾಕ್ರಾಂತಮಾದವೋಲ್ಪದ್ಮವನಂ ॥೩೧॥

ವೆ॥ ಆಗಳ್,

ವೃ ॥ ಸತಿಯರನಯ್ವರಂ ಮದುನೆಯಾದೊಡನೆಮ್ಮಯ ಭೂಮಿವಲ್ಲಭಂ ।
ಕ್ಷಿತಿಭೃತಿಯೋಗ್ಯನಂ ಪಡೆದನಿಲ್ಲನದೊರ್ವನುಮಂ ಕುಮಾರನಂ ॥
ಹತವಿಧಿಯೋಗದಿಂ ಪೆರರಧೀನಮಿದಪ್ಪುದು ಮುಂದೆ ರಾಜ್ಯಮೆಂ ।
ದತಿಶಯಚಿಂತೆಯಿಂ ಮರುಗುತಾಕುಳಮಾದುದು ನಾಡದೆಲ್ಲಮುಂ ॥೩೨॥

ವ|| ಇಂತುಮರುಗುತ್ತುಮಿರ್ದ ಪೌರಜಾನಪದಜನಂಗಳಮನೋಗ
ತಮುಂ ಪ್ರಮುಖಸಚಿವನಪ್ಪ ನರಸಪ್ಪನ ಮುಖದಿಂ ಕೇಳ್ದಾಪೊಡವಿಯಾ
ಣ್ಮಂ ಪ್ರಜಾರಂಜನಮರಸರ್ಗೆ ಮುಖ್ಯಮಾದುದೆಂದುಂ "ಅಪುತ್ರಸ್ಯಗತಿ
ರ್ನಾಸ್ತಿ" ಯೆಂದು ಸನಾತನಸ್ಮೃತಿವಚನಮಿರ್ದುದರಿಂ ಪುತ್ರಹೀನಂಗೆ ಪರ
ತ್ರದೊಳ್ಗತಿಯಿಲ್ಲಮೆಂದುಂ ತಿಳಿದು ವಂಶಾಭಿವೃದ್ಧಿಗೊರ್ವದತ್ತಪುತ್ರನಂ
ಸ್ವೀಕರಿಸಲೆಳಸಿ "ಶ್ರೇಯಸಾಂಬಹವೋವಿಘ್ನಾಃ" ಎಂದು ಪಿರಿಯರ್ಪೇ
ಳ್ವುದಂ ನೆನೆದು ತಡೆಯದಾಕ್ಷಣಮೆ ಹಿತಚಿಂತಕರಪ್ಪ ಮಂತ್ರಿಪುರೋಹಿತ
ರೊಡನೆಕ್ಕಟಿಯೊಳ್ಮಂತಣಂಗೆಯ್ದು ಸಗೋತ್ರಜ್ಞಾತಿಪುತ್ರಸಿಲ್ಲದ ಕಾರಣಂ
ರಮಾವಿಲಾಸದ ಮಾರಾಣಿಯು ಸೋದರಕೆಯಳಿಯನಪ್ಪ ಕತ್ತಿಯ ಕೃಷ್ಣರಾ
ಜನ ಕಿರಿಯಮಗಂ ರಾಜ್ಯಾಧಿಕಾರಕ್ಕೆ ತಕ್ಕನೆಂದಾತನಂ ಸ್ವೀಕರಿಸಲ್ಕನೋ
ನಿಶ್ಚಯಂಗೆಯ್ದಾಸುದ್ದಿಯಂ ಪೊರಪೊಣ್ಮಿಸಲೆ ಕ್ರೋಧನಸಂವತ್ಸರಜ್ಯೇಷ್ಠ
ಬಹುಳದಶಮಿಯೊಳಾಯುಷ್ಯಹೋಮಶಾಂತಿಯಂ ಬಳೆಯಿಸುವ ನೆವದಿಂದಂ
ಬಾವಿಲಾಸಮೆಂಬಾಸ್ಥಾನದೊಳ್ಸಭಾಸದರೆಲ್ಲರುಮಂ ನೆರಪಲ್ಕಧಿಕಾರಿಗಳಂ
ಬೆಸಸಲೊಡನವರಾರಾಜಾಜ್ಞೆಯಂ ಪ್ರಕಟಿಸುವುದುಂ ಸಮನಿಸಿದಾಶುಭದಿನ
ದೊಳ್ಪೊಳ್ತಡಮೆ ಮಹಸೀಯರಪ್ಪ ನೈದಿಕಲೌಕಿಕಸಾಮಾಜಿಕರುಂ ಸೇನಾ
ನಾಯಕರುಂ ರಾಜಾನುಬಂಧಿಗಳುಂ ಕುಲಗುರುಮಂತ್ರಿಪುರೋಹಿತಾದಿಗ
ಳುಂ ಬಂದುಮಹಾರಾಜನ ಸಂದರ್ಶನಕ್ಕೆ ತವಕಿಸುತ್ತಾಸಭಾಮಂಟಪದೊ
ಳ್ತಮ್ಮಮ್ಮುಚಿತಸ್ಥಾನಂಗಳನರಿದು ನೆರೆದಿರೆಯುಮಂತು ಜವನಿಕೆಯೊಳಂತಃ
ಪುರಾಂಗನೆಯರೆಡೆಗೊಂಡಿರೆಯುಂ ಹೋಮಶಾಲೆಯೊಳಾಯುಷ್ಯಹೋಮಂ
ಯಥಾಶಾಸ್ತ್ರಂಬಳೆದ ಬಳಿಯಂ ||೪೫||

ಕಂ|| ರಾಜೋಪಚಾರದಿಂದಂ |
ರಾಜಿಸುತಾಸ್ಥಾನಮಂಟಪಕ್ಕೊಲವಿಂದಾ ||
ರಾಜೇಂದ್ರಂ ಬೃಂದಾರಕ |
ರಾಜಂ ಸುರಸಭೆಗೆ ಬಂದತೆರದಿಂ ಬಂದಂ ||೬೪||

ವೆ|| ಅಂತು ಬಂದು ಗುರುಪಾದವಂದನಂಗೆಯ್ದು ರಾಜಾಸನದೊಳ್ಮಂ
ಡಿಸಿ ಯಥಾಕ್ರಮದಿಂ ಸಾಮಾಜಿಕಮಂಡಲಿಯಿಂ ರಾಯಮುನ್ನಣಿಗೊಂಡೀಸ

ಮಯಮೆನ್ನಯಮನೋರಥಮಾಕಂದಭೂರುಹಕ್ಕ ಪುಷ್ಪಸಮಯಮೆಂದು ಮನದೊಳಣಿಸಿ ॥೪೫॥

ಕಂ ॥ ಉಳಿದೆದ್ದು ಗದ್ದುಗೆಯಸಂ ।
ಜಳಿಬಂಧಂಗೆಯ್ದು ಸಭ್ಯರಂ ನೋಡುತ್ತುಂ ॥
ತಲೆವಾಗಿ ವಿನಯಭರದಿಂ ।
ಜಳಧರಗಂಭೀರಕಂಠದಿಂದಿಂತೆಂದಂ ॥೮೬॥

ವೃ ॥ ಸಿರಿಯಿಂದಂತಿಳಿವಿಂ ವಯಸ್ಸಿನದಟಿಂ ವೃದ್ಧತ್ವಮಾಂತಿರ್ಪ್ಪ ಸ ।
ಭ್ಯರಿರಾ ಲಾಲಪುದೆನ್ನ ಬಿನ್ನಪವನೊಲ್ದೆನ್ನಂಗದೊಳ್ವಾರ್ಧಕಂ ॥
ತರದಿಂಕುಂದಿಕುಮಾರ್ಪ ನದ್ರಿಗುರವಂ ಗ್ರೀಷ್ಮರ್ತು ಶೋಷಿಪ್ಪವೋ ।
ಲ್ದರಣೀಧೂರ್ವಹನಂದನೋದಯಸುಖಕ್ಕಾಂನೋಂತೆನಲ್ಲಕ್ಕುಟಾ ॥೮೭॥

ವೃ ॥ ಅದರಿಂದಂ ಬಹುಕಾಲದಿಂ ನಡೆದು ಬಂದೆಮ್ಮಾಮಹಾರಾಜವಂ ।
ಶದ ವಿಚ್ಛಿತ್ತಿಗೆ ಮೂಲನಾದನಿವನೆಂದೆನ್ನಂ ಜನಂ ಮುಂದೆ ದೂ ॥
ರದಪಾಂಗಿಂ ಕೊಳಲೆಂದದೊರ್ವಣುಗನಂ ಸಂಚಿಂತಿಸಿರ್ದಪ್ಪೆನಿಂ ।
ತಿದರೊಳ್ನಿಮ್ಮನುಮೋದಮಂ ಪಡೆವುದರ್ತಾನೀಗಳಭ್ಯರ್ಥಿಪೆಂ ॥೮೮॥

ವ॥ ಎಂದು ಬೆಸಗೊಳಲೊಡಂ ಘನಗರ್ಜಿತಮುಂ ಕೇಳ್ದ ಮಯೂರಂಗಳಂತೆ ನೀಡುಂ ಸಂತಸಂಗೊಂಡು ಸಭಾಸದರೆಲ್ಲರುಮವಶ್ಯಮಂತಕ್ಕೆಯೆಂದೊರ್ಮೊದಲೊಪ್ಪುಗುಡೆ ಮಹಾರಾಜಂ ಮೊದಲೆರಾಣಿವಾಸಂಬುಗಿಸಿದರ್ಹರಾಯಗುವರನಂ ಸಭಾಂಕಣಕ್ಕೆ ಬರಿಸುವುದುಮಾತನಂ ನೋಡಿ ॥೮೯॥

ವೃ ॥ ಧೃತಿಯಿಂಪಾರ್ಪಾಲೇಯಧಾತ್ರೀಧರಮನರುಣನಂ ತೇಜದಿಂದಂತುಗಂಭೀ ।
ರತೆಯಿಂದಂಭೋಧಿಯಂ ಮನ್ಮಥನನಧಿಕಸೌಂದರ್ಯದಿಂ ಶೈಶವಾವ ॥
ಸ್ಥಿತಿಯೊಳ್ತಾನಿರ್ದೊಡಂ ಧಿಕ್ಕರಿಸುವನಿವನಾಲೋಕಿಸಲ್ಕೀತನೇ ಸ ।
ನ್ನುತಕರ್ಣಾಟಾಧಿಪತ್ಯಕ್ಕರುಹನೆನುತೆ ಕೊಂಡಾಡಿದರ್ಸಭ್ಯರೆಲ್ಲರ್ ॥೯೦॥

ವ॥ ಇಂತು ಸಭಾಸದರೆಲ್ಲರುಮತ್ಯಂತಾವೋದದಿಂದನುಮೋದಿಸುವುದುಮಾಮೋದಿನೀಪತಿ ಪುತ್ರಸ್ವೀಕಾರಹೋಮಮಂ ವಿಧಿವಿಹಿತಪ್ರಕಾರದಿಂದಾಗಿಸಿ ಚಾಮರರಾಜೇಂದ್ರನೆಂದು ಪೆಸರಿಟ್ಟಾಕುಮಾರನಂ ವಾತ್ಸಲ್ಯವೊ

ದವೆ ಹೃದಯದೊಳ್ಮೊಳೆದೋರೆ ಪುಳಕಂಗಳಂಗದೊಳಾನಂದಬಾಷ್ಪಂತುಳು
ಕಾಡೆ ಕಣ್ಗಳೊಳ್ಗದ್ಗದಮುನ್ಮೆ ಕಂತದೊಳ್ನಡುಕಂಬೆತ್ತೆರಡುಂಕಯ್ಗಳಿಂದೆ
ತ್ತಿಕೊಂಡಂಕಪರ್ಯಂಕಮನಡರಿಸುವುದುಂ ॥೯೧॥

ವೃ ॥ ಬಾಲನೃಪಾಲನೊಳ್ನಿಜಸಜಾಂಶದಿನೊಲ್ದೊಡಗೂಡಿದಷ್ಟದಿ ।
ಕ್ಪಾಲಕಭೀಮಹೋತ್ಸವದ ಜೋಧನೆಗಟ್ಟಿದರೆಂಬಿನಂ ಸಮು ॥
ದ್ವೇಲಸಮಸ್ತವಾದ್ಯರವದುಬ್ಬಟೆ ವಂದಿಜನಂಗಳಾರ್ಪು ಸ ।
ಭ್ಯಾಳಿಜಯಧ್ವನಿಪ್ರಸರಮೆಯ್ದಿದುವಂದು ತದಾಲಯಂಗಳಂ ॥೯೨॥

ವ॥ ಅನಂತರದೊಳಾಧರಾಕಾಂತಂ ಸಮುಜಿತಪ್ರಕಾಶದಿಂ ಸಭಾಸ
ದರಂ ಮನ್ನಿಸಿ ನಿಜಕುಮಾರಂಬೆರಸೊಡ್ಡೋಲಗಮಂ ಬೀಳ್ಕೊಟ್ಟು, ದುಷ್ಟ
ನಾದ ಟೀಪುವಂ ನಿಗ್ರಹಿಸಿ ಪಿಂದೆ ಕಯ್ವಿಟ್ಟರ್ದ ರಾಜ್ಯಮನೆನಗೆಳವರೆಯ
ದೊಳೆ ದಯೆಗೆಯ್ದು ಮಹೋಪಕಾರಮನೊಡರ್ಚಿ ನಿಷ್ಕಪಟಭಾವದಿಂದೀ
ರಾಜಕುಲಕ್ಕೆ ನೀಡುಂ ನೆರವಾಗಿರ್ಪ್ಪ ಮಹಾನುಭಾವರಪ್ಪಾಂಗ್ಲೇಯರ್ಗೀ
ಸುದ್ದಿಯಂ ತಡೆಯದಿಂದೆ ತಿಳಿಯಿಪ್ಪುದು ತಕ್ಕುದೆಂದು ಬಗೆದವರ್ಗೆ ಪ್ರತಿನಿಧಿ
ಯಾಗಿ ರಾಜಧಾನಿಯೊಳಿರ್ದಿಲಿಯಾಟೆಂಬಾಂಗ್ಲೇಯಾಧಿಕಾರಿಯಂ ರಾಜಮ
ರ್ಯಾದೆಯಿಂದರಮನೆಗೆ ಕರೆಯಿಸಿ ರಾಜಸಭಾಮಂಟಪಕ್ಕೆ ಬರಿಸಿ ಪರಸ್ಪರ
ಕುಶಲಾನುಯೋಗನೂದರಂಬೆರಸು ನಡೆದೊಡನೆಲ್ಲೈಮಹಾಶಯನೆ ದಿನದಿನ
ಕ್ಕಂ ಕಲಿ ಧರ್ಮಪ್ರಾಭವಮಂ ತಳ್ಗಿಪಂತೀಮುದುಪೆನ್ನದೇಹಬಲಮಂ ಕುಂದಿ
ಸುತ್ತಿರ್ದಪುದೆನಗಾರಸಪುತ್ರನಿಲ್ಲವಕಾರಣಂ ಸದ್ಗತಿಯುಂ ಸಾಧಿಸಲುಮನ್ವ
ಯಾಗತಮಾದಷ್ಟವರ್ಣಿಯನಲಂಕರಿಸಲುಂ ಕತ್ತಿಯಗೋಪಾಲರಾಜನೆಂಬ
ಭೂಪಾಲನ ಕುಲದೊಳುದ್ಭವಿಸಿದನುಮನೇಕರಾಜಲಕ್ಷಣೋಪಲಕ್ಷಿತನು
ಮನುಬಂಧಿಯುಮಪ್ಪ ಚಾಮರಾಜೇಂದ್ರನೆಂಬೀಬಾಲಕನಂ ಸಕಲಪ್ರಜಾಸ
ಮ್ಮತಿಯಂ ಪಡೆದೀಗಳಾರ್ಯಧರ್ಮಶಾಸ್ತ್ರಾನುಸಾರದಿಂ ಪುತ್ರಭಾವದಿಂ
ಸ್ವೀಕರಿಸಿರ್ಪೆನೆನ್ನಿಂ ಬಳಿಯಂ ಮುನ್ನಡೆದಿರ್ಪ್ಪ ಕಟ್ಟಡಕದಂತೀತನಂ ರಾ
ಜ್ಯಪ್ರತ್ಯರ್ಪಣಂಗೆಯ್ದು ಕಾಪಿಡುವುದಾಶ್ರಿತತ್ರಾಣಪರಾಯಣರುಂ ಸತ್ಯಸಂ
ಧರುಮೆಂದು ಬಿರುದಂ ಪಡೆದಿರ್ಪ್ಪಾಂಗ್ಲೇಯರ್ಗೆ ಕೂಡಿದುದೆಂದರಿಪಿ ಸಮುಚಿ
ತಪ್ರಕಾರದಿಂ ಸನ್ಮಾನಂಗೆಯ್ದೋಲಗಮಂ ಬೀಳ್ಕೊಟ್ಟು ॥೯೩॥

ಕಂ || ಸ್ಥಿರಮಾಯ್ತಿಂದೀರಾಜ್ಯಂ |
ಧರೆಯೊಳ್ನೆಲೆಗೊಂಡುದಿಂದು ಯದುರಾಜಕುಲಂ ||
ಪರಿಹೃತಮಾಯ್ತಿಂದು ಮಹ |
ತ್ತರಪಿತೃಋಣಮೆಂದು ಪಡೆದನಾದಂ ಮುದಮಂ ||೪೪||

ವ|| ಆಗಳ್.

ವೃ || ಯದುವಂಶಕ್ಕೆಳ್ಗೆಯಾದತ್ತವನಿವನಿತೆ ತಾರುಣ್ಯಮಂ ತಾಳ್ದಿದಳ್ಹ |
ರ್ಷದ ಮೂಲಂ ಪರ್ವಿತಾದಂ ಸಕಲರಿಪ್ರಜನಾಸ್ಯಂ ಕರಂಗಿತ್ತು ಸದ್ವಿ ||
ದ್ಯದ ಭಾಗ್ಯಂ ಪೆರ್ಚಿತೀನಾಡಿನ ಸಿರಿ ನೆರೆ ಸೊಂಪೇರಿತುಣ್ಮಿತ್ತು ಧರ್ಮಂ |
ಪದಪಿಂ ಸತ್ಪುತ್ರನಂ ಸ್ವೀಕರಿಸಲರಸನೆಂದೆಲ್ಲರುಂ ಹೃಷ್ಟರಾದರ್ ||೪೫||

ಇದು ಜಗದ್ವಿದಿತ ಶ್ರೀಕಾಶ್ಯಪವಂಶಮುಕ್ತಾಮಣಿ ಶ್ರೀಗರಳಪುರೀಶಶಾಸ್ತ್ರಿ
ತನೂಭವನುಂ ಶ್ರೀಮದಖಂಡ ಮಹೀಮಂಡಲ ಮಂಡನಾಯಮಾನಕ
ರ್ಣಾಟಜನಪದಲಕ್ಷ್ಮೀವಿಹಾರೈಕರಂಗಮಹೀಭೃತ ಮಹೀಶೂರರಾಜಧಾನೀ
ರತ್ನಸಿಂಹಾಸನಾಧೀಶ್ವರ ಯದುಕುಲಪಯೋನಿಧಿ ಪೂರ್ಣಚಂದ್ರಾಯಮಾಣ
ಶ್ರೀಚಾಮರಾಜೇಂದ್ರ ತನಯ ಶ್ರೀಕೃಷ್ಣರಾಜಮಹಾರಾಜಸಂಸ್ಕೃತ
ಕರ್ಣಾಟೋಭಯಪ್ರವಚನೋಪಾಧ್ಯಾಯನುಂ ಮಹಾವಿದ್ವ
ತ್ಪದಲಾಂಛನನುಂ ತನ್ಮಹಾರಾಜ ಕೃಷ್ಣರಾಜವಿತೀರ್ಣ
ಕವಿತಿಲಕಬಿರುದಾಂಕಿತನುಮಪ್ಪ ಸೋಸಲೆ
ಅಯ್ಯಶಾಸ್ತ್ರಿಯಿಂ ವಿರಚಿತಮಾದ
ಮಹೀಶೂರಮಹಾರಾಜ ಚರಿತ್ರ
ಮೆಂಬ ಕರ್ಣಾಟ ಚಂಪೂ
ಮಹಾಕಾವ್ಯದೊಳ್
ಚತುರ್ಥಾಶ್ವಾಸಂ
ಸಂಪೂರ್ಣಂ.

ಪಂಚವಾಕ್ಯಾನಂ.

ಕಂ || ಅದ್ಯಮನಂತಂ ಶುದ್ಧಂ |
ವಿದ್ಯಾನಾಥಂ ಸಮಸ್ತಜಗದಾಧಾರಂ ||
ಹೃದ್ಯಗುಣನಗುಣನುಂ ನಿರ |
ವದ್ಯಂ ಪರಮಾತ್ಮನೋವುಗೆಮ್ಮಯ ನೃಪನಂ ||೧||

ವೃತ್ತ || ಬಳಿಕಿನ್ನುಂ ಕೆಲಕಾಲಮಾತ್ಮಜನಸೀಸಾನ್ನಿಧ್ಯದಲ್ಲರ್ಕೆ ಕೇ |
ವಳಬಾಲಂ ಯುವರಾಜನೆಂದವನಿಪಂ ನಾಮಾನುಮಂ ಬೀಳ್ಕೊಡಲ್ ||
ಪಲಬರ್ತೊಳ್ತುಗಳೊಲ್ದು ಸೇವಿಸುತಿರಲ್ತಂ ಪುಟ್ಟಿದಾವಾಸದೊ |
ಳ್ಬಳೆಯುತ್ತಿರ್ದನಿಳೇಂದ್ರನಂದನನವಂ ರಾಜೋಪಚಾರಂಗಳಿಂ ||೨||

ವ|| ಆಗಳ್,

ಕಂ || ಬರಿಸುತ್ತಾಸುಕುಮಾರನ |
ನರಮನೆಗನವರತಮರಸನುಂ ರಾಣಿಯರುಂ ||
ನಿರುಕಿಸಿಯುಂ ನೇಹದೆಪರಿ |
ಪರಿಯಿಂ ಮುದ್ದಾಡುತಿತ್ತಿಕೊಂಡುಂ ತಣಿಯರ್ ||೩||

ಕಂ || ಬಿದಿ ಬಿತ್ತಿದ ಸತ್ಯಪ್ರಿಯ |
ವಿದಗ್ಧವಚನಾತಿಶಯದ ಬಿತ್ತುಗಳೆಂಬಂ ||
ದದೊಳಾನರೇಂದ್ರಬಾಲನ |
ವದನದೊಳೀನಾದಮೊಪ್ಪಿದುವೊ ಮೊಳೆವಲ್ಗಳ್ ||೪||

ಕಂ || ಪಿಡಿನೆತ್ತಿಕೊಂಡೆಳಸು ಮು |
ದ್ದಿಡುವರಸಿಯರಾನನಾರವಿಂದದೊಳಿರ್ದಾ ||
ರಡಿಗಳ್ಸಂಗಡಿಸಿದುವೆನೆ |
ಕಡುಮುಂಗುರುಳೆಸೆದುದಣುಗನಾಸ್ಯಾಂಬುಜದೊಳ್ ||೫||

ಕಂ || ನಗೆಮೊಗಮಂ ತಾವರೆಯಂ |
ಬಗೆದೆರಗಿ ಬಳಿಕ್ಕೆ ನಾಸಮಂ ಸಂಪಗೆಗೆ ||
ತ್ತಗಿದುಬಸವಳಿದಳಿಯಿದೆನೆ |
ಸೊಗಯಿಸಿದುದು ದಿಟ್ಟಿಬೊಟ್ಟು ಬಾಲನ ಪಣೆಯೊಳ್ ||೬||

ಕಂ || ವನಜಾಕ್ಷನೆನಿಪ ನೃಪನಂ |
ದನನೆರ್ದೆಯೆಂಬ ಸಿರಿಯೊಳ್ವನೆಗೆ ರಕ್ಷಾಬಂ ||
ಧನಯುಂತ್ರಮೆನಲ್ಕೊರಲೊ |
ಳ್ಮನುಗಿತು ಪುಲಿಯುಗುರ ರತ್ನಹಾರದ ಪದಕಂ ||೬||

ಕಂ || ಮೊಗಸಸಿಯ ಜೊನ್ನಮೋ ಮೇ |
ಣ್ಮೊಗದಾವರೆಯಲ್ಲಿ ಮಂಡಿಸಿಪ್ಪಂಜೆಯೊ ಮೇ ||
ಣ್ಮೊಗದ ಸಿರಿದೊರೆಯ ನೊರೆಯೋ |
ಬಗೆಯಲಿದೇನೆನೆ ಕುಮಾರನೆಳನಗೆ ತೋರ್ಕುಂ ||೮||

ಕಂ || ಸಿರಿ ನೆಲಸಿರೆಯುಂ ಮುಖರುಚಿ |
ಸರಸಿಯೊಳಿರೆಯುಂ ನೃಪಾಂಗನಾಲೋಕನಬಂ ||
ಭರತತಿ ಮುತ್ತಿರೆಯುಂ ತಾ |
ವರೆಗಳೆ ತಾವೆಸಿಸಿ ವೊಳೆದುವಣುಗನ ಕಣ್ಗಳ್ ||೯||

ಕಂ || ತನಗೆ ನಿಜಪ್ರಜೆಯಪ್ಪಿಸಿ |
ದಿನಿವಣ್ಗಳನೊಲ್ದು ಕೊಂಡು ಪರಿಜನಕೆಲ್ಲಂ ||
ವಿನಿಯೋಗಿಸುತವನಾಶ್ರಿತ |
ಜನದೊಳುದಾರತೆಯನೆಳವೆಯೊಳೆ ತೋರಿಸಿದಂ ||೧೦||

ವೃ || ಆರಸಿಯರೆತ್ತಿಕೊಂಡೆಳಸಿ ಕೌಂಕುಳೊಳೆಯ್ದಿ ಗವಾಕ್ಷದಿಂಬಿನೊ |
ಳ್ನಿರುಕಿಸು ಮುದ್ದುಕಂದ ಇದೊ ಚಂದ್ರಮನಂ ಕರೆ ಬಾರೆನುತ್ತುಮೆಂ ||
ದೊರೆಯುತೆ ತೋರೆ ದಾಯೆನುತೆ ಕೌತುಕದಿಂ ಕರೆವಂದು ವೋಲ್ತುದಾ |
ತರಳನ ಕೆಂದಳಂ ಪವನಕಂಪಿಸುರದ್ರುಮಪಲ್ಲವಾಭೆಯಂ ||೧೧||

ಕಂ || ಗೋಕ್ಷೀರಮಾಕ್ಷಿಕ್ಷೇಕ್ಷು |
ದ್ರಾಕ್ಷಾಧಿಕ್ಷೇಪದಕ್ಷಮೆನಿಪಾಕ್ಷೋಣೀ ||
ರಕ್ಷಕಸುತನ ತೊದಲ್ನುಡಿ |
ಯಕ್ಷರಮೊಂದೊಂದುವೀಗುಮಕ್ಷಯಮುದಮಂ ||೧೨||

ವೃ || ಎಳನಗೆ ಜೊನ್ನಮಂ ಪಳಿಯೆ ಪೊನ್ನುಡಿಗೆಜ್ಜೆಯ ರನ್ನನೇಪುರಂ |
ಗಳ ಕಳನಾದಮುಣ್ಮೆ ಸಿರಿಮೆಯ್ಯೊಲೆಯುತ್ತಿರಲತ್ತಲಿತ್ತಲುಂ ||
ನೆಲೆವನೆಯಲ್ಲಿ ದಟ್ಟಡಿಯಿಡುತ್ತೊಲವಿಂ ಚರಿಪಾಕುಮಾರನಾ |
ಲಲಿತಕಪೋಲಕಾಂತಿಯನದೇಂ ಬರೆಪೀರ್ದುವೊ ರಾಯನಕ್ಷಿಗಳ್ ||೧೩||

ವೃ ॥ ಪರಿಚಯಮಿಲ್ಲದಿದ್ದೊಡನುಣಂ ಭಯಮಿಲ್ಲದೆ ತಮ್ಮೊಳೊಲ್ಮೆಯಂ ।
ಪರಿಚಿತರಲ್ಲಿ ತೋರ್ಪತೆರದಿಂದನು ತೋರುತೆ ಧೀರಭಾವದಿಂ ॥
ನರಪತಿಸೂನುಗೌರವಕೆ ತಕ್ಕುದಿದಿಂತೆನಲಾಕ್ಷಮಾರನು ।
ಚ್ಛರಿಸುವ ಶೈಶವೋಕ್ತಿಗಳನಾಲಿಸಿ ಹೂಣಜನಂಗಳದೇಂಮುದವಾಂತರೋ॥

ವೆ॥ ಮತ್ತಂ,

ಕಂ ॥ ಧೈರ್ಯಮುಮನೆಳಮೆಯೊಳೆ ಗಾಂ ।
ಭೀರ್ಯಮುಮಂ ರಾಜಯೋಗ್ಯಕಾರ್ಯಮುಮಂ ಚಾ ॥
ತುರ್ಯಮುಮಂ ಕಂಡತ್ಯಾ ।
ಶ್ಚರ್ಯಮನಾಂಗ್ಲೇಯರಾಂತರೀನೃಪಸುತನಾ ॥೧೫॥

ವೆ॥ ಮತ್ತಂ,

ಕಂ ॥ ಮನಮೊಪ್ಪಿದಂದದಿಂ ನಂ ।
ದನನಂ ಸಿಂಗರಿಸುತುಡಿಗೆತುಡಿಗೆಗಳಿಡುತಾ ॥
ಜನಪನ ರಾಣಿಯರಾದಂ ।
ನನೆಕೊನೆವೋಗುತ್ತೆ ನೋಡಿ ತಣಿಯಂದೆಂದುಂ ॥೧೬॥

ವೆ॥ ಇಂತು ಬಾಲಲೀಲೆಯಿಂದೆಲ್ಲರಂ ಸಂತಸಂಗೊಳಿಸುತ್ತನುಕ್ರಮದಿಂ ಪಾಡಿವದೆಳವೆರೆಯಂತೆ ಬಳೆಯುತ್ತಿದ್ದ ಕುಮಾರಂಗಮ್ಮನೆಯು ಬರಿಸದೊಳಾಯಿಳಾಧಿಪಂ ಬಾಲಶಿಕ್ಷಾಪಿಚಕ್ಷಣರಪ್ಪುಪಾಧ್ಯಾಯರಿಂದಕ್ಷರಾಭ್ಯಾಸಂಗೆಯಿಸುವುದುಂ ॥೧೭॥

ಕಂ ॥ ಬಳಿಸಂದೊಡಮೆಯ ರೂಪಂ ।
ಪಳುಕೊಳಕೊಳ್ವಂತನುಕ್ರಮದಿನಾಚಾರ್ಯಂ ॥
ತಿಳಿಪಿದ ವರ್ಣಾಳಿಯನಾ ।
ಯೆಳೆಯಂತಾಂ ಗ್ರಹಿಸುತಿರ್ದನೇಂಪಟುಮತಿಯೋ ॥೧೮॥

ಕಂ ॥ ಗುರು ಕಲಿಸಿದಂದದಿಂದಾ ।
ದರದಿಂ ಮೃದುಮಧುರಕಂಠದಿಂ ನಂದನನು ॥
ಚ್ಛರಿಸುವ ಸಂಖ್ಯಾಳಿಗಮ ।
ಕ್ಷರತತಿಗಂ ನೃಪತಿ ಮೆಚ್ಚಿ ನನೆಕೊನೆವೋದಂ ॥೧೯॥

ವ|| ಇಂತು ವಿದ್ಯೆಯೊಳ್ನಿರವದ್ಯಬುದ್ಧಿಶಕ್ತಿಯುಕ್ತನಪ್ಪಪಟ್ಟಗುವರನಂ ಕಟ್ಟಳ್ಕರಿಂ ನಿಟ್ಟಿಸುತ್ತೆ ಕೃಷ್ಣರಾಜನೀಯುವರಾಜಂ ವರ್ಧಿಷ್ಣು ತಾನಿವನೆಳಮೆಯೊಳೆ ನಿರುಪಾಧಿಕಮಪ್ಪಾಂಗ್ಲೇಯರ ನೇಹಕ್ಕೆಡೆಯಾಗಿರ್ದುದರಿಂದವರೊಡವೆರೆದು ಮುಂದೆ ಸುಖಸಾಮ್ರಾಜ್ಯಪದವಿಯನನುಭವಿಸಲ್ಕೆ ತಕ್ಕಂತಾಂಗ್ಲೇಯಭಾಷೆಯೊಳುಮಿನನಂ ಪ್ರವೀಣನಂ ಮಾಡಲೆವೇಳ್ಕುಮೆಂದಾಲೋಚಿಸುತ್ತಿರ್ಪಿನಂ ದುರ್ನಿವಾರಮಪ್ಪನಾರೋಗ್ಯದಿಂ ಶರೀರಮುಳಿಯಲಾರದೆಂದು ತರಿಸಂದಾಕುವರನಂ ಬರಿಸಿ ನಿಜಹಸ್ತದಿಂವಧಿಕಾರಮುಪ್ಪೆರೆಸುಪಟ್ಟಗತ್ತಿಯನಾತಂಗಿತ್ತು ರಾಜ್ಯಭಾರವ್ರತಮನುಪದೇಶಿಸಿ ಪರಸಿ ||೭೦||

ಕಂ || ಧರಣೀತಲಭೋಗನೆ ಜಣಿ |
ದರಸನವಂ ವಿಸ್ಮಸಾಖ್ಯಕೆಳಸಿಪಸೆಂಜಂ ||
ತಿರೆ ವಿಭವನಾಮಸಂಪ |
ತ್ಸರದೊಳ್ನಿಜಪುಣ್ಯದಿಂದೆ ಬರ್ದಿಲಮನಡರ್ದಂ ||೭೧||

ಕಂ || ಉದಯಿಸಿದಸಿಳೆಯೊಳಾನಂ |
ದದೊಳೀಭೂಮಿಪತಿಪೊಂದದಂ ಪಭವದೊಳೆಂ ||
ಬುದು ವಿಭವಾನಂದಂಗಳ್ |
ತದಧೀನಂಗಳ್ಗಡೆಂದು ಸೂಚಿಸುತಿರ್ಕುಂ ||೭೨||

ಕಂ || ಅರಸಂ ಸಲೆ ಸಗ್ಗಕೆ ಗಜ |
ತುರಗಂಗಳುಮಂದು ಮೇವುಳಿದು ಕಣ್ಣೀರಂ ||
ಸುರಿಯಿಸಿದುವೆಂದೆನಲಾ |
ಪುರದೇಶಜನಂಗಳಳಲನೆನಿತೆಂದೊರೆಪೆಂ ||೭೩||

ವ|| ಅಂತರಸಂ ಸಲ್ವುದುಮಾಶ್ರಿತತ್ರಾಣಧುರೀಣರಪ್ಪಾಂಗ್ಲೇಯರಾಕ್ಷಣಮೆ ಪತಿಶೋಕಾನಲದಹ್ಯಮಾನಮಾನಸೆಯರಪ್ಪ ಮಾರಾಣಿಯರಂ ಸಂತವಿಟ್ಟಭಯಪ್ರದಾನಂಗೆಯ್ದು ರಾಜ್ಯಾಧಿಕಾರಧುರಂಧರವಯಸ್ಕನಾಗುವುದುಂ ಯುವರಾಜನಪ್ಪಚಾಮರಾಜಂಗೀರಾಜ್ಯಮನೊಪ್ಪಿಸುವೆವೆಂದುಮನ್ನೆವರಂ ಮುನ್ನಿರ್ದ ಕಟ್ಟಳೆಯೆಂತಂತು ನಡೆಯಿಸಿಕೊಂಡುಬರ್ಪೆವೆಂದುಮಲ್ಲಿಲ್ಲಿ ಪಟ್ಟಣಂಗಳೊಳಂ ತಲೆವಳ್ಳಿಗಳೊಳಂ ಕಾಲೂರ್ಗಳೊಳಂ ಜಂಗುರಮಂ

ಪೊಯಿಸಿ ಪೌರಜಾನಪದಜನಂಗಳಂ ಸಮಾಧಾನಂಗೊಳಿಸಿ ಬಳಿಕ್ಕ ರಮನೆ ಯೊಳ್ರಾಜತಂತ್ರಧುರ್ಯನಪ್ಪರಂಗಾಚಾರ್ಯನೆಂಬ ಕಾರ್ಯಾಧ್ಯಕ್ಷನಂ ನೇಮಿಸ ಲ್ಕೆ ನಾಡೆಲ್ಲಮುಂ ನಾಡೆ ಸಂತಸಂಗೊಂಡಾಂಗ್ಲೀಯರಂ ಕೊಂಡಾಡಿದುದು ॥

ಕಂ ॥ ಬಳಿಕಂ ಬಂದುದು ಶರದಂ ।
ಕಳಹಂಸಕುಲಪ್ರಚಾರಮುಂ ಪರಿಣತಿಮಂ ॥
ಜುಳತರಕಳಮಕ್ಷೀತ್ರಂ ।
ಗಳುಮುಮಳದಿಗಂತರಂಗಳುಂ ಕಣ್ಗೊಳಿಸಲ್ ॥೨೫॥

ಕಂ ॥ ತಿಳಿನೀರ್ಕೆರೆಕೆರೆಯೊಳಗಾ ।
ತಿಳಿನೀರೊಳ್ನೀರಜಂಗಳಾನೀರೇಜಂ ॥
ಗಳೊಳಿನಿವಂಡಾಬಂಡಿನೊ ।
ಳಳಿಕುಲಮಳಿಕುಲದೊಳೊಪ್ಪಿತಿಂಚರಮಾಗಳ್ ॥೨೬॥

ಕಂ ॥ ಬಿರಿಮಲ್ಲಿಗೆಯಲರ್ಗಂಪಿಂ ।
ಪೊರೆದೆಲರಿಂ ಪಾಲನೆತ್ತಲುಂ ಜೆಲ್ಲಿದವೋಲ್ ॥
ಪರಿವಹಿಸುವ ಚಂದ್ರಿಕೆಯುಂ ।
ದಿರುಳಾಗಳದೇಂ ಜಗಕ್ಕೆ ಮುದಮೊದವಿಸಿತೋ ॥೨೭॥

ವ॥ ಮತ್ತಂ,

ಕಂ ॥ ವಿಮಲಗ್ರಹನಕ್ಷತ್ರಂ ।
ರಮಣೀಯಂ ಗಗನಮಾಗಳಾದುದು ಪೊಂಬ ॥
ಣ್ಣಮನಾಂತು ಜೋಲ್ದದೆತ್ತೆ ।
ತ್ತಮುಮೆಸೆದುವು ಗರ್ದಿಗರ್ದಿಯೊಳ್ನೆಲ್ದೆನೆಗಳ್ ॥೨೮॥

ಕಂ ॥ ಆರಸಂಜೆಗಳೆತ್ತಲುಮಾ ।
ವರಿಸಿರಲೆಡೆವಿಡದೆ ನೋಡಲಾಗಳ್ಕಿಂದಾ ॥
ವರೆಯ ಕೊಱಂಗಳ್ಬೆಳ್ದಾ ।
ವರೆಯ ಕೊಳಂಗಳಿವೆನುತ್ತೆ ಬೆಮೆಯೊಡರಿಸುಗುಂ ॥೨೯॥

ಕಂ ॥ ಕಳವೆಯ ಪೊಂದೆನೆಯುಂ ಸಂ ।
ಗಳಿಸಿರೆ ಜೆಂಗೊಕ್ಕು ಪಜ್ಜೆಯಂತೆವೊಲಿರೆ ಮೆ ॥

ಯ್ಗಿಳಿಗಳ ಸಾಲ್ನಭದೊಳ್ಕ ।
ಣ್ಗೊಳಿಸಿತ್ತಾಗಳ್ಸುರೇಂದ್ರಚಾಪದ ತೆರದಿಂ ॥೩೦॥

ವ॥ ಇಂತು ಸಕಲಲೋಕಾನಂದಕರಮಪ್ಪಶರತ್ಕಾಲದೊಳ್ಸಮಸಿಸಿದ ನವರಾತ್ರಿಯ ಶುಭತಮಸಪ್ತಮಿವಾದಿನದೊಳ್ಕುಮಾರನಪ್ಪ ಚಾವುರಾಜೇಂದ್ರನ ಪಟ್ಟಾಭಿಷೇಕಕ್ಕಾಂಗ್ಲೇಯಸರ್ವಾಧಿಕಾರಿಯ ನಿರೂಪದಿಂ ರಮಾವಿಲಾಸದ ಚೆಲ್ವಾಜಂಬೆಯುಂ ಸೀತಾವಿಲಾಸದ ದೇವಾಜಂಬೆಯುಮುರಮನೆಯಧಿಕಾರಿಗಳಿಂ ಶುಭಸನ್ನಾಹಂಗೆಯಿಸಿದಾಗಳ್ ॥೩೧॥

ಕಂ ॥ ಲೋಕದ ನಿಜಾಭಿಷೇಕವಿ ।
ಲೋಕನಕೌತುಕಮನೆಂದು ಸಫಲಂಗೆಯ್ಯ ॥
ಲ್ಕಾಕುವರಂ ಕಯ್ಕೊಳ್ತಂ ।
ಸ್ವೀಕರಿಸಿದನಾಗಮೋಕ್ತದಿಂ ಕೌತುಕಮುಂ ॥೩೨॥

ಕಂ ॥ ಪ್ರಭುವಿನಭಿಷೇಕಕಾಗ ।
ಳ್ವಿಭೂಷಿಸಿದ ರಾಜಧಾನಿ ರಾಜಿಸಿತಿಂದ್ರಂ ॥
ಗಭಿಷೇಕಮಪ್ಪ ಸಮಯದೊ ।
ಳಭಿಶೋಭಿಸುತಿರ್ದ ದೇವನಗರಿಯ ತೆರದಿಂ ॥೩೩॥

ವ॥ ಇಂತು ಶುಭಸನ್ನಾಹಂ ವೆರೆಯುತ್ತಿರೆ ಚಾವರಾಜಂ ಚಾವಂ ರಾದಿರಾಜಲಕ್ಷ್ಮಣೋಪಲಕ್ಷಿತನಾಗಿ ಪಟ್ಟಾಭಿಷೇಕಮಂಟಪಕ್ಕೆ ಬಿಜಯಂಗೆಯ್ದು ನಿಜಕುಲೋದ್ಭವನಪ್ಪ ಕುವರನ ಪಟ್ಟಾಭಿಷೇಕಮಹೋತ್ಸವಮುನಿಟ್ಟಿಸಲ್ಕೆ ಸಾರ್ತಂದ ಚಂದಿರನ ಬಿಂಬವೆಂಬಂದದಿಂದುಪರಿಭಾಗದೊಳ್ವಿರಾಜಿಸುವ ರಾಜತಚ್ಛತ್ರದಿಂದೊಡಗೂಡಿದ ರಜತಮಯಭದ್ರಾಸನಮಂ ಪೂರ್ವಾಚಾರಾನುಸಾರದಿಂ ವಿರಿಸಿಂಗಂ ಕೈಲಾಸಾದ್ರಿಶೃಂಗಮನೇರುವಂತೇರುವುದುಮಾಸಮಯದೊಳ್ ॥೩೪॥

ವೃ ॥ ಪರಿಪೂತಾಮಲತೋಯರಾತಿತಟಿನೀತೀರ್ಥಂಗಳಿಂದುತ್ತರೋ ।
ತ್ತರಭದ್ರಾವಹಲಗ್ನದೊಳ್ಮೊಳಗೆ ನಾನಾತೋದ್ಯಹೃದ್ಯಸ್ವನಂ ॥
ಧರಣೀದೇವವರೇಣ್ಯರುಂ ಪ್ರಬಲಸೇನಾಧ್ಯಕ್ಷರುಂ ಮಂತ್ರಿಮು ।
ಖ್ಯರುಮಾಕೃಷ್ಣಮಹೀಂದ್ರಸೂನುಗಭಿಷೇಕಂಗೆಯ್ದರಾನೋದದಿಂ ॥೩೫॥

ವ॥ ಇಂತು ಪಟ್ಟಾಭಿಷೇಕಂ ಬಳೆದನಂತರಂ ಬವರಿಂಗೆಂದುಮಿಲಿಯೂ ಟೆಂದುಂ ನೆಗಳ್ತೆವೆತ್ತಾಂಗ್ಲೇಯಮುಖ್ಯಾಧಿಕಾರಿಗಳಾರಾಯನಂ ನಿರುಪಮಾ ಲಂಕಾರದಿಂದೊಪ್ಪುವಾಸ್ಥಾನಮಂಟಪಕ್ಕೆ ಬಿಜಯಂಗೆಯಿಸಿ ಕಯ್ವಿಡಿದು ಸಿಂಹಾಸನವನೇರಿಸುವುದುಂ ॥೩೬॥

ಕಂ ॥ ಆವಿಪುಲಸಭಾಮಧ್ಯದೊ ।
ಳಾವಿರ್ಭವಿಸಿದುದು ವಿವಿಧಮಂಗಳವಾದ್ಯಾ ॥
ರಾವಂ ಜಲಸಧಿಯೊಳಾ ।
ಕಾವಸರದೊಳುಣ್ಮುವ್ಮೊಗಳ ಘೋಷಂಬೋಲ್ ॥೩೭॥

ವ॥ ಬಳಿಕವಾಸ್ಥಾನದೊಳ್ನೆರೆದಿರ್ದಶೇಷಾಧಿಕಾರಿಗಳುಂ ಸಾಮಂತ ನರಪತಿಗಳುಂ ಸೇನಾಪತಿಗಳುಮರಸಂಗೆ ವಂದನಂಗೆಯ್ದುಚಿತಪ್ರಕಾರದಿಂ ದೋಲಗಮುಂ ಬೀಳ್ಕೊಳ್ವುದುಂ ॥೩೮॥

ಕಂ ॥ ಶುಭತಮಲಗ್ನದೊಳುರುತರ ।
ವಿಭವದೊಳುತ್ಸವದಿನಾಗಮೋಕ್ತಕ್ರಮದಿಂ ॥
ದಭಿಷಿಕ್ತನಾಕುಮಾರ ।
ಪ್ರಭುವುದಯಂಬಡೆದ ಬಾಲರವಿಯಂತೆಸೆದಂ ॥೩೯॥

ವ॥ ಅಲ್ಲಿಂಬಳಿಯಮಾಭರತಖಂಡಸರ್ವಾಧಿಕಾರಿ ಕುಮಾರನಪ್ಪ ಮಹಾರಾಜಂಗೆ ರಾಜಯೋಗ್ಯವಿದ್ಯಾಭ್ಯಾಸಂಗೆಯಿಸಲ್ಕೆ ನಿರವದ್ಯಪ್ರಜ್ಞಾ ಶಾಲಿಯಪ್ಪ ಮೂಲೀಸನ್ನೆಂಬಾಂಗ್ಲೇಯೋಪಾಧ್ಯಾಯನಂ ನಿರಿಸುವುದುಮಾಶಿ ಕ್ಷಾಧ್ಯಕ್ಷನಾರಾಯಗುವರನಂ ಮಹಾವಂಶಸಮುದ್ಭವರುಂ ಸಮವಯಸ್ಕ ರುಮಪ್ಪ ಸಹಪಾಠಿಗಳಿಂ ನೆರಪಿ ಸಕಲಶಾಸ್ತ್ರಸಾರವಿಚಾರಪರಿಣತರುಂ ಚತು ರುಪಧಾವಿಶುದ್ಧರುಮಪ್ಪ ಸಹಾಯೋಪಾಧ್ಯಾಯರಿಂದೊಡಗೂಡಿ ದಿನದಿನ ಮುಂ ಕಾಲನಿಬಂಧನಕ್ರಮದಿಂ ಪರ್ಯಾಯಂಗೊಂಡಾಂಗ್ಲೇಯಾದಿಭಾಷೆಗ ಳೊಳಂ ತತ್ಕಾಲೋಚಿತರಾಜನೀತಿಯೊಳಂ ವಾರುವದೇರಾಟದೊಳಂ ಶಸ್ತ್ರವಿ ದ್ಯೆಯೊಳಂ ಮಿಗವೇಂಟೆಯೊಳಂ ನಿರತಿಶಯಪ್ರತಿಭಾಶಾಲಿಯನಾಗಿಸಿದನದೆಂ ತೆನೆ ॥೪೦॥

ಕಂ ॥ ಅತಿಶಯಿಸಿದನಾಕೃಷ್ಣ ।
ಕ್ಷಿತಿಪಸುತಂ ಸತ್ಯದೊಳ್ಹರಿಶ್ಚಂದ್ರಮಹೀ ॥

ಪತಿಯಂ ಮತಿಯಲ್ಲಿ ಬೃಹ |
ಸ್ಪತಿಯಂ ತೇಜೋವಿಶೇಷದೊಳ್ದಿನಪತಿಯಂ ||೪೧||

ಕಂ || ಪಿಡಿದಂ ಕುದುರೆಯಮಾನಸ |
ದೊಡನೆಯೆ ಕಡಿವಾಣಮಂ ನಿಜಾಶಯದೊಡನಾ ||
ಕಡುಗಲಿಯಾವಾರುವಮಂ |
ನಡೆಯಿಸಿದಂ ಪ್ಲುತಪಲಾಯಿತಾದಿಮಗತಿಯೊಳ್ ||೪೨||

ವೃ || ಧ್ರುವನುಂ ಪ್ರಹ್ಲಾದನುಂ ಸೇವಿಸಿ ಮುರಹರನಂ ಬಾಲ್ಯದೊಳ್ಮಾನ್ಯರಾದ |
ಶಿವನಂ ಸದ್ಭಕ್ತಿಯಿಂದಂ ಪರಿಚರಿಸಿ ಮೃಕಂಡ್ವಾತ್ಮಜಂ ಮಾನ್ಯನಾದಂ ||
ಶಿವಲಕ್ಷ್ಮೀಕಾಂತರೊಳ್ಭೇದಮನೆಣಿಸದೆ ತಾನಿರ್ವರಂ ಸೇವಿಸುತ್ತಾ |
ಕುವರಂ ಮಾನ್ಯತ್ವಮಂ ತಾಳ್ದತಿಶಯಿಸಿದನಾಮೂವರಂ ಭಕ್ತಿಯಿಂದಂ ||

ವೆ|| ಮತ್ತಂ,

ಕಂ || ಮಾಲೀಸಂಕಲಿಸಿದನಾ |
ಬಾಲಂಗಧಿಕಾರಮಾರ್ಗದೊಳ್ದಿನದಿನಮುಂ ||
ನಾಳೀಕಸಖಂ ತತ್ತ |
ತ್ಕಾಲಮನನುಸರಿಸಿ ನಡೆವವೋಲ್ನಡೆವನುವಂ ||೪೪||

ಕಂ || ಅಯನಋತುಭೇದದಿಂ ವ್ಯ |
ತ್ಯಯಮುಂಟಪ್ಪಂತೆ ಮನಗತಿಯೊಳಾನರಪತಿಮೌ ||
ಳಿಯ ಸುತನ ನಡೆಪದೊಳ್ವ್ಯ |
ತ್ಯಯಮೊಂದಣಮಿರ್ದುದಿಲ್ಲ ಮಾಕ್ಷಿಸಲೆಂದುಂ ||೪೫||

ಕಂ || ಗುರುಬೋಧಿತಮಾರ್ಗದೊಳಾ |
ನರಪಾಲೋತ್ತಂಸಸೂನು ನಡೆಯುತ್ತಿರ್ದಂ ||
ಪಿರಿದಾದರದಿಂದೆನಲೇ |
ನೊರೆವುದೊ ನಿರುಪಮತದೀಯಸದ್ಗುಣಗಣಮಂ ||೪೬||

ವೆ|| ಇಂತು ವಿದ್ಯಾಭ್ಯಾಸಂ ನಡೆಯುತ್ತಿರ್ಪಾಗಳ್ಮಹಾವಿಳಾಸದ ಮಾರಾಣಿ ಚೆಲ್ವಾಜಂಬೆಯುಂ ಸೀತಾವಿಳಾಸದ ಮಾರಾಣಿ ದೇವಾಜಂಬೆಯುಂ ಕುಮಾರಂಗುಪನಯನಕಾಲಂ ಸನ್ನಿದವಾದುದೆಂದು ಪರ್ಯಾಲೋಚಿಸಿ ಪಿಂದೆ

ಮುಮ್ಮಡಿಯ ಕೃಷ್ಣರಾಜಂಗೆ ಬಳೆದುಪನಯನಮಹೋತ್ಸವಕ್ಕೆ ದಿಮ್ಮಡಿ ಯಾದುದೆಂದು ಲೋಕವೆಲ್ಲಂ ಕೊಂಡಾಡುವನ್ನಂ ನಿರುಪಮವೈಭವದಿಂ ಶ್ರೀಚಾಮರಾಜೇಂದ್ರಂಗುಪನಯನಸಂಸ್ಕಾರಮಂ ಬಳೆಯಿಸಲೊಡಂ ॥೪೭॥

ಕಂ ॥ ಉಪನಯಶುಭಸಂಸ್ಕೃತಿಯಿಂ ।
ದಪರಿಮಿತಕ್ಷಾತ್ರತೇಜಮಾವಿರ್ಭವಿಸ ॥
ಲ್ಲಸಶೋಭಿಸಿದಂ ತದ್ಭೂ ।
ಮಿಪತಸಯಂ ಸಾಣೆಯಿಕ್ಕಿದೊಳ್ಕನ್ನದವೋಲ್ ॥೪೮॥

ವ॥ ಇಂತುಪನಯನಸಂಸ್ಕಾರಮಂ ಪಡೆದು ಮುನ್ನಿಸಂತೆ ಮಹಾ ರಾಜಂ ವಿದ್ಯಾಭ್ಯಾಸಂಗೆಯ್ಯುತ್ತುಮಿರ್ಪಿನಂ ಮಾರಾಣಿ ರಮಾವಿಲಾಸದ ಚೆಲ್ವಾಜಂಬೆ ಶರೀರದೊಳನಾರೋಗ್ಯಮುಣ್ಮೆ ಕಾಲಗತಿಯಂ ಜೆಂತಿಸಿ ತನ್ನೆ ಡೆಯೊಳಿರ್ದ ಕುಮಾರಚಾಮರಾಜೇಂದ್ರನಂ ಸಪತ್ನಿಯಾಡೊಡಂ ಸಹೋದ ರಿಯಂತಿರ್ದ ಸೀತಾವಿಲಾಸದ ದೇವಾಜಂಬೆಯ ಕಯ್ಗಿತ್ತು ಪತಿಲೋಕಮುಂ ಸಾರಲಾಕುವರನರಸಂಚೆ ಸರೋವರದಿಂ ಸರೋವರಾಂತರಮುಂ ಸೇರ್ದಂತೆ ದೇವಾಜಂಬೆಯ ಸಾನ್ನಿಧ್ಯಮುಂ ಸೇರ್ದಾಕೆಯ ಪಿರಿದಪ್ಪಳ್ಕರಿಂಗೆಡೆಯಾಗಿ ತದಾಜ್ಞೆಯನಿನಿಸುಂ ವಿಾರದೆ ನೀಡುಂ ಪೊಗಳ್ಕೆಗೆ ಪಕ್ಕಾಗಿರ್ಪನ್ನೆಗಮಾಂ ಗ್ಲೇಯನಾಶಿಕ್ಷಾಧ್ಯಕ್ಷಂ ವಿದ್ಯಾಭ್ಯಾಸದೊಡನಂಭೋಧಿವರಮಾಕುಂಭಿನೀಂ ದ್ರಕುಮಾರನಂ ಸುಪ್ರಸಿದ್ಧಾನೇಕದೇಶಸಂಚಾರಂಗೆಯಿಸಿ ಲೋಕವ್ಯವಹಾ ರದೊಳಂ ಕುಶಲನಂ ಮಾಡಿದಬಳಿಕಂ ॥೪೯॥

ಕಂ ॥ ಕ್ರಮದಿಂ ಬಾಲ್ಯಂ ಕಳೆಯ ।
ಲ್ಸಮಭಿವ್ಯಕ್ತಾಂಗರಾಮಣೀಯಕನಾಭೂ ॥
ರಮಣಾತ್ಮಜನಂಕೂರಂ ।
ದ್ರುಮವೆನಿಸಿದ ತೆರದೊಳುದಿತಯೌವನನಾದಂ ॥೫೦॥

ವೃ ॥ ರಾಕಾಜಂದ್ರದುರಾಪಕಾಂತಿಲಹರೀಕಾಂತಾನನಂ ದಂತಿಶುಂ ।
ಡಾಕಾರಪ್ರತಿಪಕ್ಷಬಾಹುಯುಗಳಂ ಲಕ್ಷ್ಮೀಸಮಾವೇಶಪೀ ॥
ಠೀಕಲ್ಪಾಯತವಕ್ಷನುಕ್ಷಕುದಾಚಾರ್ಯಾಯಿತಾಂಸಂ ತದು ।
ರ್ವೀಕಾಂತಾತ್ಮಜನಂಗವೆತ್ತತನುವೋಲೇನಾಗಳೊಪ್ಪಿರ್ದನೋ ॥೫೧॥

ವ॥ ಇಂತು ಸಮುಧಿಗತಯೌವನನಾಗಿ ಮೆರೆಯು ತ್ತಿರ್ಪ್ಪ ಕುಮಾರಂಗೆ ಮಾರಾಣಿ ದೇವಾಜಂಬೆ ಮುನ್ನಮೆ ನಿಶ್ಚಯಿಸಿದರ್ದ ಶಾಂತರಾಜಕುಲಕಲಶಾಂಬುಧಿಕೌಸ್ತುಭನೆನಿಸಿದ ನರಸರಾಜನ ತನುಭವೆಯಾದ ಸಾಕ್ಷಾದ್ರಾಜ್ಯಲಕ್ಷ್ಮಿಯೆನಿಸಿದ ಕೆಂಪನಂಜಾಂಬೆಯೆಂಬಕನ್ಯಕಾಮಣಿಯಂ ಪರಿಗ್ರಹಿಸಿ ವಿವಾಹಮಹೋತ್ಸವಮುಂ ಬಳೆಯಿಸಲ್ಸಚಿವಾಗ್ರೇಸರನಪ್ಪ ರಂಗಾಚಾರ್ಯನೊಡನೆ ಮಂತಣಂಗೆಯ್ದುಂದಿಗೀಭರತಖಂಡಕ್ಕೆ ಚಕ್ರವರ್ತಿನಿಯೆನಿಸಿದರ್ದ ವಿಕ್ರೋರಿಯಾಮಹಾರಾಜ್ಞ್ಞಿಯನುಜ್ಞೆಯಂ ಪಡೆವುದುಂ ॥೫೦॥

ಕಂ ॥ ಅನುಪದಮೆ ಬಳೆವಧರಣೀಂ !
ದ್ರನ ಪರಿಣಯನುಂ ಕುತೂಹಲದಿನೀಕ್ಷಿಸಲೆಂ ॥
ದೆನೆ ಒಂದಂ ಕಾಣ್ಕೆಗುಡ |
ಲ್ಕನುಪಮಬಹುವಿಧಸುಮಂಗಳಾಂತು ವಸತಂ ॥೫೧॥

ವ॥ ಇಂತು ವಸಂತೋದಯಮಾಗೆ ವನಪ್ರದೇಶಂಗಳೆಲ್ಲಮುಲರ್ದ್ದ ಪೂಗಳಿಂದಿಡಿದ ಕರ್ಣಿಕಾರಂಗಳೆಸವ ಪೊಂಬಟ್ಟೆಯ ಗೂಡಾರಂಗಳೆನೆ ಚೆಂದಳಿರ್ಗಳಿಂ ಪುದಿದ ಮಾಮರಂಗಳ್ಕಸುವಣ್ಣದರಂಚೆಯನಾಂತು ನಿಂದಿರ್ಪ್ಪ ಪೇರಾನೆಗಳೆನೆ ಬಿರಿದಪಣ್ಗಳಿಂ ತಳೆದ ದಾಳಿಂಬದೊಳೆಡೆವಿಡದೆ ಕವಿದಿರ್ಪ್ಪ ಗಿಳಿವಿಂಡು ಕುದುರೆಥಟ್ಟಿನೆ ಯುಳ್ಳಲರ್ದ ಬಕುಳಂಗಳನಿವಂಡಂ ಬರೆಪೀರ್ದುದನಿಗುಡುವಾರಡಿಗಳ್ವೀರಪಾಣಂಗೆಯ್ದುರೆ ಸೊರ್ಕಿ ವೀರವಾದಂಗೆಯ್ವ ವೀರಭಟರೆನೆ ಮಾಂದಳಿರಂ ಕದ್ರುಂಕಿ ಕುಕಿಲ್ವ ಕೋಗಿಲೆಗಳ ಗಾವರಮೆ ಸೈನ್ಯಮುಂ ನೆರಪುವ ಸನ್ನೆಗಾಳಿಗಳಬ್ಬರಮೆನೆ ಮುಗುಳ್ತು ಕೊಂಕಿದ ಮಲ್ಲಿಗೆಯಬಳ್ಳಿಗಳಬ್ಬಲ್ವಿಲ್ಲಳೆನೆ ಕೆಂಪಡಿಸಿದಸುಗೆಯ ಮಲರ್ಗಳ್ಬರಯಿಗಳೆರ್ದೆವೊಕ್ಕು ಕೆನ್ನೀರಿಂ ಪೊರೆದ ಕೂರಂಬುಗಳೆನೆ ನಿಡುಮುಗುಳ್ಗಳಂ ತಳೆದ ಸಂಪಗೆಗಳ್ತಳತಳಿಸಿ ಪೊಳವ ಪಲವುಂ ಪೊಂಗಳಸಂಗಳನಾಂತ ಪೊಸದೇರ್ಗಳೆನೆ ನೀಡುಂಬಾಯ್ದೆರೆದ ಪೊಂಗೇದಗೆಗಳೊಳ್ಗಂಪನಾಂತು ಸುಳಿವ ತೆಂಗಾಳಿ ವಾರ್ತಾಹರಣನಪ್ಪ ರಾಯಬಾರಿಯೆನೆ ಮೆಲ್ಲೆಲರಿಂ ತೊನೆವ ನೆರೆ ಮಲರ್ದ ಗೋರಂಟಿಯ ಪೂದೊಡಂಬೆಗಳ್ಳಾಮರಂಗಳೆನೆ ಸೊಂಪಿನಲಂಪಿನಿಂದಲರ್ದು ಸೊಗಯಿಸುವ ತಾವರೆಗಳ್ನತ್ತಿಗೆಗಳೆನೆ ಮೂಜಗಮುಂ ಜಯಿಸಲ್ಕೆ ಕುಸುಮಾಕರ

ಸಜೀವಾಗ್ರೇಸರನಿಂದೊಡಗೂಡಿ ದಾಳಿಟ್ಟ ಕುಸುಮಾಸ್ತ್ರಮಹಾರಾಜನ ಪಾಳೆಯುಂಗಳೆಂಬಂತೆ ರಮಣೀಯಂಗಳಾಗಿರ್ದುವಂತುಮಲ್ಲದೆ ॥೫೭॥

ಕಂ ॥ ವಿರತಿಸುದುರ್ಗಮವಿಪಿನಾಂ ।
ತರಚರಮುನಿಲೋಕಹೃದಯಕರಿಗಳ್ಗಿವು ತಾಂ ॥
ಪರುಷಾಂಕುಶಂಗಳೆಂಬಂ ।
ತಿರೆ ಕಣ್ಗೊಳಿಸಿದುವು ಕಿಂಶುಕಪ್ರಸವಂಗಳ್ ॥೫೫॥

ವ॥ ಮತ್ತಂ,

ವೃ ॥ ದರಸ್ಫುಟಿತಮಾಧವೀಮಧುನಿಷೇವಣೋನ್ಮತ್ತಬಂ ।
ಭರಪ್ರಕರಗಾನದಿಂ ವಿಕಚಚಂಪಕಾಮೋದದಿಂ ॥
ಸರೋರುಹಪರೀಮಳೋದ್ವಹನಮಂದಮಂದೀಭವ ।
ನ್ಮರುತ್ಕ್ರಮದಿನೇಂ ಮನಂಗೊಳಿಸಿತೋ ವಸಂತೋದಯಂ ॥೫೬॥

ವ॥ ಮತ್ತಮಾಗಳ್ವಿರಹೋತ್ಕಂಠಿತಮಪ್ಪ ಕಾಮಿನೀಜನಂ ಯಾಮಿನೀಸಮಯದೊಳ್ ॥೫೭॥

ವೃ ॥ ಸ್ಮರಸಂತಾಪಭರಕ್ಕೆ ಸೈರಿಸದಣಂ ಶೀತೋಪಚಾರಾರ್ಥದಿಂ ।
ದಿರದಾರೋಹಿಸಿ ಚಂದ್ರಶಾಲೆಯೆಡೆಯುಂ ಮಂದಾನಿಲಸ್ಪಂದಮುಂ ॥
ಸ್ಫುರದಿಂದುದ್ಯುತಿಸಿಕ್ಥಿರಪ್ರಸರಮುಂ ತತ್ತಾಪಮಂ ಪೆರ್ಚಿಸ ।
ಲ್ಸ್ಮರಿಸುತ್ತುಂ ನಿಜಕಾಂತರಂ ಹರವಸಂಗೊಂಡಿರ್ದರೆಲ್ಲಿಯುಂ ॥೫೮॥

ವ॥ ಇಂತಖಿಲಜನಹೃದಯಾನಂದಕರಮಪ್ಪವಸಮಯದೊಳ್ಮಹಾರಾಣಿ ದೇವಾಜಂಬೆ ಲಬ್ಧವರ್ಣರಪ್ಪ ದೈವಜ್ಞರಿಂ ಶುಭಮುಹೂರ್ತಮಂ ನಿರ್ಣಯಿಸಿ ನಾಡುನಾಡಿನ ರಾಜಲೋಕಕ್ಕಂ ವಿದ್ವನ್ಮಂಡಲಕ್ಕಮಧಿಕಾರಿಜನಕ್ಕಂ ಪ್ರಜೆಗಳೊಳ್ಪ್ರಮುಖವರ್ಗಂ ವಿವಾಹಲಗ್ನಪತ್ರಿಕೆಯನಟ್ಟಿದವಾರ್ತೆಯಂ ಕೇಳ್ದು ॥೫೯॥

ಕಂ ॥ ಒದವಿದ ಸಂತೋಷರಸಂ ।
ಹೃದಯದೊಳಡಗಿರ್ಪೊಡಿಂಬುಸಾಲದೆ ಪೊರಸೂ ॥
ಸಿದುದಾನಂದಾಶ್ರುವ್ಯಾ ।
ಜದೊಳಖಿಲಜನಂಗಳಕ್ಷಿಮಾರ್ಗದಿನಾಗಳ್ ॥೬೦॥

ವ॥ ಆಗಳತಿಸಂಭ್ರಮದಿಂ ಸಿಂಗರಿಸಿದಾರಾಜಧಾನಿ ನಿಜಸೌಂದರ್ಯ ಸಂದರ್ಶನದಿಂನೊಗೆದಮಂದವಿಸ್ಮಯಾನಂದಭರದಿಂ ತುಂದಿಲರಪ್ಪ ಬೃಂದಾರಕರಂ ಪೊರಲಾರದವನಿತಲಕ್ಕಿಳತಂದ ನಡೆವಾಡಂಗಳಿನೆ ಬೀದಿಬೀದಿಯೊಳಂ ನಿರ್ಮಿಸಿದತಿವಿಚಿತ್ರಂಗಳಪ್ಪ ಕಾವಣಂಗಳೊಳಂ ಮುಂಗಳಾರ್ಣವತರಂಗಾಳಿಗಳೆಂಬಂತೆ ಕಣ್ಗೊಳಿಪ ಸುರುಚಿರಬಹುರೂಪತೋರಣಶ್ರೇಣಿಗಳೊಳಮಿಂತೀಮಹೋತ್ಸವದ ಸುದ್ದಿಯನಮರರ್ಗರಿಪಲೆನೆ ಗಗನಾಂಗಣದೊಳ್ನೀಡುಂ ನೀಳ್ದನೇಕಧ್ವಜಂಗಳೊಳಂ ಪೊಗಳ್ತ್ತಗಸದಳವೆನಿಸಿದಪಾರಶೋಭೆಯಂ ಪಡೆದಿರ್ದುದಂತುಮಲ್ಲದೆ ॥೬೧॥

ಕಂ॥ ಮನೆಮನೆಗಳುಮೇನೆಸೆದುವೊ |
ಏನುತಾಲಂಕಾರದಿಂದಮುತ್ಸವಸಂದ ||
ರ್ಶನಕೆ ಪರಿತಂದ ಬಾಂಧವ |
ಜನದಿಂದಂ ಕೂಡಿಮದುವೆಮನೆಗಳ ಪಾಂಗಿಂ ॥೬೨॥

ವ॥ ಮತ್ತವಾಗಳ್ ,

ಕಂ॥ ಸಾಮಂತರುಮಧಿಕೃತರುಂ |
ಧೀಮಂತರುಮಂತು ರಾಯಭಾರಿಗಳುಂ ತಾಂ ||
ಶ್ರೀಮಂತರು ಮೂರೂರ್ಗಳಿ |
ನಾಮೋದದಿನಲ್ಲಿ ಒಂದು ನೆರೆಯುತ್ತಿರ್ದರ್ ॥೬೩॥

ವ॥ ಬಳಿಕಾರಾಜಧಾನಿಯೊಳೆಲ್ಲಾಜನಮೆಂತು ಮೇಘೋದಯಮನೆ ಮಯೂರಂಗಳಂತಾಮಹೋತ್ಸವದಿನಮನೆ ಕಡಂಗಿ ನಿರುಕಿಸುತ್ತಿರೆ ವಿವಾಹಮಂಗಳಕ್ಕೆ ಪೂರ್ವಾಂಗಮಾದ ಯಥೋಕ್ತಸ್ವಸ್ತಿವಾಚನಗೋದಾನಮಂಗಳಾದಿಶುಭಕರ್ಮಕಲಾಪಂ ಬಳೆವುದುಂ ॥೬೪॥

ವೃ ॥ ಪರಮಾತ್ಮಜ್ಯೋತಿರರ್ಕೋದಯಸತತಸಮುನ್ನಿದ್ರಹೃತ್ಪುಂಡರೀಕಂ |
ಪರಕಾಲಸ್ವಾಮಿನಾಮಪ್ರಥಿತನವನಿಯೊಳ್ಸರ್ವತಂತ್ರಸ್ವತಂತ್ರಂ||
ಗುರುವರ್ಯಂ ಶಂಖಚಕ್ರಾಂಕನಮನೊಡರಿಸಲ್ವೀವರಾಂಸದ್ವಯಕ್ಕೀ |
ಧರೆಗಾದಂ ವ್ಯಕ್ತಮಾಯ್ತಾ ಅರಗುವರನ ನಾರಾಯಣಾಂಶಾವತಾರಂ||೬೫||

ವ॥ ಆಗಳಾಕುಮಾರನ ರಾಜಹಂಸಭಾವಮಂ ಪರಿಕಿಸಲವನಿತಲಕ್ಕಿಳಿತಂದು ಮುಂಟಪಾಗ್ರದೊಳ್ನಿಲಸಿದ ದಿವ್ಯಲೋಕದ ಪೊಂಗರಿಯರಸಂಚೆಯಿದೆಂಬಂತೆ ಕಣ್ಗೊಳಪ ಪೊಂಗಳಸದೊಳಂ ಮಹೋತ್ಸವಮಂ ನೋಡಲೆಳಸಿ ಕರಪಲ್ಲವದೊಳಪ್ಪರಿಜಾತಕುಸುಮೋಪಹಾರಮಂ ತಳೆದು ಸಾರ್ತಂದು ಸುವರ್ಣಸ್ತಂಭಂಗಳಂ ನೆಮ್ಮಿನಿಂದ ಗಂಧರ್ವಕನ್ಯೆಯರೆಂಬಂತೆ ಕರತಲದೊಳ್ನೀಲ್ವಮುಕ್ತಾಸರಂಗಳಂ ಮನಂಗೊಳಪ ಮಣಿಮಂಜುಳಸಾಲಭಂಜಿಕೆಗಳೊಳಂ ಮಹಾರಾಜನ ಸುಗುಣಂಗಳಿಂದನುರಂಜಿತೆಯಾದ ಮಹೀದೇವಿಯು ಮೂರ್ತೀಭವಿಸಿದನುರಾಗಮೆಂಬಂತೆ ರಂಜಿಸುವ ಕೆಂಬಟ್ಟ್ಯನುಣ್ವಾಸಿನೊಳಂ ಸುರಪಚಾಪಂಗಳಂ ಕೂಡಿದ ಶರದಭ್ರಮಂಡಲದಂತೆಸೆವ ನಾನಾವಿಧಮಣಿಮಯತೋರಣಂಗಳಿಂಸಂಗಳಿಸಿದ ಪಾಂಡರವಿತಾನಮಂಡಲದೊಳಂ ನರುಗಂಪನಾಳ್ದ ಪರಿಪರಿಯ ಪೂಮಾಲೆಗಳಿಂದೆಸಗಿದ ವಿಚಿತ್ರತರಾಲಂಕಾರಂಗಳೊಳಂ ಭದ್ರಾವಹಕದಳೀಕಾಂಡಯುಗಳೀಮಂಡಿತಂಗಳಪ್ಪ ಪೊಂಬಾಗಿಲ್ಗಳೊಳಮೆಣ್ದೆಸೆಯೊಳುಂ ಮಗಮಗಿಪ ಧೂಪವರ್ತಿಗಳೊಳ್ಗಂಪ್ಪುಗಳೊಳಂ ಪರಿವಡೆದು ಮಹಿಯೊಳ್ಪುರಪುರಮೆಂದು ನೆಗಳ್ತೆವಡೆದಿರ್ಪೀಮಹೀಸುರಪುರಮೆಂತಿಪ್ಪುದೊ ನೋಡವೇಳ್ಕುಮೆಂದು ಭೂತಲಕ್ಕಿಳಿತಂದು ನೋಡಿ ಬೆರಗಾಂತು ಮಿಡುಕದೆ ನಿಂದಿರ್ಪ ಸುಧರ್ಮೆಯೆಂಬಂತೆ ನೀಡುಂಬುಗೆಗೊಳ್ವ ವಿವಾಹಮಂಟಪದೊಳ್ ಸಭಾಸದರೆಲ್ಲರುಂ ತಮ್ಮತಮ್ಮ ಸಮುಚಿತಸ್ಥಾನಂಗಳೊಳ್ನಿರಿದಿರೆಯುಂ ಮೇಲುಪ್ಪರಿಗೆಯಗವಾಕ್ಷಮಂಡಲಂಗಳೊಳ್ಸಂದಣಿಸಿ ಕೌತುಕದಿಂದಂತಃಪುರಸೀಮಂತಿನಿಯರೆವೆಯಿಕ್ಕದೆ ಮಹಾರಾಜನಾಗಮನಮನೆ ಪಾರುತ್ತಿರೆಯುಂ ಗಣಿಕಾಜನಂಗಳ ಚರಣತಲಮಂಜುಮಂಜೀರಶಿಂಜಿತಂಗಳಂಕುರಿಸಲುಮೊರ್ಮೊದಲ್ಬಾಜಿಸಿದ ಮಂಗಳವರೆಗಳಬ್ಬರಮೆಣ್ದೆಸೆಯೊಳುಂ ಮೊಳಗಲುಂ, ಮಂಗಳಸ್ನಾನಂಗೆಯ್ದು ಪೀತಾಂಬರಮನುಟ್ಟು ನಿಸರ್ಗಸುಂದರಮಪ್ಪಂಗಮನಾಚಾರಾನುಸಾರದಿಂ ಸಿಂಗರಂಗೊಳಿಸಿ ತತ್ಕಾಲೋದಿತಹರ್ಷೋತ್ಕರ್ಷವಿರಾಜಮಾನವದನಚಂದ್ರನಾರಾಜೇಂದ್ರಂ ರಾಜೋಪಚಾರಂಗಳಂ ಮೆರೆಯುತ್ತೆ ಗಜರಾಜಗತಿಯಿಂದೆ ನಡೆತಂದು ವಿವಾಹವೇದಿಕಾಮಧ್ಯದೊಳ್ನಿಲೆಗೊಳಿಸಿರ್ದ ಪಿಂಜರಿಯ ಪಸೆವಣೆಯೊಳ್ಕುಂಡಿಸಲೊಡಂ ॥೬೬॥

ಕಂ ॥ ಮೇಲಿರ್ಪ್ಪಸೂರ್ಯನಂ ಗೆಲ್ |
ಲಾಲೋಚಿಸಿ ಪರಿಯುತಿರ್ಪ್ಪ ನಿಜತೇಜಮೆನ ॥
ಲ್ಮೇಲುಣ್ಮವ ಕಿರಣಂಗಳ |
ಜಾಲದಿನೆಸೆದತ್ತು ಮಣಿನುಕುಟಮಾನೃಪನಾ ॥೬೩॥

ವೃ ॥ ಎನ್ನಿಂ ಲೇಸನೆ ಪೊರ್ದಿದೀದಿನದೊಳಪ್ಪಿಂತೀವಿವಾಹೋತ್ಸವಂ |
ಮುನ್ನಿನ್ನಭ್ಯುದಯಕ್ಕೆನುತ್ತರಿಪುವಾಹಿರ್ಬುಧ್ನ್ಯನಕ್ಷತ್ರದಾ ॥
ಸನ್ನಂ ಭಾಸುರಮೂರ್ತಿಯುಗ್ಮಮೆನೆ ಕರ್ಣದ್ವಂದ್ವಲಗ್ನಂಸಮು |
ದ್ಭಿನ್ನಾಂಶೂಜ್ವಲಹೀರಕುಂಡಲಯುಗಂ ತೋರ್ಪತ್ತು ಚಾಮೇಂದ್ರನಾ॥೬೪॥

ಕಂ ॥ ಪರಿಪೂರ್ಣತೆಯಾಂತೊಳಗಡ |
ಗಿರಲೆಯ್ದದೆ ಪೊರಗೆ ಪೊಣ್ಮವಾನೃಪನ ಪರಿ ॥
ಸ್ಫುರಿತಪ್ರತಾಪಮೆನೆ ಪ |
ದ್ಮರಾಗಮಯಬಾಹುಪೂರಮೆಸೆದುವು ಭುಜದೊಳ್ ॥೬೫॥

ವೃ ॥ ಎಳವಿಸಿಲಾದಮಾವರಿಸಿರಲ್ಕುಪರಿಷ್ಠಳದಿಂದುರುಳ್ದ ಮುಂ |
ಬಳಿಯೊಡೆದತ್ತಲಿತ್ತಲೆರಡಾಗಿಪರೀಪಹಿಸುತ್ತುಮುರ್ವ್ವಿಸಿ ॥
ರ್ಮಳಝರದಿಂದಮೊಪ್ಪುವಮರಾದ್ರಿಯ ಸೊಬ್ಬಿಗೆತಂದುದೇಮವಸ್ತ್ರಸುಂ |
ಗಳತಲಲಂಬಮಾನಶತಯಷ್ಟಿಕಹಾರನು ಸೊಪ್ಪಿದಂ ನೃಪಂ ॥೬೦॥

ವ॥ ಅನುಪದಮೆ ಶುಭತನುಲಂಕಾರಭೂಷಿತೆಯಾಗಿ ಪರಮಾದರದಿಂ ಕಾತ್ಯಾಯನಿಯನಾರಾಧಿಸಿ ವಧೂವರಣಕ್ಕೆ ಕೆಂಪನಂಜಾಂಬಿಕೆ ಕನತ್ಕನಕಮಂಜೀರಂಗಳ ಸಿಂಜಾರವದಿಂ ಸಭಾಸದರ ಹೃದಯಬೊಳಾಶ್ಚರ್ಯಲಕ್ಷ್ಮೀ ವಿಹಾರಶಂಕೆಯನೊಡರಿಸುತ್ತೆ ಸಖೀಜನಂಬೆರಸು ಮಂದಮಂದಗತಿಯಿಂದೆ ಕಲ್ಯಾಣಮಂಟಪಕ್ಕೆ ಬಿಜಯಂಗೆಯ್ಯಲೊಡಂ ॥೬೧॥

ವೃ ॥ ಅರಸಿಯ ಮುಖಚಂದ್ರಂಮರ್ಬನೊತ್ತೊತ್ತಿ ಒಂದೀ |
ಕರಿಸಿ ಚಿಕುರಭಾರವ್ಯಾಜದಿಂ ರೋಧಿಸಲ್ತ ॥
ತ್ಪರಿಸರದೊಳೆ ಕಾಪಿಟ್ಟಿರ್ದುಶ್ರೇಣಿವೋಲ್ಮಂ |
ಗುರುಳ್ಗಳೊಳೆಸೆದತ್ತಾಬದ್ಧಮುಕ್ತಾಕಲಾಪಂ ॥೬೨॥

ಕಂ ॥ ಧರಿಸಿ ಕನಕಕಾಂಬರಮನಾ |
ಪರವಧುವಾಮೂಲಶಿಖರಪರಿಫುಲ್ಲಸುಮೋ ॥

ತ್ಕರದಿಂದೆ ಪುದಿದ ನವಕೇ |
ಸರಲತೆಯಂ ಪೋಲ್ಕೆಗೊಂಡದೇನೊಪ್ಪಿದಳೋ ||೭೩||

ಕಂ || ಧರಿಸಿರ್ಪ ವಿವಿಧರತ್ನಾ |
ಭರಣಂಗಳ ಕಾಂತಿಪುಂಜಮುಂಗಮನಳುರ ||
ಲ್ಕತಸಿಯುವಳ್ತೀಜೋಮಯ |
ನಿರತಿಶಯಪ್ರತಿಮೆಯಂತದೇನೊಪ್ಪಿದಳೋ ||೭೪||

ವ|| ಅಂತಪ ಶುಭಮುಹೂರ್ತದೊಳ್ಯಥಾಶಾಸ್ತ್ರಮಖಿಲಶುಭಕರ್ಮಂಗಳುಂ ಬಳಿಕೆ, ಹರ್ಷೋತ್ಕರ್ಷದಿಂ ಸಭಾಸದರೆಲ್ಲರುಂ ಸ್ತಂಭೀಭೂತರಾಗಿರೆಯಿರೆ ||೭೫||

ಕಂ || ವರಚಾಮನೃಪಂ ಲಜ್ಜಾ |
ಭರನಪ್ರಾನನೆಯ ಕೆಂಪನಂಜಾಂಬೆಯ ನಿ ||
ರ್ಜರತರುಕಿಸಲಯರುಚಿಧರ |
ಕರತಲಮಂ ಪಿಡಿದನೊಲ್ದು ಕರತಲದಿಂದಂ ||೭೬||

ಕಂ || ಅತಿಶಯದಿಂದೆಣ್ದೆಸೆಮೊಳ |
ಗಿತು ಬಾಜಿಗರಲ್ಲಿ ಬಾಜಿಸಲ್ಕುಭವಾದ್ಯ ||
ಪ್ರತತಿಯನಾದನಿಯಂ ಸ್ವಾ |
ಗತಮಂ ಬೆಸಗೊಂಡುದೆನಲಿವರ್ದನಿನುಡಿಯಿಂ ||೭೭||

ವ|| ಅನಂತರಂ,

ಕಂ || ಭಾಸುರತರನವರಜತಮ |
ಯಾಸನಮಂ ಸಾರ್ದ ರಾಜದಂಪತಿಗಳ್ಕೈ ||
ಲಾಸದ ಸಾನುವನೆಯ್ದಿದು |
ಮಾಸೋಮೋತ್ತಂಸರಂತೆ ರಾರಾಜಿಸಿದರ್ ||೭೮||

ವ|| ಆಗಳ್,

ಕಂ || ಎಸೆದುದು ಸಭ್ಯರ್ಪ್ಪಿಸಿದ |
ಕುಸುಮಾಕ್ಷತವಿತತಿ ಶಿರದೊಳೇಳ್ಗೆಗೆ ಬಪ್ಪಾ ||
ವಸುಧಾಧಿಪದಂಪತಿಗಳ |
ಪೊಸತೆನಿಸಿದ ಲೇಸಿನಂಕುರಪ್ರಕರಮೆನಲ್ ||೭೯||

ವ॥ ಅನುಪದಮೆ,

ಕಂ ॥ ವೇದೋಕ್ತಿಗಳಿಂದಾಶೀ ।
ರ್ವಾದಂಗೆಯ್ದರ್ವಧೂವರರ್ಗಿಳೆಯಮರ ॥
ರ್ವಾದರಮಪ್ಪಿಸಿದರ್ಪರ ।
ಮೋದಾರೋಪಾಮನಂಗಳಂ ರಾಜನ್ಯರ್ ॥೮೦॥

ವ॥ ಅಗಳಾವಿಕ್ಕೋರಿಯಾಚಕಕ್ರವರ್ತಿಸಿ ಬಹುಮಾನದಿಂ ಕಳಿಪಿದನ ರ್ಘ್ಯಭೂಷಣಂಗಳುಪಹಾರಮನಾಮಹಾರಾಜಂ ಪರಮಾದರದಿಂ ಕಯ್ಕೊಂಡ ನೆಂಬೆಡೆಯೊಳ್ ॥೮೧॥

ವೈ ॥ ಭರತಕ್ಷ್ಮಾಮಂಡಲಾಧೀಶ್ವರಿಯೆನಿಪ ಮಹಾರಾಜ್ಞಿಯಾಂಗ್ಲೇಯದೇಶಾಂ ।
ತರದೊಳ್ತಾನಿರ್ದೊಡಂ ಬಾಂಧವಸಮುಚಿತಸನ್ಮಾನದಿಂದಂತುದಾರಾ ॥
ಭರಣೋಪಾತ್ತಾಗ್ರಾಹ್ಯಮಂ ಕಯ್ಕೊಳಿಸಿದಳಿನಲೇನೆಂಬೆನೀರಾಯಸೊತ್ತ ।
ತ್ಪರಿಪೂರ್ಣಪ್ರೇಮಮಂ ಸದ್ಗುಣಗಣಯುತರ್ಗಿಲ್ಲೊಕಮೇ ವಶ್ಯಮಲ್ತೇ ॥

ವ॥ ಇಂತು ಪಾಣಿಗ್ರಹಣಮಾಗಲಾಮಹೋತ್ಸವದೊಳ್ಸಕಲಜನ ಮುಂ ಮಹಾರಾಜನಿಂದತಿವಿತರಣೆಯಸತ್ಕಾರಮುಂ ಪಡೆದುಚಿತಪ್ರಕಾರದಿಂದ ನರ್ಘ್ಯಸನ್ಮಾನಮುಂ ಕಯ್ಕೊಂಡುದದೆಂತೆನೆ ॥೮೩॥

ವ॥ ಪಲವಾತುಗಳಿಂದೇಂ,

ಕಂ ॥ ನಿರತಿಶಯಕ್ರಮದಿಂದಾ ।
ಪರಿಣಯದೊಳ್ಸತ್ಕೃತರ್ಕಳಾದ ಜನಂಗಳ್ ॥
ಭರತಂಗೆ ಭರದ್ವಾಜಂ ।
ವಿರಚಿಸಿದಾತಿಥ್ಯಮಂ ನಗೆಗೆ ಗುರಿಗೆಯ್ದರ್ ॥೮೪॥

ವೃ ॥ ಅಣಿಯರಮಲ್ಲಿ ಸಾರತರಭೋಜನದಿಂ ಸುಹಿತೋಪಚಾರದಿಂ ।
ತಣಿಯದನಿಲ್ಲ ತನ್ನಮನಮಾದನೆ ತೃಪ್ತಿಯನಾಂಪನಿತ್ತು ದ ॥
ಕ್ಷಣಿಯ ಪಲರ್ಕೆ ಕೊಳ್ಳದವನಿಲ್ಲ ಮನರ್ಘಪರಾರ್ಥ್ಯವಸ್ತುಭೂ ।
ಷಣಬಹುಮಾನಮಿಲ್ಲದನುಮಿಲ್ಲ ಮನಾದೃತನಿಲ್ಲಮಾವನುಂ ॥೮೫॥

ವ॥ ಇಂತು ನಾಲ್ಕುಂ ವರ್ಣದ ಜನಂಗಳುಚಿತಪ್ರಕಾರದಿಂ ಸತ್ಕಾ ರಬಹುಮಾನಂಗಳಂ ಪಡೆದ ಬಳಿಯವೊಂದಿರುಳಾರಾಜದಂಪತಿಗಳಂ ಪೊರ

ವೀಧಿಯೊಳುತ್ಸವಂಮೆರೆಯಿಸಲ್ಕೆ ನಿರವಧಿಕಸಮುತ್ಸಾಹದಿಂದಧಿಕಾರಿಗಳಖಿ
ಲಶುಭಸಂವರಣೆಯುಂ ಮಾಡಲೊಡಂ ॥೯೬॥

ಕಂ॥ ಸಕಲಜನಂ ಸಮಧಿಕಕೌ |
ತುಕದಿಂ ಪಾರುತ್ತುಮಿರ್ದತದ್ರಜನಿ ನಿಜ ॥
ಪ್ರಕಟಕ್ಷಣದಾಖ್ಯೆಗೆ ಸಾ |
ರ್ಥಕತೆಯನೊಂದಿಸಲೆನಲ್ಕೆ ಸಾರ್ದತ್ತಾಗಳ್ ॥೮೭॥

ಕಂ॥ ಮೆರೆದತ್ತೊಡನೊಡನುದಯಿಸಿ |
ದರಿಲ್ಗಳಿಂ ಗಗನಜಕ್ರಮೆತ್ತೆತ್ತಲುಮಾ ॥
ತೆರದಿಂದಾಪುರಜಕ್ರಂ |
ಮೆರೆದತ್ತು ಪರಸ್ಪರತ್ಪ್ರದೀಪೋತ್ಕರದಿಂ ॥೮೮॥

ಕಂ॥ ಪಿರಿದುಂ ಪ್ರಕಾಶಮುಂ ತಳೆ |
ದಿರಲಾಮಹಿಶೂರನಗರಮೆತ್ತಲುಮತಿಭಾ ॥
ಸುರಮಪ್ಪನೇಕದೀಪೋ |
ತ್ಕರದಿಂ ಪಗಲೆನಿಸುತಿರುಳದೇಂಬೆಳಗಿದುದೋ ॥೮೯॥

ವ॥ ಆಗಳಾಚಾಮರಾಜಂ ವಿಮಾನಾಂಕನಪಂಕಾರವುಂ ಕೂಂಕೆಸುವ
ಸುಂದರಾಂಗದನುಷಂಗದಿಂದಗಣಿತಮಣಿಮಯೋದಾರಹಾರ ಕೋಟೀರಕಟ
ಕಾಂಗುಳೀಯಕಾದಿಭೂಷಣಾಂಗಳನನುಗ್ರಹಿಸಿಯುಂ ಧರಿಸಿದ ಕನಕಾಂಬರ
ದಪಾರಕೋಭಾವೈಭವಮಂ ಮುಂಬರೆಯುದ ಮೆಯ್ಸಿರಿಯಿಂ ಜರಿಯುತ್ತುಂ
ತನ್ನಯ ಸಿರಿವೊಗಮಂ ಸಸಿಯೊಡನುಪಮಿಸುವ ಗರುವರಪ್ಪ ಕಬ್ಬಿಗರ
ಸುಡಿಯಂ ಪುಸಿಯಾಗಿಸದಿರಲ್ಕೆನೆ ಕತ್ತುರಿಯ ತಿಲಕಮಂ ಪೆರೆನೊಸಲೊಳಂ
ದಂಗೊಳಿಸಯುಂ ಸಿಂಗರಂಗೊಂಡು ಧವಳಾತಪತ್ರಚಾಮರಾದಿರಾಜಲಕ್ಷ್ಮೀ
ಲಕ್ಷಣಂಗಳಿಂದುಪಲಕ್ಷಿತನಾಗಿ ಶುಭತಮಾಲಂಕಾರದಿಂ ಮಂಗಳದೇವತೆ
ಯಂತೆ ಕಣ್ಗೊಳಿಸುವ ತನ್ನರಸಿಯೊಡನರಮನೆಯುಂ ಪೊರಮಟ್ಟು ಬಗೆಬ
ಗೆಯ ಬಣ್ಣದಿಂ ಜೆತ್ರಿಸಿದ ನಿಡುಸುಂಡಿಲಿಂದೊಪ್ಪುವ ಪಟ್ಟವರ್ಧನದ ಮೇಲೆ
ನೆಲೆಗೊಳಿಸಿದ ಮಣಿಮಯಸುವರ್ಣಮಂಟಪದೊಳ್ಮಂಡಿಸಿ ಮಹೇಂದ್ರಚಾ
ಪದಿಂದೊಡಗೂಡಿದ ಕಾರ್ಮುಗಿಲ ಮೇಲೆ ಪೌಲೋಮಿಯೊಡನೆ ದಿವ್ಯವಿಮಾ

ನಮನಡರ್ದ ಬಿಡಾಜನಂತೆ ವಿರಾಜಿಸುತ್ತಮುಂದವಿಭವದಿಂದೆರಡುಂಪಕ್ಕದೊಳ್ಮಹೋತ್ಸವಮಂ ನೋಡಲೌತ್ಸುಕ್ಯದಿಂ ನೆರೆದಿರ್ದನೇಕಸಹಸ್ರನಾಗರಿಕಜಾನಪದಜನಂಗಳಿಂದಿಟ್ಟಣಿಸಿದ ರಾಜವೀಥಿಯೊಳ್ಬಿಜಯಂಗೆಯ್ವಾಗಳ್ ॥೯೦॥

ವೃ ॥ ಚತುರಂಗಂ ವಿವಿಧಾಯುಧೋಜ್ವಳಮನೀಕಂ ಮುಂದೆ ಮೆಲ್ಮೆಲ್ಲನೆ ।
ಯ್ದಿತು ಚಾಮೀಕರಶಂಖಖಡ್ಗಪನುಮತ್ಪಕ್ಷೀಂದ್ರಸಿಂಹಾದ್ಯುದಂ ॥
ಚಿತನಾನಾವಿರುದಂಗಳಾಂತ ಭಟರುರ್ವ್ಯಕ್ಕಂಗಳೊಳ್ಸಾರ್ದರಾ ।
ಹತಭೇರೀಪಟಹಾದಿವಾದ್ಯಸನದಂ ಸಾರ್ದತ್ತು ದಿಕ್ಚಕ್ರಮಂ ॥೯೧॥

ಕಂ ॥ ನೃಪತೇಜೋವಿಜಿತಂ ಶಿಖಿ ।
ಯುಪಚಿತಸೌಹಾರ್ದನಾಗಿ ಪಲವುಂ ರೂಪಿಂ ॥
ದುಪಸೇವಿಸುತಾತನನಿ ।
ರ್ದಪನೆಂಬಂತೆಸೆದುವಲ್ಲಿ ದೀಪಾವಳಿಗಳ್ ॥೯೨॥

ವ॥ ಇಂತಸರಿವೋಯವೈಭವದಿಂದಾಭೂವಲ್ಲಭಂ ಮೆಲ್ಮೆಲ್ಲನೆ ಸಲ್ಲೀಲೆಯಿಂ ಮುಂಬರಿಯುತ್ತಿರೆ ಚೌಪಟಚೌಪಟದೊಳುಂ ॥೯೩॥

ವೃ ॥ ಇಟ್ಟ ನೇವುರದಿಂ ಝಣಂಝಣಮೆಂಬ ನಿಸ್ವನಮುಣ್ಮೆ ಮೇ ।
ಣೊತ್ತಿಟ್ಟ ರತ್ನವಿಭೂಷಣಾವಳಿ ಬಳ್ಕಿಮಿಂಚಿನ ಢಾಳಮುಂ ॥
ಪುಟ್ಟಿಸಲ್ತಲರಂಬಸಂಬನಿಸಲ್ಕೆ ಕಣ್ಮೆಗೆ ವಿಭ್ರಮಂ ।
ಬಟ್ಟಜವ್ವನವಾಂತ ವೇಸಿಯರೊಲ್ದು ನಾಟ್ಯಮನಾಡಿದರ್ ॥೯೪॥

ವ॥ ಮತ್ತಂ,

ಕಂ ॥ ಸಂಗಡಿಸಿದೆರಡು ಪಿಡಿಗಳ ।
ಬೆಂಗಡೆಗಿಟ್ಟಮರದೊಟ್ಟಿಲೊಳ್ನರ್ತಿಪವಾ ॥
ರಾಂಗನೆಯರ್ಕಾರ್ಮ್ಮಿಗಿಲೊ ।
ಳ್ಕಂಗೊಳಿಸುವ ಬಳ್ಕಿಮಿಂಚುಗಳ ವೋಲೆಸೆದರ್ ॥೯೫॥

ವ॥ ಇಂತಪ್ಪ ಮಹೋತ್ಸವಮನತಿಮಾತ್ರಕೌತುಕದಿಂ ಪೌರನಾರಿಯರಿಕ್ಕೆಲದೊಳಂ ಚಂದ್ರಶಾಲೆಗಳೊಳ್ನಿಂದು ಶೈಲಶಿಖರದೊಳೊಗೆದ ಪಲವುಂ ಪೂವಳ್ಳಿಗಳಂತೆಸೆಯುತ್ತೆ ನೋಡುತ್ತಿರ್ಪಿನವೊಂದೆಡೆಯೊಳೊರ್ವ ಮಡದಿ ಮಣಿ ತನ್ನ ಕೆಳದಿಯೊಡನೆ ॥೯೬॥

ಕಂ || ಬಂದಪನಿದೊ ನವಮದನಂ |
ಬಂದಪನಿದೊ ನಮ್ಮ ಕೆಂಪನಂಜಾಂಬೆಯಿನಂ ||
ಬಂದಪನಿದೊ ಚಾಮೇಂದ್ರಂ |
ಬಂದಪನಿದೊ ನೋಡು ನೋಡು ಸದ್ಗುಣಸಾಂದ್ರಂ ||೯೭||

ವ|| ಎಂಬುದುಂ ಮತ್ತವೊಂದೆಡೆಯೊಳೊರ್ವ ಮತ್ತಕಾಶಿನಿ ತನ್ನೊತ್ತಿನೊಳರ್ದ ಪೆಂಡಿರಂ ನೋಡಿ ||೯೮||

ಕಂ || ನೋಡಿರೆ ನೋಡಿರೆ ಕನ್ನಡ |
ನಾಡಿನ ಮಾರಾಯನಂ ಸಮಾಶ್ರಿತಲೋಕಂ ||
ಬೇಡಿದುದಂ ನೀಡುವನಂ |
ಮೂಡಿದ ನಿನ್ನೊರ್ವಜಂದ್ರನೆನೆ ತೋರುವನಂ ||೯೯||

ವ || ಎಂಬುದುಂ ಪೆರತೊಂದೆಡೆಯೊಳೊರ್ವ ವಿದ್ಯಾವತಿ ಸಹಪಾಠಿನಿಯುಂ ನೋಡುತ್ತೆ ||೧೦೦||

ಕಂ || ಲಲನೆಯರ ದೃಕ್ಚಕೋರಂ |
ಗಳನಾನಂದಿಸುವನಿಂದುವೋ ಹೃದಯಾಬ್ಜಂ ||
ಗಳನೆಯ್ದೆ ಸಮುಲ್ಲಾಸಂ |
ಗೊಳಿಸುವನೀ ತರುಣನೃಪತಿ ಭಾನುವೊ ತಿಳಿಯೆಂ ||೧೦೧

ವ || ಇಂತೆಂದಳಂ ಕೂರ್ತಾಸಹಪಾಠಿನಿ ||೧೦೨||

ಕಂ || ಅರವಿಂದ ಜಕೋರಂಗ |
ಳ್ಗುರುಮುದಮಂ ಬೀರುತಿರ್ಪ ಕಮಲಾಪ್ತಸುಧಾ ||
ಕರರಕ್ಷಿಗಳೆನಿಸಿದ ಸಿರಿ |
ಯರಸನಿವಂ ನೋಡು ನೋಡು ನಾರೀಮಣಿಯೇ ||೧೦೩||

ವ || ಎಂಬುದುಮಿನ್ನೊಂದೆಡೆಯೊಳೊರ್ವ ಬೆಲೆವೆಣ್ ತನ್ನೊಡನಾಡಿಯುಂನೋಡಿ ||೧೦೪||

ಕಂ || ಇಂತಸಹಾ ಪೊಸಜವ್ವನ |
ದಿಂ ತಳ್ತೆಸೆವಸದೃಶಾಂಗ ರೂಪನನೀಭೂ ||
ಕಾಂತನನಾಲೋಕಿಸಿದುದ |
ರಿಂ ತನಗೆಯ್ತಂದುದಿಂದು ಪರವಶಭಾವಂ ||೧೦೫||

ವ॥ ಎಂಬುದುಂ ಬೇರೊಂದೆಡೆಯೊಳೊರ್ವ ಸಬ್ಬವಕಾರ್ತಿ ತನ್ನೆಡೆ ಸಂದಿರ್ದ ಪೆಣ್ಮಣಿಗಳಂ ನೋಡಿ ನುಡಿದಳದೆಂತೆನೆ ॥೧೦೬॥

ಕಂ ॥ ಇವನೇಂ ಶಚಿಯೊತಗೂಡಿದ |
ದಿವಿಜೇಂದ್ರನೊ ರೋಹಿಣೀಸಮೇತಂ ರಾಕೇಂ ॥
ದುವೊ ರತಿಯೊಡಗೂಡಿದ ಕಂ |
ತುವೊ ಪುಣ್ಯಮೆನಿತ್ತೊ ಈತನಂ ವರಿಸಿದಳಾ ॥೧೦೭॥

ವ॥ ಎಂದಿಂತು ತಮ್ತಮ್ಮ ಬಗೆಗೊಪ್ಪಿದಂದದಿಂದೆಲ್ಲರುಂ ಸಲ್ಲಾಪಂಗೆಯ್ಯುತುಮಿರಲಲ್ಲಲ್ಲಿ ಮುಂಮುಂದೆ ಕನ್ನೆವೆಂಗಳೊಡನೊಡನೆ ಸಡಗರಿಸುತಿದಿರೆವಂದು ॥೧೦೮॥

ವೃ ॥ ಆರತಿಯೆತ್ತುವೆವೀರುಚಿರಾಂಗಂ |
ಗಾರತಿವಲ್ಲಭನೋರಗೆಯಾದಂ ॥
ಗೀರಸೆಯೊಳ್ವಿಜಿತಾರಿಗೆ ಚಾವೋ |
ರ್ವೀರಮಣಂಗತಿಧೀರಗುಣಂಗೆ ॥೧೦೯॥
ಯಾದವವಂಶಮಹೋದಧಿಚಂದ್ರಂ |
ಗಾದಿಮಪೂರುಷಪಾದವಿನಮ್ರಂ ॥
ಗಾದರದಿಂ ಶ್ರಿತಖೇದಹರಂಗಾ |
ಪಾದಿತಸಜ್ಜನಮೋದಭರಂಗೆ ॥೧೧೦॥

ವ॥ ಎಂದಿಂತಿಂತು ಮುಂಗಳಗೀತಂಗಳಂ ಪಾಡುತುಮಾರತಿಯುಂ ಬೆಳಗಿಶುಭಮುಂ ಪರಸಲಾ ಹರಕೆಗಳಂ ಕಯ್ಕೊಳ್ಳುತುಮುತ್ಸವಂಮೆರೆದಾಜನಪಂ ಜಯವಿಜಯಾಭವ ಎಂದು ಕೈವಾರಿಸುವ ವಂದಿಜನಸಂದೋಹದಿಂ ಕೃತಸಂಬಾಧಮುಂ ಸೌಧಮುಂ ಪ್ರವೇಶಿಸಿ ಬಳಿಕವೊಂದುದಿನಂ ವಿವಾಹಾಂಗಮೆನಿಸಿದೋಕುಳಿಯನಾಡಿದನದೆಂತೆನೆ ॥೧೧೧॥

ವೃ ॥ ಕರಾಕಲಿತಚಾರುಶೃಂಗಮಯನಾಳಿಕಾಯುಂತ್ರದಿಂ |
ಪರೀಮಳಝರೀಮಿಳದ್ಧೃಣವಾರಿಸಂಪಾತದಿಂ ॥
ಕರೀಂದ್ರತತಿ ಸುಂಡಿಲಿಂ ತೆಗೆದು ಸೂಸುವಂತಂಬುವಂ |
ಧರಾವರಕುಮಾರರೋಕುಳಿಯನಾಡಿದರ್ಲೀಲೆಯಿಂ ॥೧೧೨॥

ಕಂ || ಕನಕದ ಚೀರ್ಕೊಳವಿಯೆ ವಿಂ |
ಚೆನಿಸಲ್ಹರ್ವಾಟ್ಟಹಾಸನೇ ವೊಳಗಾಗಲ್ ||
ಜನಪಾಲಕುಮಾರಮಹಾ |
ಘನಸಿಕರಂ ಕರೆದುದಾಗಳೋಕುಳಿಮಳೆಯಂ ||೧೧೩||

ಇಂತುವಿವಾಹೋತ್ಸವದಿಂ !
ಸಂತೋಷಂಗೊಳಿಸಿ ಲೋಕಮಂ ದಿಕ್ಕಟವಿ ||
ಶ್ರಾನ್ತಯಶಂ ಚಾಮಧರಾ |
ಕಾಂತಂ ನಿತ್ಯೋತ್ಸವಂಗಳಿಂ ದೊಪ್ಪಿರ್ದಂ ||೧೧೪||

ಇದು ಜಗದ್ವಿದಿತ ಶ್ರೀಕಾಶ್ಯಪವಂಶಮುಕ್ತಾಮಣಿ ಶ್ರೀಗರಳಪುರೀಶಶಾಸ್ತ್ರಿ ತನೂಭವನುಂ ಶ್ರೀಮದಖಂಡ ಮಹೀಮಂಡಲ ಮಂಡನಾಯಮಾನ ಕರ್ಣಾಟಜನಪದ ಲಕ್ಷ್ಮೀವಿಹಾರೈಕರಂಗಮಹೀಭೂತ ಮಹೀಶೂರರಾಜಧಾನೀ ರತ್ನಸಿಂಹಾಸನಾಧೀಶ್ವರ ಯದುಕುಲಪಯೋನಿಧಿ ಪೂರ್ಣಚಂದ್ರಾಯಮಾಣ ಶ್ರೀಚಾಮರಾಜೇಂದ್ರ ತನಯ ಶ್ರೀಕೃಷ್ಣರಾಜಮಹಾರಾಜ ಸಂಸ್ಕೃತ ಕರ್ಣಾಟೋಭಯಪ್ರಬಚನೋಪಾಧ್ಯಾಯನುಂ ಮಹಾವಿದ್ವತ್ಪದಲಾಂಛನನುಂ ತನ್ಮಹಾರಾಜ ಕೃಷ್ಣರಾಜವಿತೀರ್ಣ ಕವಿತಿಲಕ ಬಿರುದಾಂಕಿತನುಮಪ್ಪ ಸೋದಲೆ

ಅಮ್ಮಶಾಸ್ತ್ರಿಯಿಂ ವಿರಚಿತವಾದ
ಮಹಿಶೂರ ಮಹಾರಾಜ ಚರಿತ್ರ
ಮೆಂಬ ಕರ್ಣಾಟ ಚಂಪೂ
ಮಹಾಕಾವ್ಯದೊಳ್
ಪಂಚಮಾಶ್ವಾಸಂ

ಸಂಪೂರ್ಣಂ.

ಷಷ್ಠಾಶ್ವಾಸಂ.

ಕಂ ॥ ತ್ರಿಗುಣಾತ್ಮಕನೆಂದೆನಿಸುತೆ ।
ಜಗದುದಯಸ್ಥಿತಿಲಯೈಕಕಾರಣನೆನಿಪಂ ॥
ನಿಗಮಶತಪ್ರತಿಪಾದ್ಯಂ ।
ಭಗವಂತಂ ನೀಡುಗೆಮ್ಮ ನೃಪತಿಗೆ ಶುಭಮಂ ॥೧॥

ಪೌಲೋಮಿಯೊಡ ಸುರಪನ ।
ವ್ಯೋಲೊಲ್ಲೊಡಗೂಡಿ ಕೆಂಪನಂಜಾಂಬಕೆಯಿಂ ॥
ದಾಲಲಿತಾಂಗಂ ಕೃಷ್ಣನೃ ।
ಪಾಲಸುತಂ ಒಳಿಕಪಾರಸುಖದಿಂದಿರ್ದಂ ॥೨॥

ವ॥ ಇಂತಿಪ್ಪಾಗಳ್ ಬಂಗಾಳದೊಳಿಪ್ಪಾಂಗ್ಲೇಯಸಾರ್ವಾಧಿಕಾರಿ ಸಂಪ್ರಾಪ್ತಯೌವನನಾಗಿಯುಂ ರಾಜ್ಯಭಾರಧುರಂಧರನಾಗಿಯುಮಿರ್ಪ ಚಾಮರಾಜೇಂದ್ರಂಗೆ ಪಿಂತೆ ಪೂಣ್ಕೆಗೆಯ್ದಿರ್ದನಾಳ್ಕೆಯಿಂ ತನ್ನಾಳ್ಕೆಯೊಳಿರ್ದ ಕರ್ಣಾಟದೇಶಾಧಿಪತ್ಯಮಂ ಪ್ರತ್ಯರ್ಪಿಸಲ್ಕಾಕ್ರವರ್ತಿನಿಯಪ್ಪ ವಿಕ್ಟೋರಿಯಾ ಮಹಾರಾಜ್ಞ್ಞಿಯಾಜ್ಞೆಯುಂ ಪಡೆದಾಡಂನಾಮಧೇಯನುವಾಂಗ್ಲೇಯನುಮಪ್ಪ ಚೆನ್ನಪುರೀಜನಪದಾಧಿಪಂಗೆ ನಿರೂಪಮಂ ಬರೆದೊಡಾತನದಂ ಚಾಮರಾಜೇಂದ್ರಂಗೆ ತಿಳಿಪಿ ಕನ್ನಡದ ನಾಡೊಳಿಲ್ಲಿಲ್ಲಿಯುಂ ಪ್ರಕಟಿಸಲೊಡಂ ॥೩॥

ಕಂ ॥ ಕುವರನ ರಾಜ್ಯಾಭ್ಯುದಯ ।
ಪ್ರವೃತ್ತಿಯಂ ವೃದ್ಧರಾಜ್ಞಿ ಕೇಳ್ದಾಕ್ಷಣದೊಳ್ ॥
ಸವನಿಸಿದಾನಂದಮಹಾ ।
ರ್ಣವದಲ್ಲಿ ಮುಳುಂಗಿ ಪಾರಮೆಯ್ದದಳಾದಳ್ ॥೪॥

ಆಗಳಾ ನಾಡೊಳಿಲ್ಲಿಲ್ಲಿಯುಂ,—

ವೃ ॥ ಪರಿಣತಮಾದುದೆಮ್ಮ ಸುಕೃತಂ ಒಯಕಾಲಕೆ ಪಿಂದೆ ಕೃಷ್ಣಭೂ ।
ವರನೆಸಗಿರ್ದನೇಕಗುರುದೈವತಭೂಸುರ ಸೇವೆಗಾದುದಿಂ ॥
ದುರುಫಲಮೆಮ್ಮ ನಾಡಸಿರಿಯೇಳ್ಗೆಯನಾಂತುದು ರಾಜ್ಯಭಾರಮಂ ।
ಧರಿಸುವನೆಮ್ಮ ಚಾಮನೃಪನೆಂದಖಿಲಪ್ರಜೆಗಾಯ್ತುಹೆಚ್ಚಳಂ ॥೫॥

ಇಂತಿವರ್ಣಗಳ್,—

ಕಂ ॥ ಉದಯಿಸಿತಾರಾಯನ ಸತಿ ।
ಯುದರದೊಳಾಶಂಸಿತಾತ್ಮಜನಕಾಭ್ಯುದಯಂ ॥
ಸದಮಳರೂಪದ ಪೆಣ್ಮಗು ।
ವುದಯಿಸಿದಂತಿಂದುಲೇಖೆ ಮೂಡಣದೆಸೆಯೊಳ್ ॥೬॥
ಆರಸಿಯಗರ್ಭಸುಧಾಸಾ ।
ಗರದೊಳಗುದ್ಭವಿಸಿ ಪದಪಿನರಮನೆಯನಲಂ ॥
ಕರಿಸುವ ರಾಜ್ಯಶ್ರೀಯೆನೆ ।
ನಿರುಕಿಸಲಾಪಸುಳೆ ಯಾಗಳೇನೊಪ್ಪಿದುದೋ ॥೭॥

ವ॥ ಅನಂತರಮತಿಮಾತ್ರಹರ್ಷದಿಂದಪರಿಮಿತವಿಭವದಿಂ ಚಾಮರಾಜೇಂದ್ರನಪತ್ಯೋತ್ಸವಮೆರೆದು ನಿರವಧಿಕಧನಧಾನ್ಯವಸ್ತ್ರಭೂಷಣಾದಿಗಳಿಂ ಪುರಜನಮಂ ಸಮ್ಮಾನಿಸಿ ರಾಜ್ಯೋದಯಾರಂಭದೊಳುದ್ಭವಿಸಿದ ಕಾರಣದಿಂ ದಾಕನ್ಯಾಮಣಿಗೆ ಜಯಲಕ್ಷ್ಮಿಯೆಂದುನಾಮಕರಣಂಗೆಯ್ದು ಸಮನಂತರಂ ರಾಜ್ಯಾಧಿಕಾರಸ್ವೀಕಾರಮಹೋತ್ಸವಸಮಯಮೊದವಲನಂತವಿಭವದಿಂದಧಿಕೃತಜನ ವಾರಾಜಧಾನಿಯಂ ಸಿಂಗರಿಸಲೊಡಂ ॥೮॥

ವೃ ॥ ಆಮುಹೋತ್ಸವಮಂ ವಿಲೋಕಿಸಲೊಲ್ದು ಬರ್ಪ್ಪಮರರ್ಕಳಾ ।
ವ್ಯೋಮಯಾನಕುಲಕ್ಕೆ ಮಾರ್ಗನಿರೋಧಮಾಗದಪಾಂಗಿನಾ ॥
ಯಾಮವನ್ನಿಜಕೋಟಿಲೋಲಪಟೀಕಶಾಹತಿಯಿಂ ಘನ ।
ಸ್ತೋಮಮಂ ಒಡಿದೋಡಿಪಂತೆಸೆದಿರ್ದುವಲ್ಲಿ ಪತಾಕೆಗಳ್ ॥೯॥

ಮತ್ತಮಲ್ಲಿ,

ಕಂ ॥ ನಿರುಕಿಸಲುತ್ಸವಮಂ ನಿ ।
ರ್ಭರಕೌತುಕದಿಂದೆ ನೆರೆದ ಜನಸಂಕುಲಮಂ ॥
ಪರಿಗಣಿಸಲಾಪ್ಪನವಸಂ ।
ಬರದೊಳ್ತಾರೆಗಳನೆಣಿಸಬಲ್ಲನದಾವಂ ॥೧೦॥

ಆ ಸಮಯದೊಳ್,

ಕಂ ॥ ಆಡಂಪ್ರಭುವಾಕನ್ನಡ ।
ನಾಡಂ ಶ್ರೀಚಾಮರಾಜನಾಳ್ಕೆಗಧೀನಂ ॥

ಮಾಡಲ್ನಿಜಬಲದಿಂದೊಡ |
ಗೂಡಿ ಮಹೀಶೂರರಾಜಧಾನಿಗೆ ಬಂದಂ ||೧೧||

ವ|| ಇಂತು ಬಂದಾಡಂಪ್ರಭುವಂ ಚಾಮರಾಜೇಂದ್ರಂ ಸಬಲಪರಿವಾರನಾಗಿದಿರ್ಗೊಂಡು ಕುಶಲಪ್ರಶ್ನೆಯಂ ಮಾಡಿ ರಾಜಮರ್ಯಾದೆಯಿಂ ಪೊಳಲನೆಯ್ದಿಸಿದ ಸಮನಂತರದೊಳ್ಸಮಸಿಸಿದ ರಾಜ್ಯಧಾರಣಶುಭದಿನದೊಳ್ಪೊಳ್ತಡ ಮಾರಾಜೇಂದ್ರಂ ರಾಜಮಾನಮಣಿಮಕುಟಪ್ರಭಾರಾಜಿಸರಾಜಿತಬಾಲದಿವಾಕರನುಂ ವದನಸುಧಾಕರಪಾರ್ಶ್ವದ್ವಯೋದಿತೋಭಯತಾರಕಾನುಕಾರಿಸಾರತರಹೀರಮಣಿಕುಂಡಲಾಲಂಕೃತಕರ್ಣಯುಗಳನುಂ ತರಳತರದ್ಯುತಿಶಾಲಿಗಾರುತ್ಮತಮಣಿತರಳಾಂಚಿತಹಾರಲತಾಬಂಧುರಕಂಧರನುಂ ರುಚಿರಾಂಗದರತ್ನಪ್ರಭಾಶೋಭಿತಭುಜಗರಾಜಸುಂದರಭುಜದ್ವಯನುಂ ನಿರುಪಮಾನಾಭಿನವಕನತ್ಕನಕಾಂಬರಾಲಂಕೃತಮಂಗಳಾಂಗನುಂ ಸುಮನೋರಮಕುಂಕುಮಪಂಕಲಲಾವಮಾಂಕಿತಲಲಾಟಪಟ್ಟನುಂ ವಿನಯಾವನನ್ರಸಚಿವಲೋಕವಿತೀರ್ಯಮಾಣಹಸ್ತಾವಲಂಬನುಂ ವಂದಿಜನಸಂಮೋಹನಿಗದ್ಯಮಾನಹೃದ್ಯನಿರವದ್ಯಯಶಸ್ಸಂಪದನುಮೆನಿಸಿ ನಿಜಾಸ್ಥಾನಮಂ ಪೊಕ್ಕಾಗಳಾರಾಜಸಭಾಮಂಟಪಂ ಮುಗಿಲೊಡ್ಡಿನ ಮೇಗಣ್ಗೆ ಪಸರಿಸಿ ಧರೆಯಜನಕೆಲ್ಲಮಿದು ಬಳ್ಳಿಮಿಂಚೆಂಬ ಬಗೆಯನೊಗೆಯಿಸುತೆ ತಳತಳಿಸಿ ಪೊಳೆವ ಪೊಂಬಳಯಿಗೆಯಿಂ ತಳ್ಪಿಸಿವ ಮೇಲುಪ್ಪರಿಗೆಯೊಳಂ ಮಹಾರಾಜನೌದಾರ್ಯಮಂ ಕೇಳ್ದು ನೀಡುಂ ಜೆಂತೆಯನಾಂತೊಣಗಿ ಬಳಿಸಂದೂಳಿಗಕ್ಕೆ ಸಾಲ್ಗೊಂಡು ನಿಂದಿರ್ದ ಬೃಂದಾರಕತರುಗಳೆಂಬಂತೆ ಕಣ್ಗೊಳಪ ವಿಚಿತ್ರರೂಪಂಗಳಪ್ಪ ಕಂಬಗಳೊಳಿಯೊಳಿಂಬುಗೊಂಡು ಮಹಾರಾಜನ ವಿಶ್ವಂಭರಾತ್ಮತೆಯನನುಕರಿಸುತಿಪ್ಪುವೆಂಬಂತೆ ತವ್ಮೊಳ್ಮಾಪ್ಪೊಳೆವ ಬಹಿರಂಗಣದೊಳ್ಬೀಡುಗೊಂಡಿಪ್ಪ ಮಹೋತ್ಸವಾವಲೋಕನಸಮುತ್ಸುಕಾಗತಾನೇಕಲೋಕಂಗಳಿಂ ಸುತ್ತುವರಿದಿಪ್ಪ ಚತುರಂಗಸೇನೆಯನೊಳಕೊಂಡೆಸೆವ ನೀಡುಂ ಬಿತ್ತರಂಬೆತ್ತ ನುಣ್ಗನ್ನಡಿಗಳೊಳಂ ನಿಜಕುಲೋದ್ಭವನಪ್ಪ ಮಹಾರಾಜನಂ ವಿಶೇಷಾಕಾರದಿಂ ನೋಡಲ್ಬಯಸಿ ನಿಜದೈವಶಕ್ತಿಯಿಂ ಕಳಂಕಮನುಳಿದನೇಕರೂಪಂಗಳಂ ತಳೆದು ಬಂದ ಚಂದಿರನ ಬಿಂಬಂಗಳೆಂಬಂತುಪರಿಭಾಗದೊಳ್ತೊಳತೊಳಪ ಪಲವುಂ

ಪಳುಕಿನದೀಪಭಾಜನಂಗಳೊಳಂ ತಮ್ಮ ತಮ್ಮ ಸಮುಚಿತಸ್ಥಾನಂಗಳೊಳ್ನಿರೆ ದಿಪ್ಪನೀಕಮಹನೀಯ ಸಭಾಸದರೊಳಂ ಪರಿಶೋಭೆವಡೆದು ನಭಸ್ಥಲದಂತೆ ರಾಜಹಂಸಸದಾಗತಿಸಮಂಚಿತಮಾಗಿಯುಂ ಯೋಗಶಾಸ್ತ್ರದಂತೆ ಸಮಾಕಲಿತಬಹುವಿಧಾಸನವಿಧಾನಮಾಗಿಯುಂ ತ್ರಿವಿಷ್ಟಪದಂತೆ ಸಂತತಶ್ರೀಲಾಮರಪರಿವೃಢೋಕ್ಕರಂಭಾಸಂಗತಮಾಗಿಯುಂ ಕೈಲಾಸದಂತೆ ರಾಜತಂತ್ರಿಲೋಕಪ್ರಥಿತಮಾಗಿಯುಂ ಪಾತಾಳದಂತೆ ನಿರಂತರಮಹಿತತಮಾಗಿಯುಮತಿವಿಭವದಿಂದೆಸೆಯುತಿರ್ದುದಂತುಮಲ್ಲದೆ ॥೧೦॥

ಕಂ ॥ ಘುಮುಘುಮಿಸಿತಾನ್ಯಪಾಸ್ಥ ।
ನಮನೆಡೆಯೆಡೆಯಲ್ಲಿ ರಜಸೆಗೊಳಿಸಿದ ನಾನಾ ॥
ಸುಮಮಾಲಿಕೆಗಳ ಸೌರ ।
ಭ್ಯಮುಮುತ್ತಮಧೂಪವರ್ತ್ತಿಗಳ ಪರಿಮಳಮುಂ ॥೧೩॥

ವ॥ ಇಂತಿಪ್ಪಾಗಳ್,

ಕಂ ॥ ಆರಾಯನಂಗವೆತ್ತಧಿ ।
ಕಾರಮೆನಲ್ಕೊಲ್ದು ಬಂದನಾಡಂಪ್ರಭುವಾ ॥
ಭೂರಮಣಸಭೆಗೆ ನಾಲ್ಕುಂ ।
ವಾರುವದಿಂದೆಸೆವ ನಿರುಪಮಸ್ಯಂದನದಿಂ ॥೧೪॥

ವ॥ ಅಂತು ಸಾರ್ತ್ತಂದನ್ಯಾದೃಶಸೌಜನ್ಯಾಕರನಪ್ಪಂಗ್ಲೇಯಮಹಾವಿಭುವಂ ಶ್ರೀಚಾಮಭೂವಲ್ಲಭಂ ರಾಜಮರ್ಯಾದೆಯಿಂ ಪುರಸ್ಕರಿಸಿ ರಾಜಯೋಗ್ಯಾಸನದೊಳ್ಕುಳ್ಳಿರಿಸಿ ತಾನುಮಾತನಪ್ಪೊರೆಯೊಳ್ರಾಜವಿಷ್ಟರದೊಳುಪವಿಷ್ಟನಾಗೆ ಸಕಲಸಭಾಸದರುಂ ಕೇಳ್ವಿನಮಾ ಆಂಗ್ಲೇಯಪ್ರಭು ಮಹಾರಾಜಂಗಭಿಮುಖನಾಗಿ "ಸ್ವಸ್ತಿ ಶ್ರೀಚಾಮರಾಜೇಂದ್ರ ನಿನಗಿಂದಿನ್ನಿವರಮೆಮ್ಮಕಯ್ಯೊಳಿರ್ದೀಮಹಿಶೂರರಾಜ್ಯಾಧಿಪತ್ಯಮಂ ಪ್ರತ್ಯರ್ಪಿಸಲ್ಕೀರಾಜಕುಲಕ್ಕೆ ನಿರಂತರಹಿತಾಶಂಸಿನಿಯಪ್ಪ ಚಕ್ರವರ್ತ್ತಿನಿಯಾಜ್ಞಾತಿಯಂ ಪಡೆದು ಬಂಗಾಳದೊಳಿಪ್ಪ ರೈಫನ್ನೆಂಬಾಂಗ್ಲೇಯಸರ್ವಾಧಿಪತಿ ನಿಮಿತ್ತಾಂತರದಿಂದಿತ್ತಲೆಯ್ತರಲವಕಾಶಮಂ ಪಡೆಯದೆನಗೆ ನೇಮವಿತ್ತಮೂಳ್ಕೆಯಿಂ ನಿಮ್ಮವಂಶಕ್ಕೆ ನಡೆದು ಬಂದೀಕನ್ನಡನಾಡಿನರಸುತನಮಂ ಕಯ್ಕೊಳಿಸಿದೆನಿದಂ ಧರ್ಮ್ಮದಿಂ ನೀನೆಮ್ಮ

ವಶವರ್ತಿಯಾಗಿ ಪಾಲಿಸುವುದೆ" ಂದು ರಾಜ್ಯಪ್ರತ್ಯರ್ಪಣಾಂಕಪತ್ರಿಕೆಯಂ ಘಂಟಾಘೋಷವೋದಿ ಪರಮಾವೋದದಿಂದದಂ ಪ್ರಖ್ಯಾತಯಶೋವಿಭೂತಿ ಭರತಖಂಡಸರ್ವಾಧಿಪತಿ ರಾಜಮರ್ಯಾದೆಯಿಂ ಕಳಿಪಿರ್ದನರ್ಘನವರತ್ನ ಹಾರಾಂಗುಳೀಯಕಾದಿಬಹುಮಾನದೊಡನಾಪೊಡವಿಯಾಣ್ಮನ ಕಯ್ಗೆ ಸಮರ್ಪಿಸಲೊಡಂ ॥೧೫॥

ಕಂ ॥ ಬಲಮರ್ದನಿಕ್ಕಿ ಕಿಡಿದೋ |
ರ್ದಲಘುತರಂಗಳಹ ಲೋಹಮಯನಳಿಕಂಗಳ್ ॥
ಪಲವು ಸಬೆದೋಮತಾರ್ದುವು |
ಜಲದಂಗಳ್ಮಿಂಚಿನೊಡನೆ ಗಾವರಿಸುವವೋಲ್ ॥೧೬॥

ವ॥ ಇಂತು ರಾಜ್ಯಪ್ರತ್ಯರ್ಪಣಂಗೆಯ್ದಾಂಗ್ಲೇಯವಿಭುವಂ ಕುರಿತು ಚಾಮರಾಜೇಂದ್ರನಾದರಂಬೆರಸು ಮೆಲ್ನಗೆಯಾಬೆಳ್ದಿಂಗಳಾಸ್ಥಾನಮಂ ಬೆಳಗುವಿನಂ "ಶ್ರೀಮದಾಂಗ್ಲೇಯಮಹಾವಿಭುವೆ ಕುಲಕ್ರಮಾಗತಮಪ್ಪೀರಾಜ್ಯಾಧಿಕಾರಮನೆನಗಿಂತು ದಯೆಗೆಯ್ದುದೇ ವಿಕ್ಟೋರಿಯಾಚಕ್ರವರ್ತಿನಿಗೀಮಹಿಕೂರರಾಜಕುಲದೊಳಿಪ್ಪ ನಿರತಿಶಯವಾತ್ಸಲ್ಯಮಂ ಪ್ರಕಟಿಸಿದಪುದಿದರ್ಕಂ ನೀಡುಂ ಕೃತಜ್ಞನಾಗೆಮ್ಮ ಸಂತತಿಗೆ ಸಡದುಬಂದೀರಾಜ್ಯಮಂ ಕ್ಷೇಮದಿಂದಭಿರಕ್ಷಿಸಲುಜ್ಜುಗಿಸುವೆನೆಂಬೀಯೆನ್ನ ಸಂಭಾವನೆಯಂ ಪಿನ್ನಪಮನಾಮಹಾರಾಜ್ಞಿಗರಿಪವೇಳ್ಕುಮೆಂದಭ್ಯರ್ಥಿಸುವೆ" ನೆಂದು ಮೃದುಮಧುರಗಂಭೀರವಾಗ್ಧೋರಣಿಯಿಂ" ನುಡಿದು ಬಹಿರಂಗಣದೊಳ್ನೆರೆದಿರ್ದಸೈನಿಕರ ಕಯ್ಗೀವಿಗಳ ಗಾವಳಿಯುಂ ಜಯಜಯಕೋಲಾಹಲಮುಂ ದೆಸೆದೆಸೆಯೊಳ್ಮೊಳಗೆ ರಾಜಮರ್ಯಾದೆಯಿಂದಾಂಗ್ಲೇಯಾಧಿಪತಿಯುಂ ಸನ್ಮಾನಿಸಿ ಬಳಿಕುಚಿತಪ್ರಕಾರದಿಂದಖಿಲಸಾಮಾಜಿಕರಂ ಪತಿಕರಿಸಿ ಮಹೋಲ್ಲಾಸದಿಂದೋಲಗಮಂ ಬೀಳ್ಕೊಡಲೊಡಂ ॥೧೭॥

ಕಂ ॥ ಅರಸನವಂ ತಳೆಯಲ್ಬೂ |
ಭರಮಂ ಸ್ವರಸಾತಿಶಯಮನಂದು ಘನಂಗಳ್ ॥
ಧರೆಯೊಳ್ತೋರ್ದುವೊ ಎನಲೇ |
ನೊರೆವೆಂ ಶಂಸಿತಸುಭಿಕ್ಷಮಾದುದು ವರ್ಷಂ ॥೧೮॥

ವ|| ಅಂದಿನ ಪಿಂಬಗಲಾರಾಯನೋಲಗಂಗೊಟ್ಟು ಸಿಂಹಾಸನದೊಳ್ಕಂಡಿಸಿ ಮಾಂಡಲಿಕಪ್ರಮುಖರಪ್ಪ ಸಭಾಸದರ ಸಮಕ್ಷಂ ಮಹಾಮಾತ್ಯಾಧಿಕಾರದೊಳ್ಮನ್ನರಮನೆಯ ಕಾರ್ಯಾಧ್ಯಕ್ಷನಾಗಿರ್ದ ರಂಗಾಚಾರ್ಯನುಮನಂ ತುಪಮಂತ್ರಿವರ್ಗಾಧಿಕಾರದೊಳ್ತಂಬುಸೆಟ್ಟಿರತ್ನಸಭಾಮುದಲಿಪೂರ್ಣಕೃಷ್ಣರಾಯರೆಂಬಧಿಕಾರಿಶ್ರೇಷ್ಠರುಮಂ ನೇಮಿಸಿ ರಾಜ್ಯಾಧಿಕಾರಕ್ಕುಪಕ್ರಮುಂಗೆಯ್ದು ಸಮುಜಿತರಾಜಮರ್ಯಾದೆಯಿಂದೋಲಗಮುಂ ಬೀಳ್ಕೊಟ್ಟನಲ್ಲಿಂ ಬಳಿಯಂ ॥೧೯॥

ವೃ || ಪಿಂತಾರುಮಿಾತೆರದೊಳೊರ್ವರುಮಾಳ್ದರಿಲ್ಲಂ !
ಮುಂತಾಳ್ವರಿಲ್ಲಮವನೀಶ್ವರರೆಂದು ನೀಡುಂ ||
ಸಂತೋಷದಿಂ ಪ್ರಕೃತಿಗಳೊಪ್ಪಗಳುತ್ತಿರಲ್ಕೂ |
ಕಾಂತಂ ಧರಿತ್ರಿಯನವಂ ಪೊರೆಯುತ್ತುಮಿರ್ದಂ ॥೨೦॥

ವ|| ಅದೆಂತೆನೆ,

ವೃ || ಧರಣೀಮಂಡಲದೊಳ್ನೆಗಳ್ತೆವಡೆದಿಪ್ಪಾಂಗ್ಲೇಯರಾಜಾಧಿರಾ |
ಜರ ರಾಜ್ಯಾಧಿಕೃತಿಕ್ರಮಂ ಪರಿಕಿಸಲ್ಕುತ್ಕೃಷ್ಟಮಾಗಿಪ್ಪುದೆಂ ||
ದರಿಯುತ್ತಂತಹ ದಂಡನೀತಿಪಥದಿಂ ಕರ್ನಾಟಭೂಜಕ್ರಮಂ |
ಪೊರೆಯುತ್ತಿರ್ದನವಂ ಪ್ರಜಾಳಿಗನುರಾಗಂ ತನ್ನೊಳುಕ್ಕುತ್ತಿರಲ್ ॥೨೧॥

ಕಂ || ಯದುವಂಶಪಯೋಧಿಗೆ ಶಾ |
ರದಚಂದ್ರಂ ಸತ್ಯದೊಳ್ಹರಿಶ್ಚಂದ್ರಂ ಧ ||
ರ್ಮದೆ ರಾಮಚಂದ್ರನೆನಿಸುತೆ |
ಪದುಳದೊಳಿಳೆಯಾಳುತಿರ್ದನಾನೃಪಚಂದ್ರಂ ॥೨೨॥

ವ|| ಇಂತಿಪ್ಪಾಗಳ್,

ವೃ || ಭರತಕ್ಷ್ಮಾತಲಚಕ್ರವರ್ತಿಗಳೆನಿಪ್ಪಾಂಗ್ಲೇಯರಿಂ ಚಾಮಭೂ !
ವರಚೂಡಾಭರಣಂ ವಶೀಕೃತನೆನಿಪ್ಪಾಮಾತದಂತಿರ್ಕೆ ಮಾಣ್ ||
ಧರಣೀರಕ್ಷಣದಕ್ಷಿಣಂಗೆ ಸುಗುಣಾಂಭೋರಾಶಿಗಾಯತ್ತರೆ |
ಲ್ಲರುಮಾತಂಗವರೆಂದೆನಲ್ಕದೆನಿತೋ ಸೌಜನ್ಯಮಾರಾಯನಾ ॥೨೩॥

ವ|| ಮತ್ತಂ,

ಕಂ|| ಬಗೆದಿರ್ದನವಂ ಪ್ರಜೆಗಳ |
ದುಗುಡಮೆ ಪಿರಿದಪ್ಪ ತನ್ನ ದುಗುಡಮೆನುತ್ತುಂ ||
ಸೊಗಮೇ ಕಡುಸೊಗಮೆನುತುಂ |
ಜಗದೊಳಗಿಲ್ಲಿನ್ನರಾರುಮಿಳೆಯಾಣ್ಮರೆನಲ್ ||೨೪||

ವೃ|| ತಮತಮಗೊಲ್ದವರ್ಗೆಳಸಿವಂತು ಪಲರ್ಮೆ ಮಸೋರಥಾರ್ಥಮಂ |
ಪ್ರಮದದೊಳೀವರನ್ಯಜನಕೀಯದರಿರ್ಕೆಪು ಮಾನವಾಧಿಪ ||
ರ್ನಮುಚಿತತಾರತಮ್ಯದೊಳುವಾಶ್ರಿತರರ್ಗೆಲ್ಲಮಕಾರಣೋಪಕಾ |
ರಮನೆಸಗುತ್ತುಮಿರ್ದ ವರಚಾಮನೃಪಂಗೆಣೆವರ್ಪರಾರೊಳರ್ ||೨೫||

ಕಂ|| ತನ್ನವೊಲತಿಶಯಸುಖದಿಂ |
ತನ್ನನುಬಂಧಿಗಳುಮಿರ್ಪ ತೆರದಿಂದವರಂ ||
ಸನ್ನುತಗುಣನಾಭೂಪತಿ |
ಮನ್ನಿಸುತಿವಾರ್ತ್ಥವಿತ್ತು ಸಲವುತ್ತಿರ್ದಂ ||೨೬||

ಕಂ|| ಬೆಸನೀವನಧಿಕೃತರಾ |
ವಸುಧಾಧಿಪನಾಧಿಪತ್ಯಸಮಯದೊಳುಳಿದಂ ||
ದು ಸಖಾಯನಂತೆ ವೋಲ್ವ |
ರ್ತ್ತಿಸುತಿರ್ದನೆನಲ್ಕದೇನವಂ ಸಮಮತಿಯೋ ||೨೭||

ಕಂ|| ಆರೋಗ್ಯದೊಳಂ ನಿದ್ರಾ |
ಹಾರಂಗಳೊಳಂ ಸಮಂತು ಸೇವಕಜನಮಂ ||
ಪೇರೂಲವಿಂ ತನ್ನಂತಾ |
ಕಾರುಣ್ಯಾಂಬುನಿಧಿ ತಳಿದು ಪೊರೆಯುತ್ತಿರ್ದಂ ||೨೮||

ಮತ್ತಂ,

ವೃ|| ಕಾಮನದರ್ಪಮಾವುದು ಬೃಹಸ್ಪತಿಗೊಳ್ಳಿತು ಮಾನಮಬ್ಧಿಯೊ |
ಳ್ತಾಮರಸಪ್ರಿಯಂಗೆ ಮುಳುಗಿಪ್ಪುದೆ ನೂಳದು ಲೇಸೆನಿಕ್ಕುಮೀ ||
ಭೂಮಿಯೊಳಿಲ್ಲಿ ಕರ್ಣನ ಜಸಕ್ಕೆಡೆಯಿರ್ಕುಮಮೇಯರೂಪಧೀ |
ಧಾಮವಿತಾರಣಂ ಧರಣಿಯಂ ಪೊರೆಯುತ್ತಿರೆ ಚಾಮಭೂವರಂ ||೨೯||

ಎಂದು ಲೋಕಮೆಲ್ಲಂ ಪೊಗಳುತಿರ್ಪಿನಂ,

ಕಂ|| ಬಿನಯಸಿರಿಗಾನೃಪಂ ತಾ |
ಯ್ವನೆ ಕರುಣಾರುಧಿರಿಗೆ ಪುಟ್ಟಿದೆಡೆ ನಯಸಂಪ ||
ತ್ತಿನ ಬಲ್ಲಿನಿ ಶಾಂತಿಯ ನೆಲೆ |
ವನೆ ತಾನೆನಿಸುತ್ತೆ ಸಲಪುತಿರ್ದಂ ನೆಲನಂ ||೩೦||

ಮತ್ತಂ,

ಕಂ|| ಮನುಜಾಧೀಶನವಂ ದು |
ರ್ಜನಘೂಕಾವಳಿಗೆ ವಾಸರಾಧೀಶ್ವರನೆಂ ||
ದೆನಿಸಿರ್ದಂ ಸುಜನವ್ರಜ |
ವನಧಿಗೆ ತಾಂ ಪೂರ್ಣಚಂದ್ರನೆಂದೆನಿಸಿರ್ದಂ ||೩೧||

ಮತ್ತಂ,

ಕಂ|| ಸಕಲದಿಶಾಚರನಕ್ಷಯ |
ನಕಳಂಕಂ ಚಾಮನೃಪಯಶಶ್ಶೀತಕರಂ ||
ಸಕಳಂಕಂ ಪೂರ್ವಾಪರ |
ಕಕುಪ್ಪರಂ ಕ್ಷಯಿ ಶಶಾಂಕನಂ ಮೀರಿರ್ಕುಂ ||೩೨||

ಮತ್ತಂ,

ಕಂ|| ಉರುಂ ವೈರಿಗಳಿಲ್ಲದ |
ಕಾರಣದಿನಜಾತಶತ್ರುವೆನಿಸಿರ್ದನಮಂ ||
ಕೌರವರ ಶತ್ರು ಧರ್ಮಕು |
ಮಾರಂ ತಾನೆಂತಜಾತಶತ್ರುವೆನಿಕ್ಕುಂ ||೩೩||

ವ|| ಇಂತಾಬಚಾಮರಾಜೇಂದ್ರನಮಾತ್ಯವರ್ಯನಪ್ಪ ರಂಗಾಬಚಾರ್ಯನೊಡವೆರೆದರಸುಗೆಯ್ಯುತ್ತೆ ನಾಡೆ ಬಿತ್ತರಂಗೊಂಡಿರ್ಪ್ಪ ತನ್ನ ನಾಡೊಳಗೆ ದೇಶಕಾಲಂಗಳ ವೈಷಮ್ಯದಿಂ ಪ್ರಜೆಗಳ್ಗಡಸುವೆಡರ್ಗಳಂ ತಿಳಿದೆಸಗಲ್ವೀಡಿದ ಪೊಸಪೊಸತೆನಿಪ ರಾಯಗಟ್ಟಳೆಗಳ್ಗವರೊಪ್ಪಿಗೆಯನಪ್ಪುಗೆಯ್ಯಲ್ಕೆ ನಾಡಿನೆಲ್ಲಾಗಡಿಗಳಂ ಪ್ರಜಾಪ್ರತಿನಿಧಿಗಳಂ ಬರಿಸಿ ಕುಲಕ್ರಮಾಗತಮಪ್ಪ ನವರಾತ್ರಿಯಸಿಂಹಾಸನಾರೋಹಣೋತ್ಸವಂ ಬಳೆದ ಬಳಿಯಂ ಪ್ರಜಾಪ್ರತಿನಿಧಿಸಭೆಯೆಂಬೊಂದು ಸಭೆ ನಡೆವಂತು ಕಟ್ಟಳೆಯಂ ಮಾಡಲೊಡಂ ||೩೪||

ಕಂ|| ತಿಳಿದೆಮ್ಮಯ ಕಷ್ಟಸುಖಂ |
ಗಳನಿಂತಿನ್ನೆವರಮೀನರಾಧಿಪನಂತೀ ||
ನೆಲನನದಾರುಂ ನಯದಿಂ |
ಸಲಹಿದರಿಲ್ಲೆಂದು ಸರ್ವರುಂ ನೆರೆ ಪೊಗಳ್ದರ್ ||೩೫||

ವ|| ಮತ್ತಮಾಭೂಮೀಂದ್ರಂ ಸಕಲಭಾಷೆಗಳ್ಗಂ ಮಾತೃಭಾಷೆಯೆನಿಪ ಸಂಸ್ಕೃತಭಾಷೆಗೆ ನಿಜದೇಶದೊಳ್ಮಲಿನ್ಯಮುಂಟಾಗದಂತು ವಿದ್ಯಾರ್ಥಿಜನಂ ವೇದವೇದಾಂಗಾದಿಸಂಸ್ಕೃತಗ್ರಂಥಂಗಳನೋದಿ ಪಂಡಿತರಾಗಲ್ಕೆ ತಕ್ಕಂತು ನಿಜರಾಜಧಾನಿಯೊಳ್ಸರಸ್ವತೀಪ್ರಾಸಾದಮೆಂಬ ಪೆಸರಿಂ ಸಂಸ್ಕೃತ ಮಹಾಪಾಠಶಾಲೆಯುಮುಂ ದೇಶಾಂತರಭಾಷಾವಿಶೇಷಪ್ರಚಾರದಿಂ ಕುಂದು ವಡೆದಿರ್ದ ತಿಳಿಗನ್ನಡನುಡಿಯನೇಳ್ಗೆ ಬರಿಸಲ್ಕೆ ಭಾಷೋಜ್ಜೀವಿಸಿಯೆಂಬ ಕರ್ಣಾಟಕಪಾಠಶಾಲೆಯುಮುಂ ನೆಲೆಗೊಳಿಸಿಯುಂ ನಾಡೊಳೆಲ್ಲೆಲ್ಲಿಯುಂ ವಿದ್ಯಾಭಿವೃದ್ಧಿಯಪ್ಪಂತೆಲ್ಲಾಪಳ್ಳಿಗಳೊಳಂ ಪಳ್ಳಿಕೂಟಂಗಳಂ ಕಲ್ಪಿಸಿಯುಂ ಪ್ರತಿಸಂವತ್ಸರಮುಂ ವಿದ್ವತ್ಪರೀಕ್ಷೆಯೊಳ್ತೀರ್ಗಡೆಸಂದಕ್ಕರಿಗರ್ಗೆ ಬಹುಮಾನಂ ನಡೆವಂತು ಕಟ್ಟಲೆಯಂ ಮಾಡಿಯುಮವರೊಳಂ ಬಿತ್ತೆಗರೆಸಿಸಿದರ್ಗಂ ಮತ್ತಮುಗ್ಗಳಿಕೆವೆತ್ತ ಮೇಗಣಾಲೌಕಿಕಾಧಿಕಾರಿಗಳ್ಗಂ ಬಲ್ಲಿತ್ತಾದ ತಕ್ಕುಮೆಯಂ ಬಿತ್ತರಿಪ ಬಗೆಬಗೆಯ ಮಹಾಬಿರುದಂಗಳಂ ದಯೆಗೆಯ್ಯಲ್ಮೊದಲ್ಮಾಡಿಯುಂ ಪ್ರಜೆಗಳಂ ಪ್ರೋತ್ಸಾಹಿಸಿದನಂತುಮಲ್ಲದೆ ಚಿಕ್ಕಂದು ತನಗುಪಾಧ್ಯಾಯನಾಗಿರ್ದು ಸನ್ನಿಧಿಸಚಿವಾಧಿಕಾರದೊಳ್ನಿಯುಕ್ತನಾದ ಲೋಕೋಪಕಾರೈಕಮತಿ ನರಸಿಂಹಾರ್ಯ "ನೆಲೆಮಹಾರಾಜಾ ನಿಮ್ಮರಸುತನದೊಳ್ಪುರುಷರ್ಗೆ ಮಾತ್ರಂ ವಿದ್ಯಾಭಿವೃದ್ಧಿಯಪ್ಪಂತು ಪಲವುಂ ಪಾಠಶಾಲೆಗಳಂ ನೆಲೆಗೊಳಿಸಿದಿರಿಂತಬಲೆಯರುಂ ತಮ್ಮತಮ್ಮ ಗೃಹಕೃತ್ಯನಿರ್ವಹಣಾದಿಕಾರ್ಯಂಗಳೊಳ್ತಮಗೆ ಸಹಜಂಗಳಪ್ಪ ಗಣಿತನೀತಿಧರ್ಮಂಗಳಂ ತಿಳಿಯಿಪ ಗಣಿತಕಲಾನಿಧಿಮಹಾಭಾರತಾದಿಪುರಾತನಗ್ರಂಥಂಗಳನೋದಿ ತಕ್ಕಂತುಟು ತಿಳಿವಂ ಪಡೆಯಲ್ಕಲ್ಲಲ್ಲಿ ಬಾಲಿಕಾಪಾಠಶಾಲೆಗಳುಮುಂ ನೆಲೆಗೊಳಿಸುವುದು ದೇವರ್ಗೆ ಯಶಸ್ಕರಮಹುದೆಂದು " ಬಿನ್ನವಿಸಲಾಮಾತಂ ಕೇಳ್ದು ಗುಣಗ್ರಹಣಶೀಲನಾಧರಣಿಪಾಲನಿಂತಿದೆನಗೆ ಯಶಸ್ಕರಮಾತ್ರಮಲ್ತು ಕರ್ತವ್ಯಧರ್ಮಮುಮಾಗಿಪ್ಪುದೆಂದು ಚಿಂತಿಸಿ ಸಂತಸಂಗೊಂಡು ತನ್ನರಸಿಯಪ್ಪ ವಾಣೀ

ವಿಲಾಸದ ಮಹಾರಾಜ್ಞಿಯು ಪೆಸರಿಂಗೊಂದು ಬಾಲಕಾಪಾಠಶಾಲೆಯುಂ ರಾಜಧಾನಿಯೊಳ್ನಿಲೆಗೊಳಿಸಿ ಬಳಿಕೆ ಕನ್ನಡನಾಡೊಳೆಲ್ಲೆಲ್ಲಿಯುಂ ಪಲವುಂ ಬಾಲಿಕಾಪಾಠಶಾಲೆಗಳಂ ನೆಲೆಗೊಳಿಸಿದನೆಂಬೆಡೆಯೊಳ್ ॥೩೬॥

ಕಂ॥ ಕರಣೀಯಕಾರ್ಯಮಂ ಭೂ ।
ವರಂಗೆ ಲೋಕೋಪಕಾರಮುತಿಯಿಂದಾವಂ ॥
ನರಸಿಂಹಾರ್ಯನವೋಲೇ ।
ಪರಿ ತಿಳಿಯಿಪನಾನಸಲ್ತೆ ಸನ್ನಿಧಿಸುಜಿಪಂ ॥೩೭॥

ವ॥ ಅಂತುಮಲ್ಲದಾಭೂವಲ್ಲಭಂ ಕಾಳಿದಾಸಾದಿಮಹಾಕವಿಪ್ರಣೀತಂಗಳಪ್ಪ ಶಾಕುಂತಳಾದಿನಾಟಕಂಗಳಂ ತತ್ತತ್ಕಾಲೋಚಿತವೇಷಭಾಷಾಸುಕರಣದಿಂದೆಯುಂ ಕಥಾಸಂವರ್ಭದೊಳಲ್ಲಲ್ಲಿ ಸಭ್ಯಜನವೆನೋರಂಜನವುನೊಡರಿಸುವ ಸಂಗೀತವಸುಷಂಗದಿಂದೆ ಯುಂ ಲೋಕಕ್ಕೆ ಹಿತಾಹಿತಪ್ರವೃತ್ತಿನಿವೃತ್ತಿಗಳಂ ಪ್ರತ್ಯಕ್ಷಾನುಭವದಿಂ ಬೋಧಿಸುವಂತಪೂರ್ವನಾಗರಿಕತೆಯಿಂದಿಮ್ಮಿದರಪ್ಪಕಬ್ಬಿಗರಿಂಕನ್ನಡನುಡಿಯೊಳ್ಪರಿವರ್ತನಂಗೆಯಿಸಿ ತನ್ನ ಪೆಸರಂದೊಂದು ಕರ್ಣಾಟಕನಾಟಕಸಭೆಯುಂ ಕಲ್ಪಿಸಿದಂ ॥೩೮॥

ಕಂ॥ ಇಂತೀಪೊಸವಾಳ್ಕೆಗಳಂ ।
ತಮ್ತಮ್ಮಯ ನಾಪೊಳನ್ಯರಾಜರುಮೀದ್ಯ ॥
ಷಾಂತದೆ ಬಳಸಿದರೆನೆ ಭೂ ।
ಕಾಂತನವಂ ತಾನದೇನಸಾಧಾರಣನೋ ॥೩೯॥

ವ॥ ಇಂತಾಚಾಮರಾಜೇಂದ್ರಂ ಧರ್ಮದಿಂದವನಿಯಂ ಪಾಲಿಸುತ್ತಿರ್ಪಿನಂ ನಿಜಮಂತ್ರಬಲಾನುಕೃತಸುತಾಚಾರ್ಯನಪ್ಪಮಾತ್ಯವರ್ಯಂ ರಂಗಾಚಾರ್ಯಂ ನಿಜಪುಣ್ಯ ಸಂಪದದಿಂ ಪರಮಸದಮನೆಯ್ದಿದ ನೆಂಬುದು ಶೋಚನೀಯಮಮದೇಕೆನೆ ॥೪೦॥

ಕಂ॥ ಸಲೆ ರಂಗಾಚಾರ್ಯಂ ಮಂ ।
ತ್ರಿಲಲಾಮಂ ದೈವಗತಿಯೊಳೀರಾಜ್ಯಂ ಕ ॥
ಣ್ಣಿಲಿಯಾದೊಡಲಂತಾಯ್ತೆಂ ।
ದಳಲಾಂತಂ ಪ್ರಜೆಗಳೊಡನೆ ರಾಜೇಂದ್ರನವಂ ॥೪೧॥

ವ॥ ಇಂತು ವಿಷ್ಣುನಾದೊಡವಾರಾಯಂ ಕಿರಿದು ಬೇಗನೆ ವಿಚಾರ ಪೂರ್ವಕಂ ಸಮಾಹಿತಚಿತ್ತನಾಗಿ ರಂಗಾಚಾರ್ಯನಂತನುನಿಮಿಷಸಮುನ್ಮಿಷನ್ಮನೀಷಾವಿಶೇಷನುಂ ನಿಜವಾಗ್ಮಿ ರೀಪರೀಭೂತಾದಿಶೇಷನುಮಪ್ಪ ಶೇಷಾದ್ರಿವರ್ಯನಂ ಮಹಾಮಾತ್ಯಪದವಿಯೊಳ್ನಿಯಮಿಸುವುದುಂ ॥೪೦॥

ವೃ॥ ಕ್ಷಿತಿಪಾಲೋತ್ತಮಚಾಮಭೂಪತಿಗೆ ರಂಗಾಚಾರ್ಯನಂತಾವಗಂ ।
ಹಿತಮಂ ಚಿಂತಿಸುತಂತವಂಗೆ ಧರಣೀಸಂರಕ್ಷಣೋದ್ಯೋಗಸ ॥
ನ್ನುತಧರ್ಮಾರ್ಥವಿಚಾರದೊಳ್ನಿಗಳುತುಂ ಸಾಹಾಯ್ಯಮಂತಪ್ಪ ಜಾ ।
ತಿಗಾಮೋದಮನೇನೊಡರ್ಚಿದನೊ ಶೇಷಾದ್ರಯ್ಯಮಂತ್ರೀಶ್ವರಂ ॥೪೫॥

ಇಂತಿಪ್ಪಾಗಳ್,

ಕಂ॥ ಆವಿರ್ಭವಿಸಿದುದಾಭೂ ।
ಮೀವರನಂಗನೆಯ ಗರ್ಭಶುಕ್ತಿಯೊಳುದ್ಯ ॥
ಲ್ಲಾವಣ್ಯಂ ಮುಕ್ತಾಮಣಿ ।
ಪೀವರಗುಣಶಾಲಿ ಕನ್ಯಕಾಮಣಿನಾಮಂ ॥೪೪॥

ವ॥ ಅಂತು ಪುಟ್ಟಿದೆರಡನೆಯಳಪ್ಪಕಾವರಿಗೆ ಸಂತಸಂ ಮಿಗಲನಂತ ವಿಭವದಿಂದಾಮುಹೀಕಾಂತಂ ನಿಜಕಾಂತೆವೆರಸು ಕೃಷ್ಣಾಜಂಬೆಯೆಂದು ನಾಮಕರಣೋತ್ಸವಮನೆಸಗಿ ಸುಖಸಾಮ್ರಾಜ್ಯಪದವಿಯನನುಭವಿಸುತ್ತಿರ್ಪಿನವಾರಾಜೇಂದ್ರನ ರಾಜ್ಯಾಧಿಕಾರಧುರಂಧರತೆಗಂ ಸತ್ಯಸೌಶೀಲ್ಯಾದಿಗುಣಗಣಕ್ಕಂ ಮೆಚ್ಚಿ ಚಕ್ರವರ್ತಿನಿಯಪ್ಪ ವಿಕ್ಟೋರಿಯಾಮಹಾರಾಜ್ಞಿ ಭರತಖಂಡದ ನಕ್ಷತ್ರಾಧಿಪತಿಯೆಂಬ ಬಿರುದಂ ಪಿರಿದುಂ ಬಹುಮಾನದಿಂ ದಯೆಗೆಯ್ಯಲೊಡಮದರ್ಕೆ ವಿನಯದಿಂ ತನ್ನ ಕೃತಜ್ಞತೆಯಂ ಪತ್ರಿಕಾಮುಖದಿಂದಾಕೆಗೆ ತಿಳಿಪಿ ॥೪೫॥

ವೃ॥ ಶ್ರೀಚಕ್ರವರ್ತಿನಿಯಮೆಚ್ಚಿನೊಳಿಂತು ತನ್ನ ।
ಭೂಚಕ್ರನುಂ ಮನುವಿಬೋಧಿತಧರ್ಮದಿಂ ಪೂ ॥
ರ್ವಾಚಾರಮಾರ್ಗಮನಣಂ ಬಿಡದೋವುತಿರ್ದ ।
ನಾಚಾಮರಾಜನ ಚರಿತ್ರಮನೇನನೆಂಬೆಂ ॥೪೬॥

ವ॥ ಇಂತಿವರ್ಣಗಳಾನರಪತಿ ತನ್ನರಸಿಗೆ ತೃತೀಯಗರ್ಭೋದ್ಭವಮಾದುದಂ ತಿಳಿದು ಶಾಸ್ತ್ರೋಕ್ತಪ್ರಕಾರದಿಂದತಿವಿಭವದಿಂದೆಸಗಿದ ಪುಂಸವನಂ ಭಗವತ್ಕೃಪೆಯಿಂ ಸಾರ್ಥಕಮಕ್ಕೆಂದು ॥೪೩॥

ವೃ॥ ಚಾದಗೆಗಳ್ನವೀನಜಲದಾಗಮಮುಂ ಕಮಲಾಕರಂಗಳ ।
ಕೊರ್ದೋದಯಮುಂ ವಸಂತಸಮಯೋದಯಮುಂ ಪಿಕಸಂಕುಲಂ ಶಶಾಂ ॥
ಕೋದಯಮುಂ ಚಕೋರವಿಹಗಂಗಳಪೇಕ್ಷಿಸುವಂತೆ ರಾಜಪು ।
ತ್ರೋದಯಮುಂ ಕಡಂಗಿ ಸಕಲಪ್ರಜೆಯುಂ ಬಯಸುತ್ತುಮಿರ್ಪಿನಂ ॥೪೪॥

ಕಂ॥ ಜನಿಯಿಸಿದತ್ಯಾವಸುಧೇಂ ।
ದ್ರನ ರಾಣಿಯ ಗರ್ಭಮೆಂಬ ಗಣಿಯಲ್ಲಿ ಜಗ ॥
ದ್ವಿನುತಾನೇಕಗುಣಾನ್ವಿತ ।
ಮನುಪಮನುಮಲಂ ಕುಮಾರರತ್ನಮನರ್ಘಂ ॥೪೫॥

ಕಂ॥ ಆನೃಪಕುಮಾರನುದಿಸೆ ಚ ।
ನಾನಂದಾತಿಶಯಮುಂದದೇಂ ಪೆರ್ಚ್ಚಿತೊ ತಾ ॥
ರಾನಾಥನುದಯದೊಳಾ ।
ಕಾನಿಶೆಯೊಳ್ವಾರಿರಾಶಿ ಪೆರ್ಚುವ ತೆರದಿಂ ॥೪೬॥

ವ॥ ಅಂತು ಪುತ್ರೋತ್ಸವಮಾಗೆ,

ಕಂ॥ ವಿರಚಿಸಿದಳ್ಕುಲದೇವತೆ ।
ಪರಮಾನುಗ್ರಹಮನೆನ್ನೊಳಿಂದಿಮ್ಮಕುಲಂ ॥
ಪಿರಿದೇಳ್ಗೆವಡೆದುದೆಂದಾ ।
ಧರಣಿಪನೋಲಾಡಿದಂ ಪ್ರಮೋದಾಂಬುಧಿಯೊಳ್ ॥೪೭॥

ವ॥ ಆಗಳಾ ಪುರಜನಮೆಲ್ಲಮುಂ ರಾಜಕುಮಾರನುದಯಕ್ಕೆ ಸಂತಸಂಬಟ್ಟು ಕೇರಿಕೇರಿಯೊಳೊಸಗೆಯ ಪಸದನಮನೆಸಗಿ ಬೀದಿಬೀದಿಯೊಳ್ ಲ್ಪನಿತು ಸಕ್ಕರೆಯುಂ ಬೀರುತ್ತೆ ಸಂತಸಮಿಕ್ಕಾಪಗಲಂ ಕಳೆದು ಬೈಗುಂ ಬೊಳ್ತಪ್ಪುದುಂ ॥೪೮॥

ವೃ॥ ಪುರದೊಳಮಂದಹರ್ಷಭರದಿಂದಮದೆಲ್ಲಿಯುಮೆಲ್ಲಿಯುಂ ವಿಭಾ ।
ವರಿಯೊಳಗುತ್ಸವಕ್ಕೆ ನೆರಪಿರ್ದ ಪರಶ್ಶತದೀಪಸಂಕುಲಂ ॥

ಪರಿವಡೆದಿದ್ದುದಾತ್ಮಪತಿವಂಶದೆ ಪುಟ್ಟಿದ ರಾಜಸೂನುವಾ |
ನಿರುಪಮಸಂಭವೋತ್ಸವದ ನೋಟಕೆ ಬಂದುಡುಬ್ಬಿಂದಮೆಂಬವೋಲ್ ||೫೩||

ವ|| ಸಮನಂತರದೊಳಾವಸುಧೇಂದ್ರಂ ಮಧುಪ್ರಾಶನಜಾತಕರ್ಮಂಗಳಂ ನಿರ್ವರ್ತಿಸಿ ಭೂಸುರಕ್ಕೆ ಬೀಜದಾನಂ ಮೊದಲಪ್ಪನೇಕದಾನಂಗಳಂ ಮಹಾವಿಭವದಿಂ ಮಾಡಿ ಬಳಿಕ್ಕೆ ತನ್ನರಸಿವೆರಸಾಕುವರಂಗೆ ನಾಲ್ವಡಿಯ ಕೃಷ್ಣರಾಜನೆಂದು ಪಿರಿಯರ ಪೆಸರಿಂ ನಾಮಕರಣೋತ್ಸವಮಂ ಬಿತ್ತರಿಸಿ ದೀನಾಂಧಬಧಿರಕುಬ್ಜಾದಿಗಳಂ ಯಥೇಷ್ಟಮನ್ನವಸ್ತ್ರಧನಕನಕಾದಿಗಳನಿತ್ತು ತಣಿಪಿ ಸಂತಸದಿಂ ಬಂದಿಗಳನೇಕರಂ ಸೆರೆವನೆಯಿಂ ಬಿಡಿಸಿದನಲ್ಲಿಂ ಬಳಿಯಂ ||೫೪||

ಕಂ|| ನಂದನಸುತನಂತೆಸೆವಾ |
ನಂದನನರಮನೆಯೊಳಾತ್ಮಜನೀಜನಕಾ ||
ನಂದನನೆನಿಸುತೆ ನೂತನ |
ನಂದನವನಭೂಜದಂತೆ ಬಳೆಯುತ್ತಿರ್ದಂ ||೫೫||

ಕಂ|| ಜನನೀಜನಕರನಾನೃಪ |
ತನುಜಾತಂ ತನ್ನರೂಪದಿಂ ಗುಣದಿಂ ಬೇ ||
ರೆನಿಸದೆ ಪೋಲುತ್ತಿರ್ಪಪ |
ನೆನಲೇನತಿಮಾತ್ರಪುಣ್ಯಲಕ್ಷ್ಮಣಯುತನೋ ||೫೬||

ವ|| ಇಂತು ಪುತ್ರೋತ್ಸವದಿಂದಾಪಾರ್ಥಿವಂ ಸಂತಸಂಬಡುತ್ತಿಪ್ಪಾಗಳಪ್ಪುತಮಗಜಾರಣ್ಯಕ್ಷೇತ್ರದೊಳ್ಪನುನಿಸಿದ ಪಂಚಲಿಂಗದರ್ಶನ ಮಹೋತ್ಸವಕ್ಕೆ ಸಪರಿವಾರನಾಗಿ ಪಯಣಂಬೋಗಿ ಮಹೇಶ್ವರಸಾನ್ನಿಧ್ಯದಿಂ ಕೈಲಾಸಮಿದೆಂಬಂತಳಂಬಮೆಳ್ಗೆವಡೆದು ಬೆಳ್ಪೇರಿದವಳಲೊಟ್ಟಲಿಂ ದೊಡಗೂಡಿ ನಿಜಮಹಿಮೆಯಿಂ ಭೂಗೀರಥಿಯನೆಣೆಗೊಂಬ ಕಾವೇರಿಯಿಂ ಪರಿವೃತಮಾಗಿ ದಕ್ಷಿಣಕಾಶಿಯೆಂದು ನೆಗಳ್ತೆವಡೆದನೇಕಸಹಸ್ರತೀರ್ಥಯಾತ್ರೆಕರಿಂದಿಟ್ಟಣಿಸಿದಾಮಹಾಕ್ಷೇತ್ರಮಂ ವಿನೀತವೇಷದಿಂದೆಯ್ದಿವಂದುಪಾವನತಮಗೋಕರ್ಣಸರೋವರತೀರ್ಥದೊಳ್ಮಿಂದಲ್ಲಿ ಸನ್ನಿಧಿಗೊಂಡಿಪ್ಪಗೋಕರ್ಣೇಶ್ವರನಂ ಪೂಜಿಸಿ ನನುಸ್ಮರಿಸಿ ಬಳಿಕ್ಕೆ ಕಾವೇರಿಯೊಳವಗಾಹ

ನಂಗೆಯ್ದನುಕ್ರಮದಿಂ ಪಂಚಲಿಂಗದರ್ಶನಕ್ಕುದ್ಯಮಂಗೊಂಡರ್ಕನಾಥೇಶ್ವರನಂ ಸಾರ್ದು ಸಾಷ್ಟಾಂಗವೆರಗಿ ಭಕ್ತಿಯಿಂ ಪೂಜಿಸಿ ಕಯ್ಗೊಳಂ ಮುಗಿದು॥

ವೃ॥ ಸದ್ಯೋಜಾತಶಿವಾನನಾತ್ಮಕ ಮಹಾಲಿಂಗಸ್ವರೂಪಾವಹಾ ।
ಸದ್ಯೋಗೀಂದ್ರಮನಃಪ್ರಸನ್ನ ಸರಸೀಲೀಲಾಮರಾಳಾಯಿತಾ ॥
ಸದ್ಯೋತಾಸಮದೃಙ್ನಿರಸ್ತಮದನಾಹಂಕಾರ ಕಾಯೈ ಶಿವಾ ।
ಸದ್ಯೋಸ್ಮತ್ಸಕಲೇಷ್ಟಸಿದ್ಧಿಯನೊಡರ್ಚುತ್ತರ್ಕನಾಥಾಹ್ವಯಾ ॥೫೮॥

ವೆ॥ ಎಂದಿಂತು ಸಂಪ್ರಾರ್ಥಿಸಿ ಬಳಿಕಮಲ್ಲಿಂ ತಳರ್ದು ಪಾತಾಳೇಶ್ವರನೆಡೆಗೆ ನಡೆತಂದು ಪೊಡಮಟ್ಟು ನಿಯತಮಾನಸನಾಗಿ ॥೫೯॥

ವೃ॥ ಪಾತಾಳೇಶ್ವರ ದೇವನೇವ ನುತಲಿಂಗಾಕಾರ ಶೈಲೇಂದ್ರಸಂ ।
ಜಾತಾಲಿಂಗಿತವಾಮಭಾಗ ಮಹಿತಶ್ರೀವಾಮದೇವಾಹ್ವಯ ॥
ಖ್ಯಾತಾಸ್ಯಾತ್ಮಕ ನಾಗರಾಜಕಲಿತಾನೇಕಪ್ರಕಾರಸ್ತುತಿ ।
ಪ್ರೀತಪ್ರಾಂತ ಮದೀಯವಾಂಛಿತಮನೀ ನಿನ್ನಂಘ್ರಿಯಂ ಪೂಜಿಪೆಂ ॥೬೨॥

ವೆ॥ ಎಂದು ಪೂಜಿಸಿ ಮನೋಭೀಷ್ಟಮಂ ಬೇಡಿ ಸೈಕತೇಶ್ವರನಲ್ಲಿಗೆ ನಡೆತಂದು ॥೬೦॥

ವೃ॥ ಶೈಲಾದಿಸ್ರಣ್ಮತಂಗೆ ಕಾಲಜೆದಘೋರಾಭಿಖ್ಯನಕ್ತಾತ್ಮಕಂ ।
ಗಾಲೋಲೇಂದುಕಲಾಂಕಿತಂಗಳಜಟಾಜೂಟಂಗೆ ಶೈಲೇಂದ್ರಜಾ ॥
ಲಾಲಾಸಪ್ರಣಂಗೆ ಲಿಂಗತನುಗಂತೋಂಕಾರರೂಪಂಗಮಂ ।
ಪ್ರಾಲಂಬಂಗೆ ನಮಿಪ್ಪೆನೊಲ್ದು ನಿನಗಾಂ ಶ್ರೀಸೈಕತಾಧೀಶ್ವರಾ ॥೬೨॥

ವೆ॥ ಎಂದು ಮಂದಸಂಗೆಸ್ದು ಸಮರ್ಚಿಸಿ ಮರಲ್ದು ಮಲ್ಲಿಕಾರ್ಜುನೇಶ್ವರಾಲಯಮಂಬೊಕ್ಕು ಮೆಯ್ಯಿಕ್ಕಿ ॥೬೩॥

ವೃ॥ ವ್ಯಾಕೋಚಾಮಲಮಲ್ಲಿಕಾಕುಸುಮಮಾಲಾಶೋಭಿಕಂಠಂ ನವಃ ।
ಲ್ಲೋಕಾಭೀಷ್ಟದಮುತ್ತಮಾಂಗಧೃತಬಿಲ್ವದ್ರೋಣಪತ್ರಪ್ರಸೂ ॥
ನಾಕಲ್ಪಂ ಶುಭಮಾಗೆ ಫಾಲವಿಲಸದ್ಭಸ್ಮತ್ರಿಪುಂಡ್ರಂ ಕೃಪಾ ।
ಲೋಕಂ ತತ್ಪುರುಷಾಸ್ಯರೂಪವರಲಿಂಗಂ ಮಲ್ಲಿಕೇಶಾಹ್ವಯಂ ॥೬೪॥

ವೆ॥ ಎಂದೇಕಾಗ್ರಚಿತ್ತನಾಗಿ ಜಾನಿಸಿ ಮಗುಳ್ದಲ್ಲಿಂದೆ ವೈದ್ಯೇಶ್ವರನ ಸನ್ನಿಧಾನಕ್ಕೆ ಸಾರ್ತಂದು ಸಮಭ್ಯರ್ಚಿಸಿ ಬದ್ಧಾಂಜಲಿಪುಟನಾಗಿ ॥೬೫॥

ವೃ॥ ಕ್ಷ್ವೇಳಾಟೋಪನಿರೋಧನಾತಿನಿಪುಣಂ ದೋಷತ್ರಯೋತ್ಸಾದನಂ ।
ಲೀಲಾಪಾಂಗಕೃಪಾಮಹೌಷಧಯುತಂ ವೈದ್ಯೇಶಲಿಂಗಂ ದಿಟಂ ॥
ತ್ರೈಲೋಕ್ಯಾರ್ತಿಹನೇ ಸದಾಶಿವನೆ ನೀನಸ್ಮತ್ತ್ರಿತಾಪಾಖ್ಯರು ।
ಜ್ಞಾಲೋಚ್ಛೇದಮೊಡರ್ಚ್ಚ ಬೇಡಿದಪೆನೀಶಾನಾಖ್ಯನಕ್ತ್ರಾತ್ಮನೇ ॥೬೬॥

ವ॥ ಎಂದು ಸುತಿಗೆಯ್ದು ಪೂಜೆಸಿ ಭೂಸುರರ್ಗ್ಗೆ ಗೋದಾನಾದಿನಾನಾವಿಧದಾನಂಗಳನೆಸಗಿ ಧನ್ಯತೆಯುನಾಂತಲ್ಲಿಂ ಪೊರಮಟ್ಟು ಸೋಸಲೆಗೆ ನಡೆತಂದಲ್ಲಿಪ್ಪ ವ್ಯಾಸರಾಜಮಠಮಂ ಪೊಕ್ಕು ಶ್ರೀಮದ್ವಿದ್ಯಾಶ್ರೀನಿವಾಸ ಸ್ವಾಮಿಗಳಂ ಕಂಡಡಿಗೆರಗಿ ಹರಕೆಯುಂ ಕಯ್ಕೊಂಡವರಿಂದೆ ಸತ್ಕೃತನಾಗಿ ಮುಂದಳದುರ್ ರಾಜಧಾನಿಯುಂ ಸೇರ್ದು ಸೊಗಮಿರ್ದಾಗಳ್ಕಲವಾನುಂದಿನ ದೊಳ್ನಿಜಕುಲಗುರು ಶ್ರೀರಂಗನಾಥಬ್ರಹ್ಮತಂತ್ರಪರಕಾಲಮಹಾಯೋಗೀಂದ್ರ ನಿಂದಿರಾರಮಣಚರಣಾರವಿಂದಮಿಳಿಂದನಾಗೆ ತದೀಯಮಹನೀಯಪೀಠದೊಳ್ನಿರವದ್ಯವಿದ್ಯಾನಿಧಿಶ್ರೀಕೃಷ್ಣಬ್ರಹ್ಮತಂತ್ರಪರಕಾಲಯತೀಂದ್ರನಂ ನೆಲೆಗೊಳಿಸಿ ಬಳಿಕ್ಕಂ ಪ್ರಜಾರಂಜನನುರಸಿಂಗೆ ಮೊದಲನೆಯಧರ್ಮಮೆಂದು ಬಗೆದವರ ಕಷ್ಟಸುಖಂಗಳಿರವನಾರಯ್ಯಲುಂ ಗಡಿಗಡಿಯೊಳುಮಿಪ್ಪಧಿಕಾರಿಗಳಾಳ್ತನಮುಂ ಪರಿಕಿಸಲುಂ ತನ್ನನಾಡೊಳಿಪ್ಪ ಪಟ್ಟಣಂಗಳುಮುಂ ತಲೆವಳ್ಳಿಗಳುಮುಂ ಕಾಲೂರ್ಗಳುಮನಲ್ಲಲ್ಲಿಯ ಸನ್ನಿವೇಶಂಗಳುಮುಂ ನೋಡಲುಂ ಸ್ವದೇಶಸಂಚಾರಂಗೆಯ್ಯಲ್ಕೆ ಸನ್ನಣಂಗೆಯ್ದು ಮಹಾಮಾತ್ಯನನೊಡಗೊಂಡು ಪರಿಜನಂಬೆರಸು ರಥಾರೂಢನಾಗಿ ರಾಜಧಾನಿಯುಂ ಪೊರಮಟ್ಟು ಪಯಣಂಗೆಯ್ದು ॥೬೭॥

ವೃ॥ ಗಡಿಗಡಿಯಲ್ಲಿಯುಂ ಪ್ರಕೃತಿಗಳ್ಮೆದವೆತ್ತಿದು ಧರ್ಮರಾಜ್ಯಮೆಂ ।
ದಡಿಗಡಿಗಂ ಕರಂ ಪೊಗಳ್ವ ತನ್ನಯ ಕೀರ್ತಿಯನಾಲಿಸುತ್ತೆಕಂ ॥
ಡೊಡೆ ಬಿಡದರ್ಚಿಸುತ್ತೆ ಮಹಿತೋತ್ತಮದೈವತವಿಗ್ರಹಂಗಳಂ ।
ನಡೆದನಭೀಕ್ಷ್ಣಸುತ್ತುಮಟವೀಗಿರಿದುರ್ಗನದೀನದಂಗಳಂ ॥೬೮॥

ವ॥ ಮತ್ತಂ,

ಕಂ॥ ಫಲವತ್ಕ್ಷೇತ್ರಾರಾಮಂ ।
ಗಳನೊಲ್ದಲ್ಲಲ್ಲಿ ನಿಟ್ಟಿಸುತ್ತುಂ ಪ್ರಜೆಗಳ್ ॥

ನಲವಿಂದಿತ್ತುತ್ತಮಸುಮ ।
ಫಲಂಗಳಂ ಮುದದೆ ಕಯ್ಕೊಳುತ್ತುಂ ತಳರ್ದಂ ॥೬೯॥

ವ॥ ಇಂತು ಪೋಗುತುಮಲ್ಲಲ್ಲಿ ಪ್ರಜೆಗಳ್ಗೆ ಸುಖಸಮೃದ್ಧಿಯನಾಗಿಸಲ್ಕೆ ಪಲವುಂ ಕೆರೆಪರಿಕಾಲ್‌ವೊದಲೆನಿಪ್ಪ ಪೂರ್ತಂಗಳಂ ನಿರ್ಮಿಸಲಧಿಕಾರಿಗಳ್ಗಾಜ್ಞಾಪಿಯನಿತ್ತು ಬಾಳೆಹೊನ್ನೂರನೆಯ್ದಿವಂದು ರಾಜಭಕ್ತಿಯಿಂದಿದಿರ್ವಂದೆರಗಿದಾಗಡಿಯ ಮುಖ್ಯಾಧಿಕಾರಿಗಳಂ ವನ್ನಿಸಿ ಬಳಸಂದ ಬಾಳೆಯ ಹಳ್ಳಿಯೊಳಿಪ್ಪ ರೇಣುಕಾಚಾರ್ಯಮಠಮಂ ಪೊಕ್ಕುಚಿತಪ್ರಕಾರದಿಂ ಶ್ರೀ ಚಂದ್ರಶೇಖರಸ್ವಾಮಿಗಳ ಸಂದರ್ಶನಮನಾಚರಿಸಿ ತದೀಯಸತ್ಕಾರಪುರಸ್ಕಾರಂಗಳಂ ಪರಿತುಷ್ಟನಾಗಿ ಬಳಿಕಮಲ್ಲಿಂದೆ ಪೊರಮಟ್ಟು ತುಂಗಾನದಿಯಂ ದಾಂಟಿ ॥೭೦॥

ಕಂ॥ ಕಳೆವೆತ್ತ ದಿವ್ಯತನುವಂ ।
ತಳೆದೊಲವಿಂದೆಲ್ಲಿ ಶಾರದಾಂಬಿಕೆ ನೆಲಸಿ ॥
ಪ್ಪಳೊ ರಿಶ್ಯಶೃಂಗಜನ್ಮ ।
ಸ್ಥಳಮೆನಿಪಾಶೃಂಗಗಿರಿಗೆ ಬಂದಂ ಮುದದಿಂ ॥೭೧॥

ವ॥ ಅಂತು ಬಂದಲ್ಲಿ ಷಣ್ಮತಸ್ಥಾಪಕಶ್ರೀಶಂಕರಾಚಾರ್ಯಜಗದ್ಗುರು ಮಠಮಂ ಪೊಕ್ಕು ವಿನಯದಿಂ ಶ್ರೀಶಿವಾಭಿನವಸಚ್ಚಿದಾನಂದಭಾರತೀಸ್ವಾಮಿಗಳ ದರ್ಶನಮುಂ ಮಾಡಿ ಸಾಷ್ಟಾಂಗವೆರಗಿ ಬದ್ಧಾಂಜಲಿಪುಟನಾಗಿ ॥೭೨॥

ಕಂ॥ ವರಚಿತ್ಪ್ರತಿಪಾದನಸುರ ।
ತರುವೆ ಜಗದ್ಗುರುವೆ ನಿಮ್ಮ ಪಾವನಚರಣಾ ॥
ಬ್ಜರಜಸ್ಸಂಗದಿನೆನ್ನಯ ।
ಶಿರಮಿದು ನಿಟಮುತ್ತಮಾಂಗಮೆನಿಸಿದುದೀಗಳ್ ॥೭೩॥

ಕಂ॥ ಗುರುವೇ ಸಾಕ್ಷಾದ್ಬ್ರಹ್ಮ ।
ಸ್ವರೂಪವೇ ನಿಮ್ಮ ದರ್ಶನಂ ದೊರೆದುದರಿಂ ॥
ಪರಿಹೃತಮಾಯ್ತುಜ್ಞಾನಮು ।
ಮುರುಬೋಧಮುಮೆಯ್ದೆ ಮೂಡಿತೊರ್ಮೆದಲೆನ್ನೊಳ್ ॥೭೪॥

ಕಂ॥ ಶ್ರೀಪರಮಹಂಸ ನಿಮ್ಮ ಕೃ ।
ಪಾಪಾಂಗಕೆ ಪಾತ್ರನಾದೆನಾನೆನಗಿಂದು ॥

ಷ್ಪಾಪಮದಾವುದುಮಿಲ್ಲೆ |
ನ್ನೀಪಾಣಿಯೊಳಿಪ್ಪುವಖಿಲಪುರುಷಾರ್ಥಂಗಳ್ ||೭೫||

ಕಂ|| ನಿಮ್ಮಡಿಗೆ ದಾಸರೆನಿಸಿ |
ಪ್ಪೆಮ್ಮನ್ನಪ್ಪಲಬರಿಪ್ಪರವನೀಪತಿಗಳ್ ||
ನಿಮ್ಮನ್ನರೊಳರೆ ಗುರುಗ |
ಳ್ದಿಮ್ಮಿದರೀಕತದೆ ನೀಂ ಜಗದ್ಗುರುವೆನಿಪಿರ್ ||೭೬||

ಕಂ|| ಪಾವನಭವತ್ಪದದ್ವಯ |
ಭಾವನೆ ಪಿರಿದುಂ ಮದೀಯಮತಿಗದ್ವಯಸಂ ||
ಭಾವನೆಯನೊಡರಿಸುವುದೀ |
ಭೂವಲಯದೆ ನಿಮ್ಮ ಮಹಿಮೆಯೇನದ್ಭುತಮೋ ||೭೭||

ಕಂ|| ಶ್ರವಣಪಥದಿಂದೆ ಮುಚ್ಚಿ |
ತ್ತವನೀಳ್ದುದು ಮುಂ ಭವತ್ಪದಾಬ್ಜಂ ಮುಚ್ಚಿ ||
ತ್ತವಿದೀಗಳ್ನಿಮ್ಮ ಪದಾ |
ಬ್ಜವನೀಳ್ದುದು ನೇತ್ರಪಥದಿನಿದರಾಪ್ಪೆನಿತೋ ||೭೮||

ವ|| ಇಂತು ನುತಿಗೆಯ್ವುದುಂ ಶ್ರೀಜಗದ್ಗುರು ಶಾಂತಿರಸಮುಂ ಕರುಣಾರಸಮುಂ ತುಳುಕಾಡುವ ನಿಡುದಿಟ್ಟಿಯಿಂದಾರಾಜೇಂದ್ರನಂ ಪರಮಾದರಂಬೆರಸು ನಿಟ್ಟಿಸುತ್ತಿಲೆಮಹಾರಾಜಾ ||೭೯||

ಕಂ|| ವಿದಿತಮಹಿಶೂರನೃಪವಂ |
ಶದೆ ನೀನಿಪ್ಪತ್ತುಮೂರನೆಯನೆನಿಸಿದೊಡಂ ||
ಮೊದಲನೆಯನಾಗಿ ಬಂದ |
ಯ್ಪದೆದೆಮ್ಮಲ್ಲಿಗಿದು ನಿನಗೆ ಭವ್ಯನಿದಾನಂ ||೮೦||

ಕಂ|| ಜಲರುಹಲೋಚನ ವಾಣೀ |
ವಿಲಾಸರತ ಸರ್ವಮಂಗಳಾಸ್ವಿತ ನೃಪಸೀಂ ||
ಬಲಜಿದ್ವಿಧಿಹರರೂಪಂ |
ಸಲಹೈ ಸುಖದಿಂ ಸ್ವಧರ್ಮಮಂ ಬಿಡದಿಳೆಯಂ ||೮೧||

ವ|| ಎಂದು ಗಂಭೀರಮೃದುಪ್ರಶಾಂತಮೆನೆ ಹಸಾದಂಬೆರಸು ನುಡಿವುದುಮದಂ ಕೇಳ್ದು ತಲೆವಾಗಿ ಚಾಮರಾಜೇಂದ್ರಂ ಶ್ರೀಜಗದ್ಗುರುವಿನ ಪರ

ಮಾನುಗ್ರಹಮುಂ ಶಿರದೊಳಾಂತೆನೆಂದು ಬಿನ್ನವಿಸಿ ಶ್ರೀಶಂಕರಾಚಾರ್ಯಪ್ರತಿಷ್ಠಿತವಾದ ಶಾರದಾಪೀಠದ ಸನ್ನಿಧಿಯಂ ಪೊರ್ದಿ ಜಗಜ್ಜನನಿಯಪ್ಪ ಶಾರದಾದೇವಿಯ ದಿವ್ಯಸುಂದರವಿಗ್ರಹಮುಂ ಸಮಗ್ರಭಕ್ತಿಯಿಂ ದರ್ಶನಂಗೆಯ್ದು ಪೂಜಿಸಿ ನಮಸ್ಕರಿಸಿ ಕಮ್ಮಗಳಂ ಮುಗಿದು ॥೯೦॥

ವೃ॥ ಶರತ್ತುಹಿನದೀಧಿತಿಪ್ರಜುರಗರ್ವಸರ್ವಂಕಷಂ ।
ಪರಿಸ್ಫುಟಸರೋರುಹಪ್ರವಜನಕ್ರಿಯಾಪಾರಗಂ ॥
ವಿಚಿಂಚಿದಯಿತೇ ನಿರಾಕರಿಸುಗಸ್ಮದಜ್ಞಾನಮಂ ।
ದರಸ್ಮಿತಮನೋಹರಂ ನಿರುಪಮಂ ಮುಖಂ ತಾವಕಂ ॥೮೩॥

ವೃ॥ ನವೋತ್ಪಲಕುಲತ್ರಪಾಕಲನಜುಂಜುಶೋಭಾಸ್ಪದಂ ।
ಭವಾಗ್ನಿಪತಿತಪ್ರತಾಪಹರಣೈಕವರ್ಷಾಂಬುದಂ ॥
ಪ್ರವಾಹವದಪಾರಶೀತಳಕೃಪಾರಸಾಪೂರಿತಂ ।
ಭವನ್ಮಹಿತದೃಷ್ಟಿಯಾಗೆನಗುದಾರವಾಕ್ಪ್ರಾಥಿಯಂ ॥೮೪॥

ವೃ॥ ದರಸ್ಫುಟಿತಕೇತಕೀಸುಮದುರಾಪಶೋಭಾಕರಂ ।
ಸ್ಫುರತ್ಕನಕಕುಂಭಪುಸ್ತಕಮನೋಜ್ಞಚಿನ್ಮುದ್ರಿಕಾ ॥
ಪರಾರ್ಧ್ಯಜಪಮಾಲಿಕಾಧರಮುದಾರಮಿಾಗಾವಗಂ ।
ಸರಸ್ವತಿ ಮದಿಷ್ಟಮಂ ಭುಜಚತುಷ್ಟಯಂ ತಾವಕಂ ॥೮೫॥

ವೃ॥ ಮಹೀತಲದೊಳೆನ್ನನರ್ಚಿಸುವನಾವನಾವಾಗಳುಂ ।
ಮಹಾಶುಕವಿಯಾತನಾಗುವನೆನುತ್ತೆ ಸೂಚಿಪ್ಪವೋಲ್ ॥
ಮಹಾಶುಕವಿಯಂ ಕರಾಂಬುಜದೊಳಾಂತು ತೋರಿಪ್ಪೆಯೇಂ ।
ಮಹೋತ್ಪಲಜವಲ್ಲಭೇ ತಿಳಿಯರಾದಿದಂ ಲೋಕದೊಳ್ ॥೮೬॥

ವೃ॥ ಸರೋರುಹಕಚಾಕಚಿಪ್ರಥನಲಬ್ಧಜೈತ್ರಪ್ರಥಂ ।
ಪುರಂದರಪುರೀವಧೂಕಚಸುಮಸ್ರಗಾಮೋದಿತಂ ॥
ಗುರುಪ್ರವರಶಂಕರಾದಿಮಯತೀಶ್ವರಾರಾಧಿತಂ ।
ಶರಣ್ಯಮೆನಗಕ್ಕೆ ತಾವಕಪದದ್ವಯಂ ಶಾರದೇ ॥೮೭॥

ವೃ॥ ಕಲಾಧರಕಲಾಂಕಮಂಜುಳಮಣೀಕಿರೀಟೋಲ್ಲಸ ।
ಲ್ಲಲಾಟತಟಭಾಸುರೇ ಧೃತವಿಚಿತ್ರಗೌರಾಂಬರೇ ॥

ನಿಲಿಂಪಶತನಿತ್ಯವಂದಿತಭವತ್ಪದಾಂಭೋಜದೊ ।
ಳ್ಪಲೇಗ್ರಹಿಯನಾಗಿಸೌ ಜನನಿ ಮನ್ನಮಸ್ಕಾರಮಂ ॥೮೮॥

ವ॥ ಇಂತು ಸನ್ನುತಿಗೆಯ್ದು ಗುರುವರೇಣ್ಯಕೃತಸತ್ಕಾರಮಂ ಕ
ಯ್ಕೊಂಡು ನಿರವಧಿಕಪ್ರಮೋದದಿಂದಾಮಹಾಯೋಗೀಂದ್ರನಂ ಬೀಳ್ಕೊಂಡು
ಪರಿವಾರಂಬೆರಸಲ್ಲಿಂ ಮುಂತಳರ್ದು ಸುರಭಿಪುರವನೆಯ್ದಿವಂದಲ್ಲಿಯ ಪ್ರಜೆ
ಗಳಾದರಂಮಿಗೆ ಮಾಡಿದ ರಾಯಮನ್ನಣೆಯಂ ಕಯ್ಕೊಂಡು ಶ್ರೀರಂಗನಾಥ
ದೇವಾಲಯಂಬೊಕ್ಕೆಲರುಣಿವಕ್ಕೆಗನಪ್ಪಲರ್ವಕ್ಕುಳನಂ ಪೂಜೆಸಿ ನಮಸ್ಕ
ರಿಸಿ ಭಕ್ತಿಭರಾವನಮ್ರಶಿರಸ್ತಟದೊಳ್ಕರಸಂಪುಟಮುಂ ಜೋಡಿಸಿ ॥೮೯॥

ವೃ॥ ಕ್ಷೀರಾಂಭೋಧಿಸುತಾವಿಲೋಚನಜಕೋರಾನಂದಸಂದಾಯಕಂ ।
ಕಾರುಣ್ಯಾಮೃತಸಾರವರ್ಷಿ ವಿಮಲಜ್ಯೋತ್ಸ್ನಾಯಮಾನಸ್ಮಿತಂ ॥
ಶ್ರೀರಂಗೇಶ ಭವತ್ಪ್ರಸನ್ನಮುಖರಾಕಾತಾರಕೇಶಂ ಶುಭೋ ।
ದಾರಂ ಮಾಡುಗೆ ನಿಚ್ಚಮುಂ ಪ್ರಣತಚೇತಃಕೈರವೋಲ್ಲಾಸಮಂ ॥೯೦॥

ವೃ॥ ಪುರುಷಾರ್ಥಪ್ರಕರಪ್ರದಾನನಿಪುಣಂ ದುಷ್ಪಾತ್ಮದೈತ್ಯಾವಳೀ ।
ದುರಹಂಕಾರನಿತಾಂತಘೋರವನದಾವಾಗ್ನಿಪ್ರತಾಪೋದಯಂ ॥
ಹರಿಯೇ ನಿನ್ನಯ ದೋಶ್ಚತುಷ್ಟಯಮನೇಕಾಜಾಂಡರಕ್ಷಾಧುರಂ ॥
ಧರಮಾಜಾನುತಟಾವಲಂಬಿ ಕುಡುಗೆನ್ನಿಷ್ಟಾರ್ಥಸಂದೋಹಮಂ ॥೯೧॥

ವೃ॥ ಭೂರಾವಾಂಬುಧಿನಂದಿನೀಕರತಲಾಂಭೋಜಾಯಮಾನಂ ಶುನಾ ।
ಸೀರಾದಿತ್ರಿದಿವೇಶರತ್ನಮಕುಟೀರಶ್ಮಿಚ್ಛಟಾರಂಚಿತಂ ॥
ಸಾರಾಮ್ನಾಯತರುಸ್ಫುರತ್ಕಿಸಲಯಂ ಯೋಗೀಶ್ವರಸ್ವಾಂತಕಾ ।
ಸಾರಾಂತಃಕಮಠಾಯಿತಂ ಕುಡುಗೆ ನಿನ್ನಂಘ್ರಿದ್ವಯಂ ಶ್ರೇಯಮಂ ॥೯೨॥

ವೃ॥ ಕಮಲಾಕೇಳಿಗೃಹಾಯಮಾಣವಿಪುಲೋರಸ್ಕಂ ಪ್ರಸನ್ನಾಸ್ಯಜಂ ॥
ದ್ರಮವಾಸೇಜನಕಂ ಮನೋಜ್ಞತರಪರ್ಯಂಕೀಕೃತಾಹೀಶ್ವರಂ ॥
ನಮದಾರ್ತಾವನಜಾಗರೂಕತರನಿದ್ರಾಮುದ್ರಮಾನಿನ್ನ ರೂ ।
ಪಮೆ ರಂಗೇಶ ಮದೀಯಹೃತ್ಕಮಲದೊಳ್ನಿಂದಿರ್ಕೆ ತಾನಾವಗಂ ॥೯೩॥

ವ॥ ಎದಿಂತು ನುತಿಗೆಯ್ದಲ್ಲಿಂದೆ ನಡೆತಂದು ಬೀಡಾರಮಂ ಸೇರ್ದಂ
ದಿನ ಸಂಧ್ಯಾಸಮಯದೊಳ್ಪ್ರಜೆಗಳಚ್ಚೆಯಂ ಕಡೆಗಣ್ಣಿಟೆ ಪುರವೀಥಿಯೊಳು

ತ್ಸವಮೆರೆದೊಲವಿಂದೋಲಗಂಗೊಟ್ಟು ನಾಡಿಗರಭಿನಂದನಜ್ಞೋತಕಮಪ್ಪ ವಿಜ್ಞಾಪನಾಪತ್ರಿಕೆಯನಾದರದಿಂ ಕೇಳ್ದದಕ್ಕೆ ಸದುತ್ತರಮುಂ ದಯೆಗೆಯ್ದು ಜಿತಪ್ರಕಾರದಿಂದವರೆಲ್ಲರಂ ಮನ್ನಿಸಿ ಬಳಿಕಮಲ್ಲಿಂ ಪೊರಮಟ್ಟು ಕಾಮುದ್ವತೀನದಿಯುಂ ದಾಂಟಿ ಶಿವನೊಗ್ಗೆಯನೆಯ್ದಿವಪ್ಪುದುಂ ॥೯೪॥

ಕಂ॥ ಆಗಡಿಯೊಳಿಪ್ಪ ಸೈನಿಕ ।
ರಾಗಿಸಿದುದ್ಭಟಶಕ್ತಿಗಳಗಾವರದು ॥
ಬರ್ಹಗಳ್ಜಯನಿರ್ಘೋಷದ ।
ಯೋಗಂಬಡೆದಾದಮಳ್ಕಿರಿದುದೆಣ್ದೆಸೆಯಂ ॥೯೫॥

ವ॥ ಸಮನಂತರದೊಳಾನೃಪಚಂದ್ರನಾಗಡಿಯನಾಡಿಗರೆಳಸಿದಂತಾನೆಯನೇರಿ ಬಲಪರಿವಾರನೊಡನಾಪ್ರರದೊಳುತ್ಸವಂಬಂದಲ್ಲಿಯ ಪ್ರಜೆಯುನಯನಚಕೋರಂಗಳನಾದವಮಾಹ್ಲಾದಂಗೊಳಿಸಿದನೆಂಜೆಡೆಯೊಳ್ ॥೯೬॥

ಕಂ॥ ಆನಗರನಿವಾಸಿಗಳಂ ।
ದಾನರಪತಿಗೆಸಗಿದಾಮಹೋತ್ಸವಮಂ ತಾ ॥
ನೇನೆಂದಪೆನಮಮಸಹ ।
ಸ್ರಾನನನುಂ ಬಗೆಯೆ ಬಣ್ಣಿಸಲ್ಕೆರೆಯನೆನಲ್ ॥೯೭॥

ವ॥ ಇಂತು ಮಹಾವಿಭವದಿಂದುತ್ಸವಂಮೆರೆದು ಪುರಜನಪ್ರಾರ್ಥನೆಯಿಂದಲ್ಲಿ ಸಲ್ಲಲಿತವಿಚಿತ್ರತರನಾನಾವಿಧತರುಲತೆಗಳಿಂದೊಪ್ಪುವುದ್ಯಾನವೊಂದಂ ನಿಜನಾಮಧೇಯದಿಂ ನೆಲೆಗೊಳಿಸಿ ನೀಡುಂ ಸಂತಸಮನಾಂತಲ್ಲಿಂ ಪೊರಮಟ್ಟು ಪಲರ್ಕೆ ದಿಟ್ಟಿಸಿದೊಡಂ ತಣಿವಾನದೊರ್ಕೆಯುಂ ದಿಟ್ಟಿಸದವರಂ ತಿಕ್ಕೆಲದೊಳಂ ನೀಮಾಂತದೊಳಟ್ಟಣಿಸಿ ನೆರೆದಿರ್ದ ಪೌರನರನಾರಿಯರ್ನೀಡುಂ ಕೌತುಕದಿಂ ದೃಷ್ಟಿಪಥಮನತಿಕ್ರಮಿಪನ್ನಂ ನಿಟ್ಟಿಸುತ್ತಿರಲೊಡಂ ಮುಮ್ಮುಂದೆ ಬರೆವರೆ ॥೯೮॥

ಕಂ॥ ಅವುದು ದತ್ತಾತ್ರೇಯಂ ।
ಗಾವಾಸಸ್ಥಾನಮೆಂದು ವಿಖ್ಯಾತಮೊ ನಾ ॥
ನಾವಿಧಸಿದ್ಧೌಷಧಿಗ ।
ಳ್ಗಾವುದು ಜನಿಭೂಮಿಯೆಂದೆನಿಪ್ಪುದೊ ಜಗದೊಳ್ ॥೯೯॥

ಕಂ|| ಯೋಗೀಂದ್ರನಂದದಿಂ ವಿವಿ |
ಧಾಗಮಪರಿಶೋಭಿತಂ ಮಹಾಮಹಿಮಂಸ ||
ದ್ಯೋಗಂ ಜಂದ್ರದ್ರೋಣಮ |
ಹಾಗಿರಿಯದು ಕಣ್ಗೆವಂದುದಜಲಾತ್ಮತೆಯಿಂ- ||೧೦೦||

ಕಂ|| ದಿನದಿನಮುಂ ದೆಸೆದೆಸೆಯಿಂ |
ಮನವೊಲ್ದಾಯೋಗಿವರನ ಗುರುಪೀಠದ ದ ||
ರ್ಶನಕೇಳ್ತಪ್ಪ ವಿರಾಗಿಗ |
ಳನಘಾಚಾರಂಗಳಲ್ಲಿ ಬಳೆಯುತ್ತಿರ್ಕುಂ ||೧೦೧||

ಕಂ|| ಪುಲಿ ಮೊದಲಪ್ಪ ಮೃಗಂಗ |
ಳ್ಗಲೆ ಭೋರ್ಗರೆಯುತ್ತುಮಿರ್ದೊಡಂ ಸುಗಿಯದಣಂ ||
ಪಲಬರ್ಮಣಿಮಂತ್ರೌಷಧ |
ಬಲದಿಂದೊಲ್ದಲ್ಲಿ ಸೋಲಿಗರ್ವಾಸಿಸುವರ್ ||೧೦೨||

ವೆ|| ಮತ್ತಂ,

ವೃ|| ವಿಳಸತ್ಪುಷ್ಪಫಲಾಭಿರಾಮತರುವೀರುತ್ಪುಂಜದಿಂ ಕುಂಜದಿಂ |
ಸ್ಖಳದುದ್ಭುಷ್ಯದನೇಕನಿರ್ಝರಿಗಳೆಂದುತ್ತುಂಗದಿಂ ಶೃಂಗದಿಂ ||
ಕಳಕೂಜತ್ಪತಗಾವಳೀಜನಿತಲೋಕಾಮೋದದಿಂ ಪಾದದಿಂ |
ಕಳಿನೆತ್ತಿರ್ದುದು ತನ್ಮಹಾಗಿರಿ ತಪಸ್ಸಂಸಿದ್ಧರಿಂ ವೃದ್ಧರಿಂ || ೦೩||

ವೆ|| ಅಂತಪ್ಪಬೆಟ್ಟಿನ ಮೇಗಣ್ಗಡರ್ದಲರ್ವೊಡೆಯನಂಶದಿಂದವತಾ
ರಮೆತ್ತಿದ ದತ್ತಾತ್ರೇಯಮಹಾಯೋಗಿಯ ಪುಣ್ಯತಮಪೀಠಸ್ಥಾನಮೆನಿಸಿದ
ಮಹಾಗುಹಾಸನ್ನಿವೇಶಮಂ ನೋಡಿ ನೀಡುಂ ಭಕ್ತಿಯಿಂದರ್ಚಿಸಿ ಕುಂಬಿಟ್ಟ
ಲ್ಲಿಯ ಧರ್ಮದರ್ಶಿಯಪ್ಪ ಮಹಾಂತಂಗನರ್ಘಬಹುಮಾನಮನಿತ್ತು ಮನೋ
ವಿನೋದಂ ಮಿಗಲಾಜನಾಧಿಪಂ ರಮಣೀಯಂಗಳಪ್ಪ ತಟಕಟಕಸಾನುಪ್ರ
ದೇಶಂಗಳಂ ವಿಲೋಕಿಸುತ್ತಲ್ಲಲ್ಲಿ ಸಂಚರಿಸುತ್ತಿರ್ಪಿನಂ ||೧೦೪||

ಕಂ|| ಅಂತರ್ಲೀನಮಧುವ್ರತ |
ಕಾಂತಪ್ರಸವಂಗಳೆಂಬ ಕಣ್ಗಳಿನಾಭೂ ||
ಕಾಂತನನೊಲ್ದವಲೋಕಿಸು |
ವ್ಯತಿರೆ ತದ್ಗಿರಿವನಾಧಿದೇವಿಯರಿಸೆದರ್ ||೧೦೫||

ವ॥ ಆಗಳ್,

ಕಂ॥ ತಳೆದಾಬೆಟ್ಟಿನ ತಪ್ಪಲ ।
ಕೊಳಗಳೊಳುಳ್ಳಲರ್ದ ತಾವರೆಗಳೊಳ್ಗಂಪಂ ॥
ಸುಳಿವೆಳಗಾಳಿಯ ಸೋಂಕಿಂ ।
ದಿಳೆಯಾಣ್ಮನದೇನವಂ ಕರಂ ಸುಖಿಸಿದನೋ ॥೧೦೬॥

ವ॥ ಇಂತಲ್ಲಲ್ಲಿ ಸಂಚರಿಸುತ್ತಾ ಬೆಟ್ಟನ ಸೊಬಗಂ ದಿಟ್ಟಿಸಿ ನೆರೆ ಸಂತಸಂಬಟ್ಟು ಲೀಲೆಯಿಂದಿಳಿದು ಮುಂದೆ ಪಯಣಂಬೋಗಿ ಚಿಕ್ಕವುಗ ಳೂರಂ ಸಾರ್ದಲ್ಲಿಯ ಪ್ರಜೆಗಳೆಸಗಿದತ್ಯುದಾರಮಪ್ಪ ಸತ್ಕಾರಮುಂ ಕಯ್ಕೊಂ ಡು ತಕ್ಕುವೆಯುಂ ವಿಶ್ರಾಂತನಾರೆಲ್ಲರಂ ಮನ್ನಿಸಿ ಮರುದಿವಸಮುಲ್ಲಿಂ ಪೊರವಟ್ಟು ಹಿರಿಯವುಗಳೂರನೆಯ್ದಿವಂದಲ್ಲಿ ಸನ್ನಿಧಿಗೊಂಡಿರ್ಪ್ಪ ರಾಮ ಸ್ವಾಮಿಯ ದೇವಾಲಯಕ್ಕೆ ನಡೆತಂದು ಭಕ್ತಿಯಿಂದಾಪರಮಾತ್ಮನ ದರ್ಶ ನಮುಂ ಮಾಡಿ ಪೂಜಿಸಿ ನಮಸ್ಕರಿಸಿ ಕಯ್ಮುಗಿದು ॥೧೦೭॥

ಕಂ॥ ರಾಮನೆ ವಿಕ್ರಮಜಿತಭೃಗು ।
ರಾಮನೆ ಲೋಕತ್ರಯೈಕಸಂಸ್ತುತ್ಯಗುಣಾ ॥
ರಾಮನೆ ಕೃತದಶವದನವಿ ।
ರಾಮನೆ ಸೀತಾರಮನೋಭಿರಾಮನೆ ಸಲಹೈ ॥೧೦೮॥

ಕಂ॥ ಪ್ರಕೃತಿಸ್ವರೂಪದಿಂ ಜಾ ।
ನಕಿ ರೋಹಿಣಿಯಂತಿರೊಡನಿರಲ್ಸುಯಶಶ್ಚಂ ॥
ದ್ರಿಕೆಯಿಂ ಕೂಡಿ ಜಗನ್ಮೋ ।
ದಕನೆಂದೆನಿಸಿರ್ಪ್ಪ ರಾಮಚಂದ್ರನೆ ಸಲಹೈ ॥೧೦೯॥

ಕಂ॥ ಭರತಸುಮಿತ್ರಾನಂದನ ।
ಧರಣಿಸುತಾಸಹಿತ ಕಶ್ಯಪಾದಿಮುನೀ ॥
ಶ್ವರನುತ ಹನುಮತ್ಸೇವಿತ ।
ಚರಣನೆ ಪಟ್ಟಾಭಿರಾಮನೇ ಸಲಹೆಮ್ಮಂ ॥೧೧೦॥

ಕಂ॥ ಶ್ರೀರಾಮ ನಿನ್ನ ಕಥೆಯಂ ।
ಪಾರಾಯಣಮಾಡುತೊಲ್ದು ಪಾವನನಾಮೋ ॥

ಚ್ಚಾರಣಮನೆಸಗುವೆಮ್ಮ ಮ |
ನೋರಥಮುಂ ನೀನೊರಲ್ದು ಸಲಿಸುತೆ ಸಲಹೈ ||೧೧೧||

ವೃ|| ಮುನಿವಿತತಿ ರಮುಂತೇ ಯೋಗಿನೋಸ್ಮಿ ಎನುತ್ತುಂ |
ವಿನುತಕೃತಿಗಳೊಳ್ಪೀಳ್ವರ್ಥದಿಂದಯ್ದೆ ಕೂಡಿ ||
ಪ್ಪನಘುವೆನಿಸಿ ರಾಮಾಭಿಖ್ಯೆಯುಂ ತಾಳ್ದು ಲೀಲಾ |
ಮನುಜನೆನಿಸಿದಂಭೋಜಾಕ್ಷನೇ ಪಾಲಿಸೆಮ್ಮಂ ||೧೧೨||

ವ|| ಎಂದಿಂತನೇಕಪ್ರಕಾರದಿಂ ಸ್ತುತಿಸಿ ಮಗುಳ್ದು ಜಿಕ್ಕಮಗಳೂರಂ ಸಾರ್ದಲ್ಲಿಯ ವೈದ್ಯಶಾಲೆಯುಂ ವಿದ್ಯಾಶಾಲೆಯುಂ ರಾಜಕೀಯಧರ್ಮಾಧಿಕರಣಸ್ಥಾನಂಗಳಂ ಪರಿಕಿಸಿ ಹರಿಸಂಗೊಂಡಲ್ಲಿಂ ಮುಂತಳರ್ದರಸಿಕೆರೆಯ ಮಾರ್ಗದಿಂ ಹಾಸನಕ್ಕೆ ಬಿಜಯಂಗೆಯ್ವುದುಂ ||೧೧೩||

ಕಂ|| ಸುಕೃತಪರಿವಾಕದಿಂ ಯಾ |
ಚಕರೀಕ್ಷಿಸಿದಂತೆ ನಿಧಿಯನಲ್ಲಿಯುದಾರ ||
ಪ್ರಕೃತಿಗಳೆನಿಸಿರ್ಪಖಿಲ |
ಪ್ರಕೃತಿಗಳತಿಹೃಷ್ಟರಾದರೀಕ್ಷಿಸಿ ನೃಪನಂ ||೧೧೪||

ವ|| ಅಂತು ನೀಡುಂ ಸಂತಸಂಗೊಂಡು ಪರಮಾದರದಿಂದಲ್ಲಿಯ ನಾಡಿಗರುಮಧಿಕಾರಿಗಳುಂ ನೆಗಳ್ದ ರಾಜೋಪಚಾರಂಗಳ್ಗಿ ಪಿರಿದುಂ ಮೆಚ್ಚಿ ತಾಸುಮವರನುಚಿತಪ್ರಕಾರದಿಂ ಮನ್ನಿಸಿಯುಮಲ್ಲಿಯ ಪಾಠಶಾಲೆಗಳಂ ಪರಿಕಿಸಿ ವಿದ್ಯಾರ್ಥಿಗಳ್ಗಿ ಬಹುಮಾನಮುಂ ದಯೆಗೆಯ್ದುಮಲ್ಲಿಯ ಪ್ರಜೆಗಳೆಲ್ಲರಿಂದೆಯುಮಭಿನಂದಿತನಿಜರಾಜ್ಯಾಧಿಕಾರಪ್ರಕಾತನಾಗಿಯುಂ ಸಪರಿವಾರನಾಗಲ್ಲಿಂ ಪೊರಮಟ್ಟು ಚೆನ್ನರಾಯಪಟ್ಟಣದ ಮಾರ್ಗದಿಂಪರಿತಂದು ತನ್ನಗಲ್ಕೆಯುಂ ಸೈರಿಸದುಬ್ಬೆಗಂಬಡುತ್ತಿರ್ದ ಪೌರಮುಖ್ಯರಿಂದೆಯುಮಧಿಕಾರಿಪ್ರಮುಖರಿಂದೆಯುಮತ್ಯಾದರದಿಂ ಪ್ರತ್ಯುದ್ಗತನಾಗಿ ಪರಿಪರಿಯು ರಾಜೋಪಚಾರದಿಂ ಮೆರೆಯುತ್ತೆ ಬೆಂಗಳೂರಂ ಸೇರ್ದೊಂದಿನಿಸು ವಿಶ್ರಮುಂಗೊಂಡಲ್ಲಿಂ ಪೊರಮಟ್ಟು ||೧೧೫||

ಕಂ|| ಈರೀತಿಯಿಂ ಸ್ವರಾಜ್ಯದೊ |
ಳಾರಾಮಂ ಗಾನುಶೈಲನಿರ್ಝರಿಣೀಕಾಂ ||
ತಾರಂಗಳನೀಕ್ಷಿಸಿ ಮಹಿ |
ಶೂರಮಹಾಪುರಮನೆಯ್ದಿ ಸೊಗದಿಂದಿರ್ದಂ ||೧೧೬||

ಇದು ಜಗದ್ವಿದಿತ ಶ್ರೀಕಾಶ್ಯಪವಂಶಮುಕ್ತಾಮಣಿ ಶ್ರೀಗರಳಪುರೀಶಶಾಸ್ತ್ರಿ
ತನೂಭವನುಂ ಶ್ರೀಮದಖಂಡ ಮಹೀಮಂಡಲ ಮಂಡನಾಯಮಾನ ಕರ್ಣಾ
ಟಜನಪದ ಲಕ್ಷ್ಮೀವಿಹಾರೈಕರಂಗಮಹೀಭೃತ ಮಹೀಶೂರರಾಜಧಾನೀ
ರತ್ನಸಿಂಹಾಸನಾಧೀಶ್ವರ ಯದುಕುಲಪಯೋನಿಧಿ ಪೂರ್ಣಚಂದ್ರಾಯಮಾಣ
ಶ್ರೀಚಾಮರಾಜೇಂದ್ರ ತನಯ ಶ್ರೀಕೃಷ್ಣರಾಜಮಹಾರಾಜ ಸಂಸ್ಕೃತ
ಕರ್ಣಾಟೋಭಯಪ್ರವಚನೋಪಾಧ್ಯಾಯನುಂ ಮಹಾವಿದ್ವ
ತ್ಪದಲಾಂಛನನುಂ ತನ್ಮಹಾರಾಜ ಕೃಷ್ಣರಾಜವಿತೀರ್ಣ
ಕವಿತಿಲಕ ಬಿರುದಾಂಕಿತನುಮಪ್ಪ ಸೋಸಲೆ
ಅಯ್ಯಶಾಸ್ತ್ರಿಯಿಂ ವಿರಚಿತವಾದ
ಮಹೀಶೂರ ಮಹಾರಾಜ ಚರಿತ್ರ
ಮೆಂಬ ಕರ್ಣಾಟ ಚಂಪೂ
ಮಹಾಕಾವ್ಯದೊಳ್

ಷಷ್ಠಾಶ್ವಾಸಂ

ಸಂಪೂರ್ಣಂ.



ಸಪ್ತಮಾಶ್ವಾಸಂ.

ಕಂ|| ಅವನಿಯ ಭಾರಮನಿಳಿಪ |
ಲ್ಪ್ರವಿದಿತರಘುವಂಶದಲ್ಲಿ ರಾಮಾಖ್ಯಯದಿಂ ||
ದವತರಿಸಿದ ದೇವೋತ್ತಮ |
ನವಿರತಮುಂ ನೀಡುಗೆಮ್ಮ ನೃಪತಿಗೆ ಶುಭಮುಂ ||೧||

ಕಂ|| ಸುರಸರಿದಂಬುಜದಿಂ ಪೆ |
ಣ್ಮರಿಯಂಜೆ ಸಮುದ್ಭವಂಬಡೆದಪ್ಪೋಲಾಭೂ ||
ವರನರಸಿಯ ಗರ್ಭದಿನವ |
ತರಿಸಿತು ಪೆಣ್ಮಗು ಬಳಿಕ್ಕೆ ಸುಂದರರೂಪಂ ||೨||

ವ|| ಇಂತು ಪುಟ್ಟಿದಾತಿಶುವಿಂಗೆ ಮಹಾರಾಜಂ ಜಾತಕರ್ಮವುಂ ಚೌಲ ವುಂಬೆಯೆಂದುನಾಮಕರಣಮನನ್ನಪ್ರಾಶನಮುಂ ಕ್ರಮದಿಂದೆ ಮಾಡಿ ಫಲ ಶರ್ಕರಾದಿದಾನಂಗಳಂಗೆಯ್ದು ಸಮುಚಿತಪ್ರಕಾರದಿಂ ಪ್ರಜೆಗಳಂ ಮನ್ನಿಸಿದ ಸಮನಂತರದೊಳ್ ವಿಕ್ರೋಧಿಯಾಚಕ್ರವರ್ತಿನಿ ಪದುಳದಿಂದಮ್ವತ್ತುಂಬರಿ ಸಂಗಳಂ ರಾಜ್ಯಾಧಿಕಾರಪದವಿಯನನುಭವಿಸಿದುದರ್ಕೆ ನಿರತಿಶಯಪ್ರಮೋದ ವುಂ ಪ್ರಕಟಿಸಲೀಭರತಖಂಡದೊಳೆಲ್ಲಿಯುಮಖಂಡವಿಭವದಿಂ ನಡೆದ ಮಹೋತ್ಸವದ ನೆನಪಿಂಗೆ ರಾಜಧಾನಿಯೊಳ್ಸಮಸ್ತಜನೋಪಯೋಗಿಯಪ್ಪ ಪುಸ್ತಕಾಲಯವೊಂದಂ ನೆಲೆಗೊಳಿಸುವುದುಂ ||೩||

ಕಂ|| ತನ್ನೆಡೆಯಂ ತನ್ನಯ ಸುಗು |
ಣೋನ್ನತಿಗಭಿಲಷಿಸಿ ಸೇರ್ದ ಭಾರತಿಗೊಲಪಂ ||
ತನ್ನರಪತಿಚೂಡಾಭರ |
ಣಂ ನೆಗಳ್ದುಪ್ಪರಿಗೆಯಿನಲದೇನೊಪ್ಪುಗುಮೋ ||೪||

ವ|| ಅಂತು ಶಿಲ್ಪಶಾಲೆಯೊಂದುಮಂ ನೆಲೆಗೊಳಿಸಿ ಬಳಿಕ್ಕಮಾಯಿ ಳಾಧೀಶಂ ದೇಶಾಂತರಂಗಳ ರಾಜ್ಯಸ್ಥಿತಿಯುಂ ತಾನೆಕಂಡರಿಯಲ್ಕೆಗಳ್ತೆವೆತ್ತ ಭರತಖಂಡದುತ್ತರದೇಶಂಗಳನುದ್ದೇಶಿಸಿ ಶುಭಮುಹೂರ್ತದೊಳಮಾತ್ಯಪು ರೋಹಿತಾದಿಪರಿವಾರದಿಂದೊಡಗೂಡಿ ವೇಗಾತಿಶಯದಿಂದೊಪ್ಪುವ ಧೂಮ್ರ

ಶಕಟವನೇರಿ ರಾಜಧಾನಿಯುಂ ಪೊರಮಟ್ಟು ಮುಂಬಯಿಪಟ್ಟಣಮನೆಯ್ದಿ ರೂಪುಗೊಂಡ ಶಿಲ್ಪಿಕರಕೌಶಲ್ಯಸಂಪದನೆನಿಸಿ ಸಮಸ್ತಜನದರ್ಶನೀಯಮಾಗಿ ಭರತಖಂಡದ ಚಕ್ರವರ್ತಿನಿಯುಪೆಸರಿಂ ನೆಗಳ್ತೆವಡೆದು ಮೆರೆಯುತ್ತಿರ್ಪ ಪೊಸೆವಂಡಿಯು ತಂಗಿನೆಡೆಯೊಳಿದಾಂಗ್ಲೇಯರಾಜಕೀಯಮಪ್ಪ ಮನ್ನಣೆಯಂ ಕಯ್ಕೊಂಡು ಚತುರಚತುರಶ್ವಶೋಭಿತಮಹಾರಥಮನಡರ್ದು ಮೆಯ್ಗಾಪಿನ ರಾವುತರೊಡವರೆ ರಾಜಯೋಗ್ಯವಾದ ಬಹುವಿಧಭೋಗ್ಯವಸ್ತುಪ್ರಪಂಚದಿಂ ಸಮುಂಜಿತವಾದ ಬೀಡಾರಕ್ಕೆ ಬಿಜಯಂಗೆಯ್ದುತ್ತಾಂಗ್ಲೇಯರಾಜ್ಯಾಧಿಪತಿಯೊಡನೆ ರಾಜಮರ್ಯಾದಾನುಸಾರದಿಂ ಕುಶಲಾನುಯೋಗಂ ನಡೆದ ಬಳಿಯ ಮೊಂದುವೆನಸನಾವುಹತ್ತರಸತ್ತನದ ಬಿತ್ತರಮನಾಲೋಕಿಸಲ್ಕೊತ್ತುಕದಿಂ ರಥಾರೂಢನಾಗಿ ಪುರವೀಧಿಯೊಳ್ಬರುತಿರ್ಪ್ಪಿನಂ ॥೫॥

ಕಂ॥ ಧನಸಂಸದದಿಂದಳಕೆಯ |
ನನುಪಮಸುಖಭೋಗದಿಂದೆ ಸುರಪುರಮುಂ ಹೇ ॥
ಳನಮೆಸಗುವ ಮುಂಬಯಿಪ |
ತ್ತನಮಾಜನಪತಿಯ ಕಣ್ಗೊಡರ್ಚಿತು ಮುದಮಂ ॥೬॥

ವೆ॥ ಅಪೆಂತೆನೆ, ಚಂದ್ರಶಾಲೆಗಳೆಳ್ವಿಹರಿಸುವ ಸುಮುಖಿಯರ್ತಮ್ಮ ನುಣ್ಮೊಗದ ಬಲ್ಸಿರಿಯಿಂಗೆಲ್ದೊಡೆಸಂದಂದು ಪಿಡಿದು ಪಿಡಿದು ಸೋಲದ ಕುರುಪಿಂಗೊತ್ತಿದ ಮನದು ಮುದ್ರೆಯನರಿಯದ ಜನಂ ಸಸಿಯೊಳಿದು ವೊಲನೆಂದುವಾಲವೆಂದುನೆರಳೆಯೆಂದುಮಿಳೆಯನೆಳಲೆಂದು ಮಾಡಿಕೊಳಲೆಡೆಗುಡುತಭ್ರಂಲಿಹಂಗಳಪ್ಪ ಕೇರಿಕೇರಿಯ ಕರುವಾಡಂಗಳೊಳವೋರೊಂದೆಡೆಯೊಳ್ಪತ್ತಾಕರಂ ತನ್ನ ಮಗಳೆಂಬಳ್ಕಿಯಿಂ ಪುರಲಕ್ಷ್ಮಿಗೆ ಕೊಟ್ಟಬಳುವಳಿಯೆಂಬಂತೆ ತೋಪ್ಪ್ಪ ನವರತ್ನಂಗಳಸನುವಾಯಂಗಳಿಂವೆಯುಂ ಮತ್ತೊಂದೆಡೆಯೊಳ್ನಾಗರಿಕರೂಪವತಿಯರಂಗಲತೆಗಳಿಂ ಪರಾಜಿತಂಗಳಾಗಿ ಸರಣ್ಗೊಬ್ಕವರನುಗ್ರಹದಿಂ ತಂತುಮಾತ್ರಶೋಭೆಯನಾಂತಂಬರಾಂತರಾಶ್ರಯದೊಳಪ್ಪ ಬಳ್ಳಿಮಿಂಚುಗಳೆಂಬಂತೆ ಮಿರುಮಿರುಪ ಪೊಂಜರಿಗೆಗಳ ಪರಿಸರಿಯ ಚಿತ್ತರದ ಬಲ್ವೆಲೆಯ ಬಗೆಬಗೆಯ ಕಳೆಯದೊಳ್ವರ್ಣ್ಣದ ಪಟ್ಟದುಗುಲಂಗಳ ಸಂಕುಲಂಗಳಿಂದೆಯುಂ ಮತ್ತವೊಂದೆಡೆಯೊಳೆಡೆವಿಡದಡಕಿಲ್ಗೊಳಿಸರಿ ಮೇರುಕೈಲಾಸಶಿಖರಂಗಳನೆಣೆಗೊಂಬ ಚೆಂಬೊನ್ನ ಪಿಂಜರಿಯ ಪೊಗರುಗುವ

ಪಕ್ಕಲೆಗಳ ಪಸರಂಗಳಿಂದೆಯುಂ ಬೇರೊಂದೆಡೆಯೊಳ್ಪೊಗಿಗಳ್ಗೆ ಪಸರಿಸಿಟ್ಟ ಮುಗವುಗಿಪ ಬಹುವಿಧಪರಿಮಳದ್ರವ್ಯಂಗಳ ಪೇಳಿಗೆಗಳಿಂದೆಯುಂ ನಿರತೊಂ ದೆಡೆಯೊಳ್ಧನಿಕಜನೋಪಭೋಗ್ಯಂಗಳೆನಿಸಿದ ವಿಚಿತ್ರತರಶಯನಾಸನವ್ಯಜ ನಾದಿನಾನಾವಿಧಸುಖತೋಪಚಾರವಸ್ತುಜಾಲಂಗಳಿಂದೆಯುಂ ಕೆಲವೆಡೆಯೊಳೆ ಡೆವಿಡದೆ ಪೊರವಡುವ ನರುಗಂಪಿನಿಂದೆಡೆಸಂದ ಪೌರಜನಂಗಳ ಮನಮುಂ ಸೂರೆಗೊಳ್ವ ಸಲ್ಲಲಿತಪರಿಫುಲ್ಲಮಲ್ಲಿಕಾದಿಸುಮತಲ್ಲಜಂಗಳಿಂ ಸಮೆದ ಹಾರಶೇಖರಾದಿಮಂಜುಳಸ್ರಜಂಗಳ ಪಲವುಂ ವ್ರಜಂಗಳಿಂದೆಯುಂ ಪಲವೆಡೆ ಯೊಳ್ನಿರುಪಮರಸಂಗಳಪ್ಪನೇಕವಿಧಪರಿಣತಫಲಂಗಳ ರಾಶಿಗಳಿಂದೆಯುಂ ನೆರೆ ಮೆರೆಯುತ್ತಿರ್ಪ್ಪಂಗಡಿವೀಥಿಗಳೊಳಂ ಗಣಿಸಲಳವಡದ ಜನಂಗಳಿಟ್ಟಿಡೆಯೊ ಳೊರ್ವರೊರ್ವರಂ ನೂಂಕಿಕೊಂಡೆಯ್ದುತಿರೆಯುವಾರ್ಗಾದೊಡಮಿಸಿಸುಮೊ ರಸಿಲ್ಲದಂತತ್ತಿತ್ತಣಿಂ ಪರಿತರುತ್ತೆ ರಥಾಂಗಂಗಳುರುತರಗಂಭೀರಸಿಫೂರ್ಜ ಷದಿಂ ಮೇಲುಪ್ಪರಿಗೆಗಳೊಳ್ವಿಹರಿಸುವ ಕೇಳೀಮಯೂರಂಗಳ್ಗೆ ಘನಗರ್ಜಿ ತಭ್ರಮೆಯನುಣ್ಮಿಸುವ ಸಿವಂತರಗಣಿತರಥಂಗಳ ತಿಂಥಿಣಿಗಳಿಂದಿರ್ಪ್ಪಕ್ಕ ದೊಳುಮೆಡೆವಿಡದಡಿಕಿರಿದ ರಾಯವೀದಿಗಳೊಳಂ ಸುಕುಮಾರಹಂಸತೂಲಿ ಕಾಶಯಸಚಿತಾಸ್ತರಣಮಣಿದರ್ಪ್ಪಣಗಂಧಪುಷ್ಪಫಲತಾಂಬೂಲಾದಿಭೋಗ್ಯ ವಸ್ತುಪ್ರಕರದಿಂದೊಡಗೂಡಿ ಬಗೆಗೊಳ್ವ ಮೊಗಸಾಲೆಗಳೊಳ್ಕಮ್ಮಂಗಣೆ ಯನ ಸಿಂಗಾಡಿಯಂತಿರ್ಪ್ಪ ಕುಡಿವುರ್ವಾಗಳಂ ಕುಣಿಸುತ್ತುಂ ಕಣ್ಗೆವಂದ ಯುವಲೋಕಮುಂ ಬೆಳ್ಮಾಡುವ ಮರುಳ್ಗಬ್ಬಿಯೆಂಬಂತಿಸೆವ ಬೆಳ್ನಗೆ ಯಂ ಪಸರಿಸುತ್ತುಂ ದಿನದಿನಮೊಂದೊಂದುಪಾಂಗಿನ ಸಿಂಗರದಿಂದೊಪ್ಪು ತ್ತುಮಿತ್ತತ್ತವೋಸರಿಸಿದ ಸುರುಚಿರಚೇನಾಂಬರಂಗಳ ಜವನಿಕೆಗಳಿಂ ರಂಜಿಸುವ ಗೂಡುಂಬಾಯ್ಗಳೊಳ್ಗಾಡಿ ಮಿಗೆ ನೊಂದೋರ್ಪ್ಪ ವೇಸಿಯರ ಕುಡುದಿಟ್ಟಿಗಳೆಂಬ ಕಣ್ಣಿವಲೆಗಳೊಳ್ಕಡೆದು ಕಟ್ಟುವಡೆಯುತಿರ್ಪ್ಪ ನವೀನ ವಿಟಹರಿಣಂಗಳಿಂನೆಯುಮಿಲ್ಲಲ್ಲಿ ಪೊರ್ದುಗೆಗೊಂತಿರ್ಪ್ಪ ಮಧುಪಾನಗೋ ಷ್ಠಿಗಳೊಳ್ಗಣಿಕೆಯರ್ವೀರಸು ಪೊಳೆಪೊಳೆವ ನುಣ್ಪಾಳುಕಿನ ಸೊನ್ನಲಿಗೆಗಳಂ ಪಿಡಿದಲರ್ಗಂಪಿನ ಸವಿಗಳ್ಳಂ ಕುಡಿದು ಪರವಶಾನಂವದಿಂ ಗಹಗಹಿಸುತ್ತುಂ ಪ್ರಣಯದಿಂದೋರೊರ್ವರೊರ್ವರೊಳ್ಪಾಯ್ದಾಡುತ್ತುಂ ಮುಚಭರದಿಂ ತಡಬಡಿಸದಸಂಬದ್ಧಪ್ರಲಾಪಂಗೆಯ್ಯುತ್ತುಂ ತಲೆಸುತ್ತಿಸಿಂದಿರವೆ ವಿಕೃತಾಂಗ

ಚೇಷ್ಟೆಯನೆಸಗುತ್ತುಮತ್ತಿತ್ತಮೆಡವುತ್ತುಂ ಬೀಳುತ್ತುಮೇಳುತ್ತುಂ ತೇಲ್ದು ತೇಲ್ದು ನಡೆಯುತ್ತುಮಿಪ್ಪ ರೂಪಿಸಿದ ನಿಟಲೇಕ್ಷರರಿಂದೆಯುಮಿಟ್ಟಣಿಸಿದ ವೇಕವಾಟಗಳೊಳಂ ಪಗಲಿರುಳುಮಿರುಂಪೆಗಳ್ವಾಲಿಡುವಂತೆ ನಡೆತಪ್ಪನೇಕ ಸಹಸ್ರಭಕ್ತರಿಂ ನಿರಂತರಂಗಳಪ್ಪ ದೇವಮಂದಿರಂಗಳೊಳಂ ಮೇಗಣ್ಗೆ ಪೊಣ್ಮಿಬಾಂದಳಮನಳುರ್ದ ಧೂಮಮಂಡಲದಿಂದಭ್ರಾಗಮವಿಭ್ರಾಂತಿಯನೊಡರಿಸುವ ನಾನಾವಿಧಶಿಲ್ಪಂಗಳ ಧೂಮಯಂತ್ರಶಾಲೆಗಳೊಳಂ ಪ್ರತಿಮಾರ್ಗ ನಿಯಂತ್ರಿತಯಂತ್ರಮೂಲಕಾನೇಕಸಹಸ್ರದೀಪಿಕಾಲೋಕದಿಂ ಕೃಷ್ಣಪಕ್ಷದೊಳಂ ರಾಕೆಯುಂತೆಸೆವ ರಾತ್ರಿಗಳೊಳ್ಕರ್ಣಾಮೃತಪ್ರಾಯಮಪ್ಪ ಸಂಗೀತದಿಂದೆಯುಮುಖಿನಂದನೀಯಂಗಳಪ್ಪ ವೇಷಭೂಷೆಗಳಿಂದೆಯುಂ ಸಭಾಸದರ್ಗೆ ಮನೋವಿನೋದನಮನಾಗಿಸುವ ನಾಟಕಂಗಳನಾಡುವ ನಾಟಕಶಾಲೆಗಳೊಳಂ ಲೋಕಕ್ಕೆ ಹಿತಾಹಿತಪ್ರವೃತ್ತಿನಿವೃತ್ತಿಗಳಂ ಬೋಧಿಸುವಿತಿಹಾಸಪುರಾಣಂಗಳ ವಿಚಾರಮುಂ ನಡೆಯಿಸುವಾಸ್ತಿಕಜನಂಗಳ ಸಮಾಜಮುಂಟಸಂಗಳೊಳಮಾನಗರಮತಿವಿಸ್ತೀರ್ಣಮುಂ ಸಾಗರಪರಿಸ್ತೀರ್ಣಮುಮಾಗಿ ವರ್ಣಿಸಲ್ಕಸದಳವೆನಿಸಿ ಸೊಗಯಿಸುತಿಪ್ಪುದಂತುಮಲ್ಲದೆ ॥೩॥

ಕಂ॥ ಅಂಬುಧಿಯು ಸಲಿಲದೊಳ್ಪ್ರತಿ ।
ಬಿಂಬಿಸಿದಮರಾವತೀಮಹಾನಗರಮೆನ ॥
ಲ್ಕಿಂಬಾದ ದಿವ್ಯಸುಖಕಾ ।
ಲಂಬಮಿದೆನಿಸುತ್ತೆ ತಾನದೇಂ ಮೆರೆದಪುದೋ ॥೮॥

ವ॥ ಪಲವಾತುಗಳಿಂದೇಂ,

ಕಂ॥ ಸಲೆ ನೀಡಿ ನೀಡಿ ತೆರೆಗ ।
ಳ್ಗಳನೆರೆದಲ್ಲಿಪ್ಪ ಧನಿಕರಿಂದಬ್ಧಿವಲಂ ॥
ಗಳಿಸದ ಪಲರನ್ನಗಳಿಂ ।
ತಳಿದುದು ರತ್ನಾಕರಪ್ರಸಿದ್ಧಾಹ್ವಯಮಂ ॥೯॥

ವ॥ ಇಂತಾನಗರಮಂ ನಡೆನೋಡಿ ನಿತಾಂತಮುದಿತಸ್ವಾಂತನಾಗಿ ಭೂಕಾಂತಂ ದಿಸಾಂತದೊಳ್ ಪೊಳಲ ಪೊರಗಣ ರಾಜವೀಥಿಯೊಳ್ಸಂಚಾರ ಸಮುತ್ಸುಕನಾಗಿಪರಿಜನಂಬೆರಸು ನಡೆತರುತಿಪ್ಪಿನಂ ॥೧೦॥

ವೃ|| ಗಿರಿಗಳ್ವಾಲ್ಗೊಂಡು ಬರ್ಪಂತಿರೆ ತರತರದಿಂ ಮೇಲೆಮೇಲೆಯ್ದುರುತ್ತಿ |
ಪ್ಪೊರುವಾತಾಘಾತಘುಷ್ಯಚ್ಛಟುಲತರತರಂಗಂಗಳಿಂದಂ ಕರಂ ಭೀ ||
ಕರವಾಗೆತ್ತೆತ್ತಮುಂ ಸಂಚರಿಪ ಜಲಚರವ್ರಾತದಿಂ ಕೂಡಿ ತಾಂ ಭೋ |
ರ್ಗರೆಯುತ್ತುಂ ಕಣ್ಗೆವಂದತ್ತಗಣಿತತರಣೀಯಾಸಮಂಭೋನಿಧಾನಂ ||೧೧||

ಕಂ|| ಆನೀರಧಿ ಜನದೃಷ್ಟ್ಯನ |
ಧೀನಾಪರಪಾರಮೆನಿಸಿ ತೋಪ್ಪುದರಿಂದಂ ||
ತಾನೇಗಗನಮೊ ಗಗನಮೆ |
ತಾನೋ ತಿಳಿಯಲ್ಕಸಾಧ್ಯಮೆಂದೆನಿಸಿರ್ಕುಂ ||೧೨||

ವೃ|| ಧರೆಯೊಳ್ತನೊಂದೆ ವಾರಾಂನಿಧಿಯೆನುತಲೇಪಂಬಡುತ್ತಿರ್ದನೀರಾ |
ಕರಮೌವಾರಾರ್ಣವಂ ವಿಕ್ರಮಜಲನಿಧಿ ಸೌಂದರ್ಯರತ್ನಾಕರಂ ನಿ ||
ರ್ಭರಕಾರುಣ್ಯಾಬ್ಧಿ ತಾನೆಂದೆನಿಸಿ ಬಸುಸಮೋರಾತಿಯಾಗಿರ್ಪ ತಮ್ಮಂ |
ವರನಂ ಕಂಡೆಯ್ದಿ ನಾಣಿಂ ಮನಮುಬ್ಬುದೆಸಲಸೇಂಕರ್ಪನಾಳ್ವತ್ತೊ ನೋಡಲ್ ||

ವ|| ಆಗಳ್, ||

ಕಂ|| ನಿಮಿಕಿಸಿ ಸಸಿಗೆತ್ತರಸನ |
ಸಿರಿಮೊಗಮಂ ಕಡಲದೊಳ್ಪೊಕ್ಕಿ ಎಂದುಲಿಯುತ್ತುಂ ||
ತೆರೆಗಯ್ಗಳಿನಪ್ಪಲ್ಕಾ |
ದರದಿಂದಿದಿರ್ವರ್ಸ ತೆರದೊಳೀಸುರ್ಕುದುದೋ ||೧೪||

ವ || ಮತ್ತಂ,

ಕಂ|| ಅರಸಂ ಬರಲ್ಕೆ ದತ್ಸಾ |
ಕರಸೊಲವಿಂ ಕೆದರ್ದ ಮುಗಿಳಿಸಲೂರ್ಮಿಸಮಂ ||
ಪರೆಯಿಂ ಸಿಡಿದಂಬುಕಣೋ |
ತ್ಕರನೆಸೆಮುದು ಮಿರುಗುತಪರಸೂರ್ಯಪ್ರಭೆಯಿಂ ||೧೫||

ವ|| ಅಂತಾಸನಮುದ್ಯದತಿರಮಣೀಯಮಪ್ಪ ತಟನಿಕಟೈಕಪ್ರದೇಶದೊಳ್ ||೧೬||

ವೃ|| ಪಾರಸೀಕತರುಣೀನಿಕುರುಂಬಂ |
ಶಾರದೇಂದುರುಚಿರಾನನಬಿಂಬಂ ||
ಸೌರಭಾನ್ವಿತವಿಚಿತ್ರದುಕೂಲಂ |
ಚಾರುಕಾಂತಿ ಚರಿಸಿತ್ತು ಸಲೀಲಂ ||೧೭||

ವ॥ ಮತ್ತನೊಂದಭಿನಂದನೀಯಾನೇಕಚತುಷ್ಪದಪೀಠಂಗಳನಳವಡಿಸಿರ್ದಡೆಯೊಳ್ ॥೧೯॥

ಕಂ॥ ವಿವಿಧವಿಚಿತ್ರಶಿರಸ್ತ್ರಾ ।
ಣವಸ್ತ್ರಧರಮುರುಣಗಂಡಮೂಂಗ್ಲೇಯವಧೂ ॥
ನಿವಹಂ ತನ್ತಮ್ಮಿಸರೊಡ ।
ನವಿರಳಮುನಿದಿರೆ ಪರಿಸುತಿರ್ದತ್ತಾಗಳ್ ॥೧೯॥

ವ॥ ಇನ್ನುವೆಂಬಮ ಸನ್ನುತಾನೇಕತರುಲತಾವಿತಾನದಿಂ ಹೃದ್ಯಮಪ್ಪುದ್ಯಾನದಿಂ ಬಗೆಗೊಳಿಸ ಮುಳಲ ತಡಿಯೆಡೆಯೊಳ್ ॥೨೦॥

ಕಂ॥ ಅಂದಂದಿನ ನಿಜನಿಜಕಾ ।
ರ್ಯಂದೀರ್ಚಿದ ಬಳಿಕೆ ಮೇಣರಂ ತನೆ ಕಳಿಯುಲ್ ॥
ಬಂದಧಿಕಾರಿಗಳಧಿಕಾ ।
ನಂದದೆ ಕಡಲತ್ತಣಿಲರ್ಗೆ ಮೆಯ್ಯೊಡ್ಡಿರ್ದರ್ ॥೨೧॥

ವ॥ ಮತ್ತೆ ಬೇರಲ್ಲಲ್ಲಿ ಬಿತ್ತರಂಗೊಳಿಸಿರ್ಪ್ಪಪಲವಾಡುಂಬೊಲಂಗಳೊಳ್ ॥೨೨॥

ಕಂ॥ ಬಾಲಕರನೇಕತೋವಿನ ।
ಶಾಲೆಗಳಿಂ ಬಂಸುಬಂದು ಪಲವಾಟಗಳು ॥
ಕೋಲಾಹಲಮೆಸಗುತ್ತುಂ ।
ಲೀಲೆಯೊಳೊಗ್ಗೊಗ್ಗುಗೂಡುತಾಡುತುಮಿರ್ದರ್ ॥೨೩॥

ವ॥ ಪೆರತೊಂದು ಪಡಗುಗಳ ನಿಲ್ಗಡುವಿನೊಳ್ ॥೨೪॥

ಕಂ॥ ಕಡಲೊಳ್ಕಣ್ಣೊಳಿಸುವ ಪೆ ।
ರ್ವಡಗುಗಳಿಂ ಬಂದ ದೀವದೀವದ ಮೇಲಾ ॥
ದೊಡಮೆಗಳಂ ಬೇಹರಿಸ ।
ಲ್ಗಡಣಿಪ ವಣಿಜರುಲಿವಬ್ಧಿರವಮುಂ ಪಳಿಗುಂ ॥೨೫॥

ವ॥ ಇಂತಪ್ಪ ಮುನ್ನೀರ ತೀರಪ್ರದೇಶಂಗಳನಾಭೂರಮಣಂ ಭೂರಿ ಕೌತುಕದಿಂದಾಲೋಕಿಸುತ್ತುರುತರತರಂಗನಿಕರದಿಂ ಕೆದರ್ದ ತಂದಲ್ಗಳಿಂ ತಣ್ಪವೆತ್ತುರಮ್ಯನೆನಲೊಮ್ಮೆ ತೀಡುವ ಕಡಲತ್ತಣಿಲರ ಮೆಲ್ನೋಂಕಿಂಗೆ ಸಿರಿಮೆಯೊಸ್ಸಗವಡೆ ಪರಸ್ಪಹಪ್ರದೀಪಿಕಾಲೋಕದಿಂ ಮೇದೀಪ್ಯಮಾನನುಪ್ಪ ಭೀಡಾರವುಂ ಪುಗುತುಂದಿಂತಲ್ಲಿ ಕೆಲವಾನುಂ ದಿನಮಿರ್ದು ಬಳಿಕಮಲ್ಲಿಂದೆ

ಪರಿವಾರಂಬೆರಸು ಪೊರಮಟ್ಟು ಗಂಗಾಯಮುನಾಸರಸ್ವತೀನದಿಗಳ ಸಮಾಗಮದಿಂ ಜಗತ್ಪಾವನಮೆನಿಸಿದ ಪ್ರಯಾಗಕ್ಷೇತ್ರಮನೆಯ್ದಿ ವಂದಲ್ಲಿ ಬೀಡಂ ಬಿಟ್ಟು ಪುಣ್ಯತೀರ್ಥಸ್ನಾನಾರ್ಥದಿಂ ತ್ರಿವೇಣೀಸಂಗಮಸ್ಥಾನಕ್ಕೆ ನಡೆತರಲೊಡಂ ॥೬೬॥

ವೃ ॥ ಶಾರದಚಂದ್ರಿಕಾಲಸಿತಯಂ ಕಡೆಗಣ್ಬಿತ್ತೆ ಪಿಂದೆ ರೂಪದಿಂ |
ಸಾರುತೆ ಮುಂದೆ ಸೂರ್ಯತನಯಾಸಖಿಯಿಂದೊಡಗೂಡಿ ಶಂಭುಪಾ ||
ಥೋರುಪನೇತ್ರರೇಕತನುವಂತೆ ಸಿತಾಸಿತರೂಪನಿರ್ಘರೀ |
ಧೋರಣಿ ಗಂಗೆ ಮುಂಗಳತರಂಗೆ ವಿರಾಜಿಸಿತಗ್ರಭಾಗದೊಳ್ ॥೨೭॥

ಕಂ ॥ ನದಿಗಳ್ಪಲವಿಪ್ಪುವು ಸೋಂ |
ಕಿದ ಮಾತ್ರದೆ ತಾಂ ಸಮಸ್ತಜಂತುಗಳಂ ಪಾ ||
ಪದಿನಗಲಿಸಿವಿನುತಾಮರ |
ಪದಮಂ ಪೊದ್ದಿಪೊಡೆ ಗಂಗೆಯಿಂ ಪೆರತುಂಟೇ ॥೨೮॥

ವ॥ ಅಂತಹ ಭಾಗೀರಥಿಯ ಪುಣ್ಯತೀರ್ಥದೊಳವಗಾಹನಕ್ಕೆ ಸಂಕಲ್ಪಿಸಿ ಭಕ್ತಿಭರದಿಂ ಬದ್ಧಾಂಜಲಿಪ್ರಭನಾಗಿ ॥೬೯॥

ವೃ ॥ ಗಂಗೆ ಭವ್ಯತರಂಗೆ ಕೈರವಬಂಧುಜೂಡಜಟಾಪರಿ |
ಷ್ವಂಗೆ ದೇವಿ ಮಹರ್ಷಿಲೋಕನುತಪ್ರಭಾವೆ ಕಳಿಂದಜಾ ||
ಲಿಂಗಿತವಂಗಿ ನಿಜಾಂಬುಪೂರವಗಾಹಕೃದ್ದುರಿತಾವಳೀ |
ಭಂಗಕಾರಿಣಿ ಪುಣ್ಯರೂಪಿಣಿ ನಿನ್ನ ನಾನಿದೊ ವಂದಿಪೆಂ ॥೩೦॥

ವ॥ ಎಂದು ವಂದಿಸಿ ನೀರೊಳಿಳಿದು ಪುಷ್ಪಾಂಜಲಿಯಂ ಕೆದರಿ ಮಜ್ಜನಂಗೆಯ್ದು ಶುಚಿಭೂತನಾಗಿ ಪೂರ್ವಗ್ಗೆ ಗೋದಾನಂ ಮೊದಲಿನಿಸಿದ ಪಲವುಂ ದಾನಂಗಳನಿತ್ತು ಧನ್ಯಾತ್ಮನಾಗಿ ಪರಿವಾರಂಬೆರಸಲ್ಲಿಂ ಪೊರಮಟ್ಟು ಕಾಳೀಘಟ್ಟಮಹಾನಗರಮನೆಯ್ದಿ ವಂದಲ್ಲಿ ಭಾರತಚಕ್ರವರ್ತಿನಿಯ ಪಡಿನೆಳಲೆನಿಸಿದಾಂಗ್ಲೇಯಸರ್ವಾಧಿಕಾರಿಯು ರಾಜಮರ್ಯಾದಾನುಗುಣಮಪ್ಪ ಮನ್ನಣೆಯಂ ಕಯ್ಕೊಂಡು ರಾಜೋಪಚಾರದಿಂ ಮೆರೆಯುತ್ತೆ ರಾಜರಥಮನೇರಿ ಪರಿತಂದು ರಾಜಯೋಗ್ಯಮಪ್ಪ ಸಂಪದದಿಂದೊಡಗೂಡಿದ ಬೀಡಾರದೊಳ್ಪೀಡಂ ಬಿಟ್ಟು ಸಮುಚಿತಕ್ರಮದಿಂ ದಾಂಗ್ಲೇಯಸರ್ವಾಧಿಕಾರಿಯಂ ಕಂಡು

ಕರನಿಷ್ಪೀಡನಪೂರ್ವಕಂ ಪರಸ್ಪರಕುಶಲಾನುಯೋಗಂ ಬಳೆದ ಬಳಿಯವುಂ ಮಹತ್ತರಪತ್ತನದ ಬಿತ್ತರಮುಮನಲ್ಲಿಯೆ ನೆಲೆಗೊಂಡಿಪ್ಪೀಭರತಖಂಡದ ರಾಯಸಿರಿಯೇಳ್ಗೆಯುಮನಲ್ಲಿಯ ಬಂಗಾಳರನವದ್ಯವಿದ್ಯಾಭಿವೃದ್ಧಿಯುಮುಂ ಮತ್ತಮಣಿಯರಂ ನಡೆವ ಬಣಜಿನಗ್ಗಳಿಕೆಯುಮನಸಂಖ್ಯಾತರಪ್ಪ ಧನಿಕರ ನವಧಿಕಭೋಗಸಮೃದ್ಧಿಯುಮುಂ ಪೊದ್ದುಗೆಗೊಂಡಿಪ್ಪ ಬಾಂಬೊಚ್ಚ ದೊಳೊರ್ಣಮುಂ ಬಿಡದೆ ಕಡಲತ್ತಂ ಪೋಗಿವಪ್ಪೆಣಿಕೆಯಿಲ್ಲದ ಪಡಂಗುಗಳ ಬೆಡಂಗುಗಳುಮಂ ನೋಡಿ ಸಂತಸಂಗೊಂಡು ಗಂಗಾತೀರದೊಳೊಂದುದೆವಸಂ ಕಾಳಿಕಾದೇವಾಲಯಮಂ ಕಂಡೊಡನೆ ಸಾರ್ದಖಂಡಭಕ್ತಿಯಿಂ ನಿಜಕುಲದೇವತೆಯುಪ್ಪ ಚಾಮುಂಡಾಂಬೆಯು ಬೇರೊಂದು ಪರಿಜೆನಿಸಿಪ್ಪಾಪರದೇವತೆಯುಂ ದರ್ಶನಂಗೆಯ್ದಿರಗಿ ॥೩೧॥

ವೃ ॥ ಜಯ ಕಾಳಿ ನತಾಳಿಮನೋರಥದೇ ।
ಜಯ ದೇವಿ ಜಗತ್ತ್ರಯವೂಜ್ಯಪದೇ ॥
ಜಯ ಶಂಕರಿ ಭಕ್ತಮನೋನಿಲಯೇ ।
ಜಯ ಚಂಡಿ ಮಹೀಧರರಾಟ್ತನಯೇ ॥೩೨॥

ವೃ ॥ ಭುಜದಂಡಚತುಷ್ಟಯ ಶೋಭಿತೆ ನೀ ।
ರಜಸಂಭವಸನ್ನುತೆ ರೌದ್ರಮುಖೀ ॥
ಸಜಲಾಂಬುದರೂಪೆ ಮದಾರ್ತಿಗಳಂ ।
ತ್ರಿಜಗಜ್ಜನಯಿತ್ರಿ ನಿರಾಕರಿಸೌ ॥೩೩॥

ವೃ ॥ ದುರಿತದ್ರುಮಘೋರಕುಠಾರಧುರಂ ।
ಧರಮಾನತರಕ್ಷಣ ಮಾರ್ಗಚರಂ ॥
ಪರಮೇಶ್ವರಿ ಕಾಳಿ ಭವಚ್ಚರಣಂ ।
ನಿರುಪಾಧಿಕಮೆನ್ನ ಶಿಖಾಭರಣಂ ॥೩೪॥

ವೃ ॥ ನಿಗಮಸ್ತುತೆ ನಿನ್ನವಲಂಬದೆ ನಾ ।
ಲ್ಮೊಗನುಂ ನಳಿನಾಕ್ಷನು ವಿಶ್ವರನುಂ ॥
ಜಗಮಂ ಸೃಜಿಪಂ ಪೊರೆವಂ ತವಿಪಂ ।
ನಿಗಿಲಾದುದು ನಿನ್ನಯ ಮೈಮೆ ಶಿವೇ ॥೩೫॥

ವೃ ॥ ಕ್ಷಮಿಸೆನ್ನಯ ದುರ್ನಯಮಂ ಜಗದಾ ।
ದಿಮೆಯೆನ್ನೊಳೊಡಚ್ಚ್ರ್ದಯೋದಯಮುಂ ॥
ಮಮಮಾನಸದಿಷ್ಟಮನೀ ತವಪ ।
ತ್ಕಮಲಂಗಳನೊಲ್ದು ಸಮರ್ಚ್ಚಿಸುವೆಂ ॥೩೬॥

ವೆ॥ ಎಂದಿಂತು ನುತಿಗೆಯ್ದು ಪೂಜಿಸಿಹಸಾದಂಗೊಂಡಾಭೂನಾಯಕ ನಾಂಗ್ಲೀಯರನನ್ಯಸಾಧಾರಣಮಪ್ಪ ಸತ್ಕಾರಮಂ ಕಯ್ಕೊಂಡೆಲ್ಲರೊಡನಲ್ಲಿಂ ಪೊರಮಟ್ಟು ಪರಿತರುತ್ತಿರ್ದಾಗಳ್ ॥೩೭॥

ವೃ ॥ ಸಮುದಗ್ರಾಗಣನೀಯಸೌಧಶಿಖರಶ್ರೇಣೀ ಕೃತೇಂದ್ರಾಲಯಾ ।
ಕ್ರಮಣಂ ದರ್ಶನಮಾತ್ರವಾರಿತಸಮಸ್ತಾಘಂ ಗಿರೀಂದ್ರಾತ್ಮಜಾ ॥
ರಮಣೈಕಪ್ರಿಯವಾಸಪಾವನಪದಂ ಭಾಗೀರಥೀತೀರದೊ ।
ಳ್ವಿಮಲಂ ಕಣ್ಗೆಸೆದತ್ತು ಸುಂದರತರಂ ಕಾಶೀಪುರಂ ಶ್ರೀಕರಂ ॥೩೮॥

ವೆ॥ ಅಂತಾವುಹಾಕ್ಷೇತ್ರಮನಾಧಾತ್ರೀಶ್ವರಂ ಕಂಡು ಭಕ್ತಿಯಿಂ ಕಯ್ಮುಗಿದು ॥೩೯॥

ಕಂ ॥ ಶಿವನ ವಿಧಿಶೀರ್ಷದಳನಾ !
ಘವನಳಿಯಿಸಿ ತದವಿಮುಕ್ತಮಾಗಿಪ್ಪುದುಂ ॥
ದವಿಮುಕ್ತಕ್ಷೇತ್ರಮೆನು ।
ತ್ತವನಿತಲಪ್ರಥಿತೆ ಕಾಶಿ ನಿನಗೆರಗುನೆನಾಂ ॥೪೦॥

ಕಂ ॥ ಮನಸಿಜಹರನುಪದೇಶಿಸು ।
ವನಘಶ್ರೀರಾಮತಾರಕದೆ ತಾಂ ಕಡೆಯೊಳ್ ॥
ತನುಭೃದ್ದ್ವರ್ಗಕೆ ಭವಬಂ ।
ಧನಮುಕ್ತಿಯನೀವ ಕಾಶಿ ಕರುಣಿಸು ಶುಭಮಂ ॥೪೧॥

ವೆ॥ ಎಂದಿಂತು ವಂದನಂಗೆಯ್ದು ಸಾರ್ತಂದು ನಿಜನಿವಾಸಯೋಗ್ಯಮಪ್ಪ ಸೌಧದೊಳ್ಬೀಡಂ ಬಿಟ್ಟು ಪುರಾಣಪ್ರಸಿದ್ಧಮಾದ ಮಣಿಕರ್ಣಿಕಾಘಟ್ಟಕ್ಕೆ ನಡೆತಂದು ನಿಯಮದಿಂದಮುರನದಿಯೊಳ್ಮಿಂದು ಪವಿತ್ರಾತ್ಮನಾಗಿ ಧರಿತ್ರೀಸುರಗ್ಗೆ ಪರಮೌದಾರ್ಯದಿಂ ಪಲವು ದಾನಂಗಳನಿತ್ತನುಕ್ರಮದಿಂದ ಲ್ಲಲ್ಲಿ ನೆಲೆಗೊಂಡಿರ್ಪ್ಪ ಧುಂಡಿಗಣಪತಿಶ್ರೀವಿಶ್ವೇಶ್ವರಬಿಂದುಮಾಧವಾನ್ನಪೂ

ರ್ಣಾದಿಮಹನೀಯದೈವತಪ್ರತಿಬಿಂಬಂಗಳಂ ದರ್ಶನಂಗೆಯ್ದು ಪೂಜಿಸಿ ನನು ಸ್ಕರಿಸಿ ಕೃತಾರ್ಥನಾಗಿ ಬಳಿಕಂ ಪ್ರಾಚ್ಯತೀರ್ಥಸ್ನಾನಾರ್ಥಂ ಬಂದು ಬಂದು ನೆರೆಯುತ್ತಿರ್ಪ್ಪನೇಕಸಹಸ್ರ ಯಾತ್ರಾರ್ಥಿಗಳಿಂದಿತಿಕಿರಿದ ಸುಮನೋರಮ ಸೋಪಾನಸಙ್ಘಗಳಿಂದೆಯುಂ ಜಪತಪೋನಿಷ್ಠರಪ್ಪ ಮಹಾತ್ಮರಿಂದಧಿಷ್ಠಿತಂ ಗಳಪ್ಪ ಸಂಧ್ಯಾಮಂಟಪಂಗಳಿಂದೆಯುಂ ಜೆರಂತನಸುಕೃತಪರಿಪಾಕದಿಂ ಕಾಶೀ ನಿವಾಸಮಂ ಪಡೆದು ಗಂಗಾಮಹಿಮೆಯಂ ಕೊಂಡಾಡುತಿರ್ಪ್ಪವೊ ಎಂಬಂತ ಣಿಯುರಂ ದನಿಗೆಯ್ವ ನಾನಾವಿಧವಿಹಗಂಗಳಿಂ ಕೂಡಿ ತಣ್ಣೆಳಲನೀವ ನಿಡು ಮರಂಗಳಿಂದೆಯುಂ ತ್ರಿಲೋಕಪಾವನೆಯುಪ್ಪ ಭಾಗೀರಥಿಯ ತೀರದೊಳ್ನಿ ಲಸಿ ಪಿರಿದುಂ ಮೈಮೆಗೊಂಡಿರ್ಪ್ಪ ಮಹನೀಯರಪ್ಪ ದೇವರ್ಕಳ ದೇಗುಲಂ ಗಳಿಂದೆಯುಂ ಪರಿಶೋಭಿಸುತ್ತಿರ್ಪ್ಪ ಮಹಾನದಿಯ ತಟಪ್ರದೇಶಂಗಳೊಳಂ ಸಾಂಗನಿಗಮಾಗಮಾಧ್ಯಯನಂ ಬಳೆವನೇಕಪಾಠನಿಕೇತನಂಗಳೊಳಂ ಬ್ರ ಹ್ಮನಿಷ್ಠರಪ್ಪ ಯತಿಶ್ರೇಷ್ಠರಗಣಿತಮಠಂಗಳೊಳಂ ತರವಿಡಿದಂಬರಚುಂಬಿಗ ಳಪ್ಪ ಮೇಲುಪ್ಪರಿಗೆಗಳಿಂದೆಸೆವ ಕೇರಿಕೇರಿಯು ಪೆರ್ಮಾಳಿಗೆಗಳೊಳಂ ನಾಡು ನಾಡುಗಳಿಂ ಬಂದು ನೆರೆಯುತ್ತಿರ್ಪ್ಪ ತೀರ್ಥಯಾತ್ರಿಕರ ಸತ್ಕರ್ಮಪ್ರವೃತ್ತಿ ಗಳಂದೊಪ್ಪುವ ಧರ್ಮಶಾಲೆಗಳೊಳಂ ಸಾರತರಾಗಣ್ಯಪಣ್ಯವಸ್ತುವಿಸ್ತಾರದಿಂ ಕಣ್ಗೊಳಸುವಂಗಡಿವೀದಿಗಳೊಳಂ ನೆರೆ ಮೆರೆಯುತ್ತೆ ಧರ್ಮದೇವತೆಯ ನೆಲೆ ವೀಡೆನಿಸಿದಾನಗರಮುಂ ನೋಡಿ ನೀಡುಂ ಸಂತಸಂಬಟ್ಟು ವಿದ್ವತ್ಪಕ್ಷಪಾತ ದಿಂದಲ್ಲಿರ್ಪ್ಪ ವೇದಶಾಸ್ತ್ರಸಂಪನ್ನರಪ್ಪನೇಕಪಂಡಿತರಂ ಬರಿಸಿ ಸಭಾಮುಖ ದೊಳವರವರ ಪಾಂಡಿತ್ಯಮಂ ಪರಿಕಿಸಿ ಯಥಾರ್ಹಪಾರಿತೋಷಿಕಂಗಳಂ ಮನ್ನಿಸಲೊಡಂ ॥೪೦॥

ಕಂ ॥ ಸದುದಾರನೀಮಹೀಂದ್ರಂ ।
ಪದೆದಿಂತೀಕ್ಷೇತ್ರಯಾತ್ರೆಗೆಯ್ದುದೇ ಜ ॥
ನ್ಮದ ಫಲಮಿದೆ ತಾಂ ಧನವಿಭ ।
ವದ ಫಲಮೆಂದಾತನಂ ಪೊಗಳ್ದುದಿಳೆಯೆಲ್ಲಂ ॥೪೩॥

ವ॥ ಇಂತು ನಿಖಿಲಪರಿವಾರಂಬೆರಸು ಮಹಾತೀರ್ಥಯಾತ್ರೆಯಂ ಪೋಗಿ ಕೃತಾರ್ಥನೆನಿಸಿದಾ ಸೃಥ್ವೀಪತಿ ಬಳಿಕಮಲ್ಲಿಂ ತಳರ್ದು ಲಕ್ಷ್ಮಣ ಪುರಮುರ್ಗದಿಂ ಹರಿದ್ವಾರಮನೆಯ್ದಿವರ್ಪ್ಪುದುಂ ॥೪೪॥

ವೃ ॥ ಸೈರ್ಮಲ್ಯಶಾಲಿಸಲಿಲಾಂತರದೃಶ್ಯಮಾನ ।
ಕೂರ್ಮಾಹಿಮಿಾನಮುಖವಾರಿಚರಪ್ರತಾನಂ ॥
ಧರ್ಮಧ್ವಜಂ ನಯನಗೋಚರಮಾಯ್ತು ಸರ್ವ ।
ಶರ್ಮಾವಹಂ ತ್ರಿಪಥಗಾತಟಿನೀಪ್ರವಾಹಂ ॥೪೫॥

ವ॥ ಅಂತು ಚಳವೆಟ್ಟಿನ ತಟಪ್ರಾಂತದೊಳ್ಸತ್ಪುರುಷನ ಹೃದಯದಂತೆ ವಿಮಳಮುಂ ಶೀತಳಮುಂ ಗಂಭೀರಮುಮಾಗಿಪ್ಪ ಭಾಗೀರಥಿಯೊಳ್ಮಿಂದು ಪೂರ್ವಗೆ ಬಹುವಿಧದಾನಂಗಳನಿತ್ತಲ್ಲಿಂ ಕಿರಿದುದೂರದೊಳಿಪ್ಪ ಚಂಡಿಯ ಬೆಟ್ಟಕ್ಕೆ ಪೋಗಿ ಚಂಡಿಕಾದೇವಾಲಯಮುಂ ಪೊಕ್ಕಾಜಗನ್ಮಾತೆಯ ಕಾಣ್ಕೆಯಂ ಕಯ್ಕೊಂಡು ಕುಂಬಿಟ್ಟು ಬದ್ಧಾಂಜಲಿಪುಟನಾಗಿ ॥೪೬॥

ದಂಡಕಂ ॥ ಜಯ ಜಯ ಜಯ ಚಂಡಿ ಚಾಮುಂಡಿಕೇ ಚಂಡಮುಂಡಾದಿದುರ್ದಂಡವೇವದ್ವಿಷನ್ಮಂಡಲೀಖಂಡನೋದ್ದಂಡಪಾಂಡಿತ್ಯಸಂಪನ್ನದೋರ್ದಂಡರಾಜಿವ್ಯಯಪ್ರೌಲ್ಲಸನ್ಮಂಡಲಾಗ್ರಕ್ರಿಶೂಲಾದಿನಾನಾಯುಧೇ ಭಕ್ತಲೋಕಾವನಾತ್ತಾನುಕಂಪಾನಿಧೇ ದಿವ್ಯಲಾವಣ್ಯಸಾರಾಂಬುಧೇ ಪುಂಡರೀಕಾತ್ತಕ್ಷಪದ್ಮಾಸನಾಖಂಡಲಾದಿಪ್ರಣಮ್ರಾಮರಸ್ತೋಮಕೋಟೀರಕೋಟೀಸಮಾಬದ್ಧಮಾಣಿಕ್ಯನಿರ್ಯತ್ಪ್ರಭಾಜಾಲಶೋಣೀಕೃತಾಂಘ್ರಿದ್ವಯಾನಿರ್ಜಿತಪ್ರಾತರುತ್ಫುಲ್ಲಾರಕ್ತೋತ್ಪಲೇ ವಾಸರಾಂತೋನ್ಮಿಷತ್ಕಾಂತನೀಲೋತ್ಪಲಶ್ಯಾಮಳೇ ಶ್ಯಾಮಳೇ ಕಿಂಕಿಣೀಮಂಜುಳಸ್ವಾನವದ್ರತ್ನಕಾಂಚೀವಿರಾಜತ್ಕುಸುಂಭಪ್ರಸಾನಾಭದಿವ್ಯಾಂಶುಕೇ ಚೆತ್ಕ್ರಿಯೇಚಾಟ್ಟಹಾಸೇ ಕಾಳಿಕೇ ದೈನ್ಯತಾಪಾಪಹಾರಾಮೃತಾಸಾರವರ್ಷಾಯಮಾನಾತಿದೂರ ಪ್ರಸಪ್ಪರ್ವತಕ್ಕಟಾಕ್ಷೋತ್ಕರೇ ಸೋದರೀಭೂತವಿಶ್ವಂಭರೇ ಘೋರಸಂಸಾರಭೀತಾನತವ್ರಾತದತ್ತಾಭಯೇ ಶಂಕರಾರ್ಧಾಂಗಿ ಮಾತಂಗಿ ಶಂಭುಪ್ರಿಯೇ ॥

ನಿರುಪಮನವರತ್ನಸಂಕೀರ್ಣಕರ್ಣಾವತಂಸೋರ್ಮಿಕಾಪಾರಿಹಾರ್ಯಾಂಗದೋದಾರಕೋಟೀರತಾಟಂಕಹಾರಧ್ವಸನ್ನೂಪುರಾದಿಸ್ಫುರದ್ಭೂಷಣೋದ್ಯತ್ಪ್ರಭಾಮಂಡಲಾಂತರ್ವಿರಾಜನ್ನಿಜಾಪಾರತೇಜೋವಿಶೇಷಾಭಿರಾಮಾಕೃತೇ ಸರ್ವಸಂಪೂಜಿತೇ ಮಂತ್ರಶಾಸ್ತ್ರಾರ್ಥತತ್ವಜ್ಞಯೋಗೀಂದ್ರಚೇತಸ್ಸರೋಜಾಂತರಾವಾಸವಿಶ್ರಾಂತಿದೂರೀಕೃತಾಸಂಖ್ಯವಿಧ್ಯಂಡಸಂಚಾರಸಂಜಾತಭೂರಿ

ಶ್ರಮೇ ಲೋಕಸಂರಕ್ಷಣೋಪಾತ್ತನಾನಾವತಾರಕ್ರಮೇ ವೇದಶಾಸ್ತ್ರಾತ್ಮಿಕೇ ವಾಣಿ ಕಲ್ಯಾಣಿ ಸಂಪತ್ಪ್ರದೇ ಲಕ್ಷ್ಮಿ ಲೋಕತ್ರಯಶ್ಲಾಘ್ಯಸೌಭಾಗ್ಯಲಕ್ಷ್ಮೀಸಮಾಲಂಬನೇ ಪೂರ್ಣಶೀತಾಂಶುಬಿಂಬಾನನೇ ಸಚ್ಚಿದಾನಂದರೂಪೇ ಮಹೋಗ್ರಪ್ರತಾಪೇ ಹೃತಾಶೇಷಪಾಪೇ ವಿನಿರ್ಧೂತಭಕ್ತತ್ರಿತಾಪೇ ನಿಜಾಪಾಂಗಲೀಲಾವಶೀಭೂತಶೈಲೇಂದ್ರಚಾಪೇ ನಿಜಾನುಗ್ರಹೋತ್ಕರ್ಷಪಾತ್ರೀಕೃತಶ್ರೀವಹೀಶೂರಭೂಪೇ ಜಗತ್ಕಾರಣೀಭೂತಮೂಲಪ್ರಕೃತ್ಯಾತ್ಮಿಕೇ ವಾಂಛಿತಾರ್ಥಪ್ರದಾನಾಮರೋದ್ಯಾನಭೂವಲ್ಲಿಕೇ ಮಂದಮಂದಾಂಘ್ರಿವಿನ್ಯಾಸಭಂಗೀಪರಾಭೂತಪಂಸೇ ಸಮುದ್ಯೋತಮಾನೇಂದುರೇಖಾವತಂಸೇ ಸಮಾರೂಢಪಂಚಾನನೇ ಕಿಂಕರೀಭೂತಸರ್ವಾಮರಸ್ತ್ರೀಜನೇ ಗೌರಿ ಕೌಮಾರಿ ಭೂಭೃತ್ಕುಮಾರಿ ತ್ರಯೀಮೌಳಿಕೇಳೀಗೃಹಾಂತರ್ವಿಹಾರೇ ವಚೋಮಾರ್ಗದೂರೇ ಸಮಸ್ತಪ್ರಪಂಚಾತ್ಮಿಕೇ ಸರ್ವಶಕ್ತ್ಯಾತ್ಮಿಕೇ ನೈಜನಾಮಾಕ್ಷರಾಕರ್ಣನಾಮಾತ್ರವಿಪ್ರದ್ರುತಾನೇಕರಕ್ಷೋಗಣೇ ದೇವತಾಚಕ್ರಚೂಡಾಮಣೇ ವಾಮದೇವಾಂಕಪೀಠಾಧಿವಾಸೇ ಪರಿತ್ರಾತದಾಸೇ ಚಕೋರಾಕ್ಷಿ ಕಾಮಾಕ್ಷಿ ವಿಶಾಲಾಕ್ಷಿ ದಾಕ್ಷಾಯಣಿ ಪ್ರಾಢವಿದ್ವತ್ಕವಿಸ್ತೋತ್ರಪಾತ್ರೀಭವದ್ಭವ್ಯನಿತೋತ್ಸವಪ್ರಾಭವೇ ಶ್ರೀಶಿವೇ ದೇವಿ ತುಭ್ಯಂ ನಮೋ ದೇವಿ ತುಭ್ಯಂ ನಮೋ ದೇವಿ ತುಭ್ಯಂ ನಮಃ ॥೪೩॥

ವ॥ ಎಂದು ನುತಿಗೆಯ್ದು ಪೂಜೆಸಿ ಮತ್ತೆ ಮತ್ತೆ ನಮಸ್ಕರಿಸಿ ಧನ್ಯತೆಯನಾಂತಲ್ಲಿಂ ಪೊರಮಟ್ಟು ಪರಿವಾರಂಬೆರಸು ಲವಪುರಂ ದೆಹಲಿಪಟ್ಟಣಮಾಗ್ರಾನಗರಂ ಮೊದಲಪ್ಪ ಕೆಲವಾನುಂ ಪೊಳಲ್ಗಳಂ ಪೊಕ್ಕಲ್ಲಲ್ಲಿಯ ಸುಪ್ರತೀತವಿಷಯಂಗಳನಾಲೋಕವಿಷಯಂಗೆಯ್ದು ಮಧುರಾಪುರಿಯನೆಯ್ದವರ್ಪ್ಪುದುಂ ॥೪೪॥

ವೃ ॥ ಕೂಲಾರೂಢದ್ರುಮಾಳೀನಿಳಯಖಗಕುಲಸ್ವಾದುನಾದಾಭಿರಾಮಂ ।
ಲೋಲತ್ಕಲ್ಲೋಲಡೋಲಾವಿಹರಣಜಣಕಾರಂಡವಕ್ರೌಂಚಚಕ್ರಂ ॥
ವೇಲಾಸೋಪಾನವೀಥೀಚರಪುರತರುಣೀನೂಪುರಾರಾವರಮ್ಯಂ ।
ಕಾಳಿಂದೀನಿರ್ಝರಂ ಕಣ್ಗೆಸೆದುದಭಿನವಪ್ರಾವೃಡಂಭೋದನೀಲಂ ॥೪೫॥

ವ॥ ಅಂತಾಮಹಾನದಿಯೊಳ್ಮಿಂದು ಭೂಸಂಕ್ರಂದನನವಂ ಪೂತಾತ್ಮನಾಗಿ ಪಿಂದೆ ನಂದನಂದನಂ ಶ್ರೀಗೋವಿಂದಂ ತುರುಗಳಂ ಕಾಯ್ವಂದು ವಿರ

ಜೆಸುತ್ತಿರ್ದ ಸಕಲಜಗನ್ಮೋಹನವುಪ್ಪ ವೇಣುಗಾನಮುಂ ಕೇಳಲ್ಕೆ ನೆರೆ
ಕೌತುಕಂಬೆತ್ತು ಮುಂದಮುಂದಗಮನದಿಂ ಕಡಂಗಿ ಗೋಪಾಂಗನೆಯರ್ಬಂದು
ಒಂದು ಮೇಳ್ಗೈಸುತ್ತಿರ್ದ್ದ ರಮಣೀಯಂಗಳಪ್ಪ ವನರಾಜಿಗಳುಮುಂ ಲೀಲಾ
ಮಾನುಷವೇಷಂ ಶೇಷಶಾಯಿ ಗೋಪಬಾಲೆಯರೊಡನೆ ವಿಹರಿಸುತ್ತಿರ್ದ
ಗೋಕುಲಬ್ಯಂದಾವನಾದಿಮಹನೀಯಸ್ಥಲಂಗಳುಮುಂ ಮತ್ತಮಾವಲ್ಲಿನೀ
ಜನವಲ್ಲಭಂ ನೆಲಸಿದ್ದ ನಂದಗೋಪನರಮನೆಯಸನ್ನಿವೇಶಮುಮುಂ ವಿ
ಲೋಕಿಸಿ ನಿಖಿಲಬ್ರಹ್ಮಾಂಡಮಂಡಲಾಧಿಪತಿಯಪ್ಪ ಪುಂಡರೀಕಾಕ್ಷನಖಂಡ
ಲೀಲಾವಿಭೂತಿಯುಂ ನೆನೆನೆನೆದು ಕೊಂಡಾಡುತುಮಲ್ಲಿಂ ಪೊರಮಟ್ಟು ಜಯ
ಪುರಕ್ಕೆ ಬಿಜಯಮಂಗೆಯ್ದಲ್ಲಿಯ ರಾಜಕೀಯಮಪ್ಪ ರಾಯಮನ್ನಣೆಯಂ ಕ
ಯ್ಕೊಂಡು ಪರಿವಡೆದಾಪೊಳಲ ಸಿರಿಯು ಸೊಬಗಂ ನಿರುಕಿಸಿ ನೀಡುಂ ಹರಿಸ
ಗೊಂಡಲ್ಲಿಂದೆ ಮುಂದೆ ನಡೆದಜವಿಾಥಪುರದೊಳ್ಪ್ರೀಡುಂಗೊಂಡು ಕಿರಿದುದೂ
ರದೊಳಿಪ್ಪ ಬ್ರಹ್ಮಪುಷ್ಕರಿಣಿಯುಂ ಸಾರೆವಪ್ಪುದುಂ ॥೫೦॥

ವೃ ॥ ಮರುದಾಂದೋಳಿತವೀಚಿಕಾಳಿವಿಸರತ್ಕಾದಂಬಕಾರಂಡವಂ ।
ವರಮೌನೀಂದ್ರಸಹಸ್ರಸೇವಿತಮಘಪ್ರಧ್ವಂಸನಂ ಪಾವನಂ ॥
ಪರಿಪ್ಲುಲ್ಲಾಬ್ಜಮರಂದಪಾನಭೃಶಮಾದ್ಯದ್ಭೃಂಗಮಾಲಾಮನೋ ।
ಹರಝಂಕಾರಮದೇಂ ವಿರಾಜಿಸಿಕೊ ತತ್ಪದ್ಮಾಕರಂ ಶ್ರೀಕರಂ ॥೫೧॥

ವ॥ ಅಂತು ಪುಣ್ಯತಮಮೆನಿಸಿದಾಪುಷ್ಕರಿಣಿಯೊಳ್ಮಿಂದದರ ತಡಿಯೊಳೆ
ಸರಸ್ವತೀದೇವಿಯಿಂದೊಡಗೂಡಿ ನೆಲೆಗೊಂಡಿರ್ಪ್ಪ ಶ್ರೀಬ್ರಹ್ಮದೇವನಂ ದ
ರ್ಶನಂಗೆಯ್ದು ಶಿರಸ್ತಟಘಟಿತಕರಸಂಪುಟನಾಗಿ ॥೫೨॥

ಕಂ ॥ ಕಮಲಾನಾಯಕನಾಭೀ ।
ಕಮಲಾವಿಭೂತ ಸೃಷ್ಟಿಕರ್ತಾರ ಜಗ ॥
ಕ್ಕಮಲಾತ್ಮ ನೀಡುಶುಭಮಂ ।
ಕಮಲಾಂಕಕಿರೀಟ ಸೂತ ವಾಣೀದಯಿತಾ ॥೫೩॥

ಕಂ ॥ ನತವರದ ಜರಾಜರಕೃತಿ ।
ಚತುರಾ ಚತುರಾನನಾಬ್ಜಮಧುನಿಸ್ಯಂದಾ ॥
ಯಿತಸರ್ವವೇದ ಸುರವೂ ।
ಜಿತ ರಾಜಿತರಾಜಹಂಸವಾಹನ ಸಲಹೈ ॥೫೪॥

ಕಂ ॥ ಶ್ರೀಮಚ್ಚತುರಾನನಮುಖ ।
ತಾಮರಸಾಂತರ್ಮರಾಳಿ ಭಾರತಿ ವಿದ್ಯಾ ॥
ರಾಮವಸಂತಶ್ರೀ ನತ ।
ಕಾಮಿತಫಲದಾತ್ರಿ ಕರುಣಿಸೌ ಸನ್ಮತಿಯಂ ॥೫೫॥

ಕಂ ॥ ವಾಣಿ ನಿಜಪಾದನತಗೀ ।
ರ್ವಾಣಿ ಸುಧಾಮಧುರವಾಣಿ ಪುಸ್ತಕವೀಣಾ ॥
ಪಾಣಿ ಕೃಪಾರಸವೇಣಿ ಸು ।
ವೇಣಿ ಚತುರ್ಮುಖನ ರಾಣಿ ಪಾಲಿಸು ವರಮಂ ॥೫೬॥

ವೆ॥ ಎಂದು ನುತಿಸಿ ವಂದನಂಗೆಯ್ದಿಷ್ಟಾರ್ಥಂಗಳಂ ಸಂಪ್ರಾರ್ಥಿಸಿ ಸಪರಿವಾರನಲ್ಲಿಂ ಪೊರಮಟ್ಟು ಜೋಧಪುರವನೆಯ್ದಿವಂದಲ್ಲಿಯ ವೃದ್ಧಮಹಾರಾಜನಪ್ಪ ರಾಣಾಜಸವಂತಸಿಂಗನಪರಿಮಿತಸಂಪತ್ತಿಯಿಂದೆಸಗಿದವುತಣಮುಮುಂ ರಾಜಮರ್ಯಾದೆಯಿಂದಿತ್ತನರ್ಘ್ಯವಸ್ತ್ರಭೂಷಣವಾಹನಂಗಳುಮುಂ ಕಯ್ಕೊಂಡು ನೆರೆ ಸಂತಸಂಗೊಂಡಲ್ಲಿಂ ಪಯಣಂಬೋಗಿ ಬಡೋದಾರಾಜಧಾನಿಯನೆಯ್ದವರ್ಪ್ಪುದುಮಲ್ಲಿಯ ಮಹಾರಾಜಂ ಸೈಯಾಜಿರಾಯನಾಂಗ್ಲೇಯದ್ವೀಪಾಂತರಪ್ರವಾಸದೊಳಿದ್ದುದರಿಂ ಫತೇಸಿಂಗರಾವೆಂಬ ತತ್ಕುಮಾರಂ ಯುವರಾಜಂ ನಿಜಬಲಪರಿವಾರಂಬೆರಸತ್ಯಾದರದಿಂದಿದಿರ್ಗೊಂಡು ನಿರತಿಶಯೋತ್ಸವದಿಂ ಮುಕ್ತಾಸೌಧಮೆಂಬ ಬೀಡಾರಮನಾಭೂರಮಣನಂ ಪ್ರಗಿಸಲೊಡಂ ॥೫೭॥

ಕಂ ॥ ಯುವರಾಜಂ ತಂದೆಯ ಗೌ ।
ರವಮಂ ತನ್ನಲ್ಲಿ ತೋರಿ ಮನ್ನಿಸಲಾಯಾ ॥
ದವಕುಲನೃಪತಿಲಕನದ ।
ರ್ಕವಿರಳಸಂತೋಷಭರವನಾಂತಲ್ಲಿದ್ದಂ ॥೫೮॥

ವೆ॥ ಇಂತಲ್ಲಿ ದಿನತ್ರಯಮಿದ್ದಲ್ಲಿಯ ಮಹಾರಾಜನ ತಾಯಪ್ಪ ಜಮುನಾಬಾಯೆಂಬ ವೃದ್ಧಮಹಾರಾಜ್ಞಿ ಕುಶಲಾನುಯೋಗಪೂರ್ವಕಮತಿಮಾತ್ರವಾತ್ಸಲ್ಯದಿಂದೆಯುಂ ರಾಜಮರ್ಯಾದೆಯಿಂದೆಯುಂ ಯುವರಾಜನ ಕಯ್ಯಿಂ ಕೊಡಿಸಿದನೇಕರತ್ನಾಭರಣಗಜತುರಗಾದ್ಯಪರಿಮಿತಪ್ರಶಸ್ತವಸ್ತುಗಳಂ ಕಯ್ಕೊಂಡಲ್ಲಿಂ ಪೊರಮಟ್ಟು ಮಗುಳೆ ಮುಂಬಯಿಪಟ್ಟಣಕ್ಕೆ

ಸಾರ್ತಂದಾವೇಳೆಯೊಳಲ್ಲಿಗೆಯ್ತಂದಿರ್ದ ವಿಕ್ಟೋರಿಯಾಚಕ್ರವರ್ತಿನಿಯೆರಡನೆ
ಯಕುಮಾರನಂ ರಾಜಮರ್ಯಾದಾನುಸಾರದಿಂ ಕಂಡು ಪರಸ್ಪರಕುಶಲಪ್ರಶ್ನಂ
ಬಳಿದ ಬಳಿಯಂ ನಿಲ್ಲದಲ್ಲಿಂ ತೆರಳ್ದು ಪೊಗೆವಂಡಿಯ ಮಾರ್ಗದಿಂ ಸುಕ್ಷೇ
ಮದಿಂ ನಿಜರಾಜಧಾನಿಯಂ ಸೇರ್ದು ॥೫೯॥

ಕಂ॥ ಗುಣಶಾಲಿಯೆನಿಸಿದಾ ಧಾ ।
ರಿಣೀಂದ್ರನಿಂತೌತ್ತರೀಯವಿಷಯಂಗಳವೇ ॥
ಕ್ಷಣದಿಂದಸದೃಶಮತಿನೈ ।
ಪುಣಿಯಂ ಪಡೆದರಸುಗೆಯ್ಯುತಿರ್ದಂ ಸೊಗದಿಂ ॥೬೦॥

ಇದು ಜಗದ್ವಿದಿತ ಶ್ರೀಕಾಶ್ಯಪವಂಶಮುಕ್ತಾಮಣಿ ಶ್ರೀಗರಳಪುರೀಶಶಾಸ್ತ್ರಿ
ತನೂಭವನುಂ ಶ್ರೀಮದಖಂಡ ಮಹೀಮಂಡಲ ಮಂಡನಾಯಮಾನ ಕರ್ಣಾ
ಟಜನಪದ ಲಕ್ಷ್ಮೀವಿಹಾರೈಕರಂಗಮಹೀಭೂತ ಮಹೀಶೂರರಾಜಧಾನೀ
ರತ್ನಸಿಂಹಾಸನಾಧೀಶ್ವರ ಯದುಕುಲಪಯೋನಿಧಿ ಪೂರ್ಣಚಂದ್ರಾಯಮಾಣ
ಶ್ರೀಚಾಮರಾಜೇಂದ್ರ ತನಯ ಶ್ರೀಕೃಷ್ಣರಾಜಮಹಾರಾಜ ಸಂಸ್ಕೃತ
ಕರ್ಣಾಟೋಭಯಪ್ರವಚನೋಪಾಧ್ಯಾಯನುಂ ಮಹಾವಿದ್ವ
ತ್ಪದಲಾಂಛನನುಂ ತನ್ಮಹಾರಾಜ ಕೃಷ್ಣರಾಜವಿತೀರ್ಣ
ಕವಿತಿಲಕ ಬಿರುದಾಂಕಿತನುಮಪ್ಪ ಸೋಸಲೆ
ಅಯ್ಯಶಾಸ್ತ್ರಿಯಿಂ ವಿರಚಿತವಾದ
ಮಹೀಶೂರ ಮಹಾರಾಜ ಚರಿತ್ರ
ಮೆಂಬ ಕರ್ಣಾಟ ಚಂಪೂ
ಮಹಾಕಾವ್ಯದೊಳ್
ಸಪ್ತಮಾಶ್ವಾಸಂ
ಸಂಪೂರ್ಣಂ.



ಅಷ್ಟಮಾಶ್ವಾಸಂ.

ಕಂ|| ಶ್ರೀಮದ್ವೇಂಕಟನಾಯಕ |
ನಾಮದೆ ಪದ್ಮಾವತೀಶನೆನಿಸಿರ್ದೊಡಮಾ ||
ಭೂಮಿಯೊಳಜಾಂಡಕೋಟಿ |
ಸ್ವಾಮಿಯೆನಿಪ್ಪಾತ್ಮನೋವುಗೆಮ್ಮಯ ನೃಪನಂ ||೧||

ಇಂತಿಪ್ಪ ಬಳಿಯಮಾಭೂ |
ಕಾಂತನ ಸತಿ ಪಡೆದಳೆರಡನೆಯ ಸಿರಿಮಗನಂ ||
ಪಿಂತಿಂದ್ರಾನುಜನಂ ಪಡೆ |
ದಂತಿರೆ ತಾನದಿತಿ ಪುಂಡರೀಕಾಂಬಕನಂ ||೨||

ಂಶಾಕುವಾರಂ ಪುಟ್ಟಿದ ಸಂವತ್ಸರವಾಸಪಕ್ಷ ತಿಥಿವಾರನಕ್ಷತ್ರಂಗಳಾತನಭಿನಂದನೀಯಗುಣಂಗಳಂ ಸೂಚಿಸುತ್ತಿರ್ದುವದೆಂತೆನೆ ||೩||

ಕಂ|| ಧರಣೀತಲಸರ್ವಧುರಂ |
ಧರನೆನುತುಂ ಸರ್ವಧಾರಿವರ್ಷದೆ ತೋರ್ಕುಂ ||
ಸಿರಿಯಾಣ್ಮನೀತನೆನುತುಂ |
ವರಮಾಧವಮಾಸದಿಂದೆ ನಿಸದಂ ತೋರ್ಕುಂ ||೪||

ಯುವರಾಜಕೃಷ್ಣಪಕ್ಷದೊ |
ಳಿವನಿಪ್ಪನೆನುತ್ತೆ ಕೃಷ್ಣಪಕ್ಷದೆ ತೋರ್ಕುಂ ||
ತವಿಪಂ ರುದ್ರನವೋಲರಿ |
ನಿವಹಮನೆಂದಪುದು ರುದ್ರದೈವತತಿಥಿಯುಂ ||೫||

ಮಂಗಳವಾರದೆ ತೋರ್ಕುಂ |
ಮಂಗಳಕರನೆನುತುಮಶ್ವಿನೀತಾರೆಯಿನು ||
ತ್ತುಂಗತರವೈಭವಂ ರುಚಿ |
ರಾಂಗಂ ಶ್ಲಾಘ್ಯಮತಿಶಾಲಿಯೆನುತುಂತೋರ್ಕುಂ ||೬||

ವ|| ಅಂತು ಪುಟ್ಟಿದಾಕುವರಂಗೆ ಜನನೀಜನಕರನವಧಿಕಹರ್ಷದಿಂದ ತಿಮಾನವಿಭವದಿಂ ಜಾತಕರ್ಮಮುಂ ನೆಗಳ್ದು ಕಂಠೀರವನರಸರಾಜನೆಂದು ನಾಮಕರಣಮನಾಗಿಸಿದರಾಮಹೋತ್ಸವಮನೇನೆಂಬೆಂ ||೭||

ಕಂ|| ಅರಸಾಳ್ಗಳ್ ಜನಕೆಲ್ಲಂ |
ಹರಿಸಂ ಮಿಗೆ ಬಂಡಿಯಿಂದೆ ತೆಗೆದೀವಾಗಳ್ ||
ಸುರಿದಿರ್ದುದೆಲ್ಲಿಯುಂ ಸ |
ಕ್ಕರೆ ಮೊಳಕಾಲುದ್ದಮಾಪೊಳಲ ಬೀದಿಗಳೊಳ್ ||೮||

ವೃ|| ದೀಪದ ತಳ್ತಮಾಲೆಗಳಿನುಜ್ವಲದೀಪದ ತೋರಣಂಗಳಿಂ |
ದೀಪದತೇರ್ಗಳಿಂದೆಸೆವ ದೀಪದ ಬಳ್ಳಿಗಳಿಂ ಮರಂಗಳಿಂ ||
ದೀಪದ ಮಂಡಲಂಗಳಿನಮರ್ದಿದ ದೀಪದ ಮಂಡಪಂಗಳಿಂ |
ದಾಪೊಳಲಾಮಹೋತ್ಸವದೊಳಂದಿನರಾತ್ರಿಯೊಳೆಂತುಟೊಪ್ಪಿತೋ||೯||

ವ|| ಇಂತು ಪುತೊಯ್ತವಮಾಗಲಾಧರಣೀಂದ್ರನಭಿನಂದನೀಯನಿರ ವಧಿಕಾನಂದದಿಂದರಸುಗೆಯ್ಯುತ್ತುಂ ಯುವರಾಜಶ್ರೀಕೃಷ್ಣರಾಜಂಗೆ ದೊರೆ ವಡೆದ ಗೀರ್ವಾಣಾಂಗ್ಲೇಯಾದಭಾಷೆಗಳೊಳ್ವಿದ್ಯಾಭ್ಯಾಸಮುಂ ಮಾಡಿಸಲ್ಕೆ ಪಲಬರಿಂ ಸಹಾಯೋಪಾಧ್ಯಾಯರಿಂದೊಡಗೂಡಿದ ವೈಟ್ಲಯೆಂಬಾಂಗ್ಲೇಯಾಧಿಕಾರಿಯುಮುಂ ನಿಜಕುಮಾರಿಯರ್ಗೆ ವಿದ್ಯಾಭ್ಯಾಸಂಗೆಯಿಸಲ್ಕೆ ಸನ್ನಿಧಿಸಜೀವನಪ್ಪ ನರಸಿಂಹಾರ್ಯನುಮನಧ್ಯಕ್ಷೋಪಾಧ್ಯಾಯಪದವಿಯೊಳ್ನಿಯಮಿಸಿ ಕುಮಾರನ ವಿದ್ಯಾಶಾಲೆಯುಂ ಲೋಕರಂಜನಸೌಧದೊಳಂ ಕುಮಾರಿಯರ ವಿದ್ಯಾಶಾಲೆಯನರಮನೆಯೊಳಂ ನೆಲೆಗೊಳಿಸಲೊಡಂ ||೧೦||

ಕಂ|| ಅರಮಗನ ಹೃದಾವಾಲದೆ |
ಪರತರಸಂವಿತ್ಫಲೋದಯೈಕನಿದಾನಂ ||
ಗುರುಗಳುಪದೇಶಮೆಂದೆಂ |
ಬುರುವಿದ್ಯಾಲತೆಯ ಬಿತ್ತು ಮೊಳೆದತ್ತಾಗಳ್ ||೧೧

ವ|| ಅಂತರಗುವರಿಯರಕ್ಕರಿಗರೊಳ್ಮೊದಲಿಗರೆನಿಸಿದ ಬಿಜ್ಜೆಯೋಜರರಮನೆಯುಪದ್ಧತಿಯನನುಸರಿಸಿ ಪಲವುಂ ಬಿಜ್ಜೆಗಳಂ ಕಲಿಸುತ್ತಿರೆ ದಿನದಿನಮುಂ ಕಿರಿದು ಪೊಳ್ತು ದೇವತಾಮಾಹಾತ್ಮ್ಯಮತಾಚಾರಾದಿಸದ್ವಿಷಯುಂಗಳಂ ಬೋಧಿಸುವ ಸಂಸ್ಕೃತಗ್ರಂಥಂಗಳುಮುಂ ಕಿರಿದುಂ ಪೊಳ್ತು ಶೇಷರಾಮಾಯಣಂ ಮಹಾಭಾರತಂ ಮೊದಲಪ್ಪ ಕರ್ಣಾಟಪುರಾಣಗ್ರಂಥಂಗಳುಮುಂ ಕಿರಿದಾನುಂ ಪೊಳ್ತು ಸಲ್ಲಾಪಪತ್ರಿಕಾಲೇಖನಾದಿಲೋಕವ್ಯವಹಾ

ರಾರ್ಥಂಗಳಪ್ಪ ಕೆಲವಾನುವಾಂಗ್ಲೇಯಭಾಷಾಗ್ರಂಥಂಗಳುಮನೋರೊಂ
ದು ಪೊಳ್ತು ಭೂಗೋಳಖಗೋಳಸನ್ನಿವೇಶಂಗಳಂ ವಿವರಿಸುವ ಕೆಲವಾ
ನುಂ ಪ್ರಪಂಚವಿಭಾಗಸ್ವರೂಪನಿರೂಪಣಗ್ರಂಥಂಗಳುಮುಂ ಪಠಿಸುತ್ತುಮಿ
ನ್ನೊಂದು ಪೊಳ್ತು ಗುಣಕಾರಭಾಗಹಾರಾದಿಗಣಿತನಿಬಂಧನಗ್ರಂಥಂಗಳಂ
ಯಥೋಚಿತಂ ಪರಿಶೀಲಿಸುತ್ತುಮಿನ್ನುವೊಂದು ಪೊಳ್ತು ವಸ್ತುಸ್ವರೂಪಪರಿ
ಜ್ಞಾನಸಾಧನಂಗಳಪ್ಪ ಭಾವಚಿತ್ರಂಗಳಂ ಬರೆಯುತ್ತುಂ ಬೇರೊಂದು
ಪೊಳ್ತು ಮನೋವಿನೋದನಾರ್ಥದಿಂ ತಾಳಲಯಬಂಧವೊಪ್ಪೆ ಬೀಣೆಯುಂ
ಬಾಜಿಸುತ್ತುಂ ಮೃದುಮಧುರಕಂಠದಿಂ ಸರಸತರಸಂಗೀತಪ್ರಬಂಧಂಗಳಂ
ಪಾಡುತ್ತುಂ ಗುರುಗಳರಿಪಿದ ವಿಷಯಂಗಳಂ ಮನವೊಲ್ದು ಕೇಳ್ದವೆಗಾಹ
ನೆಗೆ ಬರಿಸುತ್ತುಂ ನಿರವದ್ಯವಿದ್ಯಾಭ್ಯಾಸಮುಂ ಮಾಡುತ್ತಿರ್ಪಿನಂ ॥೧೨॥

ಕಂ ॥ ಮೃದುಮಧುರಕಂಠದಿಂ ರಾ ।
ಗದಿಂದಮೆಸೆವಂತುಮರ್ಥಸಂಗತಿ ಕಿಡದಂ ॥
ದದೊಳಂ ನೃಪತನುಜೆಯರೋ ।
ದಿದರೊಳ್ಗನ್ನಡದ ಪದ್ಯಕೃತಿಗಳನೊಲವಿಂ ॥೧೩॥

ಮತ್ತಂ,

ಕಂ ॥ ಗುರುಗಳುಸಿರ್ದಂತೆ ಜಗದೀ ।
ಶ್ವರಸನ್ನುತಿವಂದನಾರ್ಚನಾದಿವ್ರತಮಂ ॥
ಚರಿಸುತ್ತೆ ಭಕ್ತಿಯಿಂದನ ।
ವರತಂ ಪಡೆದರ್ಗ್ಗೆ ವೋದಮುಂ ಪೆರ್ಚಿಸಿದರ್ ॥೧೪॥

ಕಂ ॥ ಅರಮನೆಗೊಲ್ದಂದಂದೆ ।
ಯ್ತರುತಿದರ್ಭಾಂಗ್ಲೇಯಸತಿಯರೊಳ್ತಪ್ಪದೆ ಬಂ ॥
ಧುರಮೆನೆ ಸಲ್ಲಪಿಸುತೆ ಬಿ ।
ತ್ತರಿಸಿದರಾಂಗ್ಲೇಯಭಾಷೆಯೊಳ್ಶೈಶಲಮಂ ॥೧೫॥

ವೃ॥ ಮೃದುಕಂಠಸ್ವನಕಂ ಮನೋಜ್ಞತಮತಂತ್ರೀನಾದಕಂ ಭೇದಮಿ ।
ಲ್ಲದ ಪಾಂಗಿಂ ಗುರುಬೋಧಿತಕ್ರಮದೆ ಮೂರುಂ ಸ್ಥಾಯಿಭಾಗಂಗಳೊಳ್ ॥
ಚದುರಿಂ ತಂತ್ರಿಗಳೊಳ್ಕರಾಂಗುಳಿಗಳಾಡುತ್ತಿರ್ಪಿನಂ ಬೀಣೆಯಂ ।
ಪದಪಿಂ ಪಾಡುತೆ ಬಾಜಿಪರ್ಸರಸಸಂಗೀತ ಪ್ರಬಂಧಂಗಳಂ ॥೧೬॥

ವ|| ಈಚರಿಯಿಂದಾಭೂಪರಿವೃಢಂ ಯುವರಾಜಂಗಂ ಕುಮಾರಿಯರ್ಗಂ ವಿದ್ಯಾಭ್ಯಾಸಂಗೆಯಿಸುತ್ತಾ ಸಂವತ್ಸರದ ನವರಾತ್ರೋತ್ಸವಂ ಬಳೆದೊಡನೆ ಕನ್ನಡನಾಡೊಳಪ್ಪೆಲ್ಲಾ ಶಿಲ್ಪಿಗಳುಂ ಕಲ್ಪಿಸಿಪ್ಪ ಪೂರ್ವವಸ್ತುಗಳಂ ತರಿಸಿ ನೋಡಿ ಪೌರಜಾನಪದಜನರ್ಗವಂ ತೋರಿ ನಚ್ಚೆ ಮೆಚ್ಚೆ ತಕ್ಕುಮೆಗೆ ತಕ್ಕಂತುಟಾದರವಿಶೇಷದಿಂದವರ್ಗೆ ಪಾರಿತೋಷಿಕಮನಿತ್ತು ನಿಜರಾಜ್ಯದೊಳೆಲ್ಲೆಲ್ಲಿಯುಂ ಶಿಲ್ಪಮಂ ಪ್ರಚುರಂಗೊಳಿಸಲ್ ರಾಜಧಾನಿಯೊಳ್ಶಿಲ್ಪವಿದ್ಯಾಭ್ಯಾಸಕ್ಕನುಕೂಲಮಪ್ಪ ಶಾಲೆಯೊಂದಂ ನಿರ್ಮಿಸಲ್ ಬಗೆದಂದಿಗೀನಾಡಂ ನೋಡಲ್ಕೆ ಬಂದಿದ್ದ ರಾಜಕುಮಾರನಾಲ್ಬ್ಟ್ರ್ವಿಕ್ಟರ್ರೆಂಬ ವಿಕ್ಟೋರಿಯಾಚಕ್ರವರ್ತಿನಿಯ ಪೌತ್ರನಿಂದದರ್ಕೆ ಗೌರವಾವಹಮಪ್ಪ ಮುಹೂರ್ತಶಿಲಾಪ್ರತಿಷ್ಠೆಯಂ ಗರಿಷ್ಠಮೂದುತ್ಸವದಿಂ ನೆಗಳ್ಚಿ ಪಿರಿದುಂ ಪ್ರೋತ್ಸಾಹಂಬಡಿಸಲ್ಕೆ ||೧೩||

ಕಂ|| ಪೊಸದೇಸಿವೆತ್ತ ಬಹುವಿಧ |
ವಸನಾದಿಮವಸ್ತುಜಾತಮಂ ಶಿಲ್ಪಿಗಳೊ ||
ಲ್ದೆಸಗಲ್ತೊಡಗುವಿನಂ ದ್ವಿಗು |
ಣಿಸಿದೈಸಿರಿಯಿಂದೆ ನಾಡದೇನೊಪ್ಪಿದುದೋ ||೧೪||

ವ|| ತದನಂತರದೊಳಾಮಹಾರಾಜನರಸಿ ಗರ್ಭಿಣಿಯಾಗಿ ನವಮಾಸಂ ತೀವೆ ಮೂರನೆಯ ಗಂಡುಗೂಸಂ ಬೆಸಲೆಯಾಗುವುದುಮಾತನೂಜಂ ರಾಜರಾಜನೆಂದು ನಾಮಗ್ರಹಣಮಾದ ಕೆಲವಾನುಂ ದಿನದೊಳೆ ಕಾಲಧರ್ಮಮುಂ ಪಡೆಯಲಾದುಗುಡದಿಂ ಖಿನ್ನನಾದೊಡಂ ಧೀರೋದಾತ್ತಶೀಲನಾದುದರಿಂದೆಯುಂ ನೀರಕ್ಷೀರನ್ಯಾಯದಿಂ ತನ್ನೊಳಪ್ಪುರುತರಸೌಹಾರ್ದದಿಂದಂದಿಗೆ ಸಕುಟುಂಬಪರಿವಾರನಾಗಿ ಬಂದಿರ್ದ ಬಡೋದಾಮಹಾರಾಜಂಗೆ ನಿಜಗೌರವಾನುಸಾರಮಪ್ಪ ಸತ್ಕಾರಮಹೋತ್ಸವಮನಾಗಿಸುವ ಸಂರಂಭದಿಂದೆಯುಮಾತನೊಡನೊಲ್ದು ಸರಸಸಲ್ಲಾಪಂಗಳನೆಸಗುವೆಸಕದಿಂದೆಯುಮದಂ ಲೆಕ್ಕಿಸದಿನಿಸಾನುಂ ಶರೀರದೊಳನಾರೋಗ್ಯಂ ತೋರಲಾರೋಗ್ಯನಿಮಿತ್ತದಿಂ ಮದರಾಸೆಂಬನಾಮಾಂತರದಿಂ ನೆಗಳ್ತೆವೆತ್ತ ಚೆನ್ನಪುರಿಗೆ ತಳರ್ದಲ್ಲಿಪ್ಪಾಂಗ್ಲೇಯಾಧಿಪತಿಯಿಂ ಪುರಸ್ಕೃತನಾಗಿ ಪೊಳಲ ಪೊರವಳಯದೊಳತ್ಯುತ್ತಮ ಸಂಪತ್ತಿಯಿಂದೊಪ್ಪುವ ಮಹಾಸೌಧದೊಳ್ಬೀಡಂ ಬಿಟ್ಟು ದಿನದಿನಮುಂ ಕಿರಿ

ದುಪ್ಪೊಳ್ತು ಗಾನಲೋಲನಾಗಿರ್ದೊಲಗದೊಳ್ಗಾಯಕರಭಿನಂದನೀಯಮಪ್ಪ ಸಂಗೀತಮಂ ಕೇಳುತ್ತುಂ ಕಿರಿದುಪ್ಪೊಳ್ತು ಗಾನವಿದ್ಯಾವಿಚಕ್ಷಣಂ ತಾನುಂ ತಾಳಲಯಸಾಯಿಗಳ ಲಕ್ಷಣಮನನುಸರಿಸಿ ಬೀಣೆಯಂ ಬಾಜಿಸುತ್ತುಂ ಮೃದುಮಧುರಕಂಠದಿಂ ಪಾಡುತ್ತುಂ ಕಿರಿದುಪ್ಪೊಳ್ತು ಸಾಗರಂ ತನ್ನಬರವ ನರಿದು ರಾಜಮರ್ಯಾದೆಗೊಲ್ದು ತೆರೆಗಯ್ಗಳಿಂ ಪಾಸಿದ ಬಿಳಿದಪ್ಪ ನಡೆಮಡಿಯೆನೆ ಕಣ್ಗೊಳಿಸುವ ಬೆಳ್ಮಳಲ ಪಸರದಿಂದೆಯುಂ ಮುಂಜುಳ ರಕುಸುಮ ಮುಂಜರೀಪುಂಜವಿಹರನ್ಮಧುಕರಸಿಕರಝಂಕಾರದಿಂ ತೀವಿ ಸಾಲ್ವಿಡಿದು ರಂಜಿಸುವಾರವೆಯು ಬಳ್ಳಮುಂಡಪಂಗಳಿಂದೆಯುಂ ಚಪಲಜಲನಿಧಿವೀಚೀನಿಚಯದಿಂ ಕೆದರ್ದ ತಂವಲ್ಗಳಂ ಪೊತ್ತು ಮೆಲ್ಲೆಲ್ಲನೆಯ್ತಪ್ಪ ತಂಗಾಳಿಯಿಂದೆಯುಂ ಬಗೆಗೊಳ್ವ ಕಡಲ ತಡಿಯೊಳೆಡೆಯಾಡುತ್ತುಂ ಕಿರಿದು ಪೊಳ್ತಿನೆಲದೊಳಾಂಬಿಜ್ಜೆವಳ್ತಿಯರೆಸಿಸಿದುದರ್ಕೆ ನಿರವದ್ಯಭರತಗಾಂಧರ್ವವಿದ್ಯಾರಹಸ್ಯ ಕೂಲಂಕಷಮನೀಪಾವಿಶೇಷನಪ್ಪ ಮಹಿಷಾಸುರಪುರಾಧೀಶಚಾಮರಾಜೇಂದ್ರನಿಂ ಮೆಚ್ಚಂ ಪಡೆಯದಿದ್ದೊಡೆಮಗೆ ಪೆಸರ್ವಾಸಿಯಿಲ್ಲಮೆಂದೂರೂರ್ಗಳಿಂ ಬರುತ್ತಿರ್ದ ನೆಗಳ್ತೆವಡೆದ ನರ್ತಕಿಯರ ಸಾತ್ವಿಕಾಂಗಿಕಂಗಳಪ್ಪಭಿನಯಂಗಳಿಂದೆಯುಂ ಭಾವಪ್ರಕಾಶಕಂಗಳಪ್ಪನೇಕವಿಧಾನುಭಾವಂಗಳಿಂದೆಯುಂ ಸರಸಮಧುರಮಪ್ಪ ಸಂಗೀತದಿಂದೆಯುಂ ಸಭಾಸದರ ಚಿತ್ತಮಂ ಸೆರೆವಿಡಿವ ನೃತ್ತಮಂ ನೋಡುತ್ತುಂ ಮನಮುಂ ಬಿನದಂಗೊಳಿಸುತ್ತುಮಲ್ಲಿ ಪರ್ವ್ವಗಳ್ ॥೧೯॥

ಕಂ॥ ಭಾರತಖಂಡದತೆಂಕಲ |
ದಾರುಂಪೆಸರ್ವಡೆದ ನಚ್ಚಣಿಯುರೊಲ್ದುಮನೋ ॥
ಹಾರಿಸಿಜನಾಟ್ಯವಿದ್ಯೆಯೊ |
ಳಾರಾಯನನೊಲಿಸಿಮೆಚ್ಚುವಡೆಯದರಿಲ್ಲಂ ॥೨೦॥

ವ॥ ಇಂತಲ್ಲಿ ಕೆಲವಾನುಂ ದಿನಮಿರ್ದಲ್ಲಿಂ ಫ್ರೆಂಚರಾಳ್ಕೆಯೊಳಿಪ್ಪ ಪಾಂಡುಚರಿಯೆಂಬ ಸಾಗರತೀರಸಗರಕ್ಕೆ ತಳರ್ದಲ್ಲಿಯ ಮುಖ್ಯಾಧಿಕಾರಿಗಳುಂ ಪೌರಮುಖ್ಯರುಂ ಗೆಯ್ದ ಸತ್ಕಾರಮಂ ಕಯ್ಕೊಂಡಲ್ಲಿಯುಂ ಕೆಲವಾನುಂ ದಿನಮಿರ್ದಾರೋಗ್ಯಶಾಲಿಯಾಗಿ ನಿರವಧಿಕಮನಸ್ಸಮುಲ್ಲಾಸದಿಂ ಮೆರೆ

ಯುತ್ತಲ್ಲಿಂ ಮರಲ್ದು ನಿಜರಾಜಧಾನಿಯನೆಯ್ದಿವಂದಮುಂದಸುಖಭೋಗಸಮೃದ್ಧಿಯೊಳಿರ್ಪ್ಪನೆಗಂ ॥೦೧॥

ಕಂ॥ ಸ್ಮರಸುಂದರನಂ ತನ್ನೃಪ |
ವರನರಸಿ ತುರೀಯಪುತ್ರನಂ ಪ್ರಸವಿಸಲಾ ||
ಹರಿಸಂ ತೃತೀಯಸುತಸಂ |
ತರಿಸಿದ ಮನದಳಲನೊರಸಿದುದು ಪಡೆದವರಾ ॥೨೫॥

ವ॥ ಇಂತು ಪುಟ್ಟಿದಾಕುವರಂಗವಿರಳಾನಂದದಿಂದಾರಾಜೇಂದ್ರಂ ದೇವರಾಜನೆಂದು ಪೆಸರಿಟ್ಟು ನಾಮಕರಣೋತ್ಸವಂಗೆಯ್ದು ಸಮನಂತರದೊಳೆರಡನೆಯುಕುವರನಪ್ಪ ಕಂಠೀರವನರಸಿಂಹರಾಜಂಗೆ ಮಹಾವೈಭವದಿಂದಕ್ಷರಾಭ್ಯಾಸಮಹೋತ್ಸವಮಂ ಬಳೆಯಿಸಿ ಬಳಿಕ್ಕಂ ಕನ್ನಡನಾಡಂ ನೋಡಲೆಳಸಿ ಬಂದ ಲಾನ್ಸ್‌ಡೌನೆಂಬಾಂಗ್ಲೇಯಸರ್ವಾಧಿಕಾರಿಯುಂ ಸಮುಧಿಕರಾಜಮರ್ಯಾದೆಯಿಂ ಮನ್ನಿಸಿ ಮನೋವಿನೋದನಾರ್ಥದಿಂದವಂಬೆರಸು ಮಿಗವೇಂಟೆಗೆ ಹೆಗ್ಗಡದೇವನಕೋಂಟೆಯೆಡೆಸಂದ ಪೇರಡವಿಯಂ ಪುಗುತಪ್ಪುದುಂ ॥೦೩॥

ಕಂ॥ ಪಗಲೆರೆಯನ ಬೆಳಗುಗಳೊಳ |
ವುಗದಂತೆಪೆಯಿಡದೆ ಬೆಳೆದ ಪಲವರಗಿಡುವ ||
ಳ್ಳಿಗಳಿಂ ಗಾವರಿಸುವ ಕಾ |
ಳ್ಗಿವಿಂಡುಗಳಿಂದಮಳ್ಕಿಸಿದುದದು ನೋಡಲ್ ॥೨೪॥

ವ॥ ಮತ್ತಮಾಕಾನನಮಿನಕಿರಣಂಗಳ್ಗೆ ಸುಗಿದು ಸರಣ್ಗೊಕ್ಕೊಡಭಯಮಿತ್ತು ತವ್ಮೊಳಟ್ಟುಕೊಂಡು ಸಲಪ್ಪುತ್ತಿಪ್ಪುವೆಂಬಂತೆ ಕಾವಳಮನೊಳಕೊಂಡಿಟ್ಟಣಿಸಿದ ಬಗೆಬಗೆಯು ಪೆರ್ಮರಂಗಳೊಳಂ ಮತ್ತಮಲ್ಲಿಯಲ್ಲಿ ಜಲಾಶಯಂಗಳ್ಗೆ ಪೋಗಿವಪ್ಪಾಗಳಾನೆವಿಂಡು ಸುಂಡಿಲಿಂದಿಕ್ಕೆಲದೊಳು ಮುಡಿದುಡಿದ ಪೊರಗೊಂಬುಗಳ ಮರಗಿಡುಗಳ ಸೊಂಪುವೆತ್ತ ಮೇಗೊಂಬುಗಳಳುರ್ಕೆಯಿಂ ತಣ್ಪುವೆತ್ತು ಬಹುದೂರಂಬರಂ ಪರಿದಿಪ್ಪ ಸುಗಮತರ ಕರಿಯೂಥವಾರ್ದ್ರಂಗಳೊಳಂ ಮತ್ತಮಲ್ಲಿಯಲ್ಲಿ ತಡಿವಿಡಿದೆಡೆವಿಡದಿಪ್ಪಕ್ಕದೊಳುಂ ಬೆಳೆದಿಪ್ಪ ಬನದೋಳಿಗಳಂತರದಲ್ಲಿ ಮರೆಗೊಂಡು ನೀರೊಳೋಲಾಡುವರಸಂಚೆಗಳಂಚರಮಿಂಪುಗರೆಯುತ್ತಿರಲಿತ್ತರೆಮರೆಯೊಳ್ನೀವುರಂಗಳುಲಿಯೆ ಸಂಚರಿಸುವರವೆಂಡಿರಂತಿರೆ ಕಣ್ಗೆಡೆಯಾಗದೆ ಪರಿವ ತೊರೆಗ

ಳೊಳಂ ಮತ್ತಮಲ್ಲಿಯಲ್ಲಿ ಬಾನುದ್ದಂ ಬೆಳೆದಿಪ್ಪ ಪೆಬ್ಬಿದಿರ್ಗಳೆಲ
ರ್ದೀವಿದ ಕಿರುಗಂಡಿಗಳಿಂದುಣ್ಮುವ ನುಣ್ದನಿಯನಾಲಿಸುತ್ತುಂ ಮೆಲ್ಲಂ ತೊ
ರೆದು ಮರವಟ್ಟು ಸೊಗವೆರೆದು ಮೆಯ್ಮರೆದು ಪಸಲೆಗಳೊಳ್ಮಲಂಗಿಪ್ಪೆರಳೆ
ಗಳಂ ಪಿಡಿಯಲ್ಕೆ ಮೆಳೆಗಳ ಪೊದರ್ಗಳೊಳ್ಮಯ್ಗರೆದು ಕುಣಿಕೆಯು ನೇಣ್ಗ
ಳಂ ಕಣ್ಣಿವಲೆಗಳಂ ತಳೆದವಿದಿಪ್ಪ ಬೇಡವಡೆಗಳೊಳಂ ಮತ್ತಮಲ್ಲಿಯಲ್ಲಿ
ಸಲ್ಲೀಲೆಯಿಂ ಸೊರ್ಕೀರಿದ ಕಾಡಾನೆಗಳ್ಕೊಡುವೊನೆಯೊಳೀಡಿರಿದ ನಾನಾ
ವಿಧಗೈರಿಕಮಯಸಾನುಗಳಿಂದೊಪ್ಪುವ ಬೆಟ್ಟುಗಳ ತಪ್ಪಲ ವಿಶಾಲಶಿಲಾತಲ
ದೊಳ್ಕರಡಿ ಜೇಂಬುಟ್ಟುಗಳಂ ಹಿಳಿದು ಕಟ್ಟಾಸೆಯಿಂ ಕಲಸಿಟ್ಟ ಬಕ್ಕೆನಲಸಿನ
ಬೆಳಲ ಬಾಳೆಯು ಕಳಿವಣ್ಗಳೊಟ್ಟಲಂ ಸವಿನೋಡುವನಿತರೊಳೆ ಬೇಂಟೆಗಾ
ರರ ಗಾವಳಿಯಂ ಕೇಳಲೊಡಂ ಮಾಣ್ದು ಗವಿಯೊಳಡಂಗೆ ಕಂಡು ಮುರಗ
ಳಿಂದಿಳಿದೋಡಿಬಂದದಂ ತುಡುತುಡುಕಿ ಗವಗವನೆ ತಿಂದು ಮಗುಳೆ ಮುರನೇ
ರಿ ಕೊಂಬಿಂದೆ ಕೊಂಬಿಂಗೆ ಲಂಘಿಸುತ್ತುಂ ಲಾಗಿಸುತ್ತುಂ ತುದಿಗೊಂಬನ
ಲ್ಲಾಡಿಸುತ್ತುಂ ಸೆಳೆಗೊಂಬಂ ಪಿಡಿದಡಿಗಳನಿಳಿವಿಟ್ಟು ಕಯ್ಗಳಿಂದಮೆ ಕಡು
ವೇಗದಿಂದತ್ತಿತ್ತಮಡಹಾಯುತ್ತುಂ ನಟ್ಟಗೊಂಬಿನೊಳ್ನಿಂದು ಮದವೇರಿ ಕು
ಣಿದಾಡುತ್ತುಂ ಪುಬ್ಬನೇರಿಸಿ ಕಣ್ಣಂ ಮಿಟುಮಿಟುಂಕಿಸಿ ಕತ್ತೆತ್ತಿ ಪಲ್ಗಿ
ದೇಡಿಸಿ ಹರ್ರೆಂದು ಬೆದರಿಸಿ ದಾರಿಗರಪ್ಪ ಸೋಲಿಗರಣುಗರಂ ನಗಿಸಿ ಕಿಲ
ಕಿಲನೆ ಕಲಕಲಂಗೆಯ್ವ ಮಕ್ಕಡಂಗಳ ವಂಗಡಂಗಳೊಳು ಮತ್ತಮಲ್ಲಿಯಲ್ಲಿ
ಬೆಟ್ಟುಗುಡ್ಡುಗಳ ಕೋಡುಂಗಲ್ಗಳೊಳ್ಕೋರೆಗಳಂ ಮಸೆಯುತ್ತಿರ್ದು ಕಡು
ಬೆಟ್ಟತಪ್ಪ ಮುಸುಡಿಂದೆ ಕಿಳ್ತು ಕುರುಕುತ್ತೆ ಬಪ್ಪಾಗಳ್ಪೊಡವಿಯೊಳ್ಕ
ಡೆದ ಪಲತೆರದ ಗೆಡ್ಡೆಗಳ ತುಮುರುಗಳಿಂ ಕುರುಪಿಟ್ಟ ಬಟ್ಟೆಯಂ ಪಿಡಿದು
ನಡೆತಂದ ಪುಳಿಂದರಂ ಕಂಡು ಕೆಂಗನೆ ಕನಲ್ದು ಮೆಯ್ನವಿರ್ಗಳಂ ನೆಸೆಯಿಸಿ
ನಿಡುವುರ್ವುಗಳಸುರ್ವೀಳಿಸಿ ಗುರ್ಗುರ್ಗುಟ್ಟುತೆ ಕಟ್ಟಾಸುರದಿಂ ನಿಟ್ಟಿಸಿ ತುಂ
ಬುವೆರೆಯಂ ಕಜ್ಜೆತಿಂಬಾಗಳತ್ತಿತ್ತಂ ಜಾಳ ಕಟವಾಯೊಳ್ತುಟ್ಟತುದಿಯೊ
ಳುಳಿದ ಕಲೆಯೊಂದರೆರಡುಂ ತುದಿಗಳೆಂಬಂತೆ ಮಸೆವೆತ್ತು ಬೆಳರ್ತೆಸೆವ
ಕೋರೆಗಳನಿದಿರೊಡ್ಡಿ ಕೊರಲಂ ಕುಳ್ಗಿಸಿ ಭೋಂಕನತಿಮಾತ್ರಭಸದಿಂದಿದಿ
ರ್ಚಿದರಂ ಮೇಲ್ವಾಯ್ದೊಕ್ಕಲಿಕ್ಕುತುಮೋಡಿವಪ್ಪೆಕ್ಕಲಂಗಳೊಳಂ ಮತ್ತ

ಮುಲ್ಲಿಯಲ್ಲಿ ಪೋದಗೆಗಳನೊಳಕೊಂಡು ಮುಂಡಳಿಸಿ ನಿಂದಿಳವುಲ್ಲಂ ಮೇ
ಯುತಿರ್ದು ಕೆಬ್ಬುಲಿಯಬ್ಬರಮಂ ಕೇಳಲೊಡಂ ಮೇವನುಳದತ್ತಿತ್ತಂ ಕೆಕ್ಕ
ಳಿಸಿ ಕಂಡದನಿದಿರ್ಚಿ ಕಡುಮುಳಿದು ಮುಂಗಾಲ್ಗೊಳಗಿನ ತುದಿಯಿಂದಿಳೆಯಂ
ಕೆರಕೆರಂಟಿ ದೂಳಂ ಕೆದರುತ್ತೆ ಮೇಂಗೊರಲ ನವಿರೋಳಿ ನೆಸೆಯೆ ಕಿಳ್ಕೊ
ಗನಾಗಿ ಕೋಡುಗಳಂ ಮುಂದಣ್ಗೆ ನೀಡಿ ದುರದುರನೋರೆಗಣ್ಗಳಿಂ ನೋಡಿ
ನೋಡಿ ಹೂಂಕರಿಸುತದಂ ಬೆದರ್ಚಿ ಪೆಡಂಪೆಟ್ಟಸಿ ಜವನ ಜಕ್ಕಂದೊಳಲಿಗಳ
ಜಂಗುಳಿಗಳಿವೆಂಬಿನಂ ಭೀಕರಂಗಳಾಗಿರ್ಪ್ಪ ಕಾಳ್ಕೊಣಂಗಳ ಗಡಣಂಗ
ಳೊಳಂ ಮತ್ತಮಲ್ಲಿಯಲ್ಲಿ ಹಣಿಗಳ ಪೊದರ್ಗಳೊಳಡಂಗಿರ್ದು ಬಳಸಂದು
ಸೊವಡನರಿದು ಸರಳಿಸುವೆರಳಿಗಳ ತಂಡಮುಂ ಕಂಡೊಡನೆ ತಳ್ದನರೊ
ಳುರೆ ಬಳಲ್ದು ಪಿಂದಾದುದಂ ಮೇಲ್ವಾಯ್ದು ಪಿಡಿದು ನೆತ್ತರಂ ಕುಡಿದು
ಝುಂಕಿಸಿ ನೀರುಂಬುಳಾಡಿ ಸುಂಟಿಗೆಯಂ ತಿಂದು ತೇಗುವ ತರಕ್ಷುಗಳೊಳಂ
ಮತ್ತಮಲ್ಲಿಯಲ್ಲಿ ನಿಟ್ಟುಸಿರ ಬಿರುಗಾಳಿಯಿಂ ತರಗೆಲೆದುರುಗಲನೆಳಸಿ ಗಗ
ನತಲದೊಳ್ಕೆದರುತ್ತುಂ ನಿಡುದೊಲೆಗಳಂದದಿಂ ಪಸಿದು ಕೆಡೆದಿರ್ದು ಬಳಸಂದ
ಕಾಳ್ಮಗಂಗಳಂ ಘಕ್ಕನೆ ಪಿಡಿದೊಡಲಂ ಸುತ್ತಿ ಬಿಗಿದು ನಿರಿನಿಟಿಲೆಂದೆಲು
ವೆಲ್ಲಂ ನುಳ್ಗುನುಳ್ಗಾಗಲ್ಮಂಗಿ ಬೀಗುತಿರ್ಪ್ಪ ಪೆಬ್ಬಾವುಗಳೊಳಂ ಮತ್ತ
ಮಲ್ಲಿಯಲ್ಲಿ ಬಾವನ್ನಬಾವನ್ನದ ತಾಳಬಿಲಂಗಳೊಳಾವಗಂ ನೆಲೆಗೊಂಡು
ತೆಂಬೆಲಗೆರ್ಚಿಸಿ ಬಿಲಮುಖದೊಳ್ಕಳ್ಮೆಯ್ಯನೊಳಕೊಂಡು ಮೊಗಮುಂ ಪೊರ
ಮಡಿಸಿ ಮಿರುಮಿರುಪ ಕಂಠರೇಖೆ ರಾಕಾಶಶಾಂಕಮಂಡಲಕಳಂಕಮುಂಕಡೆ
ಗಣ್ಣೆ ಥಳಥಳಿಸಿ ತೊಳತೊಳಪ ನುಣ್ಪೆಡೆಯುಂ ಬಿಚ್ಚಿರ್ಕೊಂಡೊಲೆದಾಡಿ
ಸುತ್ತುಮಿರ್ಪ್ಪಗಣಿತಸರ್ಪ್ಪಂಗಳೊಳಂ ಕರಂ ಭಯಂಕರವಾಗಿಯುಂ ಧರೆ
ಯೊಳ್ಜನ್ಮವೆತ್ತು ಸಮುನ್ನತಿಯಂ ಪಡೆದುದರ್ಕೆ ಪರೋಪಕೃತಿಯುಂ ನೆಗ
ಳ್ವುದೆ ಪರತರಧರ್ಮಮೆಂಬ ನೀತಿಗೆ ನಿದರ್ಶನಂಗಳಾಗಿ ಸತ್ಫಲಸಮೃದ್ಧಿಯಿಂ
ತಮ್ಮಂ ಪೊರ್ದಿದ ಸಕಲಪ್ರಾಣಿಗಳಂ ಪೊರೆಯುತ್ತನೇಕದ್ವಿಜಕುಲಾಶ್ರಯಂ
ಗಳಾಗಿರ್ಪ್ಪ ಫಲಪೂರ್ಣಭೂಮಿಜಂಗಳೊಳಂ ಮತ್ತಮೆಲ್ಲೆಲ್ಲಿಯುಂ ಪರಿಫುಲ್ಲ
ವನಮಲ್ಲಿಕಾದಿಸಲ್ಲಲಿತಸುಮತಲ್ಲಜಂಗಳ ಪರಮಾಣುರೇಣುಗಳಂ ಕೆದರು
ತ್ತುಂ ವನರಾಜಿಯು ಪಲ್ಲವಪ್ರತತಿಯನಲುಗಿಸುತ್ತುಂ ತೀಡುವ ಮೆಲ್ಲೆ
ಳೊಳಂ ಮತ್ತಮಲ್ಲಿಯಲ್ಲಿ ಸೊಂಪೇರಿ ಸರ್ವತ್ರದೊಳುಮತಿಮಾತ್ರಕೋಳ

ಯನಾಂತು ಪಸರಿಸಿ ಮುರಿದುಂಬಿಗಳ ಕಲಮೆಧುರಗಾನದಿಂ ಬಂಧುರಂಗ
ಳಾಗಿ ನಾಡೆಕಣ್ಗೊಳಿಸುವ ಸಿರಿಯ ಕರುಮಾಡಂಗಳಪ್ಪಲರ್ದತಾವರೆಗಳ
ತಿಂಥಿಣಿಗಳಿಂ ತೀವಿ ಪರಿಪೂರ್ಣನಿರ್ಮಲಸಲಿಲಮಾಧುರೀಪರೀಭೂತಸುಧಾಸಾ
ರಂಗಳಪ್ಪ ಕಾಸಾರಂಗಳೊಳಂ ಮತ್ತಮಲ್ಲಿಯಲ್ಲಿ ಮಹಾರಾಜಂ ಬಂದ
ನೆಂದು ಪೆರ್ಮರಂಗಳೆಂಬುಪ್ಪರಿಗೆಗಳನಡರ್ದು ನಿಂದು ಪಲವಕ್ಕಿಗಳ ಪರಿವಡೆ
ದಿಂಚರಮೆಂಬ ಜಮುಜಮುಕೋಲಾಹಲನುನೆಪಗುತ್ತುಂ ಚೆಂದಳಿರ್ದಳಂಗಳಂ
ದಲರ್ದ ಪೂಗಳಂ ಸೂಸುತ್ತುಂ ಪೊಗಲೆಳವೆಂಡಿರೆಂಬಂತೆಸೆವ ಪಲವುಂ ಪೂವ
ಳ್ಳಿಗಳೊಳಂ ಮನೋಹರತರವಾಗಿಯುಂ ಗಗನತಲದಂತೆ ನಿರಂತರಪರಿ
ಭ್ರಮತ್ಖಗಮಂಡಲಮುಮಗಣಿತಭಲ್ಲುಕ್ಷಕುಲಸಂಕುಲಮುಂ ರಣರಂಗದಂತೆ
ಸಮುದ್ಭಟನುದೋತ್ಕಟಗಜನಾಜಿನಾಹಿನೀಭಟ್ಟಶಲ್ಯಶಿಲೀಮುಖಚಕ್ರಪ್ರ
ಚಾರಮುಂ ಕುರುಕ್ಷೇತ್ರದಂತೆ ಸಂಪ್ರವೃತ್ತಶಕಭೃದ್ವಂಶಜಾತಪ್ರಬಲಪರ
ಸ್ಪರಾಭ್ಯಾಮರ್ದ್ದಮುಂ ಸಮುದ್ರದಂತೆ ವನಚರಾನೇಕಸತ್ವಾಶ್ರಯಮುಮೆನಿ
ಸಿರ್ದುದಂತುಮಲ್ಲದೆಯುಂ ॥೨೫॥

ವೃ ॥ ಬಳಸಿದಕೀಚಕಸ್ತ್ರಕರದಿಂ ಧರದಿಂ ಶರದಿಂದುಬಿಂಬನಿ ।
ರ್ಮಲಕಲಹಂಸಕಾಸಸರದಿಂ ಸರದಿಂ ಭರದಿಂ ಬೆಳರ್ತ್ತು ಕ ॥
ಣ್ಗೊಳಿಸುವ ಶೈಲಸಿಂಧುಝರದಿಂ ತರದಿಂ ತರದಿಂ ಜನಿಪ್ಪಿಭಾ ।
ವಳಿಗಳಿನುನ್ಮದಭ್ರಮರದಿಂಜರದಿಂ ಪುರದಿಂದದೊಪ್ಪುಗುಂ ॥೨೬॥

ವ॥ ಅಂತಾವುಹಾರಣ್ಯಮಂ ಪೊಕ್ಕಾನೃಪವರೇಣ್ಯಂ ಮುನ್ನಮೆ
ಪೇರಡವಿಯೊಡೆಸುರಾಣತಿಯಿಂ ಪಲವಾಳ್ಗಳ್ನೂರ್ವಿಗರ್ನೆರವಾಗೆ ಕಾಡಿಂ
ಕಾಡಿಂಗರೆಯುಟ್ಟು ತಂದಾನೆವಿಂಡನೊಳವುಗಿಸಿ ತಡೆದಿಪ್ಪ ಮಂಡಲಾಕಾರ
ಮಪ್ಪ ಗಜಪ್ರಪಾತವೆಡೆಗೆಯ್ತುಂದಾಯೆಡೆಯೊಳುದ್ದಂಡವೇತಂಡಂಗಳ ಗಂಡ
ಮುಂಡಲದಿಂದುಗುತಪ್ಪ ಮದಜಲಧಾರೆಗಳ ನರುಗಂಪನಾಳ್ದ ಕಪಿಲಾಪ
ಗೆಯು ತೆರೆದುರುಗಲಿಂ ಕೆದರಿದ ತಂದಲ್ಗಳಂ ಪೊತ್ತು ರಯ್ಯುಮೆನಲೊಯ್ಯೊ
ಯ್ಯನೆ ತೀಡುವ ತೆಂಬೆಲರಿಂ ಮಾರ್ಗಾಯಾಸಮಂ ಕಳೆದೊಡನಿಪ್ಪಾಂಗ್ಲೇ
ಯಸರ್ವ್ವಾಧಿಕಾರಿವೆರಸು ನೀಡುಂ ಕೌತುಕದಿಂ ಪ್ರಪಾತದತ್ತಂ ದಿಟ್ಟಯಂ
ಬಿತ್ತರಿಸಲೊಡಂ ॥೨೭॥

ವೃ|| ಪರಿತಂದಧ್ವದ ಬಾಗಿಲೊಡ್ಡಿದ ಮಹಾವೃಕ್ಷಂಗಳಿಂದೆಯ್ದೆ ಕೆ |
ತ್ತಿರಲಲ್ಲಿಂ ಪೊರಸಾರಲಿಲ್ಲದಿರೆ ಬೇರೊಂದಾದೊಡಂ ಬಟ್ಟೆ ಕೌ ||
ವರೆಗೊಂಡಧ್ವಮನತ್ತಲಿತ್ತಲರಸುತ್ತುಂ ಸುತ್ತುತೆತ್ತೆತ್ತಲುಂ |
ಪಿರಿದುಂ ಬಾಗುಳಮಾಂತು ಘೀಳಿಡುತುಮಿರ್ವತ್ತಾವನೇಭವ್ರಜಂ ||೨೮||

ಕಂ || ಬಳಗಂ ಬಾಗುಳಮಾಂತಿರೆ |
ಸಲಗಮಗಾಧಪ್ರಪಾತಖಾತದ ತಟನುಂ ||
ಮುಳಿದೀಡಿರಿಯುತೆ ಜಂತಂ |
ಗಳಿಂದೆ ಪಥಮೆಸಗುತಿರ್ದುದಲ್ಲಿಂ ಪೋಗಲ್ ||೨೯||

ಅದನೀಕ್ಷಿಸಿ ರೋಧಕಜನ |
ಮಿದಿರಾಂತೊಗ್ಗಿಂದೆ ಪೊಡೆದ ತಮ್ಮಟಿಗಳಿನು ||
ಣ್ಮಿದ ಗಾವರಮಂ ಕೇಳ್ದಾ |
ಮದಕರಿ ಪೆಡಮೆಟ್ಟಿತಳ್ಕ ಮಿಗೆ ಘೀಳಿಡುತುಂ ||೩೦||

ವ|| ಇಂತು ಕಾಡಾನೆಗಳಿತ್ತಾನುಂ ಪೋಗಲರಿಯದಾಪ್ರಪಾತದ ನಟ್ಟಿಡೆಯೊಳಟ್ಟಣಿಸಿ ನೀಡುಂ ಭಯಭ್ರಾಂತಿಗೊಂಡಿರಲಾಸವಮಯದೊಳಾವರಣಗ್ರಹಂಕಲಾಧುರೀಣರಪ್ಪ ಮಾನಂತರೊಡನೊಡನೆ ಸುಶಿಕ್ಷಿತಂಗಳಪ್ಪ ದೀಪದಾನೆಗಳನಡರ್ದಾಪ್ರಪಾತನುಂಡಲನುನೊಳಪೊಕ್ಕ ಭೋರ್ಗರೆಯುತ್ತಾವನಗಜವ್ರಜಮುಂ ಗಜರಿ ಬೆದರಿಸಿ ಕಡುಸುಗಿದು ಚದರಿದನರೊಳೊಂದೊಂದಂ ಸುತ್ತುಂ ಮುತ್ತಿ ಕಟ್ಟುದಟುಂ ದರಿಯಟ್ಟಿ ಪೆರತೊಂದು ಕಿರಿದಪ್ಪುಪಪ್ರಪಾತಮನೆಯ್ದಿಸಿ ಬಳಿಕಿರ್ಪ್ಪಕ್ಕದೊಳುಂ ದೀಪದಾನೆಗಳಿಂವತ್ತಲಿತ್ತಲಿನಿಸಾನುಂ ವಿಡುಕದಂತೊತ್ತಿಸಿ ತಡೆಯುದೆ ಚಡವುಕನವರೊಡಲ್ಗಳವಡಿಸರ್ವ ನೂಲಬಲ್ಲ್ವೊರಜಿಯುಂ ಸನ್ನೆಗೆಯ್ದುವರ ಕಯ್ಯಿಂದವೆ ಕೊರಲ್ಗಮರ್ಚಿ ಬಿಡದು ಪಾಯುದಿಂದೊಯ್ಯೊಯ್ಯನೆಳೆದೆಳೆದು ಬೇರೊಂದೆಡೆಗುಯ್ತುಂದು ಝಳಕ್ಕನೆ ಕೆಳಗಿಳಿದು ತಮ್ಮವ್ವಾನೆಗಳ ಕಾಲ ಮರೆಯೊಳಡಂಗಿ ಪಿಂದಣ ಮುಂದಣೆಡಬಲದೆರಡುಂ ಕಾಲ್ಗಳಂ ಬಲ್ಲ್ವೊರಜಿಗಳಿಂ ಬಿಗಿದು ಬೀರಿ ಪೆರ್ಮರಂಗಳಿಕಟ್ಟಿ ಮತ್ತೆ ಮೇಗೇರುವಾಗಳ್ ||೩೧||

ಕಂ || ವನದಂತಿಯೊಂದು ಮಾವಂ |
ತನ ಮೇಲೆತ್ತಿದೊಡೆ ಕಯ್ಯಿನದನಿರ್ಕೆಲದೊ ||

ತ್ತಿನ ಕರಿಗಳ್ಕಯ್ಗಳಿನಾ ।
ಯ್ಕನೆ ಪಿಡಿದಿಳಿಪಿದುವು ಕಲ್ತ ಶಿಕ್ಷಾಕ್ರಮದಿಂ ॥೩೨॥

ಮತ್ತಮೂಗಳ್,

ಕಂ ॥ ಅತ್ತಿತ್ತಮೆರಳ್ವಿಡಿಗಳಿ ।
ನೊತ್ತಿಸೆ ಗಂಡಾನೆಯೊಂದು ಮಾವುತರಂ ಸೋ ॥
ಡುತ್ತುಂ ಸುಂಡಿಲನುರೆ ಕಾ ।
ಯ್ದೆತ್ತಿದೊಡವು ಸುತ್ತಿ ಕಯ್ಗಳಿಂ ಪಿಡಿದುವದಂ ॥೩೩॥
ಪಿಡಿಗಳ ಕಯ್ಗಳ ಸೋಂಕಿನ ।
ಕಡುಸೊಗದಿನದಿಳಿಪಿ ಮೇಲೆ ನೆಗಪಿದ ಕಯ್ಯಂ ॥
ವಿಡುಕದೆ ನಿಂದುದು ಮೆಯ್ಮರೆ ।
ವಡಸರೆ ವಿಷಯೇಚ್ಛೆಯೇಂ ವಿಪತ್ಕಾರಣಮೋ ॥೩೪॥

ವ॥ ಇಂತಿಪ್ಪರ್ಪುಗಳೆ ಮಾವಂತರಾಮಹಾದಂತಿಯು ಮುಂಗಾಲ್ಗೆ ತೊಡಚ್ಚಿರ್ದ ಸಂಕಲೆಯುಮುಂ ಪಿಂಗಾಲ್ಗೆ ಬಿಗಿದ ಬಲೊಪ್ಪುರಜೆಯುಮುಂ ಮುಂದಣ ಪಿಂದಣ ಮರಂಗಳ್ಗೆ ಕಟ್ಟಿ ಮತ್ತೆ ಮೇಗಡರ್ದು ಕಾಲ ಸನ್ನೆಯಿಂ ತಮ್ಮ ಮ್ಮಾನೆಗಳಂ ಭೋಂಕನತ್ತಿತ್ತಮುಯೊಡೆ ॥೩೫॥

ಕಂ ॥ ತೊಡರ್ದಾಸಂಕಲೆಯಂ ಕಂ ।
ಡಡಿಯೊಳ್ಮಳೆದೆಳೆದು ಕರದೊಳಲ್ಲಾಡುತೆ ಘೀ ॥
ಳಿಡುತೆ ತೊಳಲುತ್ತೆ ಬಳಲುತೆ ।
ಕಡುಬೇಗುದಿಯಾಂತು ನಿಂದುದದು ವಿಡುಕದಣಂ ॥೩೬॥

ವ॥ ಇಂತು ಮಾವಂತರ ಗಜಗ್ರಹಣವಿಧಾನಮನಾವಸುಧೇಂದ್ರನಾಂ ಗ್ಲೇಯಸರ್ವಾಧಿಕಾರಿಗೆ ತೋರಿ ಬಳಿಕ್ಕಲ್ಲಿಂ ಬೇರೊಂದು ಘೋರತರಕಾಂ ತಾರಪ್ರಾಂತಮುಂ ಸಾರೆವಂದಾತಂಬೆರಸಲ್ಲಿ ಸಂಬರಂ ಪುಲಿ ಮೊದಲಪ್ಪ ಪಲವು ಕಾಳ್ಮಗಂಗಳಂ ಬೇಂಟೆಯಾಡಿ ನಾಡೆ ಮನೋವಿನೋದಮನಾಂತಲ್ಲಿಂ ಮರಲ್ದು ರಾಜಧಾನಿಯಂ ಪುಗುತಂದನೆಂಬೆಡೆಯೊಳ್ ॥೩೭॥

ಕಂ ॥ ಆಹೂಣಪತಿಯೊಳಗ್ಗದ ।
ನೇಹಂ ನಿರುಕಿಸಿದ ಮಾತ್ರದಿಂ ಬಳೆದುದಿನ ॥

ಲ್ಯಾಹಿಮಕರಕುಲತಿಲಕನ ।
ಮಾಹಾತ್ಮ್ಯಮೆಸೆತ್ತೊ ಲೋಕನುತಗುಣಗಣನಾ ॥೩೮॥

ವ॥ ಅಲ್ಲಿಂ ಬಳಿಯುವಮಾರಾಯನಾಂಗ್ಲೇಯಾಧಿಪತಿಯುಂ ರಾಜನೆಮರ್ಯಾ ದಾನುಸಾರದಿಂ ಮನ್ನಿಸಿ ಬಂಗಾಳಕ್ಕೆ ಕಳಿಪಿದ ಸಮನಂತರದೊಳಗ್ಗಳಿಸಿದ ನೇಹದಿಂದಾತನಂ ಮತ್ತಂ ಕಿರಿದಾನುಂ ದೆವಸದೊಳೆ ಕಾಣಲುಂ ಮೂಡಣ ಕಡಲತ್ತಲಿಪ್ಪ ಪದ್ಮರಾಗಮಣಿಗಳಾಕರಮೆನಿಸಿದ ಬರ್ಮನಾಮಕಜನಪದ ಮನನಲೋಕಿಸಲುಂ ಜಲನಿಧಿವಾರ್ಗದಿಂದತ್ತಣ್ಗೆ ಪಯಣಂಗೆಯ್ಯಲೆಣಿಸಿ ಮಂತ್ರಿಪುರೋಹಿತಾದಿಗಳೊಡನೆ ರಾಜಧಾನಿಯುಂ ಪೊರಮಟ್ಟು ಮದರಾಸು ಪತ್ತನಮನೆಯ್ದೆ ವಂದನೇಕದ್ವೀಪಂಗಳಿಂದೆಯ್ತಪ್ಪ ಪಡಂಗುಗಳಂ ತಡೆಯಲ್ಕೆ ತಡಿಯು ನೀರ್ನಾಣಿಗೊಳತ್ತಿತ್ತಲರೆಬಟ್ಟನಂದದಿಂ ಕಟ್ಟಪ್ಪ ಹಾರ್ಬರೆಂಬಿರ್ಕ ಟ್ಟೆಗಳಿಡೆಯಂ ಸಾರ್ತರಲೊಡಂ ॥೩೯॥

ಕಂ ॥ ತಿರೆವೆಣ್ದೀವಿಗಳಿಂದೆ ।
ಯ್ತರುತಿಪ್ಪ ಪಡಂಗನಪ್ಪಿ ಬಾರೆಂದೊಲವಿಂ ॥
ಕರೆದುಕೊಳಲ್ಬೀಡಿದ ತೋ ।
ಳೆರಡೆನೆ ಕಟ್ಟೆಗಳನೆರಡುನೋಸೊಪ್ಪಿದುವೋ ॥೪೦॥

ವ॥ ಅಂತಾಕಟ್ಟೆಗಳನಟ್ಟುನಡುವೆ ಬಳಸುವ ಭೂಪತಿಗೆ ನದೀಪತಿ ರಾಜಮರ್ಯಾದೆಯಿಂ ಕಲ್ಪಿಸಿದರಮನೆಯೆಂಬಂತೆ ಬಿತ್ತರಂಗೊಂಡು ನಿರತಿಶಯ ರಾಜಭೋಗ್ಯಸಂಪತ್ತಿಯಿಂ ತೀವಿದ ಪೊಗೆವಡಗನಾಪೊಡವಿಯಾಣ್ಮಂ ಸಪರಿ ವಾರನಾಗಡರಲೊಡಂ ॥೪೧॥

ಕಂ ॥ ನಡೆದತ್ತು ಬಡಗಣತ್ತ ।
ಲ್ಕಡುವೇಗದೊಳಾಪಡಂಗು ಮೆಲ್ಮೆಲ್ಲನೆ ಮುಂ ॥
ಗಡೆಯುಂ ಪಿಂಗಡೆಯುಂ ತೂ ।
ಗಿಡುತುಂ ಜರ್ಝರಿಸುತಡಿಯ ಜಕ್ರಮೆ ನೀರಂ ॥೪೨॥
ಪರತರಮಕರಾಲಯಗತ ।
ತರಣಿಯ ಮಧ್ಯದೊಳಿರುತ್ತೆ ಲೋಕಾಧೀಶಂ ॥
ಸರಸಿಜಲೋಚನನವನು ।
ತ್ತರದಿಕ್ಪಥಗಾಮಿಯಾಗದೇನೊಪ್ಪಿದನೋ ॥೪೩॥

ತಡಿಯೊಳ್ನಿಂದಜನಂ ಮರ |
ಗಿಡುಗಳುಮಿದಿರತ್ತಣಿಂದಮುರುತರಜವದಿಂ ||
ನಡೆತಂದಪುವೆಂಬಿನಮಾ |
ಪಡಂಗಿನೊಳಗಿಪ್ಪವರ್ಗೆ ತೋರಿದುವಾಗಳ್ ||೪೪||

ವ|| ಅಂತಾಪಡಗು ಕೆರಿದುದೂರಂ ಪೋಗುವುದುಮಾಪೊಡವಿಯಾಣ್ಮಂ ನಡುವಣಂಗಳದೊಳ್ನಿಂದು ಸುತ್ತುಂ ದಿಟ್ಟಯಂ ಪಸರಿಸೆ ||೪೫||

ವೃ|| ಚರಿಸುತ್ತಿಪ್ಪಪಡಂಗಿನಿಂ ಬಿದಿರ್ದತಂದಲ್ಗಳ್ಪ್ರಭಾತಪ್ರಭಾ |
ಕರಭಾನೂತ್ಕರಸಂಗದಿಂದೆ ಮಿರುಗುತ್ತೇನಾದಮೊಪ್ಪಿರ್ದುವೋ ||
ಸರಿದೀಶಂ ತೆರೆಗಯ್ಗಳಿಂದೆ ವಸುಧಾಧೀಶೋಪಚಾರಕ್ಕೆ ನಿ |
ರ್ಝರಸಮ್ಮೋದದೆ ಸೂಸುತಿಪ್ಪಭಿಲಸನ್ಮೌಕ್ತಾಘಮೆಂದೆಂಬಿನಂ ||೪೬||

ಕಂ || ನಿರುಕಿಪೊಡದೆತ್ತಲುಂ ಬಿ |
ತ್ತರಮಾಳ್ದಾಸೀಲಮಪ್ಪ ಕಡಲೊಳ್ತಿಮಿಗಳ್ ||
ಚರಿಸುತಿರೆ ಸಿಡಿದ ಜಲಶೀ |
ಕರನಿಕರಂ ಬೆಳ್ಪನಾಂತದೇನೊಪ್ಪಿದುದೋ ||೪೭||

ತೆರೆತೆರೆಯೊಳ್ತೋರ್ದುವು ಭಾ |
ಸ್ಕರಬಿಂಬಂಗಳ್ಸಮಸ್ತತನುಧಾರಿಗಳೊಳ್ ||
ಪರಮಾತ್ಮನ ಪಡಿನೆಳಲೆನಿ |
ಸಿರುತಿಪ್ಪಾತ್ಮರ್ಕಳಂತಿರತಿತರಳಂಗಳ್ ||೪೮||

ವ|| ಇಂತಪ್ಪ ಕಡಲೊಳಾಪಡಂಗು ಮುಂಮುಂದಣ್ಗೆ ನಡೆವಾಗಳ್ತಡಿಯೆಡೆಯೊಳ್ಕೊದಮೊದಲ್ಜನಜನಮುಂ ಬಳಕ್ಕೆ ಮರಮರಂಗಳುಮಲ್ಲಿಂಬಳಕ್ಕೆ ಸಮುನ್ನತಪ್ರಾಸಾದಶಿಖರಂಗಳುಂ ಗೋಚರಿಸಿ ಮರೆಯಾದ ಸಮನಂತರದೊಳತ್ತಣಭೂಭಾಗಮೊಂದು ಮರದೆಪ್ಪದಂತೆಯುಂ ಬಳಿಕ್ಕಮೊಂದು ಮುಸುಳ್ದಬಗುಕೆಯಂತೆಯುಂ ಪರಿವಿಡಿಯಿಂಕಾಣಬಂದು ಬಳಿಕ್ಕಮದುಂ ಕಾಣದಿರಲಾಕ್ಷ್ಮಾಣಿಪತಿ ಮಿತ್ರಾಮಾತ್ಯರ್ವೆರಸು ವಿನೋದಗೋಷ್ಠಿಯೊಳ್ಸಾಗರಪ್ರಶಂಸಾವಿಷಯಂಗಳಪ್ಪ ಪುರಾಣೇತಿಹಾಸಂಗಳಂ ಸ್ಮರಿಸಂಗಿಸುತ್ತ ತಿದೂರಂ ಪೋಗೆವೊಗೆ ||೪೯||

ಕಂ || ವರುಣನರಮನೆಯ ನವಪ |
ದ್ಮರಾಗರತ್ನಮಯದೀಪ್ರಕಲಶಮಿದೆಂಬಂ ||
ತಿರೆ ಪಡುದೆಸೆಯೊಳ್ದಿವಸೇ |
ಶ್ವರಬಿಂಬಂ ತೋರಿದತ್ತು ಸಂಧ್ಯಾರುಣಿತಂ ||೫೦||

ರವಿಯಸ್ತಂಗತನಾಗ |
ಲ್ಕವಿದ ಮಹಾತಮದೆ ಪಡಗಿನೊಳ್ಪೋಗುವ ಮಾ ||
ನವರ್ಗಿದು ದಿಗ್ಭಾಗಮಿದ |
ರ್ಣವಮಿದು ನಭಮೆಂದು ತೋರ್ದುದಿಲ್ಲಮದೊಂದುಂ ||೫೧||

ಬಳಿಕೆತ್ತೆತ್ತಮುಮುದಯಿಸಿ |
ಪೊಳೆಪೊಳೆಯುತೆ ತೆರೆಗಳಲ್ಲಿ ಮಾರ್ಪೊಳೆದುಡುಸಂ ||
ಕುಲಮೇನೆಸೆದುದೊ ಜಲನಿಧಿ |
ಯೊಳಗಿಪ್ಪಗಣೇಯಮೌಕ್ತಿಕಪ್ರಕರಮೆನಲ್ ||೫೨||

ವ|| ಇಂತಪ್ಪ ರಜನೀಮುಖದೊಳಾವುಹಾರಾಜಂ ಸಾಯುಂತನಕಾರ್ಯಂಗಳಂ ನಿರ್ವರ್ತಿಸಿ ಪೋತವಾಹಪ್ರಮುಖಾಧಿಕಾರಿಯೆಳಸಿದಂತೆ ಕಿರಿದು ಪೊತ್ತಾಪಡಂಗಿನೊಳಿಪ್ಪ ಸಂಗೀತಶಾಲೆಯೊಳ್ಯಂತ್ರವಾದ್ಯಂಗಳ ಹೃದ್ಯತರ ಗೀತನಾದಮುನಾಲಿಸುತ್ತುಮಿರ್ದ್ದಾತಿಸುಖಾವಹಶಯನಾಸನಂಗಳಿಂದೊಪ್ಪುವ ಸೆಜ್ಜೆವನೆಯೊಳ್ಪವಡಿಸಿ ಪೊಳ್ತಡೆ ತಣ್ಣಾಳಯೆಲ್ಲಿಲ್ಲಿಯುಂ ತೀಡೆ ಪರಸ್ಪರಹಸ್ಯಮಾನತರಳತರತರಂಗಾರವಮೆಂಬಹರ್ಮ್ಯತಲದುಂದುಭಿಧ್ವಾನಮುಂ ಕೇಳ್ದುಪ್ಪವಡಿಸೆ ||೫೩||

ಕಂ || ಜಳನಿಧಿಯುಪ್ಪವಡಿಸಿದಾ |
ಯಿಳೆಯಾಣ್ಮಂ ನೋಡಲೆಂದು ಮುಂದೆಸೆಯೊಳ್ತ ||
ನ್ನೊಳಗಿಂ ತೆಗೆದಿಟ್ಟ ಸಮು |
ಜ್ವಳಮಣಿಮುಕುರಮೆನೆ ಮೂಡಿದತ್ತಿನಬಿಂಬಂ ||೫೪||

ವ|| ಅಂದುಮಂತಿಂತು ಕಳೆಯಲಾಮರುದೆನಸವಾಪಡಂಗು ಬಹು ದೂರಂಬರಂ ಪೋಗಿಪ್ಪಿನಂ ಸಂಧ್ಯಾಸಮಯನೊಳ್ಪಮುಲ್ಲೋಲಕಲ್ಲೋಲಿನೀಶಕಲ್ಲೋಲಜಾಲಕೋಲಾಹಲಂ ಕೇಳಬರಲುಮದರೊಡನೆ ಭೋರೆಂದು

ಬಿರುಗಾಳಿಯೆತ್ತೆತ್ತಲುಂ ತೀಡಲುವೊಮ್ಮೊಗನಾಗಿ ನಡೆಯುತ್ತಿರ್ದಾಪೊಗೆವಡ
ಗು ತೂಗುಂದೊಟ್ಟಲವೊಲತ್ತಿತ್ತಂ ನಾಡೆ ತೂಗಾಡುತ್ತೆ ಬಟ್ಟೆಯಂ ಬಿಟ್ಟು
ನಿಯಂತೃಗಳ ಯಂತ್ರತಂತ್ರಂಗಳಂ ನೀರಿ ನಿಲ್ಲದೆಲ್ಲಿಯುಂ ಪರಿವರಿಯಾಗಾ
ಡುವಿನನುನಿತರೊಳೆ ಗಗನತಲಂ ಕಮ್ಮುರ್ಗಿಲೊಡ್ಡಿನೊಡನಂಧಂತನುಸದಿಂ
ತೀವೆ ಕಾಳರಾತ್ರಿಯು ಮಹಾಕಾಳಿಯು ಕರಾಳತರದೃಷ್ಟಿಜ್ವಾಲೆಯೆಂಬಿನಂ
ಬಳ್ಳಿಮಿಂಚು ಮಿಂಚುತ್ತಿರೆ ಸಮುದ್ಭಟಘನಘಟಾರವಾಟೋಪಮುಂ ಸಮು
ತ್ತುಂಗತರಂಗಜಾಲಕೋಲಾಹಲಮುಮೊಂದುಗೂಡಿ ಕಲ್ಪಾಂತಭೈರವನಟ್ಟ
ಹಾಸದ ಶಂಕೆಯುಂ ಪುಟ್ಟಿಸೆ ಪೆರತೊಂದು ಸಾಗರಂ ಮೇಗಣಿಂದಿಳಿತಪ್ಪು
ದೆಂಬಂತೆ ಬಿರುಸರಿ ಭೋಂಕನಿಳಿತಪ್ಪುದುವಲ್ಲಿರ್ದ ಜನಮೆಲ್ಲಮಕ್ಕಟಾ
ಇದೇನೊ ಮಹತ್ತರಮಾದಾಪತ್ತಡಸಿತೆಂದತ್ಯಾಹಿತಂಗೊಂಡು ಬದ್ಧಾಂಜಲಿ
ಗಳಾಗಿ ಜಗದೀಶಂಗೆ ವೊರೆಯಿಡಲ್ಕೊಡಗಲರಸಸಾವಿಪರೀತಮಂ ನೋಡಿ
ಪಡಗಂ ನಡಸುವೆಸಕದೊಳಾಂಗ್ಲೇಯರ ಜಾಣ್ಮೆ ನೀಡುಂ ನೆಗಳ್ತೆವಡೆದಿಪ್ಪು
ದರಿಂದಪಾಯಮೇನುಂ ವೆಯ್ದೊರೆದೆಂದು ಬಗೆದೆರ್ದೆಗಿಡದಿರ್ದೊಡಂ ವಿಜೆತ್ರ
ಮಪ್ಪು ದೈವಗತಿಯೆಂತಿಪ್ಪುದೊ ಪೇಳಲಸದಳಮೆಂದೆಣಿಸಿ ನಿಜಕುಲದೇವ
ತೆಯುಂ ನಿಖಿಲಾಪದುದ್ಧಾರಿಣಿಯುಮುಪ್ಪ ಚಾಮುಂಡಾಂಬೆಯಂ ನಿರವಧಿಕ
ಭಕ್ತಿಯಿಂ ಜಾನಿಸುತೆ ಜೀವಮೊಂದಂ ಕಳೆವುದುಮಾಬಿರುಗಾಳಿಯೆತ್ತಂ ಪರಿ
ದುದೋ ಸರಿಯೆತ್ತಂ ಸರಿದುದೋ ಕರ್ಗಳ್ತಲೆಯೆತ್ತಲಳ್ಗಿದುದೋ ಮಿಂಚು
ಗಳೆತ್ತಂ ಮುಂಚೆದುವೋ ಸಿಡಿಲ್ಗಳೆತ್ತಂ ಸಡಿಲ್ದುವೋ ಗುಡುಗುಗಳೆತ್ತಲಡಗಿ
ದುವೋ ತಿಳಿಯಲಳವಿಲ್ಲದೆಲ್ಲಮುಂ ಕ್ಷಣಮಾತ್ರದೊಳೆ ಬಕ್ಕಂ ಬಯಲಾಗೆ॥

ಕಂ ॥ ಭಯಕೃದ್ಭಯನಾಶನ ಎಂ ।
ದು ಯಥಾರ್ಥಮೆ ಪೊಗಳ್ವರರಿದರೀಶ್ವರನಂ ವಾ ॥
ರ್ಧಿಯೊಳಾಜನರ್ಗೆ ಬಿರುಗಾ ।
ಳಿಯ ಭಯಮಿಂತಳಿದುದೇ ನಿದರ್ಶನಮಿದರೊಳ್ ॥೫೬॥

ಅಂತು ಸಮನಿಸಿರ್ದ ಪುಚ್ಚಳಿ ಕಳೆಯಲೆಲ್ಲರುಂ ಸಮುಲ್ಲಸಿತಮಾನ
ಸರಾಗಿ ಸರಸಸಲ್ಲಾಪಂಗೆಯ್ಯುತ್ತೆ ಸಮಾಧಾನಸ್ಥಿತಿಯೊಳಿರ್ಪಿನಮಾಪಡಂಗು
ಬಟ್ಟೆವಿಡಿದು ನೆಟ್ಟನೆ ಮುಂದೆ ನಡೆದಾರನೆಯ ದಿನಂ ಕಾಳೀಪುಟ್ಟನಗರಮುಂ
ಮುಟ್ಟಲೊಡಂ ॥೫೭॥

ಕಂ|| ನಿರವಧಿಕಾಹ್ಲಾದವನಾಂ |
ತರಸಂ ಪರಿವಾರದೊಡನೆ ಪಡಗಿಂದಿಳಿದು ||
ತ್ತರಿಸಿದನಂಬುಧಿಯಿಂ ದು |
ತ್ತರಿಸಿದ ತೆರದಿಂದಮಾಪದಂಭೋನಿಧಿಯಿಂ ||೫೮||

ವ|| ಅಂತಾವುಹಾನಗರವುಂ ಸೇರ್ದ ಚಾವುರರಾಜೇಂದ್ರನಾಂಗ್ಲೇಯು ಸರ್ವಾಧಿಕಾರಿಯಿಂದಿವ್ಮಡಿಸಿದ ಸೌಹಾರ್ದದಿಂ ಪಿರಿದುಂ ಸತ್ಕೃತನಾಗಿ ಕೆಲವಾನುಂದಿನವುಲ್ಲಿರ್ದು ಶೀತಪ್ರಾಯವುಪ್ಪ ಸನ್ನುದ್ರವುಾರ್ಗದೊಳ್ಪಯಣಂಗೆಯ್ವುದು ತನ್ನೊಡಲೊಳ್ಗಿರ್ದುದಲ್ಲವೆಂದು ಬಗೆದು ಬರ್ಮದೇಶದತ್ತಣ ಪಯಣವುಂ ನಿಲಿಸಿ ಹಿವುಾಲಯಪ್ರಾಂತವುನವಲೋಕಿಸಲೆಂದು ಪರಿವಾರಂಬೆರಸಲ್ಲಿಂ ಪೊರವುಟ್ಟು ಪೊಗೆವಂಡಿಯನೇರಿ ತಳರ್ವುದುಂ ||೫೯||

ವೃ|| ವುಂದರಪರ್ವತಕ್ಕೆ ಬಳಸಿಕ್ಕಿ ಸುರಾಸುರರಂದು ಪಿಂದುವುಂ |
ವುುಂದುವುನಾಂತು ವಾರಿನಿಧಿಯಂ ಕಡೆದಾಬಳಿಕಂ ಶ್ರವುಾತಿರೇ ||
ಕಂದಳೆದುರ್ವಿಯೊಳ್ಪವಡಿಸಿಪ್ಪ ಬಹುಸ್ಫಟನಪ್ಪಹೀಂದ್ರನೆಂ |
ಬಂದದೆ ವುುಂದೆ ತೋರ್ದುದು ಸಿತಂ ಬಹುಶೃಂಗಯುತಂ ಹಿವುಾಲಯಂ||೬೦||

ವ|| ಆವುಹಾವುಹೀಂಧರಂ ಕೆಲವೆಡೆಯೊಳ್ನೀಡುಂ ಯತ್ನಿಸಿ ನೋಡುವೊಡಂ ತುದಿಗಾಣದಿರ್ಪ ಸನ್ನುತ್ತುಂಗಶಿಖರಂಗಳಿಂದೆಯುುವುಂತು ತಳಂಕಾಣದಿರ್ಪ ಕಟ್ಟಾಳವಾದ ಕವ್ಮರಿಗಳಿಂದೆಯುುಂ ವುತ್ತವೆತ್ತೆತ್ತಲುಂ ಕೂರ್ವಿಪರ್ವಿದ ವುರಗಿಡುವಳ್ಳಿಗಳಿಂದಿಟ್ಟಣಿಸಿ ಕರ್ಗಳ್ತಲೆಯನೊಳಕೊಂಡಿಪ್ಪ ಸುದುರ್ಗ್ಗವುವಿಪಿನಂಗಳಿಂದೆಯುುಂ ಕರಂ ಭಯಂಕರವುಾಗಿಯುುಂ ಕೆಲವೆಡೆಯೊಳ್ಕಳಿರ್ಕ್ಕೀಡಿಂಗೆ ಸೈರಿಸದೆ ಬಿಸಿಲಾಯಲಲ್ಲಲ್ಲಿ ಬಯಲ ಪಸಲೆಯೊಳ್ಳಗಂಬೆರಸು ನೆರೆದಿಪ್ಪ ಚವುರಸೃವುರಾದಿವೃಗವಿಶೇಷಂಗಳಿಂದೆಯುುವುಂತುಟಲ್ಲಲ್ಲಿ ಪೆರ್ಮರಂಗಳ ತುದಿಗೊಂಬುಗಳೋಳ್ಪದಂಗೊಂಡು ಬಗೆಬಗೆಯು ಬಣ್ಣದಿಂ ಕಣ್ಗೊಳಿಸುತ್ತುಂ ಪರಿಪರಿಯ ನುುಂದಾನಿಯಿಂ ಕಿವಿಗಿಂಪಂ ಕರೆಯುತ್ತುವಿಪ್ಪ ವಿಹಂಗವುಂಗಳಿಂದೆಯುುವುಲ್ಲಲ್ಲಿ ಪರಿವಡೆದ ಪೂವಿಂಗಳಿಂದಿಡಿದಿಪ್ಪ ಪಲವುಂತೆರದ ವುರಗಿಡುಗಳಿಂದೆಯುುವುಲ್ಲಲ್ಲಿ ವೇವೇಗೆ ಸವುುದಗ್ರಶಿಖರಂಗಳನೆಡೆಗೊಂಡಿರ್ದು ತರಣಿಕಿರಣಸಂಗದಿಂ ಕರಕರಗಿ ಪರಿತಪ್ಪ ತುಷಾರ

ಖಂಡಂಗಳ ಸುನಿರ್ಮಲನಿರ್ಝರಂಗಳಿಂದೆಯುಂ ಮನೋಹರತರವಾಗಿಯುಂ ಕೆಲವೆಡೆಯೊಳ್ಪರಸ್ಪರವೈರಮಂ ತೊರೆದೊಡನಾಡಿಗಳಾಗಿರ್ಪ್ಪ ಗಜಸಿಂಹಾದಿ ಚೇತನಂಗಳಿಂದೆಯುಂ ನಿರಂತರಮಷ್ಟಾಂಗಯೋಗನಿರತರಾಗಿ ತಪಮಿರ್ಪ್ಪ ಯೋಗೀಂದ್ರರಿಂದೆಯುಂ ಕಾನನಾಂತರದಿಂದಭಿನವಸಮಿತ್ಕುಶಕಂದಮೂಲ ಫಲಂಗಳಂ ತಂದುತಂದೊದವಿಸುತ್ತುಮತ್ತಿತ್ತಣಿಂ ಬಂದಬಂದತಿಥಿಗಳಂ ಪರ ಮಾದರದಿಂ ಕರೆಕರೆದು ಸತ್ಕರಿಸುತ್ತುಂ ತೃಣಕಬಳಂಗಳನಿತ್ತು ಹೋಮಧೇ ನುಗಳಂ ಪೊರೆಯುತ್ತುಂ ನಿರ್ಝರಜಲದೊಳ್ಧೌತಂಗೆಯ್ದ ವಲ್ಕಲಂಗಳಂ ಪರ್ಣಶಾಲೆಗಳ ಪಟಲಂಗಳೊಳ್ಬಿಗಿದಾರಿಸುತ್ತುಮಿಂತಿಂತಾಶ್ರಮೋಚಿತಸದಾ ಚಾರಂಗಳಿಂ ಗುರುಶುಶ್ರೂಷಣಪರಾಯಣರಾಗಿರ್ಪ್ಪ ಮುನಿಶಿಷ್ಯರಿಂದೆಯು ಮೆಡೆವಿಡದೆ ಮಂಡಲಿಸಿ ಮೇಲೆಮೇಲಡರುತ್ತೆ ಸಂತತಹಿಮಾಸಾರಪಾಂಡರ ಶಿಖರಂಗಳೊಳ್ಕರ್ಮ್ಮಗಿಲೊಡ್ಡಿದೆಂಬ ಶಂಕೆಯನೊಡರಿಸುವ ಹೋಮಧೂಮ ಸ್ತೋಮದಿಂದೆಯುಂ ಪ್ರಶಾಂತಪಾವನಮಾಗಿಯುಂ ಕೆಲವೆಡೆಯೊಳ್ಭಗೀರಥ ಮಹಾರಾಜನುದ್ದಾಮತಪದನರ್ಘ್ಯಫಲಸಂಪತ್ತಿಯೆನಿಸಿ ಲೋಕತ್ರಯಮಂ ಪವಿತ್ರಂಗೆಯ್ದ ಭಾಗೀರಥಿಯ ತೀರದೇಶಂಗಳೊಳ್ಶೀತವಾತಕ್ಲೇಶಸಹರುಂ ಭಗವನ್ನಾಮಸಂಕೀರ್ತನಪರರುಂ ಪರಮಾತ್ಮಧ್ಯಾನಪರಾಯಣರುಂ ಮುನು ಕ್ಷುಗಳುಮಪ್ಪನೇಕತೀರ್ಥಯಾತ್ರಿಕರಿಂ ಕಿಕ್ಕಿರಿದ ಸನಾತನದೇವತಾಯತ ನಂಗಳಿಂ ಮಹನೀಯಮಾಗಿಯುಮಿರ್ದುದಂತುಮಲ್ಲದೆ ॥೬೧॥

ವೃ॥ ಆವಂ ತಾತನೆನಿಪ್ಪನಂಬಕೆಗೆ ಮತ್ತಾವಂಗೆ ಜಾಮಾತೃ ಮಾ ।
ದೇವಂ ದೈವತಬೃಂದವಂದಿತಪದಂ ಬ್ರಹ್ಮಾಂಡಕೋಟೀಶನಿ ॥
ನ್ನಾವಂ ನಾರಕದುಃಖಹಾರಿ ದಿವಿಷತ್ಸಿಂಧೂದ್ಭವಸ್ಥಾನಮಂ ।
ತಾವಂ ಸರ್ವಗಿರೀಂದ್ರನಾತನನುಭಾವಂ ಒಣ್ಣಿಸಲ್ಬಕ್ಕುಮೇ ॥೬೨॥

ವ॥ ಅಂತು ಪೈಮೆವೆತ್ತು ಪೂರ್ವಾಪರಸಮುದ್ರಂಗಳಂ ತಾಗಿ ನೀಳ್ದಾ ಮಹಾಗಿರಿಯ ಕಟಕದೊಳೂರ್ಜಟಿಲಿಂಗಗಿರಿಯೆಂಬಾಂಗ್ಲೇಯರಾಳ್ಕೆಯೊ ಳಪ್ಪ ನಗರಮನೆಯ್ದೆವಂದು ಬೇಸಗೆಯೊಳತ್ತಿತ್ತಣಿಂ ಬಂದಲ್ಲಿ ನೆರೆವ ಸಿರಿ ವಂತರ ಸುಖವಸತಿಗೆ ಮನಂದಂದುಮಲ್ಲಲ್ಲಿ ಮುಂಬಗಲಯ್ಕಿತ್ತೆತ್ತಮುಂ ಕವಿದಿರೆ ಮುಗಿಲೊಡ್ಡಿನೊಡನೇಕಾಕಾರಮಾಗಿಯುಂ ನಡುವಗಲಾಗಸವಣಿ ಯ ಕಡುವಿಸಿಲಿಂದಯ್ಕಿಲಳುರ್ಕೆ ತೊಲತೊಲಗುತ್ತಿರಲೊಪ್ಪುವಾಸಿದ ಪಿಂಜ

ರಿಯ ಗೋಪುರಶಿಖರಂಗಳಂತೆ ನಿಜಸ್ವರೂಪದಿಂ ದೆಸೆಯುತ್ತುಂ ಸಂಜೆಯೊ
ಳ್ಮತ್ತಮಯ್ಕಿಲ್ಮುತ್ತಿ ಮುಸುಂಕುತಿರೆ ಸಂಧ್ಯಾರುಣಕಿರಣಪ್ರಸರಣದಿಂ ಮಿಂ
ಚುಗಳೊಡ್ಡಿನಂತೆ ಕಣ್ಗೊಳಿಸುತ್ತುಮಿಪ್ಪ ಸಮುತ್ತುಂಗಶಿಖರಂಗಳಂ ನೋ
ಡಿಯುಂ ನಾಡೆ ಸಂತಸಂಗೊಂಡಲ್ಲಿಂ ಮರಲ್ದು ಕೋಸಲದೇಶದತ್ತಣ್ಗೆ ಬಂದು
ಸರಯೂಪರಿಸರದೊಳಿಪ್ಪಯೋಧ್ಯೆಯಂ ಪೊಕ್ಕಲ್ಲಿ ರಾಮಾಯಣದೊಳ್ಪಿಸ
ಗೊಂಡ ದಶರಥನರಮನೆ ಮೊದಲಾದುವಂ ನೆನೆಯಿಸುವ ಭೂಸನ್ನಿವೇಶಂಗ
ಳನವಲೋಕಿಸಿ ಲೋಕನಾಥನಪ್ಪ ರಘುನಾಥನ ಮೈಮೆಯಂ ಪಿರಿದುಂ
ಮನ್ನಿಸಿಯಲ್ಲಿಂ ತಳರ್ದು ಗಯಾಕ್ಷೇತ್ರಮನೆಯ್ದಿ ವಂದು ಗಜಾಂತೈಶ್ವರ್ಯ
ಶಾಲಿಯಪ್ಪ ಗಯಾವಾಳಿಯಿಂದತ್ಯಾದರದಿಂ ಪುರಸ್ಕೃತನಾಗಿ ಗಯಾಶಿರಂ
ಮೊದಲಪ್ಪ ಪುಣ್ಯಸ್ಥಲಂಗಳಂ ದರ್ಶನಂಗೆಯ್ದಲ್ಲಿ ಪಿತೃದೇವತೆಗಳಂ ಯಥಾ
ವಿಧಿ ತುಷ್ಟಿಗೊಳಿಸಿ ಪಲವು ಮಹಾದಾನಂಗಳಂ ನೂಡಿ ಸುಫಲನುಂ ಪಡೆದು
ಕೃತಕೃತ್ಯನಾಗಿ ಧನ್ಯತೆಯುನಾಂತಲ್ಲಿಂ ಮರಲ್ದು ವಾರಾಣಸೀಮಧುರಾಪುರಿ
ಗಳ ಮಾರ್ಗದಿಂ ಗವಾಲಯಪುರಮನೆಯ್ದಿವಪ್ಪುದುಮಲ್ಲಿಯ ಮಹಾ
ರಾಜನಾವೇಳೆಯೊಳಾಕ್ಷಿಣಿಪುಟ್ಟನಗರದೊಳಿರ್ದುದರಿಂದಾತನಾಜ್ಞೆಯಿನಾಂತ
ಮಹಾದೇವದೀಕ್ಷಿತನೆಂಬಮಾತ್ಯಂ ರಾಜಮರ್ಯಾದಾನುಸಾರದಿಂ ಬಲಪರಿವಾ
ರಂಬೆರಸತ್ಯಾದರದಿಂದಿದಿರ್ಗೊಂಡಾತನಂ ಪೊಳಲಂ ಪೊಗಿಸಿ ಸಮಧಿಕವೈಭ
ವದಿಂ ಮೆರೆವ ಸೌಧಾಂತರಕ್ಕೆ ಬಿಜಯಂಗೆಯಿಸುವಾಗಳ್ ॥೬೨॥

ವೃ॥ ಸುರುಚಿರತೋರಣಾಳಿವಿಲಸದ್ಧ್ವಜಸಂತತಿಯಿಂ ಪಥಂ ಪಥಂ ।
ಪರಿವಡೆದಿಪ್ಪನೇಕವಿಧಮಂಗಳಮಂಡನದಿಂ ಗೃಹಂ ಗೃಹಂ ॥
ನಿರತಿಶಯಪ್ರಮೋದಭರದಿಂದೆ ಜನಂ ಜನಮಾದವೊಪ್ಪಿತಾ ।
ಪುರದೊಳಗಾಮಹೀರಮಣನಾಗಮನೋತ್ಸವದಿಂದದೆಲ್ಲಿಯುಂ ॥೬೪॥

ವ॥ ಅಂದಾಮಹಾಮಂತ್ರೀಶ್ವರಂ ಮಹಾದೇವದೀಕ್ಷಿತಂ ನಿಜಮಹಾ
ರಾಜಂ ತಂತ್ರೀಮುಖದಿಂ ಬೆಸಸಿತ್ತಂದದೊಳಾಸಿಂಹಾಸನಾಧಿಪತಿಗೆ ಪೌರ
ಮುಖ್ಯರ್ವೆರಸಾಸ್ಥಾನಮಂಟಪದೊಳ್ಪಿರಿದಪ್ಪಮನ್ನಣೆಯನೆಸಗವೇಳ್ಕುಮೆಂ
ದು ನೀಡುಂ ಕುತೂಹಲಂಬಡುತ್ತಿಪ್ಪನ್ನೆಗಂ ಮಹೀಶೂರನಗರದಿಂದಾ
ಚಾಮರರಾಜೇಂದ್ರನ ನಾಲ್ಕನೆಯಕುವರಂ ದೇವರಾಜಂ ದೇವನಗರಮಂ ತಳ
ರ್ದನೆಂದು ತಂತ್ರೀವೃತ್ತಾಂತಂ ಬಂದು ಕಿವಿಮುಟ್ಟಲೊಡಂ ॥೬೫॥

ಕಂ|| ಸಿಡಿಲಧಗೆ ತಟ್ಟಿದುದೊ ಮೇ |
ಣಡಹಾಯ್ದುದೊ ಕಾಡುಗಿಚ್ಚು ವಿಷಮೇರಿದುದೋ ||
ನುಡಿಯಲ್ಕರಿದೆನಲಕ್ಕಟ |
ಕಡುದುಗುಡಮನಾಂತು ನೃಪತಿ ಮರವಟ್ಟಿರ್ದಂ ||೬೬||

ವ|| ಇಂತರಸನತಿವಾತ್ಸಲ್ಯಪುತ್ರಶೋಕವೋಹಾವೇಗದಿಂ ಕ್ಷಣಕಾಲಂ ಸ್ತಬ್ಧನಾಗಿರಲಾಬೀಡಿನೊಳಿರ್ದ ಪರಿಜನವೆಲ್ಲಮದಕ್ಕೆ ಕಾರಣಮನರಿಯದೆ ತಮ್ತಮ್ಮ ನಡೆನುಡಿಗಳನಲ್ಲಲ್ಲಿಗೆ ನಿಲಿಸಿ ನೀಡುಂ ಭಯಭ್ರಾಂತಿಗೊಂಡು ಗುಜುಗುಜಿಸುತ್ತಿಪ್ಪಿನಂ ||೬೭||

ಕಂ|| ತರದಿಂದೆ ಜೇತರಿಸಿಕೊಂ |
ಡರಸಂ ಬಿಸುಸುಯ್ದು ಬಾಲಕನ ಲೀಲೆಗಳಂ ||
ಪಿರಿದುಂ ನೆನೆನೆನೆದಳಲುತೆ |
ನಿರವಧಿಬಾಷ್ಪಾಂಬುಪೂರಮುಂ ಪರಿಯಿಸಿದಂ ||೬೮||

ಮತ್ತಂ,

ಕಂ|| ಎನಗೆಲೆಕಂದಾ ನಿನ್ನಾ |
ನನಾಬ್ಜಮಂ ತೋೞದೇಕೆ ಸಾರ್ದೈ ಬಲಶಾ ||
ನನನರಮನೆಯಂ ಪೇಳಾ |
ನಿನಗೂಣೆಯಮೇನದಾದುದೆಮ್ಮರಮನೆಯೊಳ್ ||೬೯||

ವ|| ಇಂತು ಕಡುದುಗುಡಂದಳೆದು ಪಳವಿಸುವಿಳಿಯಾಣ್ಮನಂ ಮಹಾಮಾತ್ಯನಪ್ಪ ಶೇಷಾದ್ರಿಯಯ್ಯರುಂ ಸನ್ನಿಧಿಸಚಿವನಪ್ಪ ನರಸಿಂಹಾರ್ಯನುಮುತ್ಸವಭಂಗದಿಂ ಭಗ್ನೋತ್ಸಾಹನಾದಲ್ಲಿಯ ಮಹಾಮಾತ್ಯನುಂ ತತ್ಕಾಲಸಮುಚಿತವಚನಂಗಳಿಂದೆಂತಾನುಂ ಸಂತೈಸುವುದುಮಾಭೂಕಾಂತನತಿತ್ವರೆಯೊಳಲ್ಲಿಂ ಪೊರಮಟ್ಟಲ್ಲಿಯುಂ ನಿಲ್ಲದೆ ರಾಜಧಾನಿಯುಂ ಸೇರ್ದು ಮೂಕೀಭೂತವಂದಿಲೋಕಮುಮನುದ್ಯತಮಂಗಳಾತೋದ್ಯಮುಂ ವಿರಮಿತಘಂಟಾವಿರಾವಮುಂ ದೂರೀಕೃತಚತ್ರಚಾಮರಾದಿರಾಜೋಪಚಾರಮುಂ ಚಿತ್ರಪ್ರತಿಮಾಯಿತದೌವಾರಿಕಪ್ರಕರಮುಮೆನಿಸಿದರಮನೆಯಂ ಪೊಕ್ಕಲ್ಲಲ್ಲಿ ಮರೆಮರೆಯೊಳಿರಡುಂ ಕರದಿಂ ಮೊಗಮನಳುರ್ದು ನಿಂದಿಪ್ಪ ತೊಳ್ತುಗಳ ಗದ್ಗದರೋದನಧ್ವನಿಯಿಂ ತೀವಿದ ರಾಣಿವಾಸಕ್ಕೆ ನಡೆತಂದತಡಮಂದಾರಾಜ

ದಂಪತಿಗಳಾದೇವರಾಜನ ಬಾಲಲೀಲೆಗಳಂ ನೆನೆನೆನೆದಗ್ಗಳಿಸಿದಳಲಿಂ ಗೆಯ್ದಳ್ಕೆ
ಯಿನಿತನಿತೆಂದು ಪೇಳಲಸದಳಮೆಂದೆನಿಸಿರ್ದಿನಮಾಮಹೀಶ್ವರನ ಜನನಿ
ಸೀತಾವಿಳಾಸದ ದೇವಾಜಮ್ಮಣ್ಣಿಯವರಿರ್ವರುಮಂ ಪಲವುಂ ಸಮಾಧಾನೋ
ಕ್ತಿಗಳಿಂ ಸಂತೈಸಲರಸನವಂ ದಿನಕ್ರಮದಿಂದಾಶೋಕಮನೆಂತಾನುಂ ಮರೆದು
ರಾಜ್ಯಪರಿಪಾಲನೈಕ ನಿರತನಾಗಿರ್ದಿನಂ ಬಳಿಕಂ ಕೆಲವಾನುಂ ದಿನದೊಳೆ ॥

ಕಂ॥ ಸೀತಾವಿಲಾಸದಾನೃಪ ।
ಮಾತೃಕೆ ಸಮಬುದ್ಧಿ ಶಾಂತೆ ವಿದ್ಯಾವತಿ ಮೇಣ್ ॥
ಭೂತದಯಾಶಾಲಿನಿ ವಿ ।
ಜ್ಞಾತಾಮಲತತ್ವೆ ಮುಕ್ತಿಸದಮಂ ಪಡೆದಳ್ ॥೭೧॥

ವ॥ ಇಂತು ನಿಜವಾತೆ ಪೊಂದುವುದುಮಾಮನುಜೇಂದ್ರನಳಲಮೇ
ಗಳಲೊದವುತಿರ್ದಿನಂ ನೀಡುಮುಮ್ಮಳಿಸುತ್ತುಂ ಮಂತ್ರಿಸಚಿವಾದಿಗಳಿಂದೆಂ
ತಾನುಂ ಸಮಾಶ್ವಾಸಿತನಾಗಿ ಪರಮಭಕ್ತಿಯಿಂದೆಯುಂ ನಿರವಧಿಕಸಂಪತ್ತಿ
ಯಿಂದೆಯುಮಾಕೆಗೌರ್ಧ್ವದೈಹಿಕಮಂ ನಿರ್ವರ್ತಿಸಿದ ಸಮನಂತರದೊಳಾಮ
ಹಾರಾಜ್ಞಿ ಚರಮಕಾಲದೊಳಾಜ್ಞಾಪಿಸಿದಂತಾಕೆಯ ಪೆಸರಿಂ ರಾಜಧಾನಿ
ಯೊಳೊಂದು ಧರ್ಮಶಾಲೆಯುಂ ಪ್ರತಿಷ್ಠಿಸಿ ವೃತ್ತಿಕ್ಷೇತ್ರಸಹಿತಮಪ್ಪಗ್ರಹಾ
ರಮುಂ ಭೂಸುರಗ್ಗಿತ್ತು ಕೃತಾರ್ಥತೆವೆತ್ತು ನಿಗ್ರಹಾನುಗ್ರಹಸಮರ್ಥನಾಗಿ
ರಾಜ್ಯಂಗೆಯ್ಯುತಿರ್ದಿನೆಗಮಾತನರಸುತನಕ್ಕೆ ಮೆಚ್ಚಿ ಚಕ್ರವರ್ತಿನಿಯಪ್ಪ
ವಿಕ್ಟೋರಿಯಾಮಹಾರಾಜ್ಞಿ ನಿರುಪಮಸಂಪ್ರೀತಿಯಿಂ ಮಹಾಸೇನಾನಿಯೆಂ
ಬ ಬಿರುದಂ ಸನ್ಮಾನಪೂರ್ವಕಂ ದಯೆಗೆಯ್ಯಲೊಡಂ ॥೭೦॥

ಕಂ॥ ನೆಲನೆಲ್ಲಂ ಪೊಗಳುತ್ತಿರ ।
ಲೊಲವಿಂದಾಬಿರುದನಾಂತು ಸುಜನೋತ್ತಂಸಂ ॥
ಸಲಪುತ್ತಿರ್ದಂ ನಿಜಭೂ ।
ವಲಯಮನಾಯದುಕುಲಾವನೀಪತಿಹಂಸಂ ॥೭೫॥

ವ॥ ಇಂತಿರ್ದಿನಂ ಮಹೋದಯಪರ್ವಸಮಯಂ ಸಮನಿಸಲುರ್ವೀ
ಸುಪರ್ವೇಂದ್ರನವಂ ಕುಟುಂಬಪರಿವಾರಂಬೆರಸತಿಮಾತ್ರಪಾವನಪ್ರಯಾಗ
ಕ್ಷೇತ್ರಯಾತ್ರೆಯನಧಿಕರಿಸಿ ರಾಜಧಾನಿಯಂ ಪೊರಮಟ್ಟು ಪೊಗೆವಂಡಿಯ
ನೇರಿ ಪಯಣಂಬೋಗುತಿರ್ಪ್ಪಾಗಳರಸಿಗೆರೆಯೆಂಬ ಗಡಿಯೆಡೆಯೊಳ್ನಿಜಾಜ್ಞೆ

ಯಿಂ ಗೋಧನಾಧ್ಯಕ್ಷಂ ತಂದು ನಿಲಿಸಿರ್ದ ದೃಷ್ಟಿಗೋಚರಮಪ್ಪ ನಿಜಧರ್ಮ
ಸಮಷ್ಟಿಯೆಂಬಂತೆ ವನಾಂತರನಿವಾಸದಿಂದುತ್ಕಟಪ್ಪಶರೀರಪುಷ್ಟಿಯನಾಂತು
ಕಣ್ಗೊಳಿಸುವ ತುರುಗಳೊಂದೊಂದುಂ ಬಣ್ಣದ ಪಲವುಂ ಬಿಂದಂಗಳಂ ನಿ
ಟ್ಟಿಸಿ ನೆರೆ ಸಂತಸಂಬಟ್ಟು ಮುಂಬಯಿನಗರಮಾರ್ಗದಿಂದಾಮಹಾಕ್ಷೇತ್ರ
ಮನೆಯ್ದಿವರ್ಪುದುಂ ॥೭೪॥

ಕಂ॥ ತಳೆದುರುಭಕ್ತಿಯನೂರೂ ।
ರ್ಗಳಿನಾಗಳ್ಬಂದು ನೆರೆದಸಂಖ್ಯಾತಜನಂ ॥
ಗಳಿನಾಮಹಾನಗರಮಿ ।
ಟ್ಟಳಮಾಗಿರ್ದತ್ತು ಕಡಲವೋಲ್ಮೊರೆಯುತ್ತುಂ ॥೭೫॥

ವ॥ ಅಂತು ಲಕ್ಷ್ಮೀಪಲಕ್ಷ್ಮತೀರ್ಥಯಾತ್ರಾರ್ಥಿಗಳಿಂ ಮುಳ್ಳೊಣ್ಮನೆ
ಕೊಳ್ಳದಂತಿಡಿಕಿರಿದಾಮಹಾನಗರದೊಳಾನಾಡೆರೆಯಂಬೀಡಂಬಿಟ್ಟಾಪರ್ವದಹ
ರ್ಮುಖದೊಳ್ಮುಟುಂಬಪರಿವಾರಂಬೆರಸು ಪುಣ್ಯತಮತ್ರಿವೇಣೀಸಂಗಮಸ್ಥಾ
ನಮಂ ಸಾರ್ತರಲೊಡಂ ॥೭೬॥

ವೃ॥ ನಿಜಧ್ಯಾನಾಧೀನಪ್ರವಿಮಲಪರಬ್ರಹ್ಮಮತಮೋ ।
ರಜಸ್ಸಂಗಂ ಶಬ್ದಾದ್ಯಖಿಲವಿಷಯತ್ಯಾಜಿತಮನಂ ॥
ಪ್ರಜೇಶಾದಿಸ್ತಂಬಾವಧಿಸಮಧಿ ಸಾಂಸಾರಿಕಮಹಾ ।
ರುಜಾದೂರಂ ಬಂದತ್ತಿದಿರೊಳವಧೂತೌಘಮನಘಂ ॥೭೭॥

ಮತ್ತಮಾಯೆಡೆಯೊಳ್,

ವೃ॥ ಸಮಧಿಗತಮಹಾವೈರಾಗ್ಯರಾಜ್ಯಾಧಿಕಾರಂ ।
ಶಮದಮಮುಖಸೈನ್ಯೋದ್ಧತದುಷ್ಟಾರಿಷಟ್ಕಂ ॥
ಸಮಧಿಕಪರತತ್ವಜ್ಞಾನಸಂಪತ್ತಿ ತೋರ್ಪ ।
ತ್ತಮಿತಮಹಿಮಶೀಲಂ ರಾಜಯೋಗೀಂದ್ರಜಾಲಂ ॥೭೮॥

ವ॥ ಮತ್ತಮನೇಕಲಕ್ಷಜನಸಮ್ಮರ್ದಂಬೊರೆದಾಯಿಂಬಿನೊಳ್ ॥೭೯॥

ಕಂ॥ ಜಯ ಗಂಗೇ ಜಯ ಜಾಹ್ನವಿ ।
ಜಯ ಭಾಗೀರಥಿಯೆನಿಪ್ಪ ಶಬ್ದಮದೆಲ್ಲಿ ॥
ಲ್ಲಿಯುಮಲ್ಲಿ ನೆರೆದ ಜನಸಮು ।
ದಯದೊಳ್ಕೆರೆ ಕೇಳ್ದುದಲ್ಲದಿನ್ನೊಂದಿಲ್ಲಂ ॥೮೦॥

ವ॥ ಅಂತು ಪುಣ್ಯತಮಮೆನಿಸಿದಾತಾಣದೊಳಾಕ್ಷ್ಮಾಣಿಪತಿಯನೇಕ ಮಹನೀಯರ ದರ್ಶನಮುಂ ಕಯ್ಕೊಂಡು ನೀಡುಂ ಭಕ್ತಿಯಿನಂಗನಾಜನಮು ರ್ಜಿಸಿದ ಭದ್ರಾವಹರುಚಿರಹರಿದ್ರಾಕುಂಕುಮಚಂದನಪಟವಾಸಪತ್ರಪುಷ್ಪಂ ಗಳಿಂದಲಂಕೃತಾಂಗಿಯಾಗಿ ಕಣ್ಗೊಳಿಸುತಿರ್ದಾಸುಮನಸ್ತರಂಗಿಣಿಯ ಸಕಲ ದುರಿತಾಪಹರಮಪ್ಪ ಮಹಾಪ್ರವಾಹದೊಳ್ಸಕುಟುಂಬನಾಗಿ ನಿಯಮದಿಂ ಪ್ರಯಾಗವಾಳಿ ಪುರೋಹಿತನಾಗಿರೆ ಸಂಕಲ್ಪಂಗೆಯ್ದು ಯಥಾವಿಧಿ ಸಮರ್ಚ ನಾಪೂರ್ವಕಮವಗಾಹನಂಗೆಯ್ದು ಪೂತಾತ್ಮನಾಗಿ ನಿಜವಿಭವಾನುಸಾರದಿಂ ಭೂಸುರರ್ಗನೇಕಮಹಾದಾನಂಗಳನೆಸಗಿ ಧನ್ಯತೆವೆತ್ತಮುಂದಾನಂದಮುಂ ಪಡೆ ದಲ್ಲಿಂ ಪೊರಮಟ್ಟು ವಾರಾಣಸಿಯುಂ ಸೇರ್ದು ಭಕ್ತಿಭರದಿಂದಾಮಹಾಕ್ಷೇತ್ರ ದೊಳ್ಕರ್ತವ್ಯಧರ್ಮಂಗಳಂ ನಿರ್ವರ್ತಿಸಿ ಧನ್ಯಾತ್ಮನಾಗಿ ॥೮೧॥

ಕಂ॥ ಪರಮಾದರದೆ ಕುಟುಂಬಂ |
ಬೆರಸೀಪರಿ ತೀರ್ಥಯಾತ್ರೆಯಂ ಗೆಯ್ದಲ್ಲಿಂ ॥
ಪೊರಮಟ್ಟಿಸೆವ ಮಹೀಸುರ |
ಪುರನುಂ ಸೇರ್ದಿಳೆಯನಾಳುತಿರ್ದಂ ಸುಖದಿಂ ॥೮೨॥

ಇದು ಜಗದ್ವಿದಿತ ಶ್ರೀಕಾಶ್ಯಪನಂತನು ಕ್ಷಾತ್ರಮಣಿ ಶ್ರೀಗರಳಪುರೀಶಶಾಸ್ತ್ರಿ ತನೂಭವನುಂ ಶ್ರೀಮದಖಂಡ ಮಹೀಮಂಡಲ ಮಂಡನಾಯಮಾನ ಕರ್ಣಾ ಟಜನಪದ ಲಕ್ಷ್ಮೀವಿಹಾರೈಕರಂಗಮಹೀಭೃತ ಮಹೀಶ್ವರರಾಜಧಾನೀ ರತ್ನಸಿಂಹಾಸನಾಧೀಶ್ವರ ಯದುಕುಲಪಯೋನಿಧಿ ಪೂರ್ಣಚಂದ್ರಾಯಮಾಣ ಶ್ರೀಚಾಮರಾಜೇಂದ್ರ ತನಯ ಶ್ರೀಕೃಷ್ಣರಾಜಮಹಾರಾಜ ಸಂಸ್ಕೃತ ಕರ್ಣಾಟೋಭಯಪ್ರವಚನೋಪಾಧ್ಯಾಯನುಂ ಮಹಾವಿದ್ವ ತ್ಪದಲಾಂಛನನುಂ ತನ್ಮಹಾರಾಜ ಕೃಷ್ಣರಾಜವಿತೀರ್ಣ ಕವಿತಿಲಕ ಬಿರುದಾಂಕಿತನುಮಪ್ಪ ಸೋಸಲೆ ಅಯ್ಯಶಾಸ್ತ್ರಿಯಿಂ ವಿರಚಿತಮಾದ ಮಹೀಶೂರ ಮಹಾರಾಜ ಚರಿತ್ರ ಮೆಂಬ ಕರ್ಣಾಟ ಚಂಪೂ ಮಹಾಕಾವ್ಯದೊಳ್ ಅಷ್ಟಮಾಶ್ವಾಸಂ ಸಂಪೂರ್ಣಂ.

ನವಮಾಶ್ವಾಸಂ.

ಕಂ || ನೆಲನಂ ಸುತ್ತುಂ ಪತ್ತಂ |
ಗುಲಮಾವರಿಸಿರ್ಪ್ಪ ಸಾಸಿರಡಿಯಂ ಸಾಸಿ ||
ದ್ದಲೆಯಂ ಸಾಸಿರ್ಗ್ಗಣ್ಣಂ |
ಸಲಪುಗೆ ಪುರುಷಂ ಪುರಾಣನೆಮ್ಮವನಿಪನಂ ||೧||

ಕಂ || ಅಲ್ಲಿಂ ಮುಂದಾಧರಣೀ |
ವಲ್ಲಭನೆಣೆಯಿಲ್ಲದರಸುತನದೇಳ್ಗೆಯುಮಂ ||
ಸಲ್ಲಲಿತಗುಣಂಗಳುಮಂ |
ಸೊಲ್ಲಿಸಲರಿದೇರುತಿರ್ದ್ದ ನೃಪತೇಜಮುಮಂ ||೨||

ಕಂ || ಮೆಚ್ಚದರಿಲ್ಲವನಿಯೊಳಾ |
ಸಚ್ಚರಿತನ ರಾಜ್ಯಭಾರಮಂ ನಡೆಯಂ ಕೇ ||
ಳ್ದಚ್ಚರಿಗೊಳ್ಳದರಿಲ್ಲಂ |
ನಿಚ್ಚಂ ಗುಣಗಣಮನೊಲ್ದು ಪೊಗಳದರಿಲ್ಲಂ ||೩||

ಮತ್ತಂ,

ಕಂ || ಆನರಪಂ ಸ್ವರಭೇದ |
ಜ್ಞಾನಂ ಮಿಗೆ ರಾಗಮನಿತುಮಂ ಮೃದುಕಂಠ ||
ಸ್ವಾನದೊಳಾಲಾಪಿಸುತುಂ |
ಗಾನಕಲಾನಿಪುಣನೆಂದು ಪೆಸರ್ವಡೆದಿರ್ದ್ದಂ ||೪||

ಮತ್ತಂ,

ವೃ|| ವಿಳಸದ್ಗ್ರಾಮವಿಶೇಷಮೂರ್ಛನೆಗಳಂದಂದಾಳಿ ತಾಳಕ್ರಮಂ |
ಕೆಳೆಗೊಂಡಿರ್ಪ್ಪಿನಮುಣ್ಮೆ ರಾಗರಸಭಾವಂ ಕಾಲಭೇದಂ ಮನಂ ||
ಗೊಳೆ ತಂತ್ರೀಶ್ರುತಿಯುಂ ಗಳಸ್ವನಮುಮಂತೊಂದಾಗೆ ಪಾಡುತ್ತೆ ಪು |
ಷ್ಕಳಸಂಗೀತಕಲಾಧುರಿ ಣನೆನಿಸಿರ್ದ್ದಂ ತನ್ಮಹೀವಲ್ಲಭಂ ||೫||

ವ॥ ಅಂತುಮಲ್ಲದೆ,

ಕಂ॥ ಕಲಮಧುರಸ್ವನಮುಣ್ಮ ।
ಲ್ತಲೆದೂಗಲ್ವೆ ಮೃಣಿಕಾಳಿ ನಾನಾವಿಧಮಂ ॥
ಜುಲತಂತ್ರೀವಾದ್ಯಂಗಳ ।
ನೊಲವಿಂದಾರಾಜಮೌಳಿ ಬಾಜಿಸುತಿರ್ದಂ ॥೬॥

ವ॥ ಅಂತುಮಲ್ಲದೆ,

ವೃ॥ ಸಮಸಂದಾಹತಕಂಪಿತಸ್ಫುರಿತಕಪ್ರತ್ಯಾಹತಾಂದೋಳಿತಾ ।
ದಿಮತತ್ತದ್ಗಮಕಂಗಳುಂ ಪ್ರವಿಲಸದ್ವರ್ಣಂಗಳುಂ ಮಂದ್ರಮ ॥
ಧ್ಯಮತಾರಂಗಳುನೊಪ್ಪೆ ಬಾಜಿಸೆ ನೃಪಂ ವೀಣಾದಿವಾದ್ಯಂಗಳಂ ।
ಸಮೆದಂತಿರ್ದುವು ಚಿತ್ರದಲ್ಲಿ ಪಶುವುಂ ಮರ್ತ್ಯರ್ಕ್ಕಳಾ ಮಾತದೇಂ ॥೭॥

ಮತ್ತಂ,

ಕಂ॥ ಲಕ್ಷಣಲಕ್ಷಿತಮಂ ಕ್ಷಿತಿ ।
ರಕ್ಷಕನಸದೃಕ್ಷಗಾನಮಂ ಕೇಳ್ದ ಜನಂ ॥
ದಾಕ್ಷೀಕಕ್ಷುಮಾಕ್ಷಿಕಂಗಳ ।
ನಕ್ಷಿಯಿನೀಕ್ಷಿಸದುಪೇಕ್ಷಿಸಿದುದಾಕ್ಷಣದೊಳ್ ॥೮॥

ಆಗಳ್,

ಕಂ॥ ಪ್ರಸಾದಿತರಹ ಗಾಯಕಪುಂ ।
ಗವರುಂ ವೀಣಾದಿವಾದ್ಯತತ್ವಜ್ಞರುಮಾ ॥
ಅವನಿಪನಿಂ ನಿಜನಿಜಗೌ ।
ರವಕ್ಕೆ ತಕ್ಕನಿತು ಮೆಚ್ಚುವಡೆಯದರಿಲ್ಲಂ ॥೯॥

ವ॥ ಇಂತಾವಾರಾಯನಸಂಖ್ಯೇಯಗಾಯಕವಾದಕಸಂಖ್ಯಾವಂತರಂ ಪಿರಿದುಂ ಪ್ರೋತ್ಸಾಹಂಗೊಳಿಸಿದನಲ್ಲದೆ ಕೆಲಕೆಲವೋದುಸಾಲೆಗಳೊಳ್ಸಂಗೀತವಿದ್ಯಾಭ್ಯಾಸಮುಂ ನಡೆವಂತು ಕಟ್ಟಲೆಯುಂ ಮಾಡಲ್ಕೆ ॥೧೦॥

ಕಂ॥ ಸಂಗಡಿಸಿದ ಬಡತನದೆ ಕು ।
ನುಂಗಿ ಕರಂ ಪೆಸರಿನೊಂದರಿಂದುಳಿದಿರ್ದಾ ॥
ಸಂಗೀತಂ ದಿನದಿನಕಂ ।
ಪೊಂಗಿ ಪೊದಳ್ದೇಳ್ಗೆಪಡೆದುದೀಧಾರಿಣಿಯೊಳ್ ॥೧೧॥

ವ॥ ಇಂತಿಪ್ಪರ್ವಾಗಳಾಯಿಳಾಪತಿ ಬರಿಸಂಬರಿಸಂ ರಾಜಧಾನಿಯೊಳ್ನ
ಡೆವಂತುಪರಾಜಧಾನಿಯೊಳಯಂ ನಡೆವಶ್ವದ್ಯೂತಕ್ಕೆ ಮಿತ್ರಮಂಡಲಿಯಿಂದೊ
ಡಗೂಡಿ ತಳರ್ದು ಪಲವ್ರಂದಿಗ್ದೇಶಂಗಳಿಂ ಬಂದು ನೆರೆದಿರ್ದ ಮನ್ನೆಯ
ಜೂಜಿಂಗೆ ಸನ್ನಣಂಗೊಳಿಸಿ ನಿಲಿಸಿರ್ದ ವಾರುವಂಗಳಿಂ ಕಣ್ಗೊಳಿಸುವ
ಜೂದಿನ ದಿಣ್ಣೆಯಂ ಸಾರ್ತರಲೊಡಂ ॥೧೦॥

ಕಂ॥ ಕಡಿಯಣಮನಾಂತು ಸಾದಿಗ |
ಳಡಿಗಡಿಗೆಳೆಯುತ್ತುಮಿರ್ದೊಡಂ ಕೆನೆಯುತೆ ಮು ॥
ನ್ನಡಿಯಿಂ ಬೆರಂಟುತಿಳೆಯಂ |
ತೊಡಗುತ್ತಿರ್ದುವು ಹಯಂಗಳಿರದವು ಮುಂಜಲ್ ॥೧೫॥

ವ॥ ಅಂತಪ್ಪ ಜೂದುಂದಿಣ್ಣೆಯ ಬಳಸಿನ ನಿಲ್ಗಡೆಯೊಳ್ನಿಂದಿರ್ದ
ಪಲವ್ರಂ ಜೂದಿನ ಕುದುರೆಗಳಂ ನಡೆನೋಡುತ್ತಿವರೊಳಗಿದೆ ಗೆಲ್ವುದದೆ
ಗೆಲ್ವುದೆಂದಲ್ಲಲ್ಲಿ ನೋಟಕರ ಕೂಟಂಗಳೊಳೊಡ್ಡಿದ ಧನರಾಶಿಗಳ ಪಂತ
ಪಾಡು ಮೆಯ್ವೇರುತ್ತಿರ್ಪ್ಪಿನಮದ್ದಿಕಂ ಬೆಸವೇಳ್ದತಡವಾಕುದುರೆಗಳೊ
ರ್ಮ್ಮೊದಲೆ ಮುಂಜೆದುವದೆಂತೆನೆ ॥೧೪॥

ಕಂ॥ ಶರಧಿಯುಮುಂ ಲಂಘಿಪುವೆನೆ |
ಹರಿತ್ತಟಂಗಳುಮನೆಯ್ದಿ ಮುಟ್ಟುವುವೆನಲಂ ॥
ಬರಮುಮನತಿಕ್ರಮಿಪುವೆನೆ |
ಪರಸ್ಪರಜಯೇಚ್ಛೆಯಿಂ ಪರಿದುವಾಹರಿಗಳ್ ॥೧೫॥

ಮತ್ತಂ,

ಕಂ॥ ಅವಲೋಕಿಸುತ್ತುಮಾವಾ |
ರುವಂಗಳೋಟಮನೆ ಸುತ್ತುಮಿರ್ದ ಜನಂಗಳ್ ॥
ಭುವನದೊಳಾಶುಗನಾಮಂ |
ಪವನಶರಂಗಳ್ಗೆ ರೂಢಮೆಂದೆನುತಿರ್ದರ್ ॥೧೬॥

ವ॥ ಇಂತು ನಿಟ್ಟೋಟದಾಟೋಪದಿಂ ಗಗನದೊಳೆ ಪಾರಿಪೋಪಂತೆ
ತೋರುತಿರ್ದಾಫೆೀಟಕಂಗಳನಡರ್ದು ಪಲವಗೆಯುಡಿಗೆಯಿಂದೊಪ್ಪುವ
ಫೆೀಳಾಯಿಲಕ್ಕರ್ಗಳೊಳಂತಪ್ಪನ ವಾರುವಮೆ ಗೆಲ್ಲಂಬಡೆವ್ರದೆಂದೊಡನಿ
ಪ್ಪರ್ವಾಂಗ್ಲೇಯಭಾರತೇಯಮಹಾಧಿಕಾರಿಗಳೊಡನಾಳಾಳಾಂ ಪಂತಂ

ಗಟ್ಟಿದ ಬಳಿಯಮಾತುರಂಗಮೆ ಗೆಲ್ಲಂಗೊಳ್ವುದುಮಲ್ಲಿ ನೆರೆದಿರ್ದಧಿಕಾರಿ
ಮುಖ್ಯರ್ಮುನ್ನಂ ಪಲರ್ಮೆ ಯಿಾತಂ ನಿರವಿಸಿದರ್ ವಾರುವಂಗಳೆ ತಪ್ಪದೆ
ಗೆಲ್ಲಂಗೊಂಡುದರಿಂದೀವುಹಾರಾಜನೆ ಪಿರಿದುಮಶ್ವಹೃದಯಜ್ಞನೆಂದಮುಂದ
ಸರ್ವೋದದಿಂದಭಿನಂದಿಸಲಾವುಹೀಂದ್ರನುಮವರೆಲ್ಲರುಮಂ ನೀಡುಂ ಪತಿಕ
ರಿಸಿ ಪರಿಜನಂಬೆರಸಲ್ಲಿಂ ಮರಲ್ದು ರಾಜಧಾನಿಯಂ ಸೇರ್ದು ॥೧೩॥

ಕಂ॥ ಇಳೆಯೆಲ್ಲಮಿವಂಗೆಣೆವ |
ಪ್ಪಿಳೆಯಾಣ್ಮರದಾರುಮಿಲ್ಲಮೆನುತಿರೆ ಸುಖದಿಂ ॥
ದಿಳೆಯುಂ ಪಾಲಿಸುತಿರಲಾ |
ಪೊಳಲೊಳ್ಪೋರಿದುವು ಪಲವುಮುತ್ಪಾತಂಗಳ್ ॥೧೪॥

ಕಂ॥ ಕೆಡೆದುದು ನೃಪಸದನದ ಮೇ |
ಗಡೆಯಿಂ ಪೊಂಗಳಸಮಿರುಳಿರುಳ್ಪೌಧದಮುಂ ॥
ಗಡೆಯಳುತಿರ್ದುವು ನಾಯ್ಗ |
ಳ್ಕಡೆವಗಲೊಳ್ಳೂಮಕೇತು ತೋರ್ದುದು ಪಡುವಲ್ ॥೧೫॥

ವ॥ ಇಂತು ಕಾಣಿಸುತಿರ್ದುತ್ಪಾತಂಗಳಂ ನೋಡಿ ಪೌರಜನಮಿಾ
ನಾಡಿಂಗಾವುದೊ ಕೇಡು ಸಮನಿಸುಗುಮೆಂದು ನೀಡುಂ ಪೆಳರ್ಕ್ಕೆಗೊಂಡಿ
ಪ್ಪಿನಮುವನೀಪನವನೀಪರಿಯುತ್ಪಾತಸಂಪಾತಂ ಜೀವಿತಸಂಶಯಮೆನುತ್ಪಾ
ದಿಸುವುದೆಂದರಿದಿನ್ನೆಂತಿಪ್ಪುದೊ ಕಾಲಗತಿಯೆಂದೆಣಿಸಿ ನಿಜಮನೋಗತಮು
ನಾರ್ಗಂ ತೋರ್ಗೊಳಿಸದೆ ಯುವರಾಜಂ ಬಾಲನಾದುದರಿಂ ತನ್ನಿಂ ಬಳ
ಯಂ ರಾಜ್ಯಮೇನುಂ ಬೇಳಂಬವಿಲ್ಲದೆ ಸುರಕ್ಷಿತಮಾಗಿಪ್ಪಂತೊಡರ್ಚುವ
ಕಜ್ಜದ ಭಾರಮಂ ಸುಹೃತ್ತಮನಪ್ಪ ಚಕ್ರವರ್ತಿನೀಪ್ರತಿನಿಧಿಯಧೀನಮುಂ
ಮಾಡಲ್ಕೆ ಕುಟುಂಬಪರಿವಾರದಿಂದೊಡಗೂಡಿ ಕಾಳೀಘಟ್ಟನಗರಕ್ಕೆ ಪಯ
ಣಂಗೆಯ್ಯಲೆವೇಳ್ಕುಮೆಂದು ತರಿಸಂದು ಕುಲದೇವತಾಸಂದರ್ಶನಾರ್ಥದಿಂ
ಪೊಳಲೋವರಿಯೊಳಿಪ್ಪ ಮಹಾಬಲಾದ್ರಿಯಂ ಸಾರ್ದಖಂಡಿತಭಕ್ತಿಯಿಂ
ಶ್ರೀಚಾಮುಂಡಾಂಬೆಯುಂ ಕಂಡು ಬಲವಂದು ಪೂಜಿಸಿ ನಮಸ್ಕರಿಸಿ ತಚ್ಚ
ರಣಪ್ರಸಾದಮುಂ ಸ್ವೀಕರಿಸಿ ಮಗುಳ್ದಲ್ಲಿಂ ಕಿರಿದುದೂರಂ ತಳರ್ದವಶಕನ
ಮೊಂದು ಮನಮನುಡಲೆಯೆ ಪಿಂದಿರುಂಗಿ ಮತ್ತವಾಪರದೇವತೆಯ ಸನ್ನಿ
ಧಿಯಂ ಸಾರ್ದು ಬದ್ಧಾಂಜಲಿಪುಟನಾಗಿ ॥೧೦॥

ಕಂ ॥ ಇನ್ನಪ್ಪುದೊ ಮೇಣಾಗದೊ ।
ನಿನ್ನಡಿದಾವರೆಯ ಕಾಣ್ಕೆಯದರಿಂದೀಗಳ್ ॥
ನಿನ್ನಡಿಯೊಳಿಪ್ಪಿ ಸಿರ್ದಪೆ ।
ನೆನ್ನ ಕುಟುಂಬದ ಸಮಸ್ತರಕ್ಷಣಭರಮಂ ॥೨೧॥

ವ॥ ಎಂದು ಸಂಪ್ರಾರ್ಥಿಸಿ ಮತ್ತಂಮತ್ತಂ ತುಳಿಲ್ಗೆಯ್ದು ಮಗುಳ್ದು ಸೌಧಮಂ ಪ್ರಗುತಂದ ಸಮನಂತರದೊಳೀ ಕುಟುಂಬಪರಿವಾರಂಬೆರಸು ರಾಜಧಾನಿಯುಂ ಪೊರಮಟ್ಟು ಪೊಗೆವಂಡಿಯ ಮಾರ್ಗದಿಂ ಪಯಣಂಬೋಗಿ ಕಾಳೀಘಟ್ಟನಗರಿಯನೆಯ್ದಿವಂದು ॥೨೦॥

ಕಂ ॥ ಏಕೈಧಮೈತ್ರಿಯಿಂದಂ ।
ಲೋಕಸ್ತುತರಾಜಕೀಯಮರ್ಯಾದೆಗಳಂ ॥
ಸ್ವೀಕರಿಸಿದನೊಲ್ದಾಧರ ।
ಣೀಕಾಂತಂ ಚಕ್ರವರ್ತಿನೀಪ್ರತಿನಿಧಿಯಾ ॥೨೩॥

ವೆ॥ ಬಳಿಕಾನುಹಾರಾಜಂ ನಿಜನಿವಾಸಾರ್ಥದಿಂದಣಿಗೆಯ್ದಿರ್ದುರುತರಪ್ರಾಸಾದದೊಳ್ಪೀಡಂ ಬಿಟ್ಟು ರಾಜಮರ್ಯಾದೆಯಿಂದಾಗ್ಲೀಯಸರ್ವಾಧಿಕಾರಿಯುಂ ಕಂಡು ಪರಸ್ಪರ ಕುಶಲಪ್ರಶ್ನೆ ಬಳಿದ ಬಳಿಯುಂ ಮನೋಗತಜಿಂತೆಯುಂ ತೋರದೆ ಮುಂ ತನ್ನ ರಾಜ್ಯಭಾರಮುಂ ಕುಟುಂಬಪರಿವಾರಮುಂ ನಿರಾತಂಕಮಾಗಿರ್ಪಂತು ಕೆಲವಾನುಂ ರಾಜಕೀಯನಿಬಂಧನೆಗಳನಾತನಮು ಖದಿಂ ನೆಲೆಗೊಳಿಸಿ ನಿರಾಕುಲನಾಗಿ ಮನೋವಿನೋದಂ ಮಿಗಲಾನಗರದೊಳ್ಪರ್ಶನೀಯಂಗಳಪ್ಪ ಸುರತರಂಗಿಣೀತೀರಾದಿಪ್ರದೇಶಂಗಳೊಳ್ಸಂಚರಿಸಿ ತನುವಿನೊಳನಿಸನಾರೋಗ್ಯಮುಣ್ಮದೊಡಮದಂ ಲೆಕ್ಕಿಸದೆ ತಾತ್ಕಾಲಿಕಮಪ್ಪ ತೃತೀಯಕುವಾರಿಯ ಜನ್ಮದಿನೋತ್ಸವಮನೆಂತಾನುಂ ಬಳೆಯಿಸಿದ ಸಮನಂತರಮನಾರೋಗ್ಯಂ ವೆಗ್ಗಳಿಸೆ ॥೨೪॥

ವೃ॥ ಈದೇಹಂ ನಿಲ್ಪುದಿನ್ನೆಂದರಿದು ನಿಜಕುಲೋಪಾಸ್ಯಚಾಮುಂಡಿಕಾಂಬಾ ।
ಪಾದಾಂಭೋಜಾತಮಂ ಜಾನಿಸಿ ನಿಜಮನದೊಳ್ಶಾಂತಿಯಿಂ ದಾಂತಿಯಿಂದಂ॥
ಭೇದಾತೀತಾತ್ಮವಿಜ್ಞಾನದಿನುರುಧೃತಿಯಿಂ ಶ್ವಾಸಸಂರೋಧನಂಗೆ ।
ಯ್ದಾದೀವ್ಯೋಗೀಕ್ಷ್ಮಲಕ್ಷ್ಮೀದಯಿತನೆನಿಸಿದಂ ಚಾಮರಾಜಕ್ಷಿತೀಂದ್ರಂ ॥೨೫॥

ಕಂ॥ ಇಂತಾಚಾಮಧರಿತ್ರೀ ।
ಕಾಂತಜಗಚ್ಚಕ್ಷುವಸ್ತಮೆಯ್ದುವುದುಂ ದಿ ॥
ಗ್ಭಾಂತಜನಂ ತದ್ವಿಪುಲನಿ ।
ಶಾಂತಮನಾವರಿಸಿತಂದು ಶೋಕಧ್ವಾಂತಂ ॥೨೬॥

ವ॥ ಆನಿಮಿಷದೊಳೆ ಮಹಾರಾಜ್ಞಿಯಪ್ಪ ಕೆಂಪನಂಜಾಂಬಿಕೆ ಪತಿಯ ನಿಧನವೃತ್ತಾಂತನುಂ ಕೇಳಲೊಡಂ ಕಬ್ಬೊಂಜಲಾಕೆಯೆರಡುಂಕೊಡಂಕೆಗಳನಿರಿದಂತೆಯುಂ ಬರಸಿಡಿಲೆರ್ದೆಯಂ ಬಡಿದಂತೆಯುಮಾಗೆ ದುರಂತಚಿಂತಾಸಂತಾನಸಮಾಕ್ರಾಂತಸ್ವಾಂತೆಯಾಗಿ ತನುಜರ್ವೆರಸಂತವ್ವುರದಿಂ ನಡೆತಂದಸುತೊರೆದು ಪವಳಿಸಿಪ್ಪ ನಿಜಪ್ರಿಯನ ಪಾಸಂ ಸಾರ್ದಿನ್ನುಂ ಕಂದದಿಪ್ಪರ್ತನ ಮುಖಕವಲನುಂ ನೋಡಿ ಹಾನಾಥಾ ! ಹಾನಾಥಾ! ಎನುತ್ತೆಯ್ಹೆ ಹರವಸಂಬೋಗಿ ಬಳಿಸಂದ ಚೇಟಿಯರ್ಸಂತೈಸೆ ತರತರದಿಂ ಚೇತರಿಸಿ ನಿಜತೇಜಂ ಪತ್ತುವಿಡೆ ಕಳೆಯಳಿದ ನಳನವಲ್ಲಭನಂತಿಪ್ಪ ನಲ್ಲನಂ ನೋಡಿ ನೋಡಿ ॥೨೭॥

ಕಂ॥ ಹಾಹಾ ಪತಿ ಹಾಜನಪತಿ ।
ಹಾಹಾ ಸ್ಮರಸುಂದರಾಂಗ ಹಾಮಾನಧನಾ ॥
ಹಾಹಾ ಸದ್ಗುಣಭರಿತಾ ।
ಹಾಹಾವಾಣೀಏಲಾಸರಾಜ್ಞೀದಯಿತಾ ॥೨೮॥

ಕಂ॥ ಹಾನರನಾಥಾ ನಾಥಾ ।
ಹಾನೀನೆನ್ನಳಿದದೆಂತು ಪೋದೈ ನಿನ್ನಂ ॥
ನಾನೆಂತಗಲ್ದು ಜೀವಿಪೆ ।
ನೇನೀಸುತರ ಗತಿ ಮುಂದೆ ಪೇಳೆನ್ನೊಡೆಯಾ ॥೨೯॥

ವ॥ ಎಂದು ಮತ್ತಂ ಬಸವಳಿದು ಮೆಲ್ಮೆಲ್ಲನೆ ಚೇತರಿಸಿ ಹಾಪ್ರಾಣಕಾಂತಾ ಹಾಸುತವಲ್ಲಭಾ ಇದೇನಚ್ಚರಿ ॥೩೦॥

ಕಂ॥ ಎಂದುಂ ನಲವಿಂದಂ ಸಾ ।
ರ್ತಂದೆನ್ನೊಳ್ಸರಸವಾಡುತಿರುತಿರ್ದಾ ನೀ ॥
ನಿಂದುಸಿಕನಿರ್ಪ್ಪೆಯೇಕೀ ।
ನಂದನರಂ ನೋಡು ನೋಡು ನುಡಿ ನಲ್ನುಡಿಯಂ ॥೩೧॥

ವ|| ಹಾ ವಾಣೀವಿಲಾಸನಿರಂತರಪ್ರದರ್ಶಿತಪ್ರಣಯಭರಾ ಹಾಹಾ ವಿಶ್ವಂಭರಾಭಾರಧುರಂಧರಾ,

ಕಂ || ದಯಿತಾ ನಗೆಮೊಗದಿಂ ನೀಂ |
ಪ್ರಿಯೋಕ್ತಿಗಳನಾಡುತಿರ್ಪ್ಪವೋಲ್ತೋರ್ದಪೆಯೆ ||
ನ್ನಯಕಣ್ಗಾದೊಡಮವನೆ |
ನ್ನಯಕಿವಿಯಾಲಿಸದಿದಾವಹರಿಮೇಖಲೆ ಪೇಳ್ ||೩೨||

ವ|| ಇಂತತಿವಾತ್ರಶೋಕಾವೇಗದಿಂ ಕಳವಳಂಗೊಂಡು ರಾಯನ ಮೆಯ್ಯೆಲ್ಲಮಂ ಕಯ್ಯಿಂದೆ ನೇವರಿಸಿ |೩೩||

ಕಂ || ನಿಜದಿಂದೆ ತನುವನುಳಿದೆಯ |
ರಜನೀಶಕುಲಾಬ್ಧಿಚಂದ್ರ ಕನ್ನಡನಾಡೊಳ್ ||
ಪ್ರಜೆಯಿಂದಶರಣಮಾದುದೆ |
ಸುಜನಾಗ್ರಣಿಯಾನನಾಥೆಯಾದೆನೆ ಹಾಹಾ ||೩೪||

ವ|| ಎಂದು ಪರಿವರಿಯಾಗಿ ರೋದಿಸುತ್ತುಂ ತನ್ನಂ ತಾಂ ನೋಡಿ ||

ಕಂ || ಇನ್ನುಮದೇನೀಹೃದಯಂ |
ಭಿನ್ನಂತಾನಾಗದಿನಿಯನಳಿದುದನರಿದುಂ ||
ನನ್ನಿಯಿದಕ್ಕುಂ ಬಜ್ಜರ |
ದಿಂ ನಿರ್ಮಿತಮಲ್ಲದಿರ್ದೊಡೇಂಬಿರಿಯದುದೇ ||೩೫||

ಅಕಟಕಟಾ,

ಕಂ || ಇಂತು ಮಹೋತ್ಸವಮಂ ದೇ |
ಶಾಂತರದೊಳ್ಮತ್ಪ್ರಿಯಂಗೊಡರ್ಚ್ಚಲ್ಕೆ ವಿಧೀ ||
ಸ್ವಾಂತದೊಳೆಣಿಸಿರ್ದ್ದೆಯ ನಿ |
ನ್ನಂತಿರತಿಕ್ರೂರಹೃದಯರಾರೀಜಗದೊಳ್ ||೩೭||

ಕಂ || ವರಸಿಂಹಾಸನಪತಿಯಂ |
ವರಿಸುವಯೋಗವನದಾವ ಕರದಿಂ ಮುಂನೀಂ ||
ಬರೆದೆಯೊ ವಿಧಿಯಾಕರದೊಳೆ |
ಬರೆದೆಯದೆಂತೆನ್ನ ನೊಸಲೊಳೀದುರ್ದಶೆಯಂ ||೩೮||

ವ|| ಇಂತಿಂತು ಮತ್ತಂ ಮತ್ತಮೆಳೆಯರ್ವೆರಸಳಲುತ್ತುಂ ತೊಳಲುತ್ತುಮಿಪ್ಪ ಮಾರಾಣಿಯನೆಡೆಯೊಳರ್ದಮಾತ್ಯವೃದ್ಧನೊಡತಿಯೇ ದುಗುಡಮಿದೆಂದಿಗಂ ಮುಗಿಯದಾದೊಡಂ ನೀವಿಂತೆಡೆಯುಡುಗದೆ ಪಳವಿಸುತ್ತಿರಲರಗುವರರಿವರಾದಂ ಭಯಭ್ರಾಂತರಪ್ಪರದರಿಂದಿವರಭ್ಯುದಯದೊಳ್ದಿಟ್ಟಯನಿಟ್ಟು ಸೈರಿಸವೇಳ್ಕುಮೆಂದು ಸಮುಚಿತವಚನಂಗಳಿಂ ಸಂತವಿಡಲುಮಿಸುದ್ದಿಯಂ ಕೇಳ್ದಳುಂಬಮುಮ್ಮಳಮಾಂತ ಚಕ್ರವರ್ತಿನೀಪ್ರತಿನಿಧಿಯುಂ ನಿಜಸಚಿವರಮುಖದಿಂ ಸಮಯೋಚಿತಮಪ್ಪ ಸಮಾಧಾನೋಕ್ತಿಗಳಂ ತಿಳಿಯಿಸಲುಂ ವಿವೇಕಶಾಲಿನಿಯಪ್ಪ ಮಹಾರಾಜ್ಞಿಯಡಿಗಡಿಗಂ ಬಿಡದಗ್ಗಳಿಸುವ ಪತಿವಿಯೋಗದುಃಖಮನೆಂತಾನುಂ ಹೃದಯದೊಳೆ ಪುದುಂಗೊಳಿಸಿ ಬೆಸನಿತ್ತಂದದಿಂದಾಮಹಾಮಾತ್ಯಂ ನಿಖಿಳರಾಜಕೀಯಮರ್ಯಾದೆಗಳೊಡನಾಮಹಾರಾಜಂಗೆ ಪುತ್ರಕರ್ತವ್ಯತೆಯಿಂದನುಬಂಧಿಜನಮುಖದಿಂ ಸನ್ನಿಹಿತಗಂಗಾತೀರದೊಳೌರ್ಧ್ವದೈಹಿಕಮಂ ಯಥಾಶಾಸ್ತ್ರಂ ನಿರ್ವರ್ತಿಸಿದ ಮರುದಿವಸಮಿತ್ತ ಲಾ ರಾಜಧಾನಿಯೊಳುಪರಾಜಧಾನಿಯಿಂ ಕಡುಬೇಗನೆಯ್ತಂದಾಂಗ್ಲೇಯಮಹಾಧಿಕಾರಿಯ ಮುಖದಿಂ ಚಾಮರಾಜೇಂದ್ರನ ಲೋಕಾಂತರಗಮನಮಂ ಪ್ರಕಟಿಸುವ ತಂತ್ರೀವೃತ್ತಾಂತಮಂ ಕೇಳಲೊಡಂ ||೩೯||

ಕಂ|| ಆನಗರದೊಳೆತ್ತೆತ್ತಲು |
ಮಾನಿಮಿಷದೆ ಸುರಿದುದಖಿಲಪೌರಕ್ಕಳ ಹಾ ||
ಹಾನಿನದಸ್ತನಿತಂಬೆರ |
ಸೇನೆಂದಪೆನಂದು ಬಾಷ್ಪಧಾರಾವರ್ಷಂ ||೪೦||

ಮತ್ತಂ,

ಕಂ|| ಅರಸಂ ಪೊಂದಿದುದಂತಂ |
ಪರಿದತ್ತೀನೆಂಬೆನಾಕ್ಷಣದೊಳಾನಾಡೊಳ್ ||
ಪರಿದತ್ತು ಜನಂಗಳ ಕ |
ಣ್ಣೀರಡರೊಳಂ ಶೋಕವಾರಿಪೂರಮಪಾರಂ ||೪೧||

ವ|| ಅನುಪದಮೆ ತಂದೆಯ ರಾಜ್ಯಾಧಿಕಾರಪದವಿ ಕಿರಿದಾನುಂ ದಿನದೊಳ್ಯವರಾಜಶ್ರೀಕೃಷ್ಣರಾಜೇಂದ್ರನ ಕಯ್ಯಂ ಸೇರ್ದುಮೆಂದು ಚಕ್ರವರ್ತಿನೀಪ್ರತಿನಿಧಿಯಿಂ ಬಂದ ತಂತ್ರೀವೃತ್ತಾಂತಮುಮೆಲ್ಲಿಯುಂ ಪ್ರಕಟಮಾಗೆ

ನಾಡೆಲ್ಲಮಿನಿಸಾನುಂ ಸಮೂಧಾನಕ್ಕೆ ಬರಲತ್ತಲಾಮಹಾರಾಜ್ಞಿ ಸಕಲಪರಿವಾರಂಬೆರಸು ಕಾಳೀಘಟ್ಟಪುರಮಂ ಪೊರಮಟ್ಟು ಪೊಗೆವಂಡಿಯ ಮಾರ್ಗದಿಂ ರಾಜಧಾನಿಯನೆಯ್ದೆವಂದುಳಿದಿರ್ದ ಪತಿಯುತ್ತರಕ್ರಿಯೆಗಳಂ ಸಾಂಗಂ ನಿರ್ವರ್ತಿಸಿದ ಬಳಿಯಂ ಯುವರಾಜಶ್ರೀಕೃಷ್ಣರಾಜೇಂದ್ರಂಗೆ ಕುಲಪರಂಪರಾಗತಪದ್ಧತಿಯನನುಸರಿಸಿ ಪಟ್ಟಾಭಿಷೇಕಮಂಗಳಂ ಬಳೆಯಲ್ವೇಳ್ಕುಮೆಂದು ಶೇಷಾದ್ರಿಮಂತ್ರಿವರ್ಯಂಗೆ ಬೆಸಸಿೀಯಲೊಡಂ ॥೪೦॥

ವೃ॥ ಅರಮನೆಯೊಪ್ಪೆ ಮಂಗಳವಿಚಿತ್ರಮನೋಹರಮಂಡನಂಗಳಿಂ |
ನಿರುಪಮಹರ್ಷವಾಂತುಗಡಿಯಿಂ ಗಡಿಯಿಂದಧಿಕಾರಿಮುಖ್ಯರೆ ||
ಯ್ತರೆ ಪರಿಶೋಭಿಸುತ್ತಿರೆ ನವಾಂಬರಧಾರಿಗಳಾಗಿ ಸೈನಿಕ |
ರ್ನೆರಪಿದರಾಕ್ಷಣಂ ಸಚಿವರೊಲ್ದಭಿಷೇಚನಸಾಧನಂಗಳಂ ॥೪೩॥

ವ॥ ತದನುಪದಮಾಸ್ಥಾನಮುಂಟಪದೊಳನೇಕವಿಧಮುಂಗಳಾತೋದ್ಯಕೋಲಾಹಲಂ ಸಮುದ್ಭಟಶತಘ್ನೀರವಾಟೋಪಂಬೆರಸೆಂಟುಂದೆಸೆಗಳೊಳ್ಮೊಳವೊಳಗೆ ॥೪೪॥

ವೃ॥ ಧರಣೀದೇವವರೇಣ್ಯರಿಂ ಬಳಿಕಮಾತ್ಯಶ್ರೇಷ್ಠರಿಂ ವಾಹಿನೀ |
ಶ್ವರರಿಂ ವಿಷ್ಣುಪದೀಮುಖೋತ್ತಮನದೀಪಾಥೋಧಿತೀರ್ಥಂಗಳಿಂ ||
ವರಕರ್ಣಾಟಕರಾಜ್ಯಭಾರಪದದೊಳ್ಸರ್ವೋತ್ತಮಂ ಲಗ್ನಮಾ |
ಗಿರುತಿಪ್ಪಂದಭಿಷಿಕ್ತನಾಗಿ ಮೆರೆದಂ ಶ್ರೀಕೃಷ್ಣಭೂಪಾಲಕಂ ॥೪೫॥

ವ॥ ಇಂತಾಗವೋಕ್ತಪ್ರಕಾರದಿಂ ಪಟ್ಟಾಭಿಷಿಕ್ತನಾದ ಸಮನಂತರದೊಳ್ ॥೪೬॥

ಕಂ॥ ಸುರುಚಿರನವಮಣಿಮಯಭಾ |
ಸುರಸಿಂಹಾಸನದೆ ಮಂಡಿಸಿದ ಕೃಷ್ಣಧರಾ ||
ವರನೆಸೆದನಲರ್ದ ಪೊಸದಾ |
ವರೆಯೊಳ್ಮಂಡಿಸಿದ ರಾಜಹಂಸದ ತೆರದಿಂ ॥೪೭॥

ಆಗಳ್,

ಕಂ॥ ತನ್ನೃಪವಂಶಾವಳಿಯಂ |
ಸನ್ನಿಧಿಸಚಿವಾಧಿಕಾರಿಯೋದಲಮಾತ್ಯಂ ||
ಮನ್ನಿಸಿ ಸಾಮಾಜಿಕರಂ |
ಸನ್ನುತನೃಪಮಾತೆಯಾಜ್ಞೆಯಿಂ ಬೀಳ್ಕೊಟ್ಟಂ ॥೪೮॥

ವ॥ ಇಂತು ಪಟ್ಟಾಭಿಷೇಕ ಮಹೋತ್ಸವಂ ಬಳಿವುದುಂ ನಿಜಕುಮಾರಂ ಕೃಷ್ಣರಾಜಂ ಬಾಲನಾದುದರಿಂ ಪ್ರಜೆಗಳೆಲ್ಲರುಂ ಪ್ರಾರ್ಥಿಸಿದಂದಕ್ಕೆ ಚಕ್ರವರ್ತಿನೀಪ್ರತಿನಿಧಿಯನುಜ್ಞೆಯಂ ಪಡೆದು ಪ್ರಜ್ಞಾವತಿಯಪ್ಪ ವಾಣೀವಿಲಾಸದ ಮಹಾರಾಜ್ಞಿ ಕೆಂಪನಂಜಾಂಬೆಯೆ ತತ್ಪ್ರತಿನಿಧಿಯಾಗಿ ರಾಜ್ಯಭಾರಮಂ ತಾಳ್ದು ನಿಜಾನುಜಂ ವಿದ್ಯಾವಿನಯಾದಿಸಕಲಸದ್ಗುಣ ಲಕ್ಷ್ಮೀಕಾಂತಂ ಕಾಂತರಾಜಂ ಸನ್ನಿಧಿಸಚಿವನಾಗಿರೆ ರಾಜಕೀಯಕಾರ್ಯಾನುಭವಕಾಲಿಯುಂ ರಾಜಭಕ್ತಿನಿಧಿಯುಂ ಕ್ಯಾಂಬಲಭಿಧೇಯನುಮಪ್ಪಂಗ್ಲೇಯಾಧಿಕಾರಿ ಕಾರ್ಯದರ್ಶಿಯಾಗಿರೆ ಮಂತ್ರಿಸಂಘಂ ನೆರವಾಗಿರೆ ವಿಕ್ಟೋರಿಯಾಚಕ್ರವರ್ತಿನಿ ಮೆಚ್ಚುವಂತಾಕೆಯ ರಾಜ್ಯಭಾರಸರಣಿಯನನುಸರಿಸಿ ಕನ್ನಡನಾಡಂ ನಾಡೆ ಸುಕ್ಷೇಮದಿಂ ರಕ್ಷಿಸುತ್ತಿರ್ದಳೆಂತೆನೆ ॥೪೯॥

ಕಂ ॥ ತನುವೆತ್ತ ಮಂತ್ರಶಕ್ತಿಯೊ ।
ವಿನುತ ಸಮುತ್ಸಾಹಶಕ್ತಿಯೋ ಮೇಣಾಮಾ ॥

ನಿನಿಯೇಂ ಪ್ರಭುಶಕ್ತಿಯೊ ಮೇ ।
ಣನಿತುಂ ಶಕ್ತಿಗಳ ರೂಪೊ ಎನೆ ಧರೆಯಾಳ್ದಳ್ ॥೫೦॥

ಕರುಣಾಮೂರ್ತಿಯೆನುತ್ತುಂ ।
ಪರತರಧರ್ಮಾಭಿಮಾನದೇವತೆಯೆನುತುಂ ॥

ವರನಯದಾಕೃತಿಯೆನುತುಂ ।
ಧರೆಯೆಲ್ಲಂ ಪೊಗಳಲರಸುಗೆಯ್ಯುತ್ತಿರ್ದಳ್ ॥೫೧॥

ಧರೆಯ ಚಿರಂತನಸುಕೃತದ ।
ಪರಿಣತಿಯೆಂದೆನಿಸಿದೀಕೆ ಕನ್ನಡನಾಡಂ ॥

ಪೊರೆಯುತ್ತೊಲವಿಂ ಮುನ್ನಿ ।
ರ್ದ ರಾಜರಾಜಾದಿರಾಜರಂ ನೆನೆಯಿಸಿದಳ್ ॥೫೨॥

ಅವನಿತಾಮಣಿ ಧರಣಿಯ ।
ನೇವಣ್ಣಿಪೆನಾಳ್ದ ತೆರನನಿತ್ತಳದಾವ ॥

ಳ್ಗಾವಿಕ್ಟೋರಿಯೆ ಭಾರತ ।
ಭೂವಲಯಕಿರೀಟಮೆಂಬ ಮೆಚ್ಚಿನ ಬಿರುದಂ ॥೫೩॥

ಜನನಿಯನುಜ್ಞೆಯನಿನಿಸುಂ |
ತನಯರ್ಲಂಘಿಸದೆ ನಡೆವವೋಲಾನಾಡೊಳ್ ||
ಜನಮಾಮಾರಾಣಿಯ ಶಾ |
ಸನಮಂ ತಲೆಯಲ್ಲಿ ತಳೆದು ನಡೆಯುತ್ತಿರ್ದರ್ ||೫೪||

ವ|| ಇಂತಾಮಹಾರಾಜ್ಞೀ ನೀಡುಂ ನಲವಿಂ ನೆಲನಂ ಸಲಪ್ಪುತ್ತುಂ ಪತಿಯ ಸದ್ಗತಿಯನುದ್ದೇಶಿಸಿ ರಾಜಧಾನಿಯೊಳ್ವಸುಧಾಮರರ್ಗೆ ತನ್ನಾಣ್ಮನ ಪೆಸರಿಂ ನಿರುಪಾಧಿಕವೃತ್ತಿಕ್ಷೇತ್ರಸಹಿತಮಪ್ಪ ಮೂವತ್ತುಂ ಮನೆಗಳಗ್ರಹಾರಮಂ ಪ್ರತಿಷ್ಠೆಗೆಯ್ದಿತ್ತುಂ ನಿರಂತರಸ್ವಾಮಿಭಕ್ತಿಯುಕ್ತನುಂ ನಿಖಿಲ ಮಹತ್ತರಕಾರ್ಯನಿರ್ವ್ಯಪಣಶಕ್ತಿಸಮೇತನುಂ ನಿರತಿಶಯಪ್ರತಿಭಾಶಾಲಿಯುಮಪ್ಪ ಮಹಾಮಾತ್ಯನ ಮುಖದಿಂದರ್ಕಾವತೀನದಿಯಿಂದೊಂದು ಪರಿಕಾಲಂ ಬರಿಸಿ ಕೇರಿಕೇರಿಯೊಳುಂ ಸಲಿಲಯಂತ್ರಂಗಳನಿರಿಸಿ ಬರಿಸಂ ಬರಿಸಂ ತಲೆಗೋರುತ್ತಿರ್ದುಪರಾಜಧಾನಿಯು ಜಲಕ್ಷಾಮಮುಂ ಪರಿಹರಿಸಿಯುಮುಳಲಟ್ಟೆಯೆಂಬ ಕಾವೇರಿಯಣಿಯಂ ನಾಡಿನಸೊಗದೇಳ್ಗೆಗೆ ಜೀರ್ಣೋದ್ಧಾರಂಗೆಯ್ವುದೆಂದು ಕರ್ಮಸಚಿವರ್ಕಾಣತಿಯನಿತ್ತುಂ ಧರ್ಮಾತ್ಮನೆನೆಸಿರ್ದ ಭರ್ತಾರನ ಚಿರಕಾಲಸ್ಮರಣೆಗೋಸುಗಮಾತನತಿಸುಂದರಮಪ್ಪ ಶಿಲಾಮಯಪ್ರತಿಮೆಯುಂ ರಾಜಧಾನಿಯೊಳ್ಪದಂಗೊಳಿಸಿಯುಮುಲ್ಲಲ್ಲಿ ಪಲವೆಡೆಯೊಳನ್ನಸತ್ರದೇವತಾಸೇವಾದಿಧರ್ಮಕಾರ್ಯಂಗಳಂ ಪರಮೌದಾರ್ಯದಿಂ ನೆಲೆಗೊಳಿಸಿಯುಂ ಪೆಂಗಳ ವಿದ್ಯಾಭ್ಯಾಸದಿಂದಿಂಭರತಖಂಡದೊಳ್ಪಲವುಂ ನಾಳ್ಗಳೇಳ್ಗೆವಡೆಯುತ್ತಿಪ್ಪುದಿಂತೆವ್ಮ ನಾಡುಮೇಳ್ಗೆಗೆ ಬರಲೆವೇಳ್ಕುಮೆಂದು ನಿಜರಾಜ್ಯದ ಗಡಿಗಡಿಯೊಳುಂ ಸ್ತ್ರೀವಿದ್ಯಾಭ್ಯಾಸಮನುಚಿತಪ್ರಕಾರದಿಂ ಪ್ರೋತ್ಸಾಹಂಗೊಳಿಸಿಯುಮುಪಾಯಕುಶಲಂ ಮಹಾಮಾತ್ಯಂ ಮಂತಣಂಗೆಯ್ದು ಬಿನ್ನಪಂಗೆಯ್ದುದಂದಕ್ಕೆ ರಾಜಧಾನಿಗನತಿದೂರಮಪ್ಪ ಶಿವನಸಮುದ್ರಮೆಂಬೂರ ಪೊರೆಯೊಳಿಪ್ಪ ಕಾವೇರಿಯು ಜಲಪಾತದೊಳ್ಪಮಧಿಕದ್ರವ್ಯವ್ಯಯಂಗೆಯ್ದು ಯಂತ್ರಮುಖದಿಂದ ಪರಿಮೇಯವಿದ್ಯುಚ್ಛಕ್ತಿಯನುತ್ಪಾದಿಸಿಯದಂ ಕೋಲಾರಮೆಂಬ ನಿಜರಾಜ್ಯ ಭಾಗದ ಪೊಂಗಣಿಯೊಳ್ಪಿನ್ನಂ ತೆಗೆಯಲ್ಕೆ ಸಾಧನಂಗಳಪ್ಪ ಮಹಾಯಂತ್ರಂಗಳನತಿಸುಲಭೋಪಾಯದಿಂ ನಡೆಯಿಸಲ್ಕೆ ತಂತ್ರೀಮಾರ್ಗದಿಂ ನೆರವನಾಗಿಸಿಯುವರಿಂ ರಾಜಾಯಂ ಪಿರಿದುಂ ಪೆರ್ಚುವಂತೊಡರ್ಚಿಯುಮಂತುಮು

ಲ್ಲದೆ ರಾಜಧಾನಿಯೊಳುಮುಪರಾಜಧಾನಿಯೊಳುವಿರುಳುಮಿರುಳುಮೆಣ್ಣೆ
ಯ ಬಳಕೆಯಿಲ್ಲದೆ ಪಜ್ಜಳಪ ತಂತ್ರೀಮೂಲಕಮಪ್ಪ ವಿದ್ಯುಚ್ಛಕ್ತಿಯ
ದೀಪವಾಲಿಗಳಂ ಕೇರಿಕೇರಿಯ ಬೀದಿಬೀದಿಯೊಳಂ ನೆರಪಿಯುಂ ಪೆಸ
ರ್ಗೊಂಡಳ್ ॥೫೫॥

ಕಂ ॥ ಈರೀತಿಯಿಂದೆ ತನ್ನಧಿ ।
ಕಾರದೆ ಪಲಕಾರಿಯಂಗಳಂ ಸಾಧಿಸಿದಾ ॥
ಮಾರಾಣಿಯಾಳ್ಕೆಯುಂ ಕೈ ।
ವಾರಿಸುತಿರ್ದಪುದು ಮೆಚ್ಚಿಸಿಂ ಧರೆಯೆಲ್ಲಂ ॥೫೬॥
ಅಪಾರ್ಥಿವಾನ್ವಯಕೆ ಮಣಿ ।
ದೀಪಿಕೆಯೆಂದೆನಿಪ ಕೆಂಪನಂಜಾಂಬಿಕೆಯಿಂ ॥
ತೀಪೃಥ್ವಿಯಂ ದಿಗಂತ ।
ವ್ಯಾಪಕಸತ್ಕೀರ್ತಿಯಾಂತು ಪಾಲಿಸುತಿರ್ದಳ್ ॥೫೭॥

ಇದು ಜಗದ್ವಿದಿತ ಶ್ರೀಕಾಶ್ಯಪವಂಶಮುಕ್ತಾಮಣಿ ಶ್ರೀಗರಳಪುರೀಶಶಾಸ್ತ್ರಿ
ತನೂಭವನುಂ ಶ್ರೀಮದಖಂಡ ಮಹೀಮಂಡಲ ಮಂಡನಾಯಮಾನ ಕರ್ಣಾ
ಟಜನಪದ ಲಕ್ಷ್ಮೀವಿಹಾರೈಕರಂಗಮಹೀಭೂತ ಮಹೀಶೂರರಾಜಧಾನೀ
ರತ್ನಸಿಂಹಾಸನಾಧೀಶ್ವರ ಯದುಕುಲಪಯೋನಿಧಿ ಪೂರ್ಣಚಂದ್ರಾಯಮಾಣ
ಶ್ರೀಚಾಮರಾಜೇಂದ್ರ ತನಯ ಶ್ರೀಕೃಷ್ಣರಾಜಮಹಾರಾಜ ಸಂಸ್ಕೃತ
ಕರ್ಣಾಟೋಭಯಪ್ರವಚನೋಪಾಧ್ಯಾಯನುಂ ಮಹಾವಿದ್ವ
ತ್ಪದಲಾಂಛನನುಂ ತನ್ಮಹಾರಾಜ ಕೃಷ್ಣರಾಜವಿತೀರ್ಣ
ಕವಿತಿಲಕ ಬಿರುದಾಂಕಿತನುಮಪ್ಪ ಸೋಸಲೆ
ಅಯ್ಯಶಾಸ್ತ್ರಿಯಿಂ ವಿರಚಿತವಾದ
ಮಹೀಶೂರ ಮಹಾರಾಜ ಚರಿತ್ರ
ಮೆಂಬ ಕರ್ಣಾಟ ಚಂಪೂ
ಮಹಾಕಾವ್ಯದೊಳ್
ನವಮಾಶ್ವಾಸಂ
ಸಂಪೂರ್ಣಂ.

ದಶಮಾಶ್ವಾಸಂ.

ಕಂ ॥ ಆವನ ಮಹಿಮೆಯಚಿಂತ್ಯಮ ।
ಡಾವಂ ವಾಙ್ಮನಸವಿಷಯನಲ್ತೆನಿಪಂ ಮೇ ॥
ಣಾವಂ ಬೋಧಾತ್ಮಕನಾ ।
ದೇವಂ ಕುಡುಗೆಮ್ಮ ರಾಜಕುಲಕತಿಸುಖಮಂ ॥೧॥

ವ॥ ಅನಂತರಂ ನಿಜಹೃದಯಾಂತರನಿರಂತರಸನ್ನಿಧಾಪಿತಶ್ರೀಚಾಮುಂ
ಡಾಂಬಿಕೆ ಮಹಾರಾಜ್ಞಿ ಕೆಂಪನಂಜಾಂಬಿಕೆ ಕುಮಾರರಿರ್ವರೊಡನೆಯುಂ
ಕುಮಾರಿಯರ್ಮ್ಮವರೊಡನೆಯುಂ ಕೂಡಿ ನಿಜಪತಿಯ ಪದ್ಧತಿಯನನುಸರಿಸಿ
ಧರ್ಮದಿಂ ಧರೆಯಂ ಪರಿಪಾಲಿಸುತ್ತುಂ ಜ್ಯೇಷ್ಠಕುಮಾರಂಗುಪನಯನಕಾಲ
ಮುಂ ನಿರ್ಭರತಾರುಣ್ಯವತಿಯರುಂ ಪರಿಪೂರ್ಣಲಾವಣ್ಯವತಿಯರುಮಪ್ಪ
ಮುನ್ನಿನಿರ್ವರಣುಗಿಯರ್ಗ್ಗೆ ಪರಿಣಯಕಾಲಮುಂ ಸಮನಿಸುವುದುಂ ಶೇಷಾದ್ರಿ
ಮಂತ್ರಿವರ್ಯನೊಡನಾಲೋಚಿಸಿ ಕೃಷ್ಣರಾಜನುಪನಯನಕ್ಕಂ ತದನಂತರ
ಮೆ ತನ್ನಮನದೆಣಿಕೆಗೆ ಬಂದ ಶೂರಾಗ್ರೇಸರನೆಂದಾಂಗ್ಲೇಯಮಹಾಚಮೂ
ನಾಯಕನಿಂ ಬಿರುವಂ ಪಡೆದು ನೆಗಳ್ತೆವಡೆದಿರ್ಪ್ಪ ಬಾಗಳೀದೇಶರಾಜನೆಂಬನು
ರೂಪವರನಂ ಕಯ್ವಿಡಿಯಲನುಕೂಲಮಪ್ಪ ಕಾಲಂ ಸಮನಿಸಿದ ಕತದಿಂ
ಪಿರಿಯಳಪ್ಪ ಸಹೋದರಿಯಿಂ ಸಾದರಮನುಜ್ಞಾತೆಯಾದ ಕೃಷ್ಣಾಂಬಿಕೆಯ
ಪರಿಣಯೋತ್ಸವಕ್ಕಂ ಶುಭಮುಹೂರ್ತಂಗಳಂ ದೈವಜ್ಞರ ಮುಖದಿಂ ನಿರ್ಣ
ಯಿಸಿ ದೇಶಾಂತರಂಗಳೊಳಿರ್ಪ್ಪರಸರ್ಗ್ಗೆ ಮನ್ನಣೆವೆರಸು ಶುಭಾವಹಲಗ್ನ
ಪತ್ರಿಕೆಗಳಂ ಬೇಹಿನವರ ಕಯ್ಯಿಂದಟ್ಟಿ ಸನ್ನಿಧಿಸಚಿವನಪ್ಪ ಕಾಂತರಾಜಂಗ
ಮುರಮನೆಯ ಸರ್ವಾಧಿಕಾರಿಯಪ್ಪ ಸೀತಾರಾಮರಾಯಂಗಮಾಸ್ಥಾನಕಾರ್ಯ
ದರ್ಶಿಯಪ್ಪ ಲಿಂಗರಾಜಂಗಮಿಂತು ಬೆಸಸಿತ್ತಳದೆಂತೆನೆ ॥೨॥

ವೃ॥ ಬಳೆಯಲ್ವೇಳ್ಕುಂ ಸ್ವಗೃಹ್ಯೋದಿತಮುಪನಯನಂ ಕೃಷ್ಣರಾಜಂಗೆ ಮತ್ತುಂ ।
ಬಳೆಯಲ್ವೇಳ್ಕುಂ ವಿವಾಹಂ ತದನುಪದಮೆ ಕೃಷ್ಣಾಂಬೆಗಿಂತೊಂದಿದೀಮಂ ॥
ಗಳಕಾರ್ಯಂಗಳ್ಗೆ ಸಂಭಾರಮನತಿಶಯದಿಂ ಮುಂದುಮುಂದಾಗಿ ಸಜ್ಜಂ ।
ಗೊಳಿಸಲ್ಕುಂವಿಂದಿನಿಂ ಪ್ರೇರಿಪುದಧಿಕೃತರಂ ನೀಂಗಳೌತ್ಸುಕ್ಯದಿಂದಂ ॥೩॥

ವ॥ ಎಂದಿಂತಪ್ಪ ಮಾರಾಣಿಯು ಕಟ್ಟಾಣತಿಯುಂ ಶಿರದೊಳಾಂತಾಸಜೆ ವರುಭಯಶುಭಕಾರ್ಯಂಗಳ್ಗಂ ತತ್ತದಧಿಕಾರಿಗಳ ಮುಖದಿಂ ಸಕಲ ಸಂಭಾರಮುಂ ಭೂಯಸ್ತರಸಂರಂಭದಿಂ ಸಜ್ಜುಗೊಳಿಸುತ್ತಿರ್ಪಾಗಳ್ ॥೪॥

ಕಂ ॥ ಭರದಿಂ ಸಿಂಗರಿಸಿದರಾ |
ಪುರಮಂ ಬಹುಚಿತ್ರರಜನೆಯಿಂ ಶಿಲ್ಪಿಜನರ್ ॥
ಬರುತಿರ್ದುದುತ್ಸವಾರ್ಥಮೆ |
ಹರಿಸದೊಳೂರೂರ್ಗಳಿಂದಸಂಖ್ಯಾತಜನಂ ॥೫॥

ವ॥ ಇಂತು ಶುಭವಿಭವಪಾರಾವಾರಂ ಮೇರೆವರಿಯುತ್ತಿರ್ಪಿನಂ ॥೬॥

ಕಂ ॥ ತಿರುವಿನಮೇಖಲೆ ನಡುವಿನೊ |
ಳರೆವೆರೆಸೊಸಲಲ್ಲಿ ಗೋಪಚಂದನತಿಲಕಂ ॥
ಕರದೊಳ್ಪಿಪ್ಪಲದಂಡಂ |
ಪರಿವಡೆದಿರಲಾದನಾಕುವರನುಪನೀತಂ ॥೭॥

ಶ್ರುತಿವಿಹಿತವಿಧಿಯೊಳಾಭೂ |
ಪತಿಸುತನುಪನೀತನಾಗಿ ಶಾಣಸಮುತ್ತೇ ॥
ಜಿತನೂತನರತ್ನದವೋ |
ಲತಿಶಯಿತಕಾಂತ್ರತೇಜಮುಂ ಪಡೆದೆಸೆದಂ ॥೮॥

ವೃ॥ ಜನನಾರಂಭದಿನತ್ಯುದಾರಮುದದಿಂದೊಂದೊಂದು ಸಂವತ್ಸರ |
ಕ್ಕಿನನೋರೊರ್ವನನಾಸ್ಯಪೇಂದು ಗಳೆಣಿಂದೀರಾರುವರ್ಷಂಗಳ ॥
ಪ್ಪಿನಮಾಗಲ್ಕುಪನೀತಸಂಸ್ಕರಣದಿಂ ಸುಂತ್ರಗ್ರಹಂ ದ್ವಾದಶಾ |
ತ್ಮನನೇ ತನ್ನೊಳಧೀನನಂ ನೆಗಳ್ದದೇಂ ತೇಜಸ್ವಿಯಾಗಿರ್ದನೋ ॥೯॥

ವ॥ ಇಂತಖಂಡಮಂಡಲೇಶ್ವರವಿಭವಾನುಸಾರದಿಂ ಶ್ರೀಕೃಷ್ಣರಾಜಕುಮಾರನುಪನಯನಮಹೋತ್ಸವಂ ಬಳಿದ ಸಮನಂತರಮೆ ಸುಮನೋಹರಮಂಗಳಾಲಂಕಾರದಿಂ ನೆರೆ ಮೆರೆವರಮನೆಯ ಕಲ್ಯಾಣಮಂಟಪದೊಳಪ್ಪರೋಹಿತಧರ್ಮಾಧಿಕರಣಾದಿಭೂದೇವರುಂ ಸಾಮಂತಭೂಕಾಂತರುಂ ಪೌರಮುಖ್ಯರುಮಂತಃಪುರಾಂಗನೆಯರುಂ ಯಥೋಚಿತಸ್ಥಾನಂಗಳೊಳ್ಪನ್ನಿಹಿತರಾಗಿರ್ಪಿನಮುಪೇಂದ್ರಂಬೆರಸಿಳಾತಳಕ್ಕಿಳಿತಂದಿರ್ಪ ಸಂಕ್ರಂದನನೆಂಬಂತೆ

ಯುವರಾಜಂಬೆರಸು ಮಹಾರಾಜಂ ರಾಜೋಪಚಾರದಿಂ ವಿರಾಜಿಸುತ್ತುಂ ಬಳಿ ಸಂದಿಪ್ಪಿನೆಗಂ ಕಾರ್ಣಾಟಕಹೌಣಾದಿ ನಾನಾವಿಧಮುಂಗಳವಾದ್ಯಂಗಳ ಬ್ಬರ ಮೆಣ್ದೆಸೆಯಂ ತೀವಲೊಡಂ ॥೧೦॥

ಕಂ ॥ ನಾಣಿಂ ಮಣಿದುಂ ತನ್ನೊ ।
ಳ್ಜಾಣಿಂ ಕೂರ್ಮೆಯನೆ ತೋರ್ಪ್ಪ ಕುಡಿನೋಟದ ಬಿ ॥
ನ್ನಾಣದ ಕೃಷ್ಣಾಂಬೆಯ ಮೃದು ।
ಪಾಣಿಯನಾದೇಶರಾಜಸೊಲವಿಂ ಪಿಡಿದಂ ॥೧೧॥

ವ॥ ತದನುಪದಂ ವಿವಾಹಾಂಗಭೂತಂಗಳಪ್ಪ ಸಕಲಶುಭಕರ್ಮಂಗಳುಂ ಪಿರಿದಪ್ಪ ಸಿರಿಯಿಂ ಯಥಾಶಾಸ್ತ್ರಂ ಬಳೆವುದುಂ ॥೧೨॥

ಕಂ ॥ ನುತಗುಣಗಣದಿಂದನುರೂ ।
ಪತೆವೆತ್ತಾರಾಜದಂಪತಿಗಳುದ್ವಾಹಂ ॥
ಕ್ಷಿತಿಯೊಳ್ಪ್ರಸಾಲತರುಮಾ ।
ಲತೀಲತಾಯೋಗಮೆಂದು ಪೊಗಳ್ದತ್ತು ಜನಂ ॥೧೩॥

ವ॥ ಅಲ್ಲಿಂ ಮುಂದೆ ಕೆಲವಾಸುಂ ದಿನಸಂ ಕಳೆ ಲೊಡಂ ನಿರತಿಶ ಯಪ್ರಜ್ಞಾಮಣಿಪೇಟಿಕೆಯಪ್ಪ ಮಾರಾಣಿ ಕೆಂಪನಂಜಾಂಬಿಕೆ ನಿಜಸಹೋದರಂ ಕಾಂತರಾಜಂ ಜನಿಸಿದಂದು ಲಕ್ಷ್ಮೀಕಾಂತನೆಂದು ನಾಮಧೇಯಮುಂ ನಾಂತಿರ್ದೊಡಂ ಲೋಕದೊಳ್ಖ್ಯಾತಿಯಿಂ ಕಾಂತನೆಂದು ನಾಮೈಕದೇಶಮೆಂ ಬಳಕೆಗೊಂಡಿಪ್ಪುದರಕೆಯಾದುದರಿಂ ಕಾಂತನಂ ಬಯಸುತಿಪ್ಪ ಜಯಲ ಕ್ಷ್ಮಿಂಬೆಯನಿತ್ತೀತನಂ ಜಯಲಕ್ಷ್ಮೀಕಾಂತನೆಂದು ಪೂರ್ಣನಾಮನುಮನ ನ್ವರ್ಥನಾಮನುಮುಂ ಗೆಯ್ಯುವೇಳ್ಕುವೆಂದು ಬಗೆದು ಶೇಷಾದ್ರಿಮಂತ್ರಿವರ್ಯ ನೊಡನಾಲೋಚನೆಗೆಯ್ದಂತಪ್ಪ ಕನ್ಯಾವರರ ಪರಿಣಯಮಹೋತ್ಸವಕ್ಕೆ ಶುಭಮುಹೂರ್ತಮುಂ ನಿಶ್ಚಯಿಸಿ ಪೂರ್ವರೊಳುಮರಸರೊಳುಮಿತರರೊ ಳುಂ ಪ್ರಮುಖರಪ್ಪವರ್ಗೆಲ್ಲರ್ಗಂ ವಿವಾಹಲಗ್ನಪತ್ರಿಕೆಗಳಂ ಕಳಿಪಿ ರಾಜ ಧಾನಿಯನಲ್ಪಕುಶಲರಪ್ಪ ಶಿಲ್ಪಿಗಳಿಂ ಸಿಂಗರಂಗೊಳಿಸಿ ನಿಖಿಲಶುಭಸಂಭಾ ರಂಗಳಂ ತತ್ತದಧಿಕಾರಿಗಳಿಂ ಸಜ್ಜುಗೊಳಿಸುವುದುಂ ॥ ೧೪ ॥

ವೃ॥ ವರಗೀರ್ವಾಣವಚೋವಿಲಾಸಗೃಹಮಾಂಗ್ಲೇಯೋಕ್ತಿಸಂಪತ್ತಿವ |
ಲ್ಲರಿಗಾಲಂಬನಭೂರುಹಂ ಸುಗುಣಕೋಶಂ ಕಾಂತರಾಜಂ ವರಂ ||
ವರನಪ್ಪಂ ಜಯಲಕ್ಷ್ಮಿಗೀದೃಶವರಂ ಬೇರೊರ್ವನಿಲ್ಲೆಂದು ನಿ |
ರ್ಭರಸಂಮೋದದೊಳೆಲ್ಲಿಯುಂ ನಗರದೊಳ್ಕೊಂಡಾಡಿತೆಲ್ಲಾ ಜನಂ ||೧೫||

ಇಂತಪ್ಪ ಶುಭೋದಂತಮುರ್ವಿಯೊಳೆಲ್ಲೆಲ್ಲಿಯುಂ ಪರ್ವುತ್ತಿರ್ಪ್ಪಿನಂ ವಿಚಿತ್ರತರಮಂಗಳಾಲಂಕಾರಂಗಳಿಂ ಕಣ್ಗೊಳಿಪ ವಿವಾಹಸಭಾಮಂಟಪದೊಳ್ಮಹಾರಾಜಂ ಯುವರಾಜಂಬೆರಸು ಬಳಸಂದಿರ್ಪ್ಪನ್ನಂ ಸಾಮಾಜಿಕಮಂಡಲಿಯುಮಂತು ಯವನಿಕಾಂತರದೊಳ್ನೀರಂಧ್ರಮೆನಲೊಗ್ಗಾಗಿರ್ದಂತಃಪುರಪುರಂಧ್ರೀನಿಕುರುಂಬಮುಂ ನೀಡುಂ ಕುತುಕಂಬೆತ್ತು ನಿರುಕಿಸುತ್ತಿರ್ಪ್ಪನ್ನೆಗಂ ಮಂಗಳವರೆಗಳಬ್ಬರಮುಂ ಪಾರ್ವರ ಮಂಗಳಾಶೀರ್ವಾದನಿನಾನದಬ್ಬರಮುಂ ದೆಸೆದೀವಲೊಡಂ ॥ ೧೬ ॥

ಕಂ ॥ ಜವಧುವಿನ ಕರಕಂಜಮು |
ನಾವರನ ಕರಾಬ್ಜದೊಳಗಿರಿಸಿ ಕಯ್ಯಾರಂ ||
ಸೌವರ್ಣ್ಣಕಲಶದಿಂದಂ |
ಭೂವರನನುಬಂಧಿ ಬಸವಭೂಪತಿಯೆರೆದಂ ||೧೭||

ವ॥ ತದನುಪದಂ ಪುರೋಧಸನಾವಧೂವರರ್ಗ್ಗಿ ಪಾಣಿಗ್ರಹಣಂ ನಾಕಬಲಿ ಮೊದಲಪ್ಪಶೇಷಶುಭಕಾರ್ಯಂಗಳಂ ವಿಧ್ಯುಕ್ತವಿಧಾನದಿಂದಾಗಿಸಲಾವಿವಾಹಮಹೋತ್ಸವಂ ಸಾಂಗಮಾಗಿ ಬಳೆದ ಬಳಿಕಮೋರೊಂದುದಿವಸಂ ಮಧ್ಯಂದಿನಸಮಯದೊಳರಮನೆಯ ಕಲ್ಯಾಣಮಂಟಪದ ಮುಂದಣತೊಟ್ಟಿಯೊಳತಿವಿಚಿತ್ರಮೆನೆ ರಚಿಸಿರ್ದ್ದ ಸಂದಣಮೇಗಡೆಯೊಳ್ ॥೧೮॥

ಕಂ ॥ ಹೌವನೆ ಕಾಣಿಸಿದುದು ಧೂ |
ಮಾವಳಿಯದರೊಡನೆ ಕೇಳಿಸಿತು ಛಟಛಟಸಂ ||
ರಾವಮಿದೇನೆಂದು ಜನಂ |
ಕೌವರೆಗೊಳೆ ತೋರಿತುರಿ ಛಡಾಳಿಸಿ ನಭದೊಳ್ ||೧೯||

ಅಂತುದುರ್ನಿವಾರಮಪ್ಪ ದೈವಶಾಸನದಿಂದಾರುಮರಿಯದಂತೆ ತಲೆದೋರಿದಾಪೇರುರಿ ಭೋರನಾಪಂದರಂ ಬಳಸಿ ಧಗಧಗಿಸೆ ॥೨೦॥

ಕಂ ॥ ಒಗುಮಿಗೆಯಿಂ ಸುತ್ತುಂ ಚೌ ।
ಕಿಗೆಯಂ ನೆರೆ ಪುದಿದು ಕತ್ತಲಿಸಿ ಪೆರ್ಚಿದ ಕ ॥
ರ್ವೊಗೆ ಕಿಡಿಮಸಗುತ್ತೇರುತೆ ।
ಗಗನಾಂಕಣದೊಳ್ಮಸುಂಕೆತಿನವ.ಂಡಲಮುಂ ॥೨೧॥

ಆಗಳರಮನೆಯೊಳ್ತಮ್ಮ ಕಾರ್ಯಸ್ಥಾನಂಗಳೊಳಿರ್ದ ಕಾಯಸ್ಥರುಂ ಕೋಲ್ಕಾರರುಂ ಹರಿಕಾರರುಮೂಳಿಗದವರುನೋಲೆಕಾರರುಂ ಬಾಣಸಿಗರುಂ ಸೆಜ್ಜೆವಳರುಮಚ್ಚಳಾಯ್ತರುಂ ಪಚ್ಚಾಯಿಲರುಂ ಬಡಿಗರುಂ ಪಡಿವಳರುಂ ಪಡೆವಳರುಮುರ್ಕ್ಕಳ್ಳರುಂ ಭಂಡಾರಿಗಳುಂ ಹೌವನುಣ್ಮಿದಾಕಿಚ್ಚಂ ಕಂಡು ಜೆಬ್ಬಳಂಗೊಂಡು ಹಾಹಾಕಾರಂಗೆಯ್ಯುತ್ತುಮತ್ತಿತ್ತ ಲೋಡಾಡ.ತ್ತುವೋರೊರ್ವರೋರೊರ್ವರಂ ಕರೆಯುತ್ತುಂ ಕೂಗುತ್ತುಂ ನಿಲ್ಲದೆಲ್ಲಿಯುಮುಲ್ಲಲ್ಲಿ ಪಲವೆಡೆಯೊಳಿರ್ದ ಕೆಲಕೆಲವನರ್ಘಮಣಿಭೂಷಣಸ್ತೈಮರಾಜತಾಸನಭಾಜನವಾಹನಬಿರುದಾವಳಿಧ್ವಜಚ್ಛತ್ರಚಾಮರ ವಸ್ತ್ರಶಸ್ತ್ರಪುಸ್ತಕಾದಿನಾನಾವಿಧಸಾಧನಸಂಪತ್ತುಗಳಂ ಚಡವುಡನೆ ಪಿರಿದುಂ ಸಾಸದಿಂದುಯ್ತುಂದು ಪಲವುಂಬಾಗಿಲ್ಗಳಿಂ ಪೊರವಡಿಸುವನಿತರೊಳೆ ವೆಗ್ಗಳಿಸಿದ ಪೊಗೆ ಕಣ್ಣಂ ಮುಸುಂಕೆ ನಿವಿಸನಿವಿಸಕ್ಕಂ ಪೆರ್ಚಿದ ಢಗೆ ಮೆಯ್ಯಂ ಚುಚ್ಚೆ ಕಡುಭಯಮುಂಗೊಂಡು ಪಲವನಲ್ಲಲ್ಲಿಯೇ ಲೆಕ್ಕಿಸದುಳಿದು ಬೇಗಬೇಗನೆ ಬನ್ನಿಂ ಬನ್ನಿಮೆಂದೋರೊರ್ವರೋರೊರ್ವರನಾರಾರ್ದ್ದು ಕರೆಕರೆಯುತ್ತೆ ಪೊರಸಾರಲಾಕೋಲಾಹಲಮುಂ ಕೇಳ್ದಂತವುರದೊಳಿರ್ದ ಮೂರಾಣಿಯಾಕಸ್ಮಿಕಮಾಗಿ ಧಗಧಗನುರಿವಾಪಂದರಂ ನೋಡಿ ನೀಡುಂ ಮರುಗಿ ಹಾಹಾ ದೈವಾಜ್ಞೆಯೆಂತಿಪ್ಪುದೊ ಪೇಳಲರಿದೆಂದು ಜೆಂತಿಸಿ ಜಗದಂಬಿಕೆಯಪ್ಪ ಚಾಮುಂಡಾಂಬಿಕೆಯಂ ಮನದೊಳ್ನೆನೆದು ಕುಶಲಮುಂ ಪ್ರಾರ್ಥಿಸಿ ತಳ್ವದೋಲಗಸಾಲೆಯೊಳಿರ್ದ ಮಹನೀಯಮಪ್ಪ ಸಿಂಹಾಸನಮುಂ ಜಗನ್ಮೋಹನಪ್ರಾಸಾದಕ್ಕೆ ಬಿಜಯಂಗೆಯಿಸಿ ಮಂತ್ರಿಸಜೀವಾದಿಗಳ್ಗಾಕಿಚ್ಚಂ ನಂದಿಸಲ್ಕೆ ಪೆಸನಿತ್ತು ಮಹಾರಾಜಯುವರಾಜರೊಡನೆಯುಂ ರಾಜಕುಮಾರಿಯರೊಡನೆಯುಂ ಪರಿಜನಂಬೆರಸರಮನೆಯಂ ಪೊರಮಟ್ಟುಲೋಕರಂಜನಸೌಧಮುಂ ಪುಗುತರಲೊಡಂ ॥೨೦॥

ಕಂ ॥ ಭರದಿಂದಮಡರಿ ಮೇಲು ।
ಪ್ಪರಿಗೆಯ ನೆಡೆವಿಡದೆ ಸಾಸಿರಾಳ್ಗಳ್ನೀರಂ ॥

ಸುರಿಯುತ್ತಿರ್ಪೊಡಮಾ ಪೇ |
ರುರಿ ನಂದದೆ ಪರ್ವುತಿರ್ದುದೆತ್ತಲುಮಕಟಾ ||೨೩||

ವ|| ಅಂತು ಸುತ್ತುಂ ಪೊತ್ತಿಕೊಂಡು ಛಟಿಛಟಿಯಾತ್ಕಾರಂಬೆರಸುರಿಮು
ಸಗಿದಾಕಿಚ್ಚು ಸುಂದರತರಮೆನಿಸಿರಾ ದ್ದಪಂದರೆಲ್ಲಮುಂ ಪೆಸರಿಲ್ಲದಂತಾಗಿಸಿ
ವಿಚಿತ್ರತರಮಪ್ಪ ಕಲ್ಯಾಣಮಂಟಪಮುಂ ಕಬಳಂಗೊಂಡಂಬಾವಿಲಾಸಮ
ನಿಂಬುಗಿಡಿಸಿ ಕೈದುಸಾಲೆಯುಂ ಬೂದಿವಾಡಿ ಸರಸ್ವತೀಭಂಡಾರಮುಂ ಸ
ಮಾಪ್ತಿಗೆಯ್ದು ಹೃದ್ಯತರಾನೇಕವಿಧಯುಂತ್ರವಾದ್ಯಂಗಳ್ಗೇಕಾಶ್ರಯಮಪ್ಪ
ರಾಗವಾಲಾಲಯಮುಂ ಲಯಮುಂ ಪೊರ್ದಿಸಿ ಬಿರುಗಾಳಿಯೊಡ್ಡಣೆಯಿಂದಡ್ಡ
ವಾಯ್ದಡ್ಡಮಾದೊಡ್ಡೋಲಗಮುಂ ಸಡ್ಡೆಗೆಯ್ಯದೊಳಪೊಕ್ಕು ಧಗಧಗಿಸು
ತ್ತಿರ್ಪಿನೆಗಂ ||೨೪||

ವೃ|| ಭುಗುಭುಗಿಲೆಂದು ಮೇಲಡರುತುರ್ವಿದ ಕರೊಗೆ ತೋರದತ್ತು ಕ |
ರ್ಮಗಿಲ ತೆರಳ್ಕೆಯಂತಿ ಸಭೆದೊಳ್ವಿಧೋತ್ತಮಪಸ್ತುದಾಹದಿಂ ||
ಬಗೆಬಗೆಬಣ್ಣವಾಂತುರಿಗಳೆತ್ತಲುಮುಣ್ಮತಿರಲ್ದವಾಗ್ನಿ ಪೊ |
ರ್ಪುಗೆಗೊಳಲುಜ್ಜಳಿಪ್ಪ ಗಿರಿಯಂತಿರೆ ತೋರಿಮದಾನೃಪಾಲಯಂ ||೨೫||

ಕಂ|| ಆನಿಲಾನಲಜಲಧರಣಿಗ |
ಳೆನಿಸುಂ ತಮ್ತಮ್ಮ ಮೇರೆಯುಂವಿಾರದಿರಲ್ ||
ಮನೆಯಿರ್ಕುಂ ಜನವಿರ್ಕುಂ |
ಮನೆ ಜನನೆಂಬುಕ್ತಿಯುಂಟೆ ಭೂತಾತ್ಯಯದೊಳ್ ||೨೬||
ಅಡಿಯಿಂದಂ ತುದಿವರಮುರಿ |
ಛಡಾಳಿಸಿದ ರಾಜಗೃಹದ ನೆಲೆಯೊಂದೊಂದುಂ ||
ಕೆಡೆಯುತ್ತಿರಲತ್ತಿತ್ತಂ |
ಧಡಧಡ ಎಂಬುಲಿವದೊಂದೆ ಕೇಳಿಸಿತಾಗಳ್ ||೨೭||
ಶ್ರೀಕೃಷ್ಣರೂಪನೆನಿಸಿ |
ಪ್ಪಿಕೃಷ್ಣನೃಪಂಗೆ ನೂತ್ನಗೃಹಮಕ್ಕೆಂಬಾ ||
ನಾಕಿಗಳಿಷ್ಟದಿನೆನೆ ಭ |
ಸ್ಮೀಕರಿಸಿದನಕ್ಕುಮಗ್ನಿ ಪಳೆಯರಮನೆಯಂ ||೨೮||

ವ|| ಇಂತು ಮೂರುಂದಿನಮುರಿದ ಬಳಿಯಂ ||೨೯||

ಕಂ|| ಧರೆಯೊಳ್ಕೆಡೆದಿರ್ದುವು ಸೀ |
ಕರಿವೋಗಿ ನರೇಂದ್ರಮಂದಿರದ ಶಿಖರಂಗಳ್ ||
ಪುರಮರ್ದನನುರಿಗಣ್ಣಿಂ |
ದುರುಪಿದ ಮುಪ್ಪೊಳಲ ಪಲವು ಶಿಖರಂಗಳವೋಲ್ ||೩೦||

ವ|| ಅನಂತರಂ ಮಹಾರಾಜ್ಞೋಯಿತ್ತಾಜ್ಞೆಯಿಂ ಪ್ರಾಜ್ಞಶೇಖರಂ ಶೇಷಾದ್ರಿಮಂತ್ರೀಶ್ವರಂ ವೈಶ್ವಾನರಂ ಪತ್ತಲಿನಿಸಾನುಮೆಡೆಯಿಲ್ಲದಂತುಂ ಮುನ್ನಿರ್ದುದರ್ಕೆ ನೂರ್ಮಡಿಯೆನೆ ಸೊಬಗುವಡೆದಿರ್ಪಂತುವಾತಾಣದೊಳ್ಪಲವಗೆಯ ಬಿರುಗಲ್ಗಳಿಂದಿಳಿಗೆಲ್ಲಂ ಬಿಸವಂದವನೊಡರಿಸುವ ಪೊಸತಪ್ಪರಮನೆಯುಂ ಕಟ್ಟಿಸಲ್ಕರ್ಕಸಚಿವರ್ಗೆ ಬೆಸನೀಯಲೊಡಂ ||೩೧||

ಕಂ|| ನಿರುಪಮಶಿಲ್ಪಾಗಮಸಾ |
ಗರಪಾರಂಗತರೆನಿಪ್ಪ ಶಿಲ್ಪಿಗಳಂ ನೂ ||
ರ್ವರನಾಸಚಿವವರೇಣ್ಯ |
ರ್ಬರಿಸಿದರಾಕ್ಷಣಮೆ ನಾಡುನಾಡುಗಳಿಂದಂ ||೩೨||

ವ|| ಅಂತುಬರಿಸಿದಾಶಿಲ್ಪಿಗಳಂ ಧೀಮಂತನಪ್ಪ ಶೇಷಾದ್ರಿಮಂತ್ರಿವರ್ಯಂ ಶುಭನುಮುಹೂರ್ತದೊಳರಮನೆಯಂ ಕಟ್ಟಿಸಲ್ತೊಡಗಿದ ಸಮನಂತರದೊಳ್ಮಹಾರಾಜ್ಞೋಯಜ್ಞೇಶ್ವರಂ ದಯಗೆಯ್ದು ಮಾಣ್ದಿರ್ದರಮನೆಯ ಪಿಂದಣ ಕರುಮಾಡಮನಿಂಬುಗೊಂಡು ಬಂಗಾಳದೊಳಿಪ್ಪಾಂಗ್ಲೇಯಸರ್ವಾಧಿಕಾರಿ ತಿಳಿಪಿದಂದಕ್ಕೆ ಮಹಾರಾಜಯುವರಾಜರ್ಗಾಂಗ್ಲೇಯಸಂಸ್ಕೃತದಿನಿರವದ್ಯವಿದ್ಯಂಗಳನತಿಶಯದಿಂ ಕಲಿಸಲ್ವೇಳ್ಕುಮೆಂದು ರಾಜನೀತಿಶಿಕ್ಷಾವಿಚಕ್ಷಣನುಮಾಂಗ್ಲೇಯನುಮಪ್ಪ ಫ್ರೈಜರೆಂಬುಪಾಧ್ಯಾಯನಂ ಕರೆಯಿಸಿನಿಜಕುಮಾರರಿರ್ವರುಮನಾತಂಗೆ ಬಸಂಗೊಳಿಸುವುದುಂ ||೩೩||

ಕಂ|| ಆಯತ್ತರೆಣ್ಬರಾಗೆ ಸ |
ಹಾಯೋಪಾಧ್ಯಾಯರಾಕುಮಾರರನೊಲ್ದಾಂ ||
ಗ್ಲೇಯೋಪಾಧ್ಯಾಯನವಂ |
ಸ್ವಾಯತ್ತರನೆಸಗಿ ಕಲಿಸಿದಂ ಬಿಜ್ಜಿಗಳಂ ||೩೪||

ವ|| ಅದೆಂತೆನಲಾಂಗ್ಲೇಯನಾಮಹೋಪಾಧ್ಯಾಯನಾರಾಯುಗುವರಂ ಲೋಕರಂಜನಮೆಂಬುಪವನಸೌಧದೊಳೋರಗೆಗೊಂಡಿರ್ಪ್ಪೆಳೆಯುರ್ವೀರ

ಸು ನೆಲೆಗೊಳಿಸು ಮುಹಾರಾಜಂಗೆ ಮೇಲಣ ತರಗತಿಯೊಳುಂ ಯುವರಾಜಂ
ಗದರಿಂ ಕೆಳಗಣ ತರಗತಿಯೊಳುಮೊಂದು ಪೊಳ್ತಂಗ್ಲೇಯಭಾಷೆಯೊಳು
ಮಿನ್ನೊಂದು ಪೊಳ್ತು ಗೀರ್ವಾಣವಾಣಿಯೊಳುಮಿನಿಸು ಪೊಳ್ತೊಳ್ಗನ್ನಡದ
ನುಡಿಯೊಳುಮಿನಿಸಾನುಂ ಪೊಳ್ತಿಂದುಸ್ಥಾನದ ವಾಕ್ಯೆನೊಳುಂ ಪೆಸರ್ಗೊಂ
ಡಿಪ್ಪುತ್ತಮಗ್ರಂಥಂಗಳನೋದಿಸುತ್ತುಂ ಮತೊಂದು ಪೊಳ್ತು ವಾರುವ
ದೇರಾಟದೊಳ್ಪಾಟವಮುಂ ಮತ್ತವೊಂದು ಪೊಳ್ತಂಗಸಾಧನವ್ಯಾಸಂಗದೊಳ್ಪುಂ
ಗದ ಕಾಯಶಕ್ತಿಯನೊಂದಾನುಂ ಪೊಳ್ತು ಚಿತ್ರಲೇಖನಪರಿಶೀಲನದೊಳ್ಪಮು
ಸ್ತವಸ್ತುಸ್ವರೂಪಾಭಿವ್ಯಕ್ತಿಯುಂ ಕಿರಿದು ಪೊಳ್ತು ಸೈನ್ಯವಿನ್ಯಾಸಪರಿಶ್ರಮ
ದೊಳುಂ ಬಹುವಿಧಶಸ್ತ್ರಪ್ರಯೋಗಪರಿಪಾಟಿಯೊಳುಮುಪಾರವೀರ್ದಸಃಖಿನಿ
ವೇಶಮುಂ ಜೀರೊಂದು ಪೊಳ್ತು ರಾಜನೀತಿಯೊಳುಮರ್ಥಶಾಸ್ತ್ರದೊಳುಂ
ರಾಜ್ಯಭಾರಧುರಂಧರತೆಯುಂ ಪೆರತೊಂದು ಪೊಳ್ತು ಸಹಪಾಠಿಗಳ್ವೆರಸು
ಕಂತುಕಕ್ರೀಡಾದಿನಾನಾವಿಧಖೇಲನಂಗಳೊಳ್ಮನೋವಿನೋದಮುಂ ನಸು
ಪೊಳ್ತು ಗೀತವಾದಿತ್ರಪರಿಶ್ರಮದೊಳಾತ್ಮಾನಂದಮನೊಡರಿಸುತ್ತುಂ ದಿನದಿ
ನಮುನುನುನಯದಿಂದನವದ್ಯವಿದ್ಯಾಭ್ಯಾಸಂಗೆಯಿಸುತ್ತಿರ್ದನಿಂತಿಪ್ಪಗಳ್‌॥

ಕಂ॥ ಓರಂದದೆ ಗುರುವೊಲ್ದು ಮ |
ಹಾರಾಜನ ಚಿತ್ತಭಿತ್ತಿಯೊಳ್ಪಚಿಸಿದ ನಾ ॥
ನಾರೂಪಮದೇನೆಸೆದುದೊ |
ಸಾರತರಾಮೇಯವಿದ್ಯೆಯೆಂಬಾಲೇಖ್ಯಂ ॥೩೬॥

ವೊರೆಯೇರುತ್ತಿರ್ದುದು ತ |
ದ್ಗುರುಬೋಧಿಸುತಿರ್ದ ವಿದ್ಯೆ ಯುವನೃಪನ ಹೃದಂ ॥
ತರದೊಳ್ಸುಧಾಂಶುಕಲೆ ತರ |
ತರದಿಂ ಸಿತಪಕ್ಷದಲ್ಲಿ ಪೆರ್ಚುವ ತೆರದಿಂ ॥೩೭॥

ವೃ॥ ಆರಾಜೇಂದ್ರಕುಮಾರರೊಲ್ದಡರ್ದು ತಮ್ಮುಮ್ಮತ್ತಮಾಶ್ವಂಗಳಂ |
ಧೀರಾಗ್ರೇಸರರಾಗಿ ಗರ್ತ್ತದೆಡೆಯೊಳ್ಕೈಲಾಗ್ರದೊಳ್ಕಾಡೊಳಂ ॥
ತೂರೊಳ್ಪೀದಮದಿಲ್ಲದಂತು ನಳರೇವಂತರ್ಕಳಂ ಪೋಲ್ತು ಸಂ |
ಚಾರಂಗೆಯ್ವರೆನಲ್ಕೆ ಬಣ್ಣಿಪೆನದೇನಾಘೋಟದೇರಾಟಮಂ ॥೩೮॥

ಆದರದಿಂದೆ ಪೂರ್ವನೃಪವೃತ್ತಮನಂತು ಖಗೋಳರೂಪಮಂ |
ಮೇದಿನಿಯಲ್ಲಿ ತೋರುವ ಸಮಸ್ತಚರಾಚರವಸ್ತುಜಾತಿಯಂ ||

ಭೇದಮನಾಂತನೇಕಮತರೀತಿಯುಮಂ ತಿಳಿಪಲ್ಬುಧರ್ಕಳಾ |
ಯಾದವವಂಶಪಾಲರರಿದರ್ನಿಜಹಸ್ತತಲಾಮಲಕಂಬೊಲೆಲ್ಲಮಂ ||೩೯||

ಅನುದಿನಮಂಗಸಾಧನವಿಶೇಷದಿನಂಗದೊಳುಣ್ಮೆ ಪಾಟವಂ |
ಮನದೊಳಗುರ್ಕೆ ವೀರರಸಮಾಂತು ಮಹಾವಿವಿಧಾಯುಧಂಗಳಂ ||

ಘನತರಶಾಸನಾರ್ಭಟಿಯಿನಂತು ಗುರೂದಿತಮಾರ್ಗದಿಂದಮಾ |
ಜನಪಸುತರ್ಪದಂಗೊಳಿಸುವರ್ಪಡೆಯಂ ಪೊಸರಲ್ಪಣಾಗ್ರಹಂ ||೪೦||

ಕಂ|| ಪರಿಕಿಸಿ ಬಾಲರ ವಿದ್ಯಾ |
ಪರಿಣತಿಯಂ ರಾಜಮಾತೆ ವಿದ್ಯಾಭ್ಯಾಸ ||
ಕ್ಕುರುತಂಫಲಮೆನಿಪ ಕುಮಾ |
ರರ ಜಾಣ್ಮಂ ವಿನಯಸಿರಿಗಮಾಮೋದಿಸಿದಳ್ ||೪೧||

ಗುರುಲೋಕಂ ಪತ್ರಿಕೆಯೊ |
ಳ್ಪರೀಕ್ಷೆಯನೊಡರ್ಚಿ ಕೃಷ್ಣರಾಜಕುಮಾರಂ ||
ಬರೆದಂ ಪ್ರಶ್ನಾನುಗುಣೋ |
ತ್ತರಂಗಳಂ ಪೃಚ್ಛಕರ್ಕರಂ ಮೆಚ್ಚುವನಂ ||೪೨||

ಅನಿತುಂ ಬಾಸೆಗಳೊಳ್ಕೃ |
ಷ್ಣನೃಪಂ ಮುತ್ತುಗಳನೆಯ್ದೆ ಕೋದಂತೆ ಸುದ ||
ರ್ಶನಮುಹವರ್ಣಾಳಿಯ ಲೇ |
ಖನದಿಂದೋಜರ್ಗೊಡರ್ದಿದಂ ಸಂತಸಮಂ ||೪೩||

ವ|| ಇಂತಿವರ್ಗಳಾಂಗ್ಲೇಯನಾವುಹೋಪಾಧ್ಯಾಯನಾಂಗ್ಲೇಯಾ ದಿಭಾಷೆಗಳೊಳ್ನಿಗಳ್ತೆವೆತ್ತ ಪಲವುಂ ಕಬ್ಬಂಗಳೊಳುಮರ್ಥಶಾಸ್ತ್ರಂ ಮೊದಲಪ್ಪ ಶಾಸ್ತ್ರಂಗಳೊಳಂ ದಿನದಿನಕ್ಕಂ ದಳವೇರುತಿರ್ಪ್ಪುದಾಳಿಗಳ ಜಾಣ್ಮಂ ಮನಂದಂದದಂ ದಿಮ್ಮಿದರಪ್ಪಕ್ಕರಿಗರಿಂ ಪರೀಕ್ಷಣಂಗೆಯಿಸಿ ನೆರೆ ತೀರ್ಗಡೆವಡೆದ ಮಾರಾಯಂ ಮೊದಲಪ್ಪರೆಲ್ಲರ್ಗಂ ಬಹುಮಾನಸಭೆಯೊಳಗಾಸನಮಂ ಪರಿಗ್ರಹಿಸಿದ ಲೀವಾರ್ನರೆಂಬಾಂಗ್ಲೇಯರಾಜಕೀಯಮುಖಾಧಿಕಾರಿಯಿಂ ಪುರೋಭಿವೃದ್ಧಿಯುಂ ತಿಳಿಪಿಯುಮುಚಿತಪ್ರಕಾರದಿಂ ಮೆಚ್ಚಂ ಕಯ್ಕೊಳಿಸಿ

ಯುಂ ಪಿರಿದುಂ ಪ್ರೀತ್ಯಾಹವನೊಡರ್ಚಿ ಬಳಿಕಮಾಸಭಾಧ್ಯಕ್ಷನೊಪ್ಪು ಗೊಟ್ಟಂದಕ್ಕೆ ಮಹಾರಾಜನ ವಿದ್ಯಾಭಿವೃದ್ಧಿಯ ಬಿನ್ನವತ್ತಳಿಯಂ ಒಂಗಾಳ ದೊಳಿಪ್ಪಿಂಗ್ಲೀಯಸರ್ವಾಧಿಕಾರಿಯಲ್ಲಿಗೆ ಕಳಿಪಿ ಕಡುವಿನ್ನಣಿಯೆಂದು ನೆಗಳ್ತೆವಡೆದನಲ್ಲಿಂಬಳಿಯಂ ॥೪೪॥

ಕಂ॥ ಅನವದ್ಯವಿದ್ಯೆಗಳನಿಂ ।
ತನುಜಂ ಬೆರಸೋದುತಿಪ್ಪಿರಿಸಂ ಶ್ರೀ ಕೃಷ್ಣಾ ॥
ವನಿಪಾಲಂ ಷೋಡಶಹಾ ।
ಯನಸೇನೊಪ್ಪಿದನೊ ಯೌವನೋದಯದಿಂದಂ ॥೪೫॥

ಬರೆ ಜೈತ್ರಂ ಮಾಮರದಂ ।
ತಿರೆ ಬರಲಾಶ್ವಯುಜಮಾಸಮರಸಂಜೆಯವೋಲ್ ॥
ಅರಸನವಂ ಮುಂಬರೆಯಂ ।
ಬರೆ ನೆರೆ ಮೆಯ್ಸೊಬಗನಾಂತದೇನೊಪ್ಪಿದನೋ ॥೪೬॥

ವ॥ ಇಂತಿಪ್ಪಿರ್ಪಾಗಳ್ಸಾರ್ಕ್ಕಂಜನ್ವನೆಯಾದ ಮೂರನೆಯಣುಗಿಯುಂ ಚೆಲ್ವಾಜಂಬೆಯುಂ ಕಪ್ಪಡಿಯ ರಾಜರಾಜನೆಂಬರಸನ ಕುಮಾರನಪ್ಪ ಲಕ್ಷ್ಮೀಕಾಂತರಾಜನೆಂಬನುರೂಪವಯೋಗುಣಸಂಪನ್ನನಾದ ವರಂಗಿತ್ತು ಮದುವೆಯುಂ ಮಾಡಲೆಣಿಸಿರ್ದ ಮಾರಾಣಿ ಮುಂಬರೆಯುಂ ಮೂಡಿದ ಮಹಾರಾಜನಂ ನೋಡಿ ಕನ್ಯಾದಾನದೊಡನೆಯೆ ಕನ್ಯಾಪ್ರತಿಗ್ರಹಮುಮುಂ ಮಾಡಲ್ಕಿದು ಸಮುಚಿತಮಪ್ಪ ಸಮಯಮೆಂದು ಬಗೆದಾತನ ವಿವಾಹಕ್ಕೆ ನಾಡುನಾಡೊಳು ಮಿಪ್ಪರಸುಗಳ ಕನ್ನೆಯರೊಳ್ವರಸಾಮ್ಯಮಿಪ್ಪೊರ್ವ ಕನ್ನೆಯನರಸಿ ದೈವಾನುಕೂಲ್ಯಮಿರ್ಪೊಡದಂ ಬಂದು ತಿಳಿಪುವುದೆಂದು ಶೇಷಾದ್ರಿಮಂತ್ರಿವರ್ಯಂ ಗಾಣತಿಯನೀವುದುಮಾತಂ ಪರಿಜನಸಮೇತನಾಗಿ ರಾಜಧಾನಿಯಿಂ ತೆರಳ್ದು ಪಲವುಂ ನಾಡುಗಳೊಳಾರಯ್ದು ವರಾನುಗುಣ್ಯಮಪ್ಪ ಕನ್ನೆಯನೆಲ್ಲಿಯುಂ ಕಾಣದೆ ನಿರ್ಜರಲೋಕಸದೇಶಮಪ್ಪ ಘೂರ್ಜರದೇಶಮನೆಯ್ದಿವಂದಲ್ಲಿ ನೆಗಳ್ದ ಝಾಲಾ ರಾಣಾ ವಿನಯಸಿಂಹನೆಂಬರಸನಲ್ಲಿಗೆ ರಾಜಕೀಯಮರ್ಯಾದಾನುಸಾರದಿಂದೆಯ್ತಂದಾತನ ಕುಮಾರಿಯಂ ಪ್ರತಾಪಕುಮಾರಿಯೆಂಬ ಸನ್ನುತ ಕುಲಶೀಲರೂಪಲಕ್ಷಣಸಂಪನ್ನೆಯುಂ ಕನ್ನೆಯುಂ ನೋಡಿ ನೀಡುಂ ಸಂತಸ

ಮನಾಂತೆವ್ಮಾಳ್ದನಂ ಕಯ್ವಿಡಿಯಲ್ಕೆ ತಕ್ಕುಮೆವಡೆದಿರ್ಪ್ಪ ಕನ್ಯಾಮಣಿ
ಯಾಕೆಯಲ್ಲದೆ ಬೇರೊರ್ವಳಿಲ್ಲೆಂದು ತರಿಸಂದಲ್ಲಿಂ ಪಿಂದಿರುಂಗಿ ರಾಜಧಾನಿ
ಯುಂ ಪುಗುತಂದು ಮಾರಾಣಿಯು ಸನ್ನಿಧಾನಕ್ಕೆ ನಡೆತಂದು ತಾಂ ಪೋಗಿ
ಬಂದ ಹದನೆಲ್ಲಮುಂ ತಿಳಿಪಿ ನಿಜಾಶಯಮುಮುಂ ಬಿನ್ನವಿಸಲಾವಾತೆ ಮನಂ
ಬುಗಲಾರಾಜಮಾತೆ ವಿನಯುಸಿಂಹರಾಜನೊಡನೆ ಕೊಳ್ಳೊಡೆಯುಂ ಬಳಸಲ್ಕೆ
ನಿಶ್ಚಯುಂಗೆಯ್ದು ಸನುನಂತರಮೆ ತಳ್ವದೆ ರಾಯುಭಾರಿಗಳಂ ಬಳಿಯುಟ್ಟಿ
ರಾಯುಮನ್ನಣೆಯಿಂದಾಕನ್ಯಾಮಣಿಯುನನುಬಂಧಿವರ್ಗಂಬೆರಸು ಕರೆಯಿಸ
ಲೊಡಂ ॥೪೭॥

ಕಂ॥ ವರಕೃಷ್ಣರಾಜನಾಮದೆ ।
ಧರಣಿಯೊಳವತರಿಸಿದಲರ್ವೊಡೆಯನೊಡಗೂಡ ॥
ಲ್ಕರಗುವರಿಯಾಗಿ ಬಂದಿಂ ।
ದಿರೆಯೆನಲಾಕನ್ಯಕಾಶಿರೋಮಣಿಯೆಸೆದಳ್ ॥೪೮॥

ವೆ॥ ಅಂತು ಸಾರ್ತಂದ ಸೌಂದರ್ಯದ ಕಣಿಯಪ್ಪ ಕನ್ಯಾಮಣಿಯಂ
ಸಾಕ್ಷಾತ್ಕರಿಸಿ ಸುಕ್ಷತ್ರಿಯಾಣಿಯರ್ಗೆ ಸಹಜಂಗಳಪ್ಪ ತದೀಯಸುಗುಣ
ಲಕ್ಷಣಂಗಳ್ಗೆ ಸಂತಸಂಬಟ್ಟನಿಳಂಬದಿಂ ಪ್ರತಾಪಕುಮಾರೀಮಹಾರಾಜರ
ಪರಿಣಯಕ್ಕಂ ಮುನ್ನಮೆ ನಿಶ್ಚಯಿಸಿರ್ದ ಚೆಲ್ವಾಜಂಬಾಲಕ್ಷ್ಮೀಕಾಂತರಾಜರ
ಪರಿಣಯಕ್ಕಂ ಶುಭಮುಹೂರ್ತಂಗಳಂ ಸೌಹೂರ್ತಿಕರಿಂ ನಿರ್ಣಯಿಸಿ ಪೊಸ
ತಪ್ಪರಮನೆಯೆಸಕಮಿನ್ನುಂ ಕೇರ್ಗಟ್ಟನೊಳರ್ದುದರಿಂ ಜಗನ್ಮೋಹನಪ್ರಾ
ಸಾದದ ಮುಂದೆಸೆಯೊಳ್ವ ವಾಹಾದಿಮಹೋತ್ಸವಂಗಳ್ಗನುಕೂಲಮಪ್ಪ ರಚ
ನೆಯಿಂ ಸುವಿಶಾಲಮುಪ್ಪೊಡ್ಡೋಲಗಸಾಲೆಯಂ ಕಿರಿದುಂ ದಿನದೊಳೆ ಕಟ್ಟಿಸ
ಲ್ವೇಳ್ಕುಮೆಂದಾಮಾರಾಣಿ ಮಹಾಮಾತ್ಯಂಗೆ ಕಟ್ಟುಮಾಡಲೊಡಂ ॥೪೯॥

ಕಂ॥ ಜಗಮೆಲ್ಲಂ ಪೊಗಳ್ವನ್ನಂ ।
ಬಗೆಗೊಳ್ವ ವಿಚಿತ್ರರಚನೆಯಿಂ ಪ್ರವಿದಿತಶಿ ॥
ಲ್ಪಿಗಳಿಂದಾಮಂತ್ರಿವರಂ ।
ನೆಗಳ್ದಿದಂ ವಿಪುಲನೃಪಸಭಾಮಂಟಪಮಂ ॥೫೦॥

ವ॥ ಇಂತು ಪೊಸತಪ್ಪೋಲಗಸಾಲೆ ಕಡುಬೇಗಮೆ ಸಜ್ಜಾಗುವುದ್ದು
ಮಾಮಂತ್ರಿಶಿರೋಮಣಿ ಮಾರಾಣಿಯುಸಿಯೋಗದಿಂ ದೇಶದೇಶಂಗಳೊಳ

ಪ್ಪರಸರ್ಗಂ ಪ್ರಮುಖರಪ್ಪಿತರರ್ಗಮುಭಯವಿವಾಹಮಹೋತ್ಸವಲಗ್ನಪತ್ರಿಕೆಗಳಂ ಕಳಿಪಿ ಸಕಲಶುಭಸಂಭಾರಂಗಳಂ ಸಜ್ಜುಗೊಳಿಪುದೆಂದಧಿಕಾರಿಗಳ್ಗೆ ಬೆಸನೀಯಲೊಡಂ ||೪೧||

ಕಂ|| ವಿಳಸದ್ಭೂಷಾಂಬರಮುಂ |
ಜುಳಾಸ್ತರಣಭಾಜನಾದಿವಸ್ತುಗಳುಂ ವೆ ||
ಗ್ಗಳಮೆನಿಸಿದ ಧನಧಾನ್ಯಂ |
ಗಳನವರಣಿಗೆಯ್ದರಾಮದುವೆಯೆರಡರ್ಕಂ ||೪೨||

ವ|| ಮತ್ತಮಾಮಂತ್ರೀಶ್ವರನ ಶಾಸನದಿಂ ಶಿಲ್ಪಿಜನಮನಲ್ಪಕೌಶಲದಿಂ ಸಿಂಗರಿಸಿದ ಮಹೀಶೂರಪತ್ತನಮೆತ್ತೆತ್ತಮುಂ ರಾಯವೀದಿಗಳ ಚೌಪಟಚೌಪಟದೊಳಂ ಚಚ್ಚೌಕಮೆಣ್ಮೂಲೆ ಬಟ್ಟು ವೊದಲೆನಿಸಿದ ಪಲವುಂ ಪರಿಜುಗಳಿಂದೆಯುಂ ಪುಣ್ಣಿಮೆಯ ಬೆಳ್ದಿಂಗಳಂತೆ ಪಸರಿಸಿದೊಳವೆಯ್ಯುವೇಲ್ಕಟ್ಟನೆಡೆಯೆಡೆಯೊಳತ್ಯಾಶ್ಚರ್ಯಕರಮಪ್ಪಾಲೇಖ್ಯಕಾರಕರಕೌಶಲಸಂಪದಮಿದೆಂಬಂತೆ ಚಿತ್ರಿಸಿದಭಿರೂಪಶರದಭ್ರಖಂಡಂಗಳಿಂದೆಯುಂ ಸುರುಚಿರ ಸಂಧ್ಯಾರಾಗದಿಂ ತೆಯುಂ ನಿಟ್ಟಪೊಡೆ ಪಾರಿಬಪ್ಪಂತಿರೆ ತೋಪ್ಪ ಶುಕ ಹಂಸಕಪೋತಾದಿವಿಹಂಗಮಶ್ರೇಣಿಗಳಿಂದೆಯುಮುಮಲ್ಲಲ್ಲಿ ಕರವೊಪ್ಪಂಬೆತ್ತು ವಿರುವಿರುಗುವ ಬೆಳ್ಳವಟ್ಟೆಯಿಂದಂತು ಪೊಂಬಟ್ಟೆಯಿಂದಾಗಿಸಿದ ಪಲವುಂ ತಾರಗೆಗಳಿಂದೆಯುಂ ನಟ್ಟಿಡೆಯೊಳುಮಂತು ಸುತ್ತುಮಿಳವಿಟ್ಟ ಪೂಗಿಡುಗಳಂದದ ಪೊಳೆಪೊಳೆವ ಪಳುಕಿನ ಬಹುರೂಪದೀಪಭಾಜನಂಗಳಿಂದೆಯುಂ ಕಿಳ್ಮಯ್ಯ ಬಳಸಿನೊಳೆಡೆವಿಡದೆ ಸಾಲ್ಗೊಳಿಸಿ ರಚಿಸಿಪ್ಪ ವಿಜೆತ್ರತರಪತ್ರಮುಯುಂಗಳಪ್ಪ ಕುಸುರಿವೆಸದ ಕಿರುಮಂಟಪಂಗಳೊಳ್ಪದಂಗೊಳಿಸಿದ ಸುಮನೋರಮದಂತನುಯದೈವತಪ್ರತಿಮೆಗಳಿಂದೆಯುಂ ಮತ್ತೆ ಮೇಗುಂ ಕೆಳಗುಂ ತೊಳತೊಳಗುವ ಪೊಂಬಟ್ಟೆಯಿಂ ಗೆರೆಗೊಂಡ ದಟ್ಟಜಿಳ್ವಟ್ಟೆಯ ಕೇರ್ಗಟ್ಟನೊಳ್ಕಳಗಟ್ಟಿದ ಪಲವುಂಬಣ್ಣಂಗಳಿಂ ತಿಟ್ಟವಿಟ್ಟ ಕಮಲಕಲ್ಹಾರಾದಿ ಕುಸುಮಂಗಳಿಂದಂತು ಮಿನಾದಿನಾನಾವಿಧಜಲಚರಂಗಳಿಂ ಕೂಡಿ ನಾಡೆನೋಡಿದೊಡೆ ತಿಳಿನೀರನೊಳಕೊಂಡಿಪ್ಪಂತೆ ಕಣ್ಗೊಳಿಸುವ ತಾವರೆಗೊಳಂಗಳಿಂದೆಯುಂ ಕಳೆಯಳಿಯದೊಳ್ವಣ್ಣಂಗಳ ಬರೆಪದ ಜಾಣಿಂ ಕಾಣಿಸಿದ

ನೇಕವಿಧಗೈರಿಕಂಗಳಿಂದಮುಂ ಮೇವೆಮೀಗಣಿಂ ಕೆಳಕೆಳಗೆ ಪರಿತಪ್ಪ ಬೆ
ಳ್ಪೊನಲ್ಗಳಿಂದಮುಂ ಮುಗಿಲ್ವಟ್ಟೆಯುಂ ಮುಟ್ಟುವ ಶಿಖರಂಗಳಿಂದಮುಂ
ಪಸುಪೆ-ತ್ತಲ್ಲಲ್ಲಿ ತೋರ್ಕೆವಡೆವ ತರುಲತಾಗುಲ್ಮಂಗಳಿಂದಮುಂ ಪ್ರಲಿ ಕರಡಿ
ಸಿಂಗಂ ಮೊದಲೆನಿಸಿದ ಕಾಳ್ಮಿಗಂಗಳಿಂದಮುಂ ಕೂಡಿ ನೋಡುವರ್ಗೆ ನಿಶ್ಚಿತ
ಮತಿಯಂ ಪುಟ್ಟಿಸುವ ಬೆಟ್ಟುಗಳಿಂದೆಯುಂ ಕಣ್ಗೆವಪ್ಪ ಬಿರಿಮುಗುಳ್ಗಳಿಂ
ದಂತು ಕಳವಣ್ಗಳಿಂ ಸಂಗಳಿಸಿದ ಪಲತೆರದ ಬಳ್ಳಿಗಿಡುಗಳಿಂದಭಿರಾಮುಂಗಳ
ಪ್ಪಾರಾಮುಂಗಳಿಂದೆಯುಮೊಗ್ಗೊಗ್ಗಾಗಿ ಸಾಲಿಟ್ಟು ಬಪ್ಪಂತಿರೆ ದಿಟ್ಟಿಗೊಳಿ
ಸುವ ಚತುರಂಗಸೇನೆಯಿಂದೆಯುಂ ಮತ್ತಂ ಪಲವುಂ ಬಣ್ಣದ ಪಟ್ಟವಟ್ಟೆ
ಗಳಂ ತರಂಬಿಡಿದು ಸುತ್ತಿ ದಾಯುವರಿದಲ್ಲಲ್ಲಿ ಸಿರಿಸಿದ ನೀಳ್ದ ಕೌಂಗಿನಮಾ
ಳ್ಗಂಬಂಗಳಿಂದೆಯುಮಾಕಂಬುಂಗಳಾದಲೆಯೊಳ್ಕತ್ತರಿಗಟ್ಟಿದ ಕಿರುದಾಳಂಗ
ಳಿಂದೆಯುಮಾದಾಳಂಗಳ ನಟ್ಟೆಡೆಯೊಳ್ಕಟ್ಟಿಪ್ಪ ತಿಳಿಗನ್ನಡಿಗಳಿಂದೆಯುಂ
ಮಾಕನ್ನಡಿಗಳ ಕೀಳೆಡೆಯೊಳ್ಕೀಲಿಸಿದ ಜೀವಕಳಿಯಾಂತ ಗಂದರಪ್ರತ್ತಳಿಗ
ಳಿಂದೆಯುಮಾಪುತ್ತಳಿಗ ಳಿಸೆವ ಕೀಲ್ಗಯ್ದಳಿದಿಂ ಪಿಡಿದೊಯ್ಯನೆ ರಯ್ಯಮೆ
ನಲೋರೊರ್ವೆ ಬೀಸುವ ಪೊಂಬಿಡಿಯು ಬೆಳ್ಗೌರಿಗಳಿಂದೆಯುಂ ಮತ್ತಮಾ
ಕಂಬುಂಗಳಡಿಯೆಡೆಯೊಳಳವಡಿಸಿಟ್ಟ ಬಾಯ್ಗೂಗಲದ ನುಣ್ಗುಂಡಿಗೆಗಳೊಳ್ಬಿಳಿ
ಯಿಸಿದ ಸೊಂಪುನೆತ್ತ ಪೂಗಿಡುಗಳೊಳಳ್ಳಲರ್ದು ನರುಗಂಪಂ ಬೀರುವ
ಪರಿವಡೆವ ಪೂಗಳ್ದೇರಗುವ ಮರಿದುಂಬಿಗಳ ಕಲಮಧುರಝಂಕಾರದಿಂದೆ
ಯುಂ ಪಲವರ್ಗೆಯ ಬಣ್ಣದಿಂ ರಂಜಿಸುವ ಪೊಂಜೇಗಡೆಯಿಂದಂತರಾಂತರಂದೊ
ಳ್ವಿರಚಿಸಿದ ಪರಿವರಿಯ ತೇರಣಿಯಿಂ ನೀಡುಂ ಬಾಗಿದಿಂದ್ರಚಾಪದಂದಮಂ
ಮುಂದಿಡುವ ಬಾಗಿಲ್ವಾಡಂಗಳಿಂದೆಯುಂ ಹೊರಸುತ್ತಿನ ಮುಂಜೂರೊ
ಳ್ಕೋರಣಿಸಿ ನೆಗಪಿದ ಬಿಂಗವಟ್ಟೆಯು ತಳತಳಿಪ ಕಕ್ಕುಂದರಿಯು ನಡುನಡುವೆ
ಸಮ್ಮಿರಿಸಿದ ಪೊಂಬುಗುರಿಗಳಿಂದೆಯುಂ ನಿರಿವಿಡಿದು ನೇಲ್ವಿಟ್ಟ ಮಿಳಿರ್ವ
ಪ್ಪುಲ್ಲಿಯ ಪೊಂಬಟ್ಟೆಯಿಂದೆಯುಂ ತಾರಾಪಥನುಂ ಚುಂಬಿಸುವ ಶಿಖರಭಾಗ
ದೊಳಿಂಬುಗೊಳಿಸಿದ ಪೊಂಗಳಸದಿಂದೆಯುಮತಿರಮಣೀಯಂಗಳಾಗಿ ಸಕಲ
ಜನಲೋಚನಾಸೇಚನಕಂಗಳಪ್ಪ ಕಾವಣಂಗಳೊಳಂ ಮುಂಗೋಡೆಯೊ
ಳ್ಪರಿವಿಡಿಯಿಂ ಕಟ್ಟಿಪ್ಪ ತಿಮನೋಹರಚಿತ್ರಪಟಂಗಳಿಂದೆಯುಮಲ್ಲಲ್ಲಿ ಕಟ್ಟು
ವಡೆದು ಸಚೇತನಂಗಳೆಂಬಂತಳುಂಬಂ ಸೊಬಗಾಂತೊಪ್ಪುವ ಪೊಂಬೊಂಬ

ಗಳಂದೆಯುಮಲ್ಲಲ್ಲಿ ನೆರೆ ಪೊಳೆವ ಕನಕಭೃಂಗಾದಿಪಟ್ಟಕೆಗಳಂ ಕಲ್ಪಿಸಿದ ಮುಂಜುಳತರಲತಾಪುಷ್ಪಮಂಜರಿಗಳಂದೆಯುಮಲ್ಲಲ್ಲಿ ಹಂತಿಗೊಳಿಸಿದ ಸಮು ಲ್ಲಸದ್ದೀಪವಲ್ಲಿಗಳಂದೆಯುಂ ಸೊಗಯಿಸುವ ಪುರಜನರ ಪೆರ್ಮಾಳಿಗೆಗಳ ಮೊಗಸಾಲೆಗಳೊಳಮನಿತುಂ ರಾಜವೀಥಿಗಳಕ್ಕೆಲದೊಳ್ಪಲವುಂಬಣ್ಣದ ಜೋ ನಾಂಬರಂಗಳಂದೆಯುಂ ಥಳಥಳಿಸಿ ಪೊಳೆಪೊಳೆವ ಪೊಂದಗಡುಗಳಂದೆಯುಂ ರಜಿಸಿದ ಚಾರುತರ ತೋರಣಪರಂಪರೆಯಿಂ ಕೆಳೆಗೊಳಿಸಿದಭ್ರಂಕಷಪತಾ ಕಾವಳಿಗಳೊಳಂ ಮಂಗಳಕ್ಕೆಂದು ಸಿಂಗರಂಗೊಳಿಸಿದ ನಳನಳಿಪ ಮಾಂದ ಳಿರ ತೋರಣಂಗಳಂದೆಯುಂ ಪಲವುಂತೆರದ ಪೂಮಾಲೆಗಳಂದೆಯುಮೊಡ ಗೂಡಿ ಶೋಭಿಸುವ ನುಳ್ಬಾಳೆಗಂಬಂಗಳಿಂದಿಂಬುಗೊಳಿಸಿದ ಮನೆಮನೆಯ ಬಾಗಿಲ್ವಾಡಂಗಳೊಳಂ ನಾನಾದಿಗ್ದೇಶಂಗಳಂ ಮಹೋತ್ಸವಾವಲೋಕನ ಕೌತುಕದಿಂ ಬಂದುಬಂದು ಕೇರಿಕೇರಿಯೊಳ್ನೆರೆದಿರ್ಪನೇಕಸಹಸ್ರಜನಂಗಳ ಕೂಟಕೂಟದೊಳಂ ತಮ್ಮ ತಮ್ಮ ಬಿಜ್ಜೆಯಂ ಬಿತ್ತರಿಸುತ್ತಿರ್ಪೈಂದ್ರಜಾಲಿಕ ದಂಡನಟಾದಿಬಹುವಿಧಖೇಲಕ ವಾದಕ ಗಾಯಕನಾಯಕರೊಳಂ ತಮ್ಮ ತಮ್ಮ ಕಡುಬೆಡಂಗುವಡೆದಸೊಬಗಿಂ ಪೌರಜನಕೆಲ್ಲಂ ರಂಭಾದಿದೇವಡಂಭೋರು ಗಳ ಸಂಭಾವನೆಯನೊಡರಿಸುವ ಮದನವೋಹನವಿದ್ಯಾವಶೀಕೃತಾನೇಕ ಜಪಿಯುರಪ್ಪ ನಟಿಯರೊಳಂ ಮಹೋತ್ಸವಕ್ಕೆಂದು ಮಹಾರಾಜ್ಞೆಯಾ ಜ್ಞೆಯಿಂ ಗಡಿಗಡಿಯತ್ತಣಿಂ ನಡೆತಂದು ನಾಲ್ಕುಂದೆಸೆಯೊಳ್ಬೀಡಂಬಿಟ್ಟ ಲ್ಲೆಲ್ಲಿಯುಂ ಪಂತಿಗೊಂಡೆಡೆಯಾಡುವ ಚತುರಂಗಸೇನೆಗಳ ವಂಗಡವಂಗ ಡಂಗಳೊಳಂ ನಿರತಿಶಯಶೋಭಾಕರಮೆನಿಸಿ ಮಹೋತ್ಸವಲಕ್ಷ್ಮೀನಿಕೇತ ನಮಾಗಿರ್ದುದಂತುಮಲ್ಲದೆಯುಂ ॥೫೪॥

ವೃ॥ ಪುರಜನಮೊಲ್ದಲಂಕರಿಸಿದಾಪುರವೀಥಿಗಳುಂ ಕರಂ ಮನೋ ।
ಹರಮೆನೆ ಸಿಂಗರಂಗೊಳಿಸಿದಾನೃಪಮಂದಿರಭದ್ರಶಾಲೆಯುಂ ॥
ಹರಿಸದೆ ಮನ್ನೆಯರ್ಗೆ ಜರರೀವ ಶುಭಾವಹಲಗ್ನವಿತ್ರಿಕೋ ।
ತ್ಕರಮುಮೊಡರ್ಚಿತುತ್ಸವಮನೀಕ್ಷಿಸಲೋಕಕೆ ರಾಜಧಾನಿಯೊಳ್ ॥೫೫॥

ವೆ॥ ಇಂತೆರಡುಂಮದುವೆಯ ಸನ್ನಾಹಂ ಮೆರೆಯುತ್ತಿರ್ಪಿನಂ ತನ್ನೊ ಡವರ್ಪ್ಪ ತಂತ್ರೀವೃತ್ತಾಂತದ ವೇಗಮುಂ ಮೀರಲೆಂಬಂತವಾಜ್ಞನಸಗೋ ಚರಮಷ್ಟ ವೇಗದಿಂ ಸರಿವರ್ಪ್ಪಸಾಧಾರಣಮೆನಿಸಿದ ಪೊಗೆವಂಡಿಯ ಮಾರ್ಗ

ವಿಂಧಾಮಹೋತ್ಸವಕ್ಕೆ ಪ್ರದುಕೋಟೆಯ ಮಹಾರಾಜನುಂ ಭಾನುಸ್ಥಾನದ ಮಹಾರಾಜನುಂ ಮೂಲೀರಾಜನುಂ ಪಲಬರಾಂಗ್ಲೇಯಮಹಾಧಿಕಾರಿಗಳುಂ ಬಡೋದೆಯ ಮಹಾರಾಜಂಗಂ ಜೋಧಪುರದ ಮಹಾರಾಜಂಗಂ ತ್ರಿವುರದ ಮಹಾರಾಜಂಗಂ ಕಾಶೀಮಹಾರಾಜಂಗಂ ಭಾವನಗರದ ಮಹಾರಾಜಂಗವೋರ್ವ ಸಂಸ್ಥಾನದ ಮಹಾರಾಜಂಗವುಯೋಧ್ಯಾಮಹಾರಾಜಂಗಂ ವಿಜಯನಗರದ ಮಹಾರಾಜ್ಞಿಗಂ ಮೌರ್ವೀರಾಜಂಗಂ ಗೊಂಡಲರಾಜಂಗಂ ಪ್ರತಿನಿಧಿಗಳೆನಿಸಿದರಸುಗಳುಮಧಿಕಾರಿಗಳುಂ ಸಬಲಪರಿವಾರರಾಗಿ ರಾಜದಂಪತಿಗಳ್ಗೆ ವಿವಾಹಕಾಲದೊಳರ್ಪಿಸಲ್ವೇಳ್ದಗ್ಗಳಿಕೆವೆತ್ತ ಡುಗೊರೆಗಳನೊಡಗೊಂಡೊಡನೊಡನೆ ರಾಜಧಾನಿಗೆಯ್ದಿವಂದು ಮಹಾರಾಜ್ಞಿಯತ್ತಣಿಂ ರಾಜಮರ್ಯಾದಾನುಸಾರಮಪ್ಪ ಮನ್ನಣೆಯುಂ ಕಯ್ಕೊಂಡು ತಮತಮಗೆ ಬಿಡಿಸಿದ್ದ ರಾಜನಿವಾಸಯೋಗ್ಯಂಗಳಪ್ಪ ಬೀಡಾರಂಗಳೊಳ್ಪೊಡಂಬಿಡುತಿರ್ಪ್ಪನೆಗಂ ॥

ವೃ॥ ಎಡೆವಿಡದಂದನುಕ್ಷಣಮುಮಾನಗರಕ್ಕೆ ಬರುತ್ತುಮಿರ್ದ ನಾ ।
ಡೊಡೆಯರ ರಾಯಮನ್ನಣೆಗನುಕ್ರಮದಿಂದೆ ವರೂಥನೀಜನಂ ॥
ಪೊಡೆಪೊಡೆಯುತ್ತುಮಿರ್ದ ಬಹುಮಾನಶತಘ್ನಿಗಳಾ ಧಡಂಧಡಂ ।
ಧಡಮೆನಿಪಾರವಂ ಪರಿಪಿದತ್ತು ತದುತ್ಸವಮಂ ತ್ರಿಲೋಕಕಂ ॥೫೬॥

ವ॥ ಮತ್ತಮೀಮಹೋತ್ಸವಕ್ಕೆಂದುರಾಜಧಾನಿಗೆ

ಕಂ ॥ ಸಾಮಂತರುಮೊಳನಾಡಿನ ।
ಧೀಮಂತರುಮಗ್ರಗಣ್ಯರೆನಿಸಧಿಕೃತರುಂ ॥
ಶ್ರೀಮಂತರುಂ ವಣಿಜರುಂ ।
ತಾಮಂತತಿಹರ್ಷದಿಂದವೆಯ್ತ್ತುರುತಿರ್ದರ್ ॥೫೮॥

ವ॥ ಇಂತು ಶುಭತಮಲಗ್ನಪತ್ರಿಕೆಗಳಿಂ ಕರೆಯೆಲ್ಪಟ್ಟರೆಲ್ಲರುಂ ಬರಲೊಡನೆ ಜಗಕೆಲ್ಲಂ ಮೋಹನವಾಗಿರ್ಪುದರಿಂದನ್ವರ್ಥನಾಮಧೇಯಮುಂ ತಳೆದಿರ್ಪ್ಪ ಜಗನ್ಮೋಹನಪ್ರಾಸಾದದ ಮುಂಗಡೆಯುಂಗಳದೊಳ್ವಿಚಿತ್ರತರವಾದ ಮಿಸುನಿವೆಸದ ಮೇಲ್ಕಟ್ಟುಗಳಿಂದೆಯುಂ ಪಲವರ್ಣದ ಪೂವಳ್ಳಿಗಳಪರಿಜೆಸೆವಂತು ರಂಕುಲೋಮಂಗಳಿಂ ನೆಯ್ದಿರ್ಪ್ಪ ಮೆಲ್ಲ್ವಾಸುಗಳಿಂದೆಯುಂ ಸುತ್ತುಂ ಪಲತೆರದೆ ರಚನೆಗೊಳಿಸಿರ್ಪ್ಪ ನರುಗಂಪನಾಳ್ದಲರ್ದೋರಣಂಗಳಿಂದೆಯುಂ ಧೂಪವರ್ತಿಗಳ ನಿರಂತರಪ್ರವರ್ತಿತಾವೋದಭರದಿಂದೆ

ಯುನುಮಾದಂ ಮನೋಹರಮಾದಭಿನವಾಸ್ಥಾನಮಂಟಪದೊಳ್ನಾಡುನಾಡುಗ
ಳಿಂ ಬಂದಿಪ್ಪ ಮಹಾರಾಜರುಂ ರಾಜರುಂ ರಾಯಭಾರಿಗಳುಮಿತರಲೌಕಿಕ
ವೈದಿಕವರೇಣ್ಯರುಂ ನಿಜನಿಜಗೌರವಾನುಸಾರದಿಂ ಸಮುಚಿತಸ್ಥಾನಂಗಳೊ
ಳ್ಮಂಡಿಸಿರೆಯುಂ ಮಹಾರಾಜಂ ಶ್ರೀಕೃಷ್ಣರಾಜಂ ಯುವರಾಜಕಂಬೆರಸು ಬಳಿ
ಸಂದಿರೆಯುಂ ಮೇಲುಪ್ಪರಿಗೆಯೊಳಸುತ್ತಿನ ಮೊಗಸಾಲೆಯೊಳ್ಮಾರಾಣಿ ಮೊದ
ಲಪ್ಪ ರಾಣಿವಾಸದ ಜನಂ ಪೊಂಜರಿಗೆಗಳಿಂ ಚಿತ್ರಿಸಿದ ಜವನಿಕೆಯ ಬಿಡುಗಿಂಡಿ
ಗಳೊಳ್ಕಟ್ಟಳ್ಕರಿಂ ನಿಟ್ಟಿಸುತ್ತಿರೆಯುಮಗಣಿತಯಂತ್ರದೀಪಂಗಳುಜ್ವಲಿಸು
ತ್ತಿರೆಯುಮೋರೊಂದೆಡೆಯೊಳ್ಮಂಗಳಾಲಂಕಾರಶೋಭಿತಮಪ್ಪ ಕಲ್ಯಾಣ
ಮಂಟಪದೊಳ್ ॥೫೯॥

ಕಂ॥ ಪಿರಿದುಂ ಚೆಲ್ವಾಂತುದರಿಂ ।
ಧರೆಯೊಳ್ಚೆಲ್ವಂಬೆಯೆಂದು ಪೆಸರ್ವಡೆದಾಭೂ ॥
ವರಕನ್ಯೆಯ ತಳಿರ್ಗಯ್ಯಂ ।
ವರಲಕ್ಷ್ಮೀಕಾಂತರಾಜನೊಲವಿಂ ಪಿಡಿದಂ ॥೬೦॥

ಕಂ॥ ಪಲವುಂ ಮಂಗಳವಾದ್ಯಂ ।
ಮೊಳಗಿದುದೆಣ್ದೆಸೆಯೊಳಾವಧೂವರಗರ್ಗಳ್ ॥
ನೆಲದೊಡೆಯರಿತ್ತರುಡುಗೊರೆ ।
ಗಳನೆಸಗಿದರಾಶಿಪಂಗಳಂ ಧರೆಯವರರ್ ॥೬೧॥

ವ॥ ಅನಂತರಂ ಮಹಾರಾಜಂ ಶ್ರೀಕೃಷ್ಣರಾಜಂ ಮಹಾರಾಜ್ಞಿಯ
ನುಜ್ಞೆಯಿಂದಾಸಕಲಸಭಾಸದರ್ಗಮವರವರ ತಕ್ಕುಮೆಯಂ ಮೀರದೆ ಗಂಧ
ಪುಷ್ಪತಾಂಬೂಲಾದಿಗಳಿಂ ಮನ್ನಣೆಗೆಯ್ದಿಲ್ಲರುಮನುಚಿತೋಕ್ತಿಗಳಿಂ ಪತಿ
ಕರಿಸಿ ಬೀಳ್ಕೊಡುವುದುಮಂದಿಂಗೆ ಮೂರನೆಯ ಶುಭದಿನದೊಳ್ ಮತ್ತಂ
ಸುತ್ತುಮೋರಣಿಸಿ ಪಲವಂದದಿಂದೆಳಲೆವಿಟ್ಟ ಬಗೆವಗೆಯ ಪೂಮಾಲೆಗಳ
ತೋರಣಂಗಳಿಂದೆಯುಂ ಮೆತ್ತೆತ್ತಲುಂಬಾಗಿಲ್ಗಳಿರ್ಕೆಲದೊಳುಂ ಬಂಧಿಸಿದೆಸೆವ
ಗೊನೆವಾಳೆಗಂಬಂಗಳಿಂದೆಯುಂ ಸಿಂಗರಿಸಿದಾಸಭಾಮಂಟಪಂ ॥೬೨॥

ಕಂ॥ ಸಿರಿಕಂಡದಿಂಡೆಯಿಂ ಕ ।
ತ್ತುರಿಯಿಂ ಕಪ್ಪುರದಿನಗರುವಿಂ ಪನ್ನೀರಿಂ ॥
ಪರೆಪಿದ ನರುಗಂಪುಗಳಿಂ ।
ಪರಿಮಳದಾ ಪಸರಮೆಸಿಸಿತೇನೆಂದಸೆನಾಂ ॥೬೩॥

ಅಂತಪ್ಪ ಸಭಾಮಂಟಪದೊಳಾ ರಾಜರಾಜಸಮಾನವಿಭವದಿಂ ವಿರಾಜಿಸುವ ಮಹಾರಾಜರುಂ ರಾಜರುಂ ಸಾಮಂತರಾಜರುಂ ರಾಜಬಂಧುಗಳುಂ ರಾಯಭಾರಿಗಳುಂ ಶ್ರೀಮಂತರಪ್ಪ ನಾಡಿಗರುಂ ಪೌರಮುಖ್ಯರುಂ ಪ್ರಮುಖಾಧಿಕಾರಿಗಳುಂ ವೈದಿಕಶಿರೋಮಣಿಗಳುಂ ಕನ್ಯಾವರರನುಬಂಧಿನಿಯು ರಪ್ಪನೇಕಾಂತಃಪುರಸೀಮಂತಿನಿಯರುಂ ತಮ್ಮ ತಮ್ಮ ಸಮುಜಿತಸ್ಥಾನಂಗಳ ಸಲಂಕರಿಸಿಪ್ಪಿನಂ ॥೬೪॥

ವೃ॥ ನಿರುಪಮರತ್ನಹಾರಕಟಕಾಂಗದಮುಖ್ಯವಿಭೂಷಣಂಗಳಿಂ ।
ಸುರುಚಿರಕಾಂಚನಾಂಬರದಿ ಕುಂಕುಮಕೇಸರದೂರ್ಧ್ವಪುಂಡ್ರದಿಂ ॥
ಕರಮೆಸೆಯುತ್ತೆ ಕೃಷ್ಣನೃಪನಲ್ಲಿಗೆ ಬಂದನೊರಲ್ದುರುಕ್ಮಿಣೀ ।
ಪರಿಣಯಮಂಟಪಕ್ಕೆ ನಡೆತಂದ ಯದೂತ್ತಮಕೃಷ್ಣನಂದದಿಂ ॥೬೫॥

ವೆ॥ ಅಂತು ಬಂದು ಪರಿಜನಶತವೋಲಗಿಸುತ್ತಿರಲಾಸಭಾಮಂಟಪದ ನಟ್ಟಡೆಯೊಳತಿಮಾತ್ರವಿಚಿತ್ರರಚನೆಗಳಿಂ ಕಲ್ಪಿಸಿರ್ದ ನೀಳ್ದಪಿಂಜರಿಯ ಪಸೆ ವಣಿಯುಸರಸಂಚೆ ಬೆಳ್ದಾವರೆಹಂತಿಯನೆಯ್ದುವಂತೆಯ್ದುವುದುಂ ॥೬೬॥

ಕಂ ॥ ವೇದೋಕ್ತಿಗಳಿಂದಾಶೀ ।
ರ್ವಾದಮನಿಳೆಯಮರರೆಸಗಿ ಸುಮುಹೂರ್ತಮೆಸಲ್ ॥
ವಾದಕಜನವಾದಿತಶುಭ ।
ವಾದಿತ್ರನಿನಾದಮುಣ್ಮೆತೆಂಟುಂದೆಸೆಯೊಳ್ ॥೬೭॥

ವೆ॥ ಆಗಳಾವಾರಾಣಿಯಾಣತಿಯಿಂದಲಂಕಾರಪ್ರವೀಣೆಯರಪ್ಪನಾರಿಯರಳ್ಕರಿಂಪ್ರತಾಪಕುವಾರಿಯುಂ ಮಂಗಳಮಜ್ಜನಂಬುಗಿಸಿ ಶುಭತಮನವ್ಯಪೀತಾಂಬರಮನುಡಲಿತ್ತು ನವರತ್ನಖಚಿತನಾನಾಭರಣಂಗಳಿಂ ಸಿಂಗರಮಂ ಮಾಡಿ ಪೆರೆವಣಿಗೆ ಕುಂಕುಮಚೂರ್ಣದ ತಿಲಕಮುಂ ತಿರ್ದಿ ನಿಡುಜಡೆಗೆ ಸಮ್ಮಲರಂ ಸೂಡಿ ಸಾರತರಗಂಧಸಾರಕಸ್ತೂರೀಘನಸಾರಾದಿಯುಕ್ತಸ್ಫರ್ದಮುಮನುದ್ವರ್ತನಂಗೆಯ್ದಿಂತು ಪಸದನಂಗೊಳಿಸಲಾವಧೂಮಣಿ ಯಣಿಯುರಂಭಕ್ತಿಯನಾಂತು ಕಲ್ಪೋಕ್ತವಿಧಾನದಿಂ ಕಾತ್ಯಾಯನಿಯನಾರಾಧಿಸಿದ ಸಮನಂತರದೊಳತ್ತಂ ಸ್ವಸ್ತಿವಾಚನಪೂರ್ವಕಂ ಮಧುಪರ್ಕಾದಿಕರ್ಮಕಲಾಪಂ ಬೆಳೆವುದುಮಂಗನಾಜನವಾಕೆಯುಂ ಮಂಗಳವಾದ್ಯಂ ವೊಳಗೆ ವಿವಾಹಸಭಾಮಂಟಪಕ್ಕೆ ಕರೆತಪ್ಪಿಗಳ್ ॥೬೮॥

ಕಂ || ವರಿಸಲ್ಕಮಲಾಕ್ಷನನಿಂ |
ದಿರೆ ದೇವಸಮಾಜಕಂದು ನಡೆತರುತಿರ್ದಂ ||
ತಿರೆ ಲೀಲೆಯೊಳಾಪೆಣ್ಮಣಿ |
ಬರುತಿರ್ದಳ್ರಾಜಸಭೆಗೆ ಮೆಲ್ನಡೆಯಿಂದಂ ||೬೯||

ವ|| ಅಂತು ನಡೆತಂದೊಡನಕ್ಷತಾರೋಪಣಾದಿ ವಿಧಿವಿಹಿತಕರ್ಮಕಲಾಪಂ ಬಳೆದ ಬಳಿಯಂ ||೭೦||

ವೃ|| ಧರಣಿಸುತೆಯಂ ಶ್ರೀರಾಮಂ ಕೂರ್ತು ಕಯ್ವಿಡಿದಂದದಿಂ |
ಗಿರಿಶನಗಜಾಹಸಾತ್ಕಂಭೋಜಾತಮಂ ಪಿಡಿದಂದದಿಂ ||
ನಿರತಿಶಯಸೌಭಾಗ್ಯಶ್ರೀಯಂ ಪ್ರತಾಪಕುಮಾರಿಯಂ |
ಕರವಿಡಿದನಾಕೃಷ್ಣಕ್ಷ್ಮಾಣೀಶ್ವರಂ ಸ್ಮರಸುಂದರಂ ||೭೧||

ವ|| ಆಗಳಾವಿವಾಹಮಂಟಸದ ಪಲವುಮೆಡೆಯೊಳ್ಪಲತೆರದ ನರ್ತನಂಗೆಯ್ವ ದೇಶದೇಶದ ನರ್ತಕಿಯರ ಮಂಜುಮಂಜೀರಶಿಂಜಿತಂಗಳುಂ ವೀಣಾವೇಣುಮೃದಂಗಾದಿಮುಂಗಳವಾದ್ಯಂಗಳ ಹೃದ್ಯನಿನಾದಂಗಳುಮಸಂಖ್ಯಾತಂಗಳಪ್ಪಾಂಗ್ಲೇಯದೇಶೀಯವಾದಿತ್ರಂಗಳ ಕರ್ಣದ್ವಯಪೇಯಂಗಳಪ್ಪ ವಿಜಿತ್ರಧ್ವನಿಗಳುಮಾಗಸಮಂ ತಾಗುವ ಮಾಗಧರ್ಕಳ ಪೆರ್ಕಳವಾದ ಪೊಗಳ್ಕೆಯ ರವಂಗಳುಂ ದಿಶಾಸಂಧಿಬಂಧಪ್ರಸ್ಫುಂಗಳಪ್ಪ ಶತಘ್ನಿಗಳುದ್ಭಟಾರವದಾರ್ಭಟಂಗಳುಂ ತುಂಬಿಕೊಂಡಂಬರಮುಂ ಶಬ್ದಗುಣಕಮಾಕಾಶಮೆಂಬಲಕ್ಷಣಕ್ಕೆ ನಿರತಿಶಯಮಾದ ಲಕ್ಷ್ಯಮನಾಗಿಸುತ್ತುಮಿಪ್ಪಾಸಮಯದೊಳ್ಭರತಚಕ್ರವರ್ತಿನೀಪ್ರತಿನಿಧಿಯಪ್ಪಾಂಗ್ಲೇಯಸರ್ವಾಧಿಕಾರಿಯದೆಸೆಯಿಂದುಪರಾಜಧಾನಿಯೆಳಪ್ಪಾಂಗ್ಲೇಯ ರಾಜಕೀಯ ಮಹಾಧಿಕಾರಿಯು ಮುಖದಿಂ ಬಂದ ಬೆಲೆವೇಳ್ದ ರನ್ನದೊಡವು ಪೊನ್ನುಡೆ ವೊದಲಪ್ಪುಡುಗೊರೆಯು ಮಿತರಮಹಾರಾಜರುಂ ರಾಜರುಂ ರಾಯಭಾರಿಗಳುಂ ರಾಜಾನುಬಂಧಿಮುಖ್ಯರುಂ ತಂದಿರ್ದ ಬಲ್ವೆಲೆಯ ಪೊಚ್ಚಪೊಸರನ್ನವಚ್ಚಂ ಪೊಂಬಟ್ಟವಳಮುಂತಪ್ಪ ಮುಯ್ಗಳುಮಾರಾಜದಂಪತಿಗಳ ಕಯ್ದಾವರೆಯ ಸೋಂಕನಾಂ ಪುದುಂ ||೭೨||

ಕಂ || ಆವಧುವ ತೇಜಕಂ ಹುತ |
ಪಾವಕರುಚಿಗಂ ವಿಶೇಷಮಂ ಪರಿಕಿಪ ಸಂ ||
ಭಾವನೆಯಿಂದೆನೆ ಕೃಷ್ಣಮ |
ಹೀವರನಾಕೆಯೊಡನಗ್ನಿಯಂ ಬಲಂದಂ ||೭೩||

ವ|| ಅಲ್ಲಿಂ ಬಳಿಕೆ ಮಹಾರಾಜ್ಞಿಯಾಜ್ಞಾನುಸಾರದಿಂ ಶೇಷಾದ್ರಿ ಮಂತ್ರಿವರ್ಯನುಂ ಕನ್ನಡನಾಡಿನ ಪಲವುಂಗಡಿಗಳ ಮುಖ್ಯಾಧ್ಯಕ್ಷನಪ್ಪ ಕಾಂತರಾಜನುಂ ಮಹಾಸೇನಾನಿಯಪ್ಪ ದೇಶರಾಜನುಂ ಸಕಲಸಾಮಾಜಿಕರಂ ಗಂಧಪುಷ್ಪಹಾರತಾಂಬೂಲಾದಿಗಳಿಂದುಚಿತಪ್ರಕಾರದಿಂ ಮನ್ನಣೆಗೆಯ್ದುಪಚಾರೋಕ್ತಿಗಳಂ ನುಡಿದವರವರ ನಿವಾಸಕ್ಕೆ ಬೀಳ್ಕೊಡಲೊಡಂ ||೭೪

ಕಂ || ಅನುದಿನಮೆಲ್ಲಾವರ್ಣದ |
ಜನಮಾದಂ ತಣಿವನಾಂತುದತ್ಯುತ್ತಮಭೋ ||
ಜನದಿಂದೆರಡುಂ ಮದುವೆಯೊ |
ಳನಲ್ಪದಕ್ಷಿಣೆಗಳಿಂದೆಯುಂ ದ್ವಿಜರವರೊಳ್ ||೭೫||

ವ|| ಇಂತು ಮದುವೆಗಳೆರಡುಂ ಸಾಂಗವಾಗಿ ಬಳೆದಬಳಿಯುಂ ಸಮುಸಿಸಿದ ಪುಣ್ಣಿವೆಯ ರಜನೀಮುಖದೊಳಾರಾಜದಂಪತಿಗಳಿರ್ವರುಂಸಾಲಂಕಾರರಾಗಿ ಮಹಾಗಜಂಗಳ ಮೇಲೆ ನೆಲೆಗೊಳಿಸಿದ ರಜತಮಯಮಂಟಪದೊಳ್ಪೊಲ್ವಂಬಾಲಕ್ಕಿ ಶ್ರೀಕಾಂತರಾಜ ದಂಪತಿಗಳುಂ ಮಹಾರಜತಮಯ ಮಂಟಪದೊಳ್ತಾಪಕುವಾರೀಮಹಾರಾಜದಂಪತಿಗಳುಂ ಮಂಡಿಸಿ ಚತುರಂಗಸೇನಾಪರಿವಾರಂಬೆರಸು ಕಾರ್ಣ್ಣಾಟಕಾಂಗ್ಲೇಯಾದಿಬಹುವಿಧವುಂಗಳವಾದ್ಯಂಗಳ ಕೋಲಾಹಲಮುಂ ಮಹಾರಾಜಮರ್ಯ್ಯಾದೆಗೋಸುಗಂಪೊಡೆವುದ್ದಾಮಶತಘ್ನಿಗಳಬ್ಬರದುಬ್ಬರಮುಂ ಸೈನಿಕರಕಹಳಾಭೇರಿಗಳಾರವಮುಮೆಂಟುಂದೆಸೆಗಳೊಳ್ಮಾಳ್ಮಾಳಗೆಯುಂ ವಿವಾಹದೊಳಾದಮಾರಾಧಿತನಾಗಿ ತಣಿವನಾಂತು ಸಂತಸದಿಂದಾ ದಂಪತಿಗಳುತ್ಸವಕ್ಕಣಿಯರಂ ವಿಜೃಂಭಣೆಯನೊಡರಿಸಲೆಂದು ಪಲವುಮಾಕೃತಿಗಳಂ ತಳೆದು ಬಂದೆಲರ್ಗೆಳೆಯನೆಂಬಿನಮಿರ್ಕೆಲದೊಳುಮೆಡೆವಿಡದೆಪತ್ತಿಸಿದ ಪಲವುಂದೀಪರಾಜಿಗಳಾ೭ಜಿಸುತ್ತಿರೆಯುಂ ಮತ್ತಮಿರಡುಂ ಪಕ್ಕದೊಳ್ಮಂಖಚಕ್ರಮಕರಕಂಠೀರವ ಸಾಳ್ವಗಂಡಭೇರುಂಡಾದಿಗಳ ಕುರುಪಿನಪೊಂಬಿರುದುಗಳುಂ ಪಲತೆರದಪಳವಿಗೆಗಳುಂ ಸೇಣಿಗೊಂಡು ತಳರುತ್ತಿರೆ

ಯುಂ ಮನೆಮನೆಯ ಮೊಗಸಾಲೆಗಳೊಳಂ ಮೇಲುಪ್ಪರಿಗೆಗಳೊಳಂ ಚಂದ್ರ
ಶಾಲೆಗಳಗೂಡುಂಬಾಯ್ಗಳೊಳಂ ಚೌಪಟಚೌಪಟದೆಡೆಯೆಡೆಯೊಳ ಮಲ್ಲ
ಲ್ಲಿಯ ಪೊಳಲಾರವೆಗಳೋವರಿಗಳೊಳಮಿಟ್ಟಣಿಸಿ ನೀಡುಂ ಕೌತುಕದಿಂ
ಲಕ್ಷ್ಮೀಪಲಕ್ಷ್ಮಜನಂಗಳೀಕ್ಷಿಸುತ್ತಿರೆಯುಮಡಿಗಡಿಗಮಿದಿರ್ಗೊಂಡು ವಾರವ
ಧೂಟಿಯರತಿಮನೋಹರಮೆನೆನರ್ತನಂಗೆಯ್ಯುತ್ತಿರೆಯುಂ ವಂದಿಬೃಂದಂ
ಸಮ್ಮುಖವಾಗಿ ನಿಂದು ಕಯ್ಯಂ ನೆಗಪಿ ನೆಗಳ್ದ ಮಹಾರಾಜನ ಬಿರುದಾವ
ಳಿಯಂ ಪೊಗಳುತ್ತಿರೆಯುಂ ಸೇವಕಶತಂ ಛತ್ರಚಾಮರಾದಿರಾಜೋಪಚಾರ
ಮನೆಸಗುತ್ತಿರೆಯುಂ ಮುಂಮುಂದೆ ವಿಚಿತ್ರವಿಚಿತ್ರವಾಗಿ ತೆರಂಬೊಳೆವಂತು
ಪಲವರ್ಣದಮರ್ದಂ ತುಂಬಿದ ಭಾಸುರತರತಾರಾಮಂಡಲಾದಿ ವಿವಿಧಾಕಾರಂ
ಗಳಂ ತೋಪ್ಪಾಲೋಕಬಾಣಂಗಳಂ ಪಲವಾಳ್ಗಳೊಡನೊಡನೆ ಕಿಡಿ
ದೋರ್ದು ಬೆಳಗಿಸುತ್ತಿರೆಯುಂ ಪುರವೀಥಿಯೊಳ್ಪಿರಿದುಮುಲ್ಲಾಸದಿಂದತ್ತಿತ್ತಂ
ಕಟಾಕ್ಷವೀಕ್ಷಣಮುಂ ಕೆದರುತ್ತುಮುತ್ಸವಂ ಮೆರೆವಾಗಳ್ ॥೭೬॥

ಕಂ॥ ಅಂದಂಬಡೆದ ನಿಜಾನ್ವಯ ।
ನಂದನರಭಿನಂದನೀಯಮಾದುತ್ಸವಮಂ ॥
ಸಂದರ್ಶಿಸಲೆಂದೆಸರಾ ।
ಕೇಂದು ನಭಸ್ತಲದೊಳಾದಮೆಸೆಯುತ್ತಿರ್ದಂ ॥೭೭॥

ವೃ॥ ಪೊಳೆದುದುತಳ್ತಕನ್ನಡಿಗಳಿಂ ಬಹುಚಿತ್ರಪಟಂಗಳಿಂ ಮನಂ ।
ಗೊಳಿಸುವ ಭಿತ್ತಿಯಿಂ ಬಿಗಿದಬಾಳೆಯಕಂಬದ ಕಂಬದೋಳಿಯಿಂ ॥
ಪಳುಕಿನ ದೀಪಭಾಜನದ ಪಂತಿಯ ಲೋವೆಯಿನಂತು ಸಿಂಗರಂ ।
ಗೊಳಿಸಿದ ಪತ್ರತೋರಣದ ಬಾಗಿಲ ಪೌರರ ಗೇಹಗೇಹಮುಂ ॥೭೮॥

ಕಂ॥ ಆಲ್ಲಲ್ಲಿ ಕನ್ನೆವೆಣ್ಗ ।
ಳ್ಮೆಲ್ಲನೆ ನಡೆತಂದು ತದ್ವಧೂವರರಿದಿರೊಳ್ ॥
ಸೊಲ್ಲಿಸುತಾರತಿವಾಡಂ ।
ಸಲ್ಲೀಲೆಯೊಳೆತ್ತುತಿರ್ದರೆಸೆವಾರತಿಯಂ ॥೭೯॥

ಕಂ॥ ಪೊಳಲ ಪಿರಿಯರ್ಕಳೆಡೆಯೆಡೆ ।
ಯೊಳಮೊಲ್ದ ವಧೂವರರ್ಕಳೊಳ್ಸೂಸಿದ ಪೂ ।
ಗಳ ನರುಗಂಪಿಂ ಕಂಪಿನ ।
ಪೊಳಲೆಂದೆನಿಸಿದುದು ಪೊಳಲದಾವುತ್ಸವದೊಳ್ ॥೮೦॥

ವ|| ಇಂತು ಪುರವೀಥಿಯೊಳುತ್ಸವಂಮೆರೆದಾರಾಜದಂಪತಿಗಳುಪ್ಪಾ ರತಿಗಳನೆತ್ತುವೈದೆಯರಿನೆಯ್ದೆ ಕೋಳಿತವಾದ ಜಗನ್ಮೋಹನಪ್ರಾಸಾದಮುಂ ಪುಗುತಪ್ಪುದುಂ ||೪೧||

ಕಂ|| ದೊರೆವೆತ್ತ ಚಾಮರಾಜನ |
ಪರಿಣಯದೊಳ್ಪಿಂದೆ ನಡೆದ ಮೆರೆವಣಿಯಿಂದಂ ||
ಪಿರಿದಾಯ್ತೆರಡುಂ ಮದುವೆಯ |
ಮೆರವಣಿಗೆಯಿದೆಂದು ನುಡಿದುದಖಿಲಪ್ರಜೆಯುಂ ||೮೨||

ವ|| ಇಂತೊಂದು ದಿವಸಮನಂತವಿಭವದಿಂದಾಮದವಣಿಗರ್ತ್ತಮ್ಮ ನುಬಂಧಿಸಂಬಂಧಿಸುಹೃತ್ತವರೊಡಗೂಡಿ ಸುವಿಲಾಸದಿಂ ವಿವಾಹಾಂಗ ವಾದ ವಸಂತೋತ್ಸವವೆಂಬ ಕುಂಕುಮೋದಕಕ್ರೀಡೆಯನಾಡುವಾಗಳ್ ||

ಕಂ|| ಓರೊರ್ವರದೋರೊರ್ವರೊ |
ಳಾರಾಜಿಸ ಕನಕನಾಳಿಯಿಂ ಸೂಸುವ ಕಾ ||
ಶ್ಮೀರೋದಕದಿಂದೆಲ್ಲರು |
ಮೋರಂತಿರೆ ಮಂಗಳಾಂಗರಾಗೆಸೆದಿರ್ದರ್ ||೮೪||

ಆಗಳ್,

ಕಂ|| ಒಂದೆಡೆಯೊಳ್ಮಳೆ ಬರೆ ಪೆರ |
ತೊಂದೆಡೆಯೊಳ್ಪರಿವ ಮಳೆಯ ನೀರವೊಲಾಮೋ ||
ದಂದಳೆದ ಕುಂಕುಮೋದಕ |
ಮಂದೇಂ ಪುರವೀಥಿಯಲ್ಲಿ ಪರಿದುದೊ ಭರದಿಂ ||೮೫||

ಅಲ್ಲಿಂ ಬಳಿಕಂ,

ಕಂ|| ಅಗಣಿತಜನಕ್ಕೆ ಸಚಿವ |
ರ್ತ್ತಿಗೆತೆಗೆದೊಲ್ದೆನಿತನಿತ್ತೊಡಂ ದಿನದಿನಮುಂ ||
ಬಗೆವಗೆಯ ಪಸಾಯನಗಳ |
ಮುಗಿಯದೆ ಮಿಕ್ಕಿರ್ದ ರಾತಿರಾಶಿಗಳೆನಿತೋ ||೮೬||

ಕಂ || ಇಂತೀಮಹೋತ್ಸವಕೆ ದೇ |
ಶಾಂತರದಿಂದೀಪುರಕ್ಕೆ ಬಂದಿರ್ದ ಜನಂ ||
ಸಂತೋಷಭಾರಮಂ ತಳೆ |
ದೆಂತಾನುಂ ಮುಟ್ಟಿದತ್ತು ತಮ್ತಸ್ಥೂಮರಂ ||೮೬||

ಇಂತು ಸುತೆಗಂ ಸುತಂಗಮ |
ನಂತಶ್ರೀಯಿಂ ವಿವಾಹಮಂ ಚಾಮೋರ್ವೀ ||
ಕಾಂತನ ಸತಿ ದಿನಭೇದದೆ |
ಸಂತಸದಿನೊಡರ್ಚಿ ರಾಜ್ಯವಾಳುತ್ತಿರ್ದಳ್ ||೮೭||

ಇದು ಜಗದ್ವಿದಿತ ಶ್ರೀಕಾಶ್ಯಪವಂಶಮುಕ್ತಾಮಣಿ ಶ್ರೀಗರಳಪುರೀಶಶಾಸ್ತ್ರಿ ತನೂಭವನುಂ ಶ್ರೀಮದಖಂಡ ಮಹೀಮಂಡಲ ಮಂಡನಾಯಮಾನ ಕರ್ಣಾಟಜನಪದ ಲಕ್ಷ್ಮೀವಿಹಾರೈಕರಂಗಮಹೀಭೂತ ಮಹೀಶೂರ ರಾಜಧಾನೀ ರತ್ನಸಿಂಹಾಸನಾಧೀಶ್ವರ ಯದುಕುಲಪಯೋನಿಧಿ ಪೂರ್ಣಚಂದ್ರಾಯಮಾಣ ಶ್ರೀಚಾಮರಾಜೇಂದ್ರ ತನಯ ಶ್ರೀಕೃಷ್ಣರಾಜಮಹಾರಾಜ ಸಂಸ್ಕೃತ ಕರ್ಣಾಟೋಭಯಪ್ರವಚನೋಪಾಧ್ಯಾಯನುಂ ಮಹಾವಿದ್ವ ತ್ಪದಲಾಂಛನನುಂ ತನ್ಮಹಾರಾಜ ಕೃಷ್ಣರಾಜವಿತೀರ್ಣ ಕವಿತಿಲಕ ಬಿರುದಾಂಕಿತನುಮಪ್ಪ ಸೋಸಲೇ ಅಯ್ಯಶಾಸ್ತ್ರಿಯಿಂ ವಿರಚಿತವಾದ ಮಹಿಶೂರ ಮಹಾರಾಜ ಚರಿತ್ರ ಮೆಂಬ ಕರ್ಣಾಟ ಚಂಪೂ ಮಹಾಕಾವ್ಯದೊಳ್

ದಶಮಾಶ್ವಾಸಂ

ಸಂಪೂರ್ಣಂ.



ವಿಕಾಡಕಾಶ್ವಾಸಂ

ಕಂ || ಈಜಗದೆ ವಿಭೂತಿಯುತಂ |
ಶ್ರೀಜಟಿಲಂ ಪಸ್ತುನೊಗೆವ್ರದಾವನ ಭಾಸ್ವ ||
ತ್ತೇಜೋಂಶದಿಂದಮಾಪಾ |
ಯಾಜಾನಿ ಮಹೇಶನೋವ್ರಗೆಮ್ಮಯ ನೃಪನಂ ||೧||

ವೃ|| ಬಳಿಕಂ ಭಾರತಸಾರ್ವಭೌಮ ತಳರಲ್ಸಗ್ಗಕ್ಕೆ ತದ್ದುಃಖಮೀ |
ಯಿಳೆಯಂ ಕತ್ತಲೆ ಸುಂದದಿಂ ಕೆಲದಿನಂ ಮುತ್ತಿರ್ದುದೊತ್ತಾಯದಿಂ ||
ಬಳಿಕಂ ಭಾರತಚಕ್ರವರ್ತ್ತಿಪದಮುಂ ತತ್ಪುತ್ರಸೆಪ್ಪರ್ಡುಕ |
ಯ್ಕೊಳೆ ಸೂರ್ಯೋದಯವಾದ ಪೊಲ್ಪಡೆದುದಾದಂ ಲೋಕಮುಲ್ಲಾಸಮಂ|| ೨

ವ|| ಅಂತು ಚಕ್ರವರ್ತ್ತಿಪದನಂ ಕಯ್ಕೊಂಡಾತಂಗಾಂಗ್ಲೇಯುದೇಶ ದೊಳ್ನಿರುಪಮರಾಜ್ಯಾಧಿಕಾರೋತ್ಸವಂ ಬಳಿದಂದದಿಂದಾಗಳ್ಭರತಖಂಡ ದೊಳ್ತತ್ಪ್ರತಿನಿಧಿಯಾಗಿರ್ದ ಕರ್ನ್ನೆಂಬಾಂಗ್ಲೇಯಸರ್ವಾಧಿಕಾರಿಗಂ ಪೊಡವಿ ಯೊಳ್ನಿಗಳ್ತ್ತವಡೆವ ದೆಹಲೀನಗರದೊಳ್ನಡೆಯವೇಳ್ದ ರಾಜ್ಯಾಧಿಕಾರೋತ್ಸ ವಕ್ಕೆ ಸಮಾಹೂತಯಾಗಿ ರಾಜಮಾತೆ ನಿಸರ್ಗವಿದ್ಯಾರಾಜನೀತಿವಿದ್ಯಾವಿಹರಣವೇ ದಿಕೆಯೆಸಿಸಿದ ಮಾರಾಣಿ ಕೆಂಪನಂಜಾಂಬಿಕೆ ಚತುರಂಗಬಲಪರಿವಾರಂಬೆ ರಸು ಪಯಣಂಗೆಯ್ದು ನಾಡುನಾಡುಗಳಿಂ ಬಂದು ನೆರೆದಿರ್ದ ನಾಡೆರೆಯರಗ ಣಿತಬಲಪರಿವಾರಂಗಳಿಂದಿಟ್ಟಣಿಸಿದಾ ಪಟ್ಟಣಮನೆಯೆಯ್ದಿವಂದಾಗ್ಲೇಯಮು ಖ್ಯಾಧಿಕಾರಿಗಳೆಸಗಿವ ರಾಜಮರ್ಯಾದಾಸುಸಾರವಂಪ್ಪ ಮನ್ನಣೆ ಯುಂ ಕಯ್ಕೊಂ ಡಲ್ಲಿ ಬೀಡಂ ಬಿಟ್ಟನೀಕಭಾರತೇಯರಾಜ್ಯಾಧಿಪತಿಗಳ್ವೆರಸು ಮಹಾವಿಭವ ದಿಂದುತ್ಸವಂವೆರವಾಂಗ್ಲೇಯಸರ್ವಾಧಿಕಾರಿಯೊಡನೆ ನಿಜಕುಮಾರನಂ ಶ್ರೀ ಕೃಷ್ಣರಾಜಸುಮನುತ್ಸವಂವೆರೆಯಿಸಿದ ಸಮನಂತರಮೆ ನಿಖಿಲದೇಶಾಧಿಪತಿ ಗಳ್ವೆರಸೊಡ್ಡೋಲಗಂಗೊಟ್ಟಾಂಗ್ಲೇಯಸರ್ವಾಧಿಕಾರಿಯಿಂ ನಿಜಕುಮಾರ ರ್ಕ್ಷಹಾರಾಜಯುವರಾಜರಿರ್ವರುಂ ಪಿರಿದುಂ ಮನ್ನಣೆಯುಂ ಪಡೆಯಲೊಡಂ ಪರಿಸಂಗೊಂಡಲ್ಲಿಂ ನಿಜಪರಿವಾರಂಬೆರಸು ಮರಲ್ದೆಡೆಸಂದ ಹಿಮಗಿರಿಯ

ಪರಿಸರದೊಳಿಪ್ಪ ಮುಕ್ತಿಮಾರ್ಗದ್ವಾರವೆನಿಸಿದ ಹರಿದ್ವಾರಮಂ ಸಾರ್ತಂ ದಾಪ್ಣ್ಯಕ್ಷೇತ್ರದೊಳ್ಕರ್ತವ್ಯಧರ್ಮಕಾರ್ಯಂಗಳಂ ನಿರ್ವರ್ತಿಸಿ ಪಲವುಮಡವಿಗಳಂ ಬೆಟ್ಟುಗಳನಾಡುಗಳಂ ಪೊಚ್ಚಂಗಳುಮಂ ದಾಂಟಿ ಪದುಳದಿಂ ನಿಜರಾಜಧಾನಿಯನೆಯ್ತಂದು ಧರ್ಮದಿಂದರಸುಗೆಯ್ಯುತ್ತಿರ್ಪ್ಪನಂ ॥೩॥

ಕಂ॥ ವರಗುಣನಿಧಿಯೆನಿಸಿದ ಕೃ |
ಷ್ಣರಾಜಮಣಿ ನಿಜವಯೋನುಗುಣಮಾದ ಮಹ ॥
ತ್ತರವಿದ್ಯೆಯೆಲ್ಲಮುಂ ನೆರೆ |
ಪರಿಶೀಲಿಸಿ ಲಬ್ಧವರ್ಣನೆನಿಸುತ್ತಿರ್ಪಂ ॥೪॥

ಮತ್ತಂ,

ಕಂ॥ ಅನುಭವದಿಂ ಶಾಸ್ತ್ರವಿಲೋ |
ಕನದಿಂದನುಮಿತಿಯಿನಂತು ಸದ್ಗುರುವಿದ್ವ ॥
ಜ್ಜನಸಹವಾಸದಿನಾನೃಪ |
ನನುಪಮವಿಜ್ಞಾನಶಾಲಿಯೆನಿಸುತ್ತಿರ್ದಂ ॥೫॥

ವ॥ ಇಂತು ಮಹಾರಾಜಂ ದಿನದಿನಕ್ಕಂ ವಿದ್ಯಾಬುದ್ಧಿಪ್ರಾಚುರ್ಯಮುಂ ಪಡೆಯುತ್ತಿರ್ಪ್ಪನಂ ಮಹಾರಾಜ್ಞಿಯ ನುಜ್ಞೆಯಿಂ ಶ್ರೈಜಹರೆಂಬ ಮಹೋಪಾಧ್ಯಾಯಂ ಮಹಾರಾಜನಂ ಯುವರಾಜನೊಡನೆಯುಂ ನುವರವರಸಹಪಾಠಿಗಳೊಡನೆಯುಂ ರಾಜನೀತ್ಯಾದಿಸಾರದಿಂದಾವಂ ಲೋಕವ್ಯವಹಾರಪರಿಜ್ಞಾನನಿದಾನಮಪ್ಪ ದೇಶಸಂಚಾರವಂ ಮಾಡಿಸಲ್ಸಹಾಯೋಪಾಧ್ಯಾಯರಿಂದೊಡಗೂಡಿ ಪರಿಜನಂಬೆರಸುವೊತ್ತವೊದಲೊಳನಾಡೆಲ್ಲಮುಂ ಚರಿಯಿಸಿ ಬಳಿಕವುತ್ತರಭಾರತವರ್ಷದೊಳ್ಪೆಸರ್ವೆತ್ತ ಮುಂಬಯಿ ದೆಹಲಿ ವೊದಲಪ್ಪ ಪಲವುಪಟ್ಟಣಂಗಳೊಳ್ನಡೆಯಿಸಿ ತದನಂತರಂ ಬೌದ್ಧಜನಪ್ರಚುರಮಪ್ಪ ಬರ್ಮದೇಶವ ಯಾತ್ರೆಯನುದ್ದೇಶಿಸಿ ಪೊಗೆವಂಡಿಯು ಮಾರ್ಗದಿಂ ಚಕೆನ್ನಪುರಿಯನೆಯ್ದೆವಂದಲ್ಲಿ ಕಡಲತಡಿಯುಂ ಸಾರ್ದು ಪಾರಾವಾರಪಾರವಿಸ್ತಾರಮುಮುಂ ಭೋರ್ಗರೆವಸಮುಲೊಲ್ಲೋಲಕಲೊಲ್ಲೋಲಜಾಲಮುಮುಂ ನೀಡುಂ ಕೌತುಕದಿಂ ನೋಡುತ್ತಿರ್ಪ್ಪನಂ ॥೬॥

ಕಂ॥ ಜಾರದಿರಲ್ಸಾಗರದಾ |
ಘಾರಂ ದೃಕ್ಪಥಕೆ ಸಿಂದೆ ತೋರ್ದಾಸಗದೋ ॥

ರ್ವೀರಮಣಾತ್ಮಜರಾರ್ಪ್ಪಿಂ |
ಗಾರಾಜಕುಮಾರರಾದಮಚ್ಚರಿವಟ್ಟರ್ ||೭||

ವೃ|| ಗುರುಪುತ್ರಾಹರಣಾರ್ಥದಿಂದೆ ನಡೆತಂದೀಕೃಷ್ಣನೆನ್ನಂ ತಲಂ |
ಬರಮಾಲೋಡಿಸಿ ದಂದುಗಂಗೊಳಿಸಿದಂ ಮುನ್ನೀಗಳೆಯ್ತಂದು ಮ ||
ತ್ತಿರದೇಗೆಯ್ವನೊ ಎಂದು ಸಿಂಧು ಮೊರೆಯಿಟ್ಟಳ್ಕುತ್ತೆ ತತ್ಪಾದಪ |
ಷ್ಕರಮಂ ಎಚಿಕರಂಗಳಿಂ ಪಿಡಿದನೆಂದೆಂಬಂದದಿಂನೊಪ್ಪುಗುಂ ||೮||

ವ|| ಅಂತಪ್ಪ ನದೀಕಾಂತನಗಾಧತಟೋಪಾಂತದೊಳ್ಮಾದಲೆ ಸಜ್ಜೀ
ಕರಿಸಿರ್ದ ರಾಜಯೋಗ್ಯಮಪ್ಪ ಧೂಮಯಂತ್ರದ ಪಡಂಗನಡರ್ದವರೆಲ್ಲರು
ಮುಲ್ಲಾಸದಿಂ ಸರಸಸಲ್ಲಾಪಂಗೆಯ್ಯುತ್ತೆ ಮೂಡಣತ್ತಲ್ಪಯಾಣಂಗೆಯ್ಯು
ತ್ತಿಪ್ಪರ್ಪ್ಪಗಳ್ ||೯||

ವೃ|| ಅವಗಮೇಕರೀತಿಯೊಳಗಾಧತೆಯಾಂತುಮತೀವಪಾತ್ರಸ |
ದ್ಭಾವದಿನೆತ್ತಲುಂ ಜರಿಸುತಿಪ್ಪ ಪಡಂಗುಗಳಿಂದೆ ತಳ್ತುಮಾ ||
ಶೈವಲಿನೀಪ್ರಿಯಂಗನುಗುಣಪ್ರಿಯೆ ತಾನೆನಿಸುತ್ತುಮೊಪ್ಪುವೈ |
ರಾವತಿಯುತ್ತರಂಗತತಿ ದಿಟ್ಟಿಗೆ ಗೋಚರಮಾಯ್ತು ಬಟ್ಟೆಯೊಳ್ ||೧೦||

ಕಂ || ಜಳಿವೆಟ್ಟಿನ ತೌರೂರಿಂ |
ತಳರ್ದತ್ತಿತ್ತಲ್ವನಾಳಿಗಳಾಸ್ಪರ್ಧಿದ ಕ ||
ಮ್ಮಲರ್ಗಳನಾಂತೈರಾವತಿ |
ಜಲನಿಧಿಪತಿಗೃಹಮನೆಯ್ದುತೇಸೊಪ್ಪಿದಳೋ ||೧೧||

ವ|| ಅಂತಾನದಿಯಂ ಕಂಡಾರಾಜೇಂದ್ರಕುಮಾರರೈರಾವತೀಪೂರಾ
ವಾರಸಂಗಮಸ್ಥಾನಮಂ ಸೇರ್ದಲ್ಲಿಂದಾವುಹಾತರಂಗಿಣಿಯುತಿಮಾತ್ರಗಂಭೀ
ರಪ್ರವಾಹದೊಳ್ಪಡಂಗಂ ನಡೆಯಿಸಿ ಕಡುವೇಗದಿಂ ಮುಂಮುಂದೆ ಪೋಗೆ
ವೋಗೆ ||೧೨||

ಕಂ || ಇದಿರ್ಗೊಂಡು ತಮ್ಮನೊದವಿದ |
ಮುದದಿಂ ಬರ್ಪಂತೆ ತೋರ್ಪ್ಪ ರಂಗೂನಾಖ್ಯಂ ||
ಸದಮಳತತ್ತಟಿನೀತೀ |
ರದ ನಗರಂ ಕಣ್ಗೆವಂದುದತಿವಿಸ್ತೀರ್ಣಂ ||೧೩||

ವ|| ಅಂತು ಕಂಡಾನದೀತೀರಮಂ ಪೊದ್ದಿ ಪಡಂಗಿಸಿಂದಿಳದಾನಗ
ರಮಂ ಪೊಕ್ಕು ಮಾನವೇಂದ್ರನಂದನದಲ್ಲಿ ಪರ್ಪಾಂಗ್ಲೇಯಮಹಾಧಿಕಾರಿ
ಯಿಂದೆಯುಂ ಪೌರಮುಖ್ಯರಿಂದೆಯುಂ ರಾಜಮರ್ಯಾದಾನುಸಾರದಿಂ ಸಮ್ಮಾ
ನಿತರಾಗಿ ರಾಜನಿವಾಸೋಚಿತಮಪ್ಪ ಮಹಾಸೌಧದೊಳ್ಪಿಡಂಬಿಟ್ಟು ಕಟ್ಟ
ಳ್ಕರಿಂದಾಪಟ್ಟಣಮಂ ದಿಟ್ಟಿಸಲೆಂದಾಂಗ್ಲೇಯೋಪಾಧ್ಯಾಯಂ ಬೆರಸು ರಥಾ
ರೂಢರಾಗಿ ಪೌರಮಟ್ಟೆಲ್ಲೆಲ್ಲಿಯುಂ ಜಗಕೆಲ್ಲಂ ಬಿಸವಂದವಾಗೆ ಪತ್ರವು
ಯಚಿತ್ರಮುಂಟಪಂಗಳಂದಕ್ಕೆ ಪಲವಗೆಯ ಮುರಮುಟ್ಟುಗಳಂದಮೆ ಸಮೆದ
ಕುಸುರಿವೆಸದ ಚಿತ್ತರದ ಬಿತ್ತರದುಪ್ಪರಿಗೆಗಳಂದೆಸೆವ ಕೇರಿಕೇರಿಗಳಂದೆಡೆವಿ
ಡದೆ ನಾಲ್ಕುಂದೆಸೆಗಳೊಳ್ನೆಡೆತಪ್ಪನೇಕಸಹಸ್ರಪುರಜನರಿಂದಿಡಿಕಿರಿದು ಪಗ
ಡೆಯ ಪಾಸಿನಂತೆ ಸೊಗಯಿಸುವ ಚೌಪಟಂಗಳುಮಂ ಪೆರೆವಟ್ಟಂ ಮುಟ್ಟು
ತಿಪ್ಪ ಸಿರಿವಂತರ ಕರುವಾಡಂಗಳ ಮುನ್ನೆಲೆಯೊಳಾನಗರಲಕ್ಷ್ಮಿ ರಾಜ
ಮರ್ಯಾದೆಯಿಂ ತಮಗೆ ಶೀತೋಪಚಾರಮನೆಸಗಲ್ಕೆರಡುಂಕೆಲದೊಳೋರಣ
ದಿಂ ಪರುಠವಿಸಿದ ಪಂಗಾವಣಂಗಳೆಂಬಂತೆ ಕಣ್ಗೊಳಿಪ ಸಾಲ ಮರಂಗಳಿಂ
ಸಂಗಡಿಸಿ ತಣ್ಪುವೆತ್ತು ನಿರಂತರಂ ಜರಿಸುವ ನಿಸ್ಸಂಖ್ಯಕತಾಂಗಮಾತಂಗತು
ರಂಗಜನಂಗಳಿಂದಿಟ್ಟಣಿಸಿದ ರಾಜಪಥಂಗಳುಮಂ ಭಾರತೇಯನಾರಿಯರ್ಗೆ
ಮನೆಯ ಗಜ್ಜದಂತೆ ಬಣಜೆ ತಮಗೆ ಸಾಜಮಪ್ಪ ಕಜ್ಜವೆಂದೆಣಿಸಿ ಪರಿವ
ಡೆದ ಬಗೆವಗೆಯುಡುಗೆಗಳ್ನುಟ್ಟು ತುಡಿಗೆಗಳಂತೊಟ್ಟು ತಲೆಯ ಸಟ್ಟನ
ಡುವೆ ಪೆಣೆದು ಸುತ್ತುಗೊಳಿಸಿದ ನುಣ್ಜಡೆಗೆ ನರುಗಂಪನಾಳ್ದಲರ್ಗಳಂ
ಸೂಡಿ ವಣಿಕನಕಾದಿಸವುಸ್ತವಸ್ತುಗಳಧಿದೇವತೆಯರೆಂಬಂತೆ ಪಸರಪಸರ
ದೊಳಂ ಕುಳ್ಳಿರ್ದು ಮೂರಾಟದ ಬೇಹಾರಮಂ ನಡೆಯಿಸುವ ಕಡುಜಾಣೆ
ಯರಿನಿಸಿದ ಭರ್ಮಾಂಗಿಯರಪ್ಪ ಬರ್ಮಾಂಗನೆಯರಿಂ ತೆರಂಬೊಳೆವಂಗಡಿವೀದಿ
ಗಳುಮಂ ಪ್ರತಿಕ್ಷಣಮಂಬುಧಿಮಾರ್ಗದಿಂದೆಯ್ತಪ್ಪೆಣಿಕೆಗಾಣದ ಪಡಂ
ಗುಗಳನಿನಿಸಾನುಂ ತೆರಪಿಲ್ಲದಂತೆ ತಾಳ್ದುಕೊಂಡಿಪ್ಪೈರಾವತೀನದಿಯೋ
ರೊಂದು ತೀರೈಕದೇಶದೊಳ್ಬೃಗುಂಬೊಳ್ತನೊಳತ್ತಿತ್ತಣಿಂ ಬಂದು ಬಂ
ದೊಂದು ಮರನೊಳ್ನೆರೆದು ಜಿಲಿಮಿಲಿಗುಟ್ಟುವ ಪಕ್ಕಿಗಳಂತೆ ಸಂತೆಗೊಂಡು
ಬೇಹಾರಂಗೆಯ್ವ ಪಡಂಗುವರದರ ಕಲಕಲದಿಂ ತೀವಿದ ಬಣಂಜಿನ ಘಟ್ಟ
ಮುಮಂ ನಿಟ್ಟಿಸಿ ನಿರತಿಶಯಫಲಸಂಪತ್ತಿಗುತ್ಪತ್ತಿಸ್ಥಾನಮೆನಿಸಿದೀಜನಪದಂ

ನಿರರ್ಗಳಪ್ರತಾಪಸಮುಚ್ಚಾ ಯಧೌರೇಯರಪ್ಪಾಂಗ್ಲೇಯರಾಳ್ಕೆಗೊಳಗಾ
ದಂದಿನಿಂದಿಲ್ಲಿ ನಾಡೆ ನಾಗರಿಕತೆ ತಳೆದೋರಿತೆಂಬೊಂದು ಗುಣವಿಶೇಷಮುಂ
ಗ್ರಹಿಸಿ ಮತ್ತಮಿಲ್ಲಿಲ್ಲಿಯುಂ ಸುದೃಗ್ಗತ್ಯುಪದೇಶಕಂ ಗುರುಹಂಸಂ ಪದ್ಮಾ
ಸನಂಗೊಂಡಿರೆ ತತ್ಸನ್ನಿಧಾನದೊಳಂತೇವಾಸಿಗಳುಲ್ಲಸಿತಮುಖಕಮಲಂ
ಗಳುಂ ಬದ್ಧಾಂಜಲಿಪುಟಕೋಶಂಗಳುಮೆಸೆಯುತ್ತಿರೆ ಪೊರಪೊಣ್ಮುತಿರ್ಪ್ಪ
ಗುರುಶಾಂತಿರಸಂ ತುಳುಕಾಡೆ ತಾವರೆಗೊಳಂಗಳೆಂಬಂತೆ ಕಣ್ಗೊಳಪನೇಕ
ಬೌದ್ಧಗುರುಮಠಂಗಳುಮುಂ ಕಣ್ಬೊಲಂಗೆಯ್ದಾಬೌದ್ಧರ ಗುರುದೇವತಾ
ಭಕ್ತಿಯುಂ ಮೆಚ್ಚಿ ಕಟ್ಟಚ್ಚರಿಗೊಂಡತಿಪ್ರಸಿದ್ಧನಪ್ಪ ಬುದ್ಧದೇವನ ವಿಚಿತ್ರ
ತರಮಹಾದೇವಾಗಾರಮುಂ ಕಂಡದರ ನಟ್ಟನಡುವೆ ಮೇಗಡೆಯೊಳಾಗಸಮು
ನೀಡಿರಿವಂತೆ ನೀಡುಂ ನೀಳ್ದ ಕಾಂಚನಮಯಗೋಪುರಶಿಖರಮುಂ ಕೌತು
ಕಂಬೆತ್ತು ಲೋಕಿಸುತ್ತಿರ್ಪ್ಪಿನಂ ॥೧೪॥

ವೃ॥ ಅಮರಪುರಕೆ ನಾನಾಲಂಬಮಾಲಂಬಮಾಯ್ತಾ !
ಯಮರಪುರಕದೇನೆಂದುರ್ವಿಗೆಯ್ತುಂದು ನೋಡಲ್ ॥
ಸಮನಿಸೆ ಬೆರಗಾದಂ ಕಂಡು ತಲ್ಲಕ್ಷ್ಮ್ಯಯಂ ನಿಂ |
ದಮರಗಿರಿಯ ಕೆಂಡೆಂಬಂತದೇಸೊಪ್ಪಿದತ್ತೋ ॥೧೫॥

ವ॥ ಅಂತಪ್ಪ ಮಹಾದೇವಾಲಯದೊಳ್,

ಕಂ ॥ ಟಂಟಣಮೆಂಬುರುರವದಿಂ !
ದೆಂಟುಂದೆಸೆಗಳ್ಗೆ ಬುದ್ಧಪೂಜಾಕ್ಷಣಮಂ ॥
ಬಂಟನತೆರದಿಂದರಿಪುವ |
ಘಂಟಾಮಣಿಯೊಂದು ತೋರ್ದುದೀರಾಳುದ್ದಂ ॥೧೬॥

ವ॥ ಇಂತಿದು ಮೊದಲಪ್ಪತಿಶಯಂಗಳಂ ನೋಡಿ ನಿಜಗೌರವಾನು
ಸಾರದಿಂ ದೇವತಾಸೇವೆಯಂ ನಡೆಯಿಸಿ ಬೌದ್ಧಮುಖ್ಯರೆಸಗಿದ ಮನ್ನಣೆಯಂ
ಕಯ್ಕೊಂಡಲ್ಲಿಂ ಮರಲ್ದೈರಾವತಿಯ ಬೇರೊಂದು ತೀರೈಕದೇಶದೊಳ್ಮರವ
ರದರಾಣ್ಮಸ ಶಾಸನದಿಂ ಮಾವುತರೆಸಗಿದ ಸನ್ನೆಯಂ ತಿಳಿದು ಕಡುಬಿಣ್ಪಿಸ
ತೊಲೆಗಳನೆತ್ತುತ್ತುಮೆಳೆಯುತ್ತುಮೊಯ್ಯುತ್ತುಂ ಜಾಣಿಂದೆ ಕಜ್ಜಂಗೆಯ್ವ
ಪಲವುಮಾನೆಗಳನಾಲೋಕಿಸಿ ॥೧೭॥

ಕಂ || ಮನಮೊಲ್ದು ತಮ್ಮತಕ್ಕುಮೆ |
ಗನುಸಾರದೆ ಕಜ್ಜಮಂ ಮೃಗಂಗಳುಮಾಮೇ ||
ದಿನಮೊಳೊಡರ್ಚುವುವೆಂದೆನೆ |
ಮನುಜರ್ತಾಮೆಸಗದಿಪ್ಪುದನುಚಿತಮಲ್ತೇ ||೧೮||

ವ|| ಎಂದಿಂತು ಕೊಂಡಾಡುತುಂ ಪಿಂದಿರುಂಗಿ ಕೆಲಕೆಲವು ನೆಲಬಾವಿಗಳ ಮುಖದಿಂ ಮೊಗೆವ ನೀರನ್ನದ ಯಂತ್ರದೀಪಾರ್ಥಮಪ್ಪ ನೆಲದೆಣ್ಣೆಯ ಜನ್ಮಭೂಮಿಯಂ ನೋಡಿ ನಿರವಧಿಕರತ್ನಂಗಳುದ್ಭವಪದಮಾತ್ರಮಲ್ಲದೀಜನಪದಂ ಲೋಕಕೆಲ್ಲಂ ಬಳಕೆಗೆಳಸವೇಳ್ಪ ನೆಲದೆಣ್ಣೆ ಮೊದಲಪ್ಪ ವಸ್ತುವಿಶೇಷಂಗಳ್ಗಂ ಜನ್ಮಸ್ಥಾನವಾಗಿಪ್ಪುದರಿಂದಿಲ್ಲಿಯ ಸಿರಿ ಪಿರಿದಾಗಿಪ್ಪುದೆಂದರಿದು ಬೀಡಾರಮಂ ಪುಗುತಂದು ಮರುದಿವಸಮಲ್ಲಿಂ ಪೊಗೆವಂಡಿಯ ಮಾರ್ಗದಿಂ ಸಪರಿವಾರಂ ಪಯಣಂಗೆಯ್ದು ಪೆಗುವೆಂಬ ನಗರಮನೆಯ್ದಿವಂದಲ್ಲಿ ಪವಡಿಸಿ ವಿಶ್ರಮಂಗೊಳುತ್ತಿಪ್ಪ ಬುದ್ಧದೇವನ ಲೋಚನಮುನಿಧಾತ್ರೀನೇತ್ರಸಂಖ್ಯಾಕಾಂಗುಲಂಗಳುದ್ದಮಪ್ಪ ಮಹನೀಯವಿಗ್ರಹಮನವಲೋಕಿಸಿ ಬಳಿಕಲ್ಲಿಂತಳರ್ದು ಮುನ್ನಿನ ರಾಜಧಾನಿಯಾಗಿರ್ದಾ ಅಮರಪುರದ ಬಳಸಂದ ಮಾಂಡಲೆಯೆಂಬ ಪಟ್ಟಣಮಂದಿಟ್ಟಿಸಿ ದಿಟ್ಟತಾದ ಪುರಜನದಿಟ್ಟಳಕೆ ಕಟ್ಟಚ್ಚರಿಗೊಂಡು ಕುರುಗೆಂಟನೊಳಿಪ್ಪರ್ಕಪೆಗೋಡಾಭಿಧಾನಮನಾಂತ ಗುರುಸ್ಥಾನಮಂ ಸಾರ್ತಂದಲ್ಲಿ ಜಗದ್ವಿಖ್ಯಾತಮಾಗಿಪ್ಪ ಸಮಗ್ರಕೃತಭಕ್ತಾನುಗ್ರಹಮಂ ಗೌತಮದೇವನವಿಗ್ರಹಮಂ ದೃಗ್ಗೋಚರಂಗೆಯ್ದಲ್ಲಿಂ ನಾಲ್ನೂರಯ್ವತ್ತರೆಣಿಕೆಯ ಬೌದ್ಧದೇವಾಲಯಂಗಳಿಪ್ಪ ಬೌದ್ಧರ ಪುಣ್ಯಕ್ಷೇತ್ರಮನೀಕ್ಷಣಸತ್ಯಕ್ಷಂಗೆಯ್ದಲ್ಲಿ ಪಲವುದೇವಾಲಯಂಗಳನಾಲೋಕಿಸಿ ಬಳಿಕಮಲ್ಲಿಂ ಮೇಮಿಯೋನಾಮಕಮಪ್ಪ ಮಹಾಮಹೀಧರಮಂ ಪೊಗೆವಂಡಿಯಿಂದಡರ್ದು ಸುತ್ತುಂ ದಿಟ್ಟಿಸುತ್ತಿಪ್ಪಿನಂ ||೧೯||

ಕಂ || ಘೋರಾರಣ್ಯಂ ಸುತ್ತುಂ |
ನೀರಂಧ್ರಮೆನಲ್ಕೆ ಒಗಸಿರಲ್ಕಾಗಿರಿ ಮು ||
ನ್ನೀರಧಿಯಿನೆಳ್ದು ಬಗಾ |
ಕಾರದ ಮೈನಾಕಗಿರಿಯೊಲೇನೊಪ್ಪಿದುದೋ ||೨೦||

ವ|| ಅಂತು ನೋಡಿ ಸಂತಸಂಗೊಂಡಲ್ಲಿಂದಿಳಿದು ಗೋಠೀಕೆಂಬ ಗಿರಿದರೀಸರಿತ್ಪ್ರದೇಶಮುಂ ಸಾರ್ದಲ್ಲಿ ಪರಿವ ತೊರೆಯೊಳ್ತಂತಿಗಳಾಧಾರದಿಂ ದಾರಜೆಸಿಪ್ಪ ಸೇತುಮಾರ್ಗಮುಂ ದಿಟ್ಟಿಸಿದ ಬಳಿಕಲ್ಲಿಂ ಪಿಂದಿರುಂಗಿ ಪಡಂಗನೇರಿ ವಿಪುಲತರಕಾಂತಾರಮಧ್ಯದೊಳ್ಪರಿವಾಮಹಾನಿರ್ಝರಿಣಿಯೊಳ್ಬರು ತಿರ್ದಂ ||೦೧||

ವೃ|| ಘನತರಶೈಲಸಾಲಕುಲಸಂಕುಲಕಾನನಮಧ್ಯದೇಶಗಾ |
ಮಿನಿಯೆನಿಪಾನದೀಝರದೆ ನಾಪೆಯನೇರಿ ಚರಿಪ್ಪ ರಾಜನಂ ||
ದನರವರೊಪ್ಪಿದರ್ಬರಿಸದೊಳ್ಪ್ಪನಮಂಡಲಮಧ್ಯಮಾರ್ಗದೊ |
ಳ್ಮನದೊಲವಿಂದೆ ಪಾಱುವಡರ್ದೆಯ್ದುವುಪೇಂದ್ರಸುರೇಂದ್ರರಂತೆವೊಲ್ ||೨೨||

ವ|| ಅಂತಾನರೇಂದ್ರಸೂನುಗಳ್ಪೋಗುತಿಪ್ಪುಗಳೋರೊಂಚೆಡೆಯೊಳತ್ತಿತ್ತಮಿತ್ತಡಿಯೊಳಂ ಕೆನ್ನೆಲಂ ವೊದಲೆಸಿಸೆ ಕೋಡುಗಲ್ವರೆಗಂ ದಟ್ಟಿತ್ತಾಗಿ ಬೆಳೆದು ವಿಜೆತ್ರತರಪತ್ರಪುಷ್ಪಂಗಳಿಂ ಕಣ್ಗೊಳಿಸುವ ಮರಗಿಡುಗಳಿಂದೆಯುಂ ಮರಮರದೊಳಂ ನೆಲೆಗೊಂಡು ಕಲರವಂಗೆಯ್ವ ಬಹುವಿಧವಿಹಂಗಮುಂಗಳಿಂದೆಯುಂ ಪಲತೆರದ ಪೂಗಳೊಳ್ಗಂಸನಾಳ್ದಲ್ಲಲ್ಲಿ ಪರಿವ ಗಿರಿನಿರ್ಝರಂಗಳ ತುಂತುರ್ವನಿಗಳಂ ತಳೆದು ಮೆಲ್ಲೆಲ್ಲನೆ ತೀಡುವ ತಣ್ಗಾಳಿಯಿಂದೆಯುಂ ಪಥಿಕರ್ಗತ್ಯಾನಂದಮನೊಡರಿಸುವೆರಡುಂ ಪೆರ್ಬೆಟ್ಟುಗಳ ನಟ್ಟಡೆಯೊಳ್ಪರಿವ ಪೊನಲ ಮನೋಜ್ಞತೆಗೆ ನೀಡುಂ ಮನಂಸೋಲ್ದ ಮುಂತಳರ್ದು ಮಗುಳೆ ರಂಗೂನಂ ಸೇರ್ದಲ್ಲಿಪ್ಪರ್ಂಗ್ಲೇಯಸರ್ವಾಧಿಕಾರಿಯಿಂ ರಾಜಮರ್ಯಾದಾನುಸಾರದಿಂ ಸತ್ಕೃತರಾಗಿ ಸಕಲಪರಿವಾರಂಬೆರಸಲ್ಲಿಂ ಪೊರವೆಟ್ಟು ಪಡಂಗನೇರಿ ಕಿರಿದುದೂರಮ್ಮೈರಾವತಿಯಮಾರ್ಗದೊಳಂ ಕಿರಿದುದೂರಮುಕೂಪಾರದ ಮಾರ್ಗದೊಳಂ ಚೆನ್ನಪುರಿಯನೆಯ್ದಿವಂದಲ್ಲಿಂದಂ ಪೊಗೆವಂಡಿಯ ಮಾರ್ಗದೊಳ್ಕುಶಲದಿಂ ರಾಜಧಾನಿಯಂ ಪುಗುತಂದು ಯಥಾಕ್ರಮುಂ ವಿಜ್ಞಾಭ್ಯಾಸಂಗೆಯ್ಯುತ್ತೆ ಸೊಗದಿನಿರ್ದರ್ ||೦೩||

ಕಂ|| ಪೆರನಾಳ್ಕಳಂ ಚರಿಸಿ ಮೇ |
ಲರಿವಂ ಪಡೆದಾನರೇಂದ್ರತನುಜರ ಮತಿ ನು ||
ಣ್ಪಿರುಗಿಕ್ಕಿದ ಪೊಂದೊಡವಿನ |
ತೆರದಿಂದಮದೇನಳುಂಬಮಾಳ್ದುದೊ ಪೊಳಪಂ ||೨೪||

ವ॥ ಅನಂತರಂ ಶೇಷಾದ್ರಿಮಂತ್ರಿಪ್ರವರಂ ಪ್ರಬಲತರವ್ಯಾಧಿಯಿಂ ಬಾಧಿತನಾಗಿ ವಿಶ್ರಾಂತಿಸುಖಕ್ಕೆಳಸಲದರ್ಕೆ ಮಾರಾಣಿ ಕೆಂಪನಂಜಾಂಬಿಕೆ ಮನಂಮೆರುಗಿ ಪಿಂದೆ ಮಂತ್ರಿಪದವಿಯೊಳರ್ದ ಪೂರ್ಣಯ್ಯನ ಮೊಮ್ಮನುಂ ಪೂರ್ವಾಪರವಿದನುಂ ಶ್ರೀಮಂತನುಂ ಧೀಮಂತನುಮಾಗಿ ತತ್ಕಾಲದೊಳುಪ ಮಂತ್ರಿಯೆನಿಸಿರ್ದ ಕೃಷ್ಣಮೂರ್ತಿರಾಯನಂ ಬಹುಮಾನಪುರಸ್ಸರಂ ಬರಿಸಿ ಮಂತ್ರಿಪದವಿಯೊಳ್ಪದಂಗೊಳಿಸಿದ ಕೆಲವಾನುಂ ದಿನದೊಳ್ ॥೬೫॥

ವೃ॥ ಕಡಲಾವಂ ಗುಣರತ್ನರಾಶಿಗಿಳೆವೆಣ್ಗಿನ್ನಾವನಾ ಕೀರ್ತಿ ಬೆ ।
ಳ್ಳಿಡೆಯಾಯ್ತಾವನಮೇಯಮಂತ್ರಬಲದಿಂ ಕರ್ಣಾಟನೇಶಂ ಕರಂ ॥
ಪಡೆದತ್ತೇಳ್ಗೆಯನೊಲ್ದು ನೀತಿವಧು ಬಾಳುತ್ತಿರ್ದಳಂತಾವನೊ ।
ಳ್ನಡೆದಂ ನಿರ್ಜರರಾಟ್ಸಭಾವಲಯಕಾಶೇಷಾದ್ರಿಮಂತ್ರೀಶ್ವರಂ ॥೨೬॥

ವ॥ ಇಂತು ಸಂದಾವಮಂತ್ರಿಪುಂಗವನ ಸರ್ವಾತಿರಿಕ್ತಮಪ್ಪ ಧೀಶಕ್ತಿಯುಮಂ ರಾಜಭಕ್ತಿಯುಮಂ ಸುಗುಣಗಣಮುಮಂ ನೆನೆನೆನೆದು ಲೋಕಮೆಲ್ಲಂ ಮರುಮರುಗುತ್ತಿರ್ಪಾಗಳ್ ॥೬೬॥

ವೃ॥ ಸಿರಿಯುಂ ವಿದ್ಯೆಯುಮುನ್ನತಾಧಿಕೃತಿಯುಂ ಸದ್ವಂಶವಿಖ್ಯಾತಿಯುಂ ।
ದೊರೆಕೊಂಡಿರ್ದೊಡಮಂತು ಗರ್ವಲವಮುಂ ತಾನಿಲ್ಲದಿರ್ಪಿಂತಹಂ ॥
ಪುರುಷಂ ದುರ್ಲಭನೆಂದು ಲೋಕವೊಲವಿಂ ಕೊಂಡಾಡುತಿರ್ಪನ್ನೆಗಂ ।
ವರಿಸಿರ್ದಂ ವರಕೃಷ್ಣಮೂರ್ತಿ ನೆಗಳ್ದಾ ಕರ್ಣಾಟಮಂತ್ರಿತ್ವಮಂ ॥೨೮॥

ವ॥ ಇಂತುಕೃಷ್ಣಮೂರ್ತಿರಾಯನಗ್ಗದ ಕೀರ್ತಿಗೆಳಸಿ ನಿಜವಂಶೋಜ್ಜೀವಿತಮಪ್ಪಂತು ಪಿರಿದುಮಾದರದಿಂ ಮಂತ್ರಿಪದವಿಯೊಳಧಿಕರಿಸುತ್ತಿರ್ಪುದರ್ಕೆ ನೆರೆಸಂತಸಂಗೊಂಡು ಮಾರಾಣಿ ಧರ್ಮದಿಂದರಸುಗೆಯ್ಯುತ್ತಿರ್ಪಾಗಳ್॥

ಕಂ॥ ನವಯೌವನದೆ ಮಹಾರಾ ।
ಜವರೇಣ್ಯಂ ಕೃಷ್ಣರಾಜನತಿರುಚಿರಾಕಾ ॥
ರವನಾಂತಂಗಂಬಡೆದಭಿ ।
ನವಮನ್ಮಥನಂತೆವೋಲದೇನೊಪ್ಪಿದನೋ ॥೩೨॥

ವ॥ ಒಂದು ದೆವಸಂ ತರುಣಶೇಖರನಾಮಮಹಾರಾಜಂ ಪಲತೆರದ ಚಿತ್ತರದ ಭಿತ್ತಿಯೊಳ್ಕಣ್ಗೊಳಿಸುವ ಬೇಂಟೆಯಾಟದಂದಮುಂ ದಿಟ್ಟಿಸಿ ತಾನುಮಿಂತುಬೇಂಟೆಯಾಡಲ್ಕೆ ಮನವೊಲ್ದು ತನ್ನೋರಗೆವಡೆದೊಡ್ಡನಾಡಿಗಳೀ

ದೊಡಗೂಡಿ ಸನ್ನಹಂಗೆಯ್ವಲ್ಲಿ ತಾವುವರೆಲ್ಲರುಂ ದೂಸರವಣ್ಣದುಡು
ಗೆಯುಂತೊಟ್ಟು ಕೈದುಗಳನಾಂತು ತಮ್ತಮ್ಮ ವಾರುವಂಗಳನೇರಿ ಬೇಂಟೆಯು
ಪೇರಡಿಗಳಂ ಮುಂಬಿಟ್ಟು ಪೊಳಲಂ ಪೊರವಟ್ಟು ಬೆಟ್ಟುಗುಡ್ಡುಗಳೆಡೆ
ಯೆಡೆಯೊಳಡವಿಯಿಂದಡವಿಗೆಡೆಯಾಡುವಾಗಳ್ಮಾನಿಸರ ಸುಳಿವಂ ತಿಳಿದೆಯ್ದೆ
ಕಾಯ್ದುರವಣಿಸಿ ಹಣೆಯಿಂ ತೊಟ್ಟನೆ ಪೊರವಟ್ಟಬ್ಬರಿಸುವ ಪೆರ್ಬುಲಿ
ಮೊದಲಪ್ಪಕೂರ್ಮ್ಮಗಂಗಳನಲ್ಲಲ್ಲಿ ಕಾಣಲೊಡಂ ॥೩೧॥

ಕಂ॥ ದಿಟ್ಟನಹ ಕೃಷ್ಣರಾಜಂ ।
ಕಟ್ಟದಟಿಂದಾಂತು ಕೋಪಯಾ ಗುಂಡುಗಳಿಂ ॥
ದಿಟ್ಟಿಟ್ಟವನಲ್ಲಲ್ಲಿಯೆ ।
ದಿಟ್ಟಿಸುವರ್ಭಳಿರೆಯೆಂಬಿನಂ ಬೀಳಿಸಿದಂ ॥೩೨॥

ವ॥ ಇಂತು ಮಹಾರಾಜಂ ಪಲರ್ಮ್ಮೆ ಬೇಂಟೆಯಾಡುತ್ತುಂ ರಾಜ್ಯಾಧಿ
ಕಾರಧುರೀಣತೆಯುಂ ಸೂಚಿಸುವ ಕೃತ್ಯಂಗಳ ವಿಚಾರಮುಂ ನೆಗಳ್ಚುತ್ತುಮಿ
ಪ್ಪಾಗಳ್ ॥೩೩॥

ಕಂ॥ ಪದಿನೆಂಟುಂಬರಿಸಿದ ಜ ।
ನ್ಮದಿನೋತ್ಸವಮಾಗಲಾನೃಪಂ ನಿತಿವಿಶಾ ॥
ರದನೆನಿಸುವೆಂ ನಿಜರಾ ।
ಜ್ಯದ ಭರಮುಂ ತಳೆವ ತಕ್ಕುನೆಯಿನೊಪ್ಪಿದನೋ ॥೩೪॥

ವ॥ ಇಂತು ಸಂಪ್ರಾಸ್ತಯೌವನನುಂ ವಿದ್ಯಾವಂತನುಂ ರಾಜ್ಯಾಧಿ
ಕಾರಕ್ಷಮನುಮೆನಿಸಿದ ಕೃಷ್ಣರಾಜಕುಮಾರಂಗೆ ತಾಂ ಪೊತ್ತಿಪ್ಪ ರಾಜ್ಯ
ಭಾರಮುಂ ಮಾರ್ಪಡಿಸಲಿದೆ ಸಮಯಮೆಂದು ಮಹಾಮಾತ್ಯನಪ್ಪ ಕೃಷ್ಣ
ಮೂರ್ತಿರಾಯನೊಡನೆ ಮಂತಣಂಗೆಯ್ದು ಮಾರಾಣಿಯಾಪದನಂ ಮಹೀಶೂರ
ರಾಜಕುಲಕ್ಕೆ ನಿರಂತರಮೆತಾಕಾಂಕ್ಷಿಯೆನಿಸಿದ ಭಾರತೇಯಚಕ್ರವರ್ತಿಯಧಿ
ಕಾರಸ್ಥಾನಕ್ಕರಿಪುವುದುಂ ಚಕ್ರವರ್ತಿಪ್ರತಿನಿಧಿಯುಪ್ಪ ಕರ್ಜನ್ನೆಂಬಾಂಗ್ಲೇಯ
ಸರ್ವಾಧಿಕಾರಿಯಿಂರಾಜಕಾರ್ಯಮಂ ಬಳೆಯಿಸಲ್ಮಹೀಶೂರರಾಜಧಾನಿಗೆ ತನ್ನ
ಬರವನುತ್ತರಪತ್ರಿಕಾಮುಖದಿಂ ತಿಳಿಪಲ್ಕೆ ॥೩೫॥

ಕಂ॥ ಮಾರಾಣಿ ಕೃಷ್ಣರಾಜಕು ।
ಮಾರನ ರಾಜ್ಯೋತ್ಸವಕ್ಕೆ ಸನ್ನಾಹಮನಿ ॥

ನ್ನಾರಚಿಸುವುದೆಂದು ನೃಪಾ |
ಗಾರಾಧ್ಯಕ್ಷಂಗೆ ತತ್ಪಣಂ ಬೆಸನಿತ್ತಳ್ ||೩೬||

ವ|| ಅಂತಾಬೆಸನಂ ತಲೆಯೊಳಾಂತರಮನೆಯ ಕಾರ್ಯಾಧ್ಯಕ್ಷನಪ್ಪ ವರಿಯೂರು ನರಸಿಂಹಾರ್ಯಂ ಮಹಾರಾಜಕೃಷ್ಣರಾಜನ ರಾಜ್ಯಾಧಿಕಾರಮಹೋತ್ಸವಮುಂ ಬಳೆಯಿಸಲ್ಕೆವೇಳ್ಪ ಸಮಸ್ತಮಂಗಳವಸ್ತುಜಾತಮುಂ ಸಜ್ಜುಗೊಳಿಸಿ ಪೌರಕಾರ್ಯಾಧ್ಯಕ್ಷಂಗೆ ಮಾರಾಣಿಯಾಣತಿಯುಂ ತಿಳಿಪಿದೊಡಾತಂ ಕಡುಜಾಣರಪ್ಪ ಕಜ್ಜದೋಜರಿಂ ರಾಜಧಾನಿಯುಂ ವಿಚಿತ್ರತರಕಾಯವೂನನೈಜಯಂತೀತೋರಣಾದಿಗಳಿಂ ಸಿಂಗರಂಗೊಳಿಸಿದ ಸಮನಂತರದೊಳ್ಮಹಾರಾಜ್ಞಿಯಾಜ್ಞೆಯಿಂದಭಿಜ್ಞತಸಕಲಮಂತ್ರೋಪಾಯಂ ಕೃಷ್ಣಮೂರ್ತಿರಾಯಂ ಮಹಾರಾಜನ ರಾಜ್ಯಾಧಿಕಾರೋತ್ಸವಮುಹೂರ್ತಕ್ಕೆಂದು ಬರೆಯಿಸಿ ಮಿರುಮಿರುಗುವ ಪೊಂಬುಡಿಯಿಂ ಸುತ್ತುಂ ಚಿತ್ರಿತವೂಗಿ ಕುಂಕುಮಕೇಸರಕರ್ದಮದಿಂ ಪತ್ರಲೆಖೆಗೊಳಿಸಿದ ಸರಸ್ವತೀಕಪೋಲದಂತೆಸೆವ ಚಚ್ಚೌಕದ ಮುಸುಂಕಿನೊಳ್ಪುದಂಗೊಳಿಸಿದ ಪಲವುಂ ಲಗ್ನಪತ್ರಿಕೆಗಳಂ ಕಳಿಪಿ ಗಡಿಗಡಿಯೊಳುಮಿಪ್ಪ ದಿಮ್ಮಿದರಪ್ಪಧಿಕಾರಿಗಳುಮುಂ ನಾಡಿಗರುಮನಕ್ಕರಿಗರುಮುಂ ರಾಜಧಾನಿಗೆ ಬರಿಸಿದಿಂಬಳಿಯುಂ ||೩೭||

ವೃ|| ಘನತೇಜೋನಿಧಿ ಕರ್ಜನೆಂದೆನಿಸಿದಾಲಂಗ್ಲೇಯಸರ್ವಾಧಿಕಾ |
ರಿ ನಿಜಾನೀಕಸಮೇತನಾಗಿ ಮುದದಿಂ ಶ್ರೀಮನ್ಮಹೀಶೂರಪ ||
ತ್ತನಮಂ ಸಾರ್ತ್ತರೆ ರಾಯವನ್ನಣೆಗಳಂ ಮಾರಾಣಿಯಾತಂಗೆ ಸಂ |
ದನನಿಂ ಮಾಡಿಸಿದಳ್ಮಹಾವಿಭವದಿಂ ಶ್ರೀಕೃಷ್ಣರಾಜೇಂದ್ರನಿಂ ||೩೮||

ವ|| ಅಂತಾತಂ ಬಂದಾಂಗ್ಲೇಯಮಹಾಧಿಕಾರಿನಿವಾಸಾರ್ಥಮಪ್ಪಮಹಾಸೌಧದೊಳ್ಬೀಡಂಬಿಟ್ಟ ಸಮನಂತರಮೆ ಶಾಲಿವಾಹನಶಕದ ಶರನೇತ್ರವಸುಚಂದ್ರಮಿತಶುಭಕೃದ್ವತ್ಸರಶ್ರಾವಣಶುಕ್ಲಪಂಚಮಿಯು ಪೊಳ್ತಡೆಮೆ ಸುಕುಮಾರವಿಚಿತ್ರರಾಂಕವಾಸ್ತರಣಾಂಗಳಿಂದೆಯುಂ ರಾಜಮಾನರಜತಮಹಾರಜತಮಯರಾಜಪೀಠಂಗಳರಾಜಿಗಳಿಂದೆಯುಮನುಪಮಾನಬಹುವಿಧಚಿತ್ರವಿಧಾನದಿಂದುದ್ಯೋತಮಾನಮಪ್ಪ ವಿತಾನವಿತಾನದಿಂದೆಯುಮೆತ್ತೆತ್ತಮುಂ ಬಾಗಿಲ್ವಾಗಿಲೊಳತ್ತಿತ್ತಂ ಕಟ್ಟುವಡೆದು ಶೋಭಿಸುವ ಕೋಮಲಕದಳೀಕಾಂಡಂಗಳಿಂದೆಯುಂ ಪರ್ಯಾಯಸಂದಾನಿತಸಲ್ಲಲಿತರಸಾಲಪಲ್ಲವಪ್ರಫುಲ್ಲಕುಸುಮ

ಮುಂಜರೀಮಯತೋರಣಶ್ರೇಣಿಗಳಿಂದೆಯುಂ ಚೆತ್ರಿಸಿದತಿನೂತ್ರಸುಂದರ
ದೈವತಮಾನುಷಪ್ರತಿಮೆಗಳಂ ಬಗೆಗೊಂಬ ಕಂಬಂಗಳಿಡೆಯೆಡೆಯೊಳರೆವೆ
ರೆಯಜಂದದಿಂದಿಳವಿಟ್ಟ ನಿರರ್ಗಳನಿರ್ಗಳನ್ನಿಜಪರಿಮಳಮಿಳದಳಿಮಾಲೆಗಳಪ್ಪ
ನೇಕಪುಷ್ಪಮಾಲಿಕೆಗಳಿಂದೆಯುಂ ಮೇಲ್ಕಟ್ಟನೆಡೆಯೆಡೆಯೊಳಂ ವಿಚಿತ್ರವಿಚಿ
ತ್ರಂಗಳಾಗಿ ಕಳವೆತ್ತು ತೊಳತೊಳಗುವ ಪಳುಕಿನ ತೂಗುದೀವಿಗೆಗಳಿಂದೆ
ಯುಂ ಮಂಗಳಾಲಂಕಾರಶೋಭೆಯಂ ಪಡೆದು ವಿರಾಜಿಸುವ ನಿಜವೈಭವ
ಪರಾಜಿತವೈಜಯಂತಮಪ್ಪ ರಾಜಸಭಾಮಂಟಪದೊಳ್ಪಲಬರ್ಮಹಾಧಿಕಾರಿಗ
ಳುಂ ಪ್ರಮುಖರೆನಿಸಿದ ಪೌರರುಂ ನಾಡಿಗರುಂ ಪೆಸರ್ವೆತ್ತ ಸುಧೀಮಣಿ
ಗಳುಂ ಸಾಮಂತರಾಜರುಂ ತಮ್ತಮ್ಮ ಸನ್ಮುಚಿತಸ್ಥಾನಂಗಳೊಳ್ಕುಂಡಿಸಿರ್ಪ್ಪಿ
ನಂ ವ ಹಾರಾಜ್ಞಿ ನಿಜಪರಿವಾರಂಬೆರಸಂತಃಪುರೋಚಿತನೂಪ ಮೇಲುಪ್ಪ
ರಿಗೆಯನಲಂಕರಿಸಿರ್ಪ್ಪಿನೆಗಂ ಮಹಾವೀರರಪ್ಪ ಸೈನಿಕರ್ತಮ್ತಮ್ಮ ಕೈದು
ಗಳಂ ಪಿಡಿದು ಗಂಡಭೇರುಂಡಧ್ವಜದಿಂದೊಡಗೂಡಿ ಮುಂಗಡೆಯಂಗಳದೊ
ಳ್ವಂಗಡಂಗೊಂಡು ನಿಂದಿರ್ಪ್ಪನ್ನಮೂಳಿಗದ ಜನಮುಲ್ಲಲ್ಲಿ ಕಯ್ಗಳಂ ಕಟ್ಟ
ಕೊಂಡು ನಿಂದು ರಾಯಸಮುಂ ಕಾದುಕೊಂಡಿರ್ಪ್ಪನ್ನೆಗಂ ॥೩೯॥

ಕಂ॥ ಅರಾಜಸದಕ್ಕೆ ಶತ |
ಘ್ನೀರವಮೆಣ್ದೆಸೆಯನೆಯ್ದಲೆಯ್ತಂದಂ ನಾ ॥
ಲ್ವಾರುವದ ತೇರನಡರ್ದಾ |
ಭಾರತಸರ್ವಾಧಿಕಾರಿಯಾಂಗ್ಲೇಯವರಂ ॥೪೦॥

ವ॥ ಅಂತು ಬಂದಾತನಿದಿರ್ವಂದು ತನ್ನಂ ಮನ್ನಿಸಿದ ಮಹಾರಾಜಶ್ರೀ
ಕೃಷ್ಣರಾಜೇಂದ್ರನೊಡನಾಸ್ಥಾನಮನೊಳಪೊಕ್ಕು ಸಭಾಮಧ್ಯದೊಳ್ನಿಂದು
ಸಭಾಸದರಂ ನೋಡಿ ಕೇಳರೈ ಮಹಾಶಯರಪ್ಪ ಸಾಮಾಜಿಕರಿರಾ ಮಹಾ
ರಾಜನೀಕೃಷ್ಣರಾಜಂ ಬಾಲ್ಯಮುಂ ಕಳೆದು ಯೌವನಸ್ಥನಾಗಿರ್ಪ್ಪನೆಂಬುದುಂ
ಮುನ್ನಮೆ ತನಗೆ ಪಟ್ಟಾಭಿಷೇಕಮಹೋತ್ಸವಂ ಬಳೆದಂದಿನಿಂದಿನ್ನೆವರಮಾ
ತಂ ಸನ್ಮಾರ್ಗವರ್ತ್ತಿಯಾಗಿ ನಿರವದ್ಯವಿದ್ಯಾಭ್ಯಾಸಂಗೆಯ್ದನೇಕರಾಜಧರ್ಮಂಗ
ಳುಮುಂ ಸ್ವದೇಶದೊಳಮನ್ಯದೇಶಂಗಳೊಳಂ ಸಂಚಾರಂಗೆಯ್ದು ಸಮುಂಚೆ
ತಲೋಕವ್ಯವಹಾರಮುಮಂ ತಿಳಿದು ರಾಜ್ಯಾಧಿಕಾರಕ್ಕೆ ತಕ್ಕತಕ್ಕುಮೆಯಂ
ಪಡೆದಿರ್ಪ್ಪನೆಂಬುದುಂ ನಿಮ್ಮೆಲ್ಲರ್ಗಂ ವಿದಿತಮಾಗಿರ್ಪ್ಪುದೈಸೆ, ರಾಜ್ಯಮಿದಾ

ದೊಡಯ್ವತ್ತುಂ ಲಕ್ಕದೆಣಿಕೆಯ ಜನಂಗಳನೊಳಕೊಂಡು ನೀಡುಂ ಪಿರಿದಾ
ಗಿಪ್ಪುದು ಸಾಮಾನ್ಯಮಲ್ತು ಮತ್ತಂ ನಿರತಿಶಯಬುದ್ಧಿಪ್ರಾಚುರ್ಯನೆನಿಸಿದ
ಶೇಷಾದ್ರಿಯಾರ್ಯನ ಮಂತ್ರಿತ್ವದೊಳ್ಪಿರಿದುಮೇಳ್ಗೆವಡೆದಿಪ್ಪುದಿಂತಿದಂ ಬಾ
ಲನಪ್ಪ ಕುವರಂಗೆ ಪಡಿಯೆನಿಸಿ ಕಂದುಕುಂದುಗಳೀನೊಂದುಮಿಲ್ಲದಿನ್ನೆವರಂ
ಕಯ್ಗಾಯ್ದ ವಾಣೀವಿಲಾಸದ ಮಾರಾಣಿಯ ಜಾಣ್ಮೆ ನಾಡೆ ಪೊಗಳ್ಕೆಗೆಡೆ
ಯಾದುದಿಂತೀವುಹೀಶ್ವರರಾಜ್ಯದಧಿಕಾರಮನೀಗಳೀವುಹಾರಾಜ ಕೃಷ್ಣರಾ
ಜೇಂದ್ರನಧೀನಮುಂ ಮಾಡಿಪ್ಪೆನಿದನೀತಂ ನಿಜಧರ್ಮದಿಂ ಪಾಲಿಸುತ್ತೆ ಚಿರ
ಕಾಲಂ ಸೊಗದಿಂದಿರ್ಕೆಂದು ಜಗದೀಶನಂ ಪ್ರಾರ್ಥಿಸುವೆನೆಂದು ಘುಂಟಾಘೋ
ಷದಿಂ ನುಡಿವುದುಮೆಲ್ಲರುಂ ಜಯಘೋಷಮುಂ ಮಾಡಿದರಾಕ್ಷಣದೊಳ್ ॥

ಕಂ ॥ ದೊರೆವಡೆದ ಸತ್ಯನೇವೋ ।
ದ್ಧರಾಮ್ಯಹಮೆನಿಪ್ಪ ಲೇಖನದ ಕನ್ನಡನಾ ॥
ಡರಸರೆರಳ್ದಲೆವಕ್ಕಿಯ ।
ಕುರುಪಿನ ಪಳವಿಗೆಯನೆತ್ತಿದಪ್ಪಡೆವಳ್ಳರ್ ॥೪೨॥

ಕಂ ॥ ನೆಗಪಿದ ತಮ್ಮಾಳ್ದನ ಪಳ ।
ವಿಗೆಯಂ ಕಂಡೊಡನೆ ಪೊರಗೆ ನೆರೆದಿರ್ದ್ದ ಜನಂ ॥
ಮುಗಿಲಂ ಮುಟ್ಟಿ ಜಯಧ್ವನಿ ।
ನೆಗಳ್ದುದು ಕರತಾಳಘೋಷಮುಂ ಮುದದಿಂದಂ ॥೪೩॥

ಪ॥ ಅಗಳ್,

ಕಂ ॥ ತೀವಿತ್ತು ಸೈನಿಕರ ಕ !
ಯ್ಗೀವಿಗಳೊಗ್ಗಿಗುಣ್ಮೆದಬ್ಬರಮುಂ ಪೆ ॥
ರ್ಗೋವಿಗಳಿಂದಂ ಪೊಣ್ಮೆದ ।
ಗಾವರಮುಂ ಭೂನಭೋಂತರಾಳಮನೆಲ್ಲಂ ॥೪೪॥

ವ॥ ಅನಂತರಂ ಮಹಾರಾಜಂ ಶ್ರೀಕೃಷ್ಣರಾಜಂ ಪುಷ್ಪಹಾರಾದಿಗಳಂ
ದೆಯುಂ ರಾಜಮರ್ಯಾದೋಚಿತಮಾದುಪಚಾರೋಕ್ತಿಗಳಂದೆಯುಮೊಂಗ್ಲೀ
ಯಸರ್ವಾಧಿಕಾರಿಯುಂ ಸನ್ಮಾನಿಸಿದ ಸಮನಂತರಮೆ ಸಜೀವಾಗ್ರೇಸರರ್ಸಭಾ
ಸದರಂ ಪುಷ್ಪಹಾರತಾಂಬೂಲಂಗಳಂ ಮನ್ನಿಸುವುದುಮೆಲ್ಲರುಮೊಡ್ಡೋಲ
ಗಮುಂ ಬೀಳ್ಕೊಟ್ಟ ಬಳಿಕಂ ಮಹಾರಾಜನಂದಿನ ಸಂಧ್ಯಾಸಮಯದೊ

ಳ್ಪೂರ್ವಾಚಾರಾನುಸಾರದಿಂ ಮಂತ್ರಿಸಚಿವಾದಿನಿಜಸಾಮಾಜಿಕರೋಲಗಸಾ
ಲೆಗೆ ಬಂದು ನೆರೆದಿಪ್ಪಿನಮನರ್ಘಮಣಿಭೂಷಣವಸನಾದಿಗಳಿಂದಲಂಕೃತಾಂ
ಗನಾಗಿ ಪಟ್ಟದ ಪಟ್ಟಸಮಂ ತಳೆದು ಜಯದುಂದುಭಿ ಕಾಹಳೆ ಮೊದಲೆನಿಸಿದ
ಮಂಗಳವರಿಗಳ್ಮೊಳಗೆ ವಂದಿಗಳ್ಕಯ್ಯೆತ್ತಿ ಬಿರುದಾವಳಿಯುಂ ಪೊಗಳೆ
ಸಭಾಸದಪ್ಪಿರಿದುಂ ಹರಿಸದಿಂ ಕಮ್ಮಲರ್ಗಳಂ ಸೂಸೆ ಪರಿವಡೆದ ರನ್ನವೆಸ
ದಿಂದೊಪ್ಪುವ ಪೊಂಬಟ್ಟವಣಿಯನೇರಿದಾಗಳ್ ॥೪೫॥

ಕಂ ॥ ವರಕೃಷ್ಣರಾಜಮೌಳಿಯ |
ಕರದೊಳ್ಪೊನ್ನೊರೆಯಿನೆಸೆವ ಪಟ್ಟದ ಕರವಾಳ್ ||
ಕರಗತರಾಜ್ಯಶ್ರೀಭಾ |
ಸುರತನುಲತೆಯೆಂಬ ತೆರದಿನೇನೊಪ್ಪಿದುದೋ ॥೪೬॥

ವೃ॥ ವರಹರಿಪೀಠಮೇರಿದೊಡೆ ಕೃಷ್ಣಮಹೀಶ್ವರನಾತನಾ ಶಿಖಾ |
ಭರಣದ ಮೇಲೆ ರಾಜಿಸುವ ಪೊಂಗೊಡೆ ರಾಜಿಸಿತಾತ್ಮವಂಶಮು ||
ದ್ಧರಿಸಿದ ನೀತನೆಂದಿರದೆ ಮುದ್ದಿಸಲೆಂದೆಡೆಸಂದು ಹೇಮವಿ !
ಷ್ಟರರುಚಿಯಿಂದೆ ಪೊಂಬೊಗರನೆಯ್ದಿದ ಪೂರ್ಣಶಶಾಂಕನೆಂಬವೋಲ್ ॥೪೭॥

ವೆ॥ ಆಸಮಯದೊಳ್ವಂದಿಜನಂ ಕಯ್ಯಂ ನೆಗಪಿ,

ದಂಡಕಂ ॥ ಜಯ ಜಯ ಜಯ ಸಾಮಂತಸೀಮಂತಿನೀಲೋಕಸೀಮಂತಸಿಂದೂರ
ಶೋಣೀಕೃತಾಂಘ್ರಿದ್ವಯಾನಿರ್ಜಿತಪ್ರಾತರರ್ಕದ್ಯುತಿಚ್ಛನ್ನರಾಜೀವ ||
ಜಯ ಜಯ ಜಯ ಕುಂದಪ್ರಸೂನೇಂದುನೀಹಾರಸಂದೋಹಸಂದೇಹ
ದಾಮಂದಕೀರ್ತಿ ಪ್ರಕಾಶೀಕೃತಾಶೇಷದಿಙ್ಮಂಡಲಾಖಂಡತೇಜೋನಿಧೇ
ದೇವ || ಜಯ ಜಯ ಜಯ ಲೋಕೈಕವೀರ ಸ್ರವಂತೀಶಗಂಭೀರ ಹೇ
ಮಾದ್ರಿಧೀರ ಸ್ಫುರದ್ರತ್ನಹಾರ ಸ್ಮರಶ್ರೀಶರೀರ ಕ್ಷ್ಮಾಧಾರ ಕಾರುಣ್ಯ
ಪೂರಾಯಿತಾಕಾರ || ಜಯ ಜಯ ಜಯ ಕಲ್ಪಾವನೀಜಾರ್ಥಿಲೋಕ
ಸ್ಯ ಕಲ್ಪಾಂತರುದ್ರ ದ್ವಿಷಾಂ ಜೀವಕಲ್ಪಾಗ್ನಿಮಾಯಾಂ ಮತೌ ನಿರ್ವಿಕ
ಲ್ಪಾಬ್ಜರೂಪಾಸ್ಯ ಕೃಷ್ಣೇಂದ್ರಭೂಪಾಲ|| ಜಯ ಜಯ ಜಯ ಕರ್ಣಾ
ಧಿಕೋದಾರ ಕರ್ಣಾಮೃತಪ್ರಾಯಚಾರಿತ್ರ ಚಂದ್ರಾನ್ವಯಶ್ರೀಮನೋ
ಹಾರಿಕರ್ಣಾವತಂಸಾಯಿತ ಖ್ಯಾತಕರ್ಣಾಟಸಿಂಹಾಸನಾಧೀಶ ಪಾಹಿ
ಪ್ರಭೋ ಪಾಹಿ ಪಾಹಿ ಪ್ರಭೋ ಪಾಹಿ ॥೪೮॥

ವ॥ ಎಂದಿಂತು ಬಗೆವಗೆಯಿಂ ಪೊಗಳುತ್ತಿರ್ಪ್ಪನಂ ರಾಜಮಾನಸಿಂ ಹಾಸನದೊಳ್ಮಂಡಿಸಿದಾರಾಜಸಿಂಹಂ ಮೋದಿನೀಸುರರಾಶೀರ್ವಾದಪುರಸ್ಸರಮುರ್ಪ್ಪಿಸಿದ ಫಲಮುಂತಾಕ್ಷತಂಗುಳುಮುಂ ಲೌಕಿಕರಪ್ಪಧಿಕಾರಿಗಳುಮನೀಕನಾಯಕರುಮನೀಕಸಾಮಂತರುಂ ವಂದನಾಪೂರ್ವಕಮುರ್ಪ್ಪಿಸಿದ ಕಯ್ಗಾಣ್ಕೆಗಳುಮಂ ಕಯೊಂಡು ಚತುರಂಗಬಲಂ ಸುತ್ತುವರಿದಿರ್ಪ್ಪಂಗಣವಲಯದೊಳಾಬದ್ಧಮುಷ್ಟಿಗಳಾಗಿ ನಿಂದು ನಿಯುದ್ಧಮೆಸಗುವ ಸಮುದ್ಧತರಪ್ಪ ಜಟ್ಟಿಗರ ಡೊಕ್ಕರಂ ಗಳಹತ್ತಂ ಮೊದಲೆನಿಸಿದ ಪಲವುಂ ಪಟ್ಟುಗಳಂ ಕಿರಿದು ಪೊಳ್ತು ಸಿಟ್ಟಿಸಿ ತುಟ್ಟವಡೆದು ನಿಖಿಲಸಭಾಸದರ್ಗಂ ಪುಷ್ಪಹಾರ ತಾಂಬೂಲಂಗಳಿಂ ಮನ್ನಣೆಗೆಯ್ದು ಜೆಲೆಯಿಲ್ಲದ ರಾಂಕವಕನಕಕಾಂಬರಂಗಳುಡುಗೊರೆಯಂ ಪರಿವಿಡಿಯಿಂದಿತ್ತಿಂತು ಮೂರುಂದಿನಮಸಂಖ್ಯಾಕಪ್ರಜೆಗಳಂ ಸನ್ಮಾನಿಸಿ ಪಡಿಯಿಲ್ಲದೌತಣದಿಂದೆಲ್ಲರಂ ತಣಿಯಿಸಿದನಾಗಳ್ ॥೪೯॥

ಕಂ॥ ನೇತ್ರಯುಗನೆಯ್ದದಾತ್ಮವಿ !
ಚಿತ್ರೋತ್ಸವಮಂ ನಿರೀಕ್ಷಿಸಲ್ಕೆಂಬಗ್ಗಿ ॥
ಧಾತ್ರೀಶನಿತ್ತನೋ ಬಹು |
ನೇತ್ರಮನೆನಿಸಿತ್ತು ಮನ್ನಣೆಯು ನೇತ್ರಜಯಂ ॥೫೦॥

ವ॥ ಮತ್ತಂ,

ಕಂ॥ ಈರೆರಡುಂ ವರ್ಣದ ಜನ |
ಗರ್ಗರಾಯನೊಡರ್ಚಿದಂದಿನೌತಣದ ಮಹೋ ॥
ದಾರತೆಯುಮನುಪಚಾರದ |
ಪಾರತೆಯುಮನೇನನೆಂಬೆನಾವುತ್ಸವದೊಳ್ ॥೫೧॥

ವ॥ ಇಂತೀಮಹೋತ್ಸವದೊಳೀಕೃಷ್ಣರಾಜಮಹಾರಾಜನಂ ಪರಸಿದಸ್ಮದೀಯಂ ಶ್ಲೋಕಪಂಚಕಮೆಂತೆನೆ ॥೫೨॥

ಶ್ಲೋ॥ ಶ್ರೀಮದ್ಯಾದವವಂಶವಾರಿಧಿವಿಧುಶ್ರೀಕೆಂಪನಂಜಾಂಬಿಕಾ |
ಚಾಮೋರ್ವೀಪತಿಪುಣ್ಯವೈಭವತರೋಸ್ಸಾಫಲ್ಯಭೂತಃ ಫಲಾ
ಶ್ರೀಕೃಷ್ಣಪ್ರಭುರುತ್ಸವೇನ ಶುಭಕೃತ್ಯಬ್ದೇರ್ಧವತ್ತಾಂಗತೇ |
ರಾಜ್ಯಶ್ರೀರಮಣೇವೃತೋ ವಿಜಯತಾಮಾಸಂದಸಾಂಭ್ರಶ್ಚಿರಂ ॥೫೩॥

ವಿದ್ಯಾಸೂನೃತವಾಕ್ಪರಸ್ಸರಗುಣಾ ರಾಜ್ಯಾಧಿಕಾರಕ್ಷಮಾ |
ನಭ್ಯಸ್ಯಾಯಮತೀವ ಶಿಕ್ಷಿತಇತಿ ಶ್ಲಾಘಾಮಸಾಧಾರಣೀಂ ||
ಲೋಕೇ ಸಂಪ್ರತಿಪದ್ಯ ರಾಜ್ಯಪದವೀಮಾರೂಢವಾ ಕೃಷ್ಣಭೂ |
ಪಾಲೋ ರಾಮಇವಾವನಿಂ ಸಹಪರೀವಾರಸ್ಸುಖೇನಾವತು ||೫೪||

ಛಾಯಾಭೂಮಿರುಹಂ ಯಥಾಧ್ವಗಜನಾಶ್ಚಂದ್ರಂ ಚಕೋರಾಯಥಾ |
ರೋಲಂಬಾಃಕಮಲಾಕರಂ ನನು ಯಥಾ ಮೇಘಂಯಥಾ ಚಾತಕಾಃ ||
ರಾಜ್ಯಶ್ರೀಪರಿರಂಭಸಂಭೃತಮುದಂ ಯಂ ವೀಕ್ಷ್ಯ ಸರ್ವೇಜನಾ |
ಸ್ಸಂತೋಷಾತಿಶಯಂ ಭಜಂತಿ ಸಚಿರಂ ಕೃಷ್ಣಪ್ರಭುಸ್ಸುಖ್ಯತು ||೫೫||

ವಿಷ್ಣುತ್ವಂ ನಹಿಕೇವಲಂ ನೃಪತಯಾ ಕಿಂತುವ್ಯನಕ್ತ್ಯತ್ರಯ |
ಶ್ರೀಕೃಷ್ಣಾಖ್ಯತಯಾಪಿ ಚಾನುಗತಯಾ ಲಕ್ಷ್ಮೀವಿಲಾಸಶ್ರಿಯಾ ||
ಸತ್ರಾಣಂ ಜಗತಸ್ಸ್ವಧರ್ಮಮುಚಿತಂ ಜ್ಞಾತ್ವಾನುಕಂಪಾರಸಂ |
ಬಿಭ್ರಾಣೋನಿಶಮಾಶಯೇವತುಚಿರಂ ಕರ್ಣಾಟಭೂಮಂಡಲಂ ||೫೬||

ಹಂಸೇನೇವ ಸರೋರುಹಂ ವಿಕಸಿತಂ ಸೌಮೇರವಂ ಭಾಸ್ವರಂ |
ಶೃಂಗಂ ಕೇಸರಿಣೇವ ರತ್ನಖಚಿತಂ ಕರ್ಣಾಟಸಿಂಹಾಸನಂ ||
ಯೇನಾರೂಢವತಾ ವಿಭಾತಿ ಗಮಿತಂ ಕಾಮವ್ಯುದಾರಾಂ ಶ್ರಿಯಂ |
ಸತ್ಸಂತಾನಯುತಸ್ಸಕೃಷ್ಣನೃಪತಿರ್ದೀರ್ಘಾಯುರವ್ಯಾದ್ಭವಂ ||೫೭||

ವ|| ಇಂತು ಪರಸಿದ ಸಮನಂತರದೊಳ್;

ಕಂ || ಪುರಜನದೇಶಜನಾಗ್ರೇ |
ಸರರಂತಪ್ಪಾಮಹೋತ್ಸವದೊಳೊದವಿದ ಸ ||
ರ್ಧರನಿಜಮೋದಮನಾಭೂ |
ವರಂಗೆ ಪತ್ರಿಕೆಯ ಮುಖದೆ ವಿಜ್ಞಾಪಿಸಿದರ್ ||೫೮||

ವ|| ಇಂತು ರಾಜ್ಯಾಧಿಕಾರಮಹೋತ್ಸವಂ ಬಳೆದ ಸಮನಂತರ ವಾಂಗ್ಲೇಯಸರ್ವಾಧಿಕಾರಿ ಮಹಾರಾಜನೆಸಗಿದತಿವಾತ್ಸಹಿತಮೆನಿಸಿದ ಸತ್ಕಾರದಿಂದೆಯುಮತಿನುಹಿತಮೆನಿಸಿದ ಬಹುಮಾನದಿಂದೆಯುಂ ಪರಿವಾರಸಹಿತಂ ಸುಹಿತನಾಗಿ ಮಹೀಶೂರರಾಜಧಾನಿಯಿಂ ಪೊರಮಟ್ಟು ನಿಜರಾಜಧಾನಿಯಂ ಕಾಳೀಘಟ್ಟನಗರಿಯಂ ಮುಟ್ಟಿದನೆಂಬೆಡೆಯೊಳ್ ||೫೯||

ಕಂ || ಒಂದೇ ತೆರದಿಂದಂ ಮೊದ |
ಲಿಂದಾಂಗ್ಲೇಯರ್ಕಳೀನೃಪಾನ್ವಯಕೊಲ್ದ ||
ಪ್ಪಿಂದಮುಮಂ ಹಿತಮಂ ಗೆ |
ಯ್ವಿಂದಮುಮಂ ನಿಜದೆ ನಡೆವುದಮನೇನೆಂಬೆಂ ||೬೦||

ಇಂತಧಿಗತರಾಜ್ಯಶ್ರೀ |
ಯಿಂ ತನ್ನೊಳ್ಕೆರೆಯೆ ಶಕ್ತಿಗಳಾತ್ಮಂ ಮೂರುಂ ||
ಕಾಂತಗುಣಶಾಲಿಯಾ ಭೂ |
ಕಾಂತಂ ನಿರವಧಿಕತೇಜಮಂ ಪಡೆದೆಸೆದಂ ||೬೧||

ವ|| ಅಲ್ಲಿಂ ಬಳಿಯಮಾನಾಲ್ವಡಿಯ ಕೃಷ್ಣರಾಜಂ ತನಗೆ ಪೂರ್ಣಾಯ್ಯನ ಮೊಮ್ಮನಪ್ಪ ಕೃಷ್ಣಮೂರ್ತಿರಾಯಂ ಮಹಾಮಾತ್ಯನುಂ ಮಾಧವರಾಯನುಂ ಪುಟ್ಟಣ್ಣಸೆಟ್ಟಿಯುಮುಪಮಂತ್ರಿಗಳುಂ ಮೇಕಾನಕೆಯೆಂಬಾಂಗ್ಲೇಯಪುಂಗವಂ ಸನ್ನಿಧಿಸಚಿವನುಂ ಪೂರ್ಣರಾಘವೇಂದ್ರರಾಯಂ ಸಹಾಯಸನ್ನಿಧಿಸಚಿವನುಂ ರಾಮಕೃಷ್ಣರಾಯನರಮನೆಯಕಾರ್ಯಾಧ್ಯಕ್ಷನುಂ ರಾಜಬಂಧು ಲಿಂಗರಾಜನಾಸ್ಥಾನಕಾರ್ಯದರ್ಶಿಯುಮಾಗಿರ್ಪಿನಂ ದಿನದಿನಮಿನಿಸುಮಲಸಿಲ್ಲದಧಿಕಾರಸ್ಥಾನಮನಲಂಕರಿಸುತ್ತಂ ಧರ್ಮದಿಂದರಸುಗೆಯ್ಯುತ್ತಿರ್ಪಾಗಳ್ ||೬೨||

ಕಂ || ಅನವದ್ಯವಿದ್ಯೆಯೊಳಮಂ |
ತನುಗತರಾಜ್ಯಾಧಿಕಾರದೊಳಮೀಕೃಷ್ಣಾ ||
ವನಿಪತಿ ಜನಕಂಗಿಮ್ಮಡಿ |
ಯೆನಿಸಿರ್ಪನೆನುತ್ತೆ ಪೊಗಳ್ದುವೀಧರೆಯೆಲ್ಲಂ ||೬೩||

ಮತ್ತಂ,

ಕಂ || ಮಹಿಷಾಸುರಮರ್ದಿನಿಯಂ |
ಬಹುಭಕ್ತಿಯಿನರ್ಚಿಸುತ್ತುಮೆಂದುಂ ತದನು ||
ಗ್ರಹಮೆಂಬ ಪೂರ್ಣಪಾತ್ರಕೆ |
ಮಹಿಪನವಂ ಪೂರ್ಣಪಾತ್ರನೇದೆನಿಸಿರ್ದುಂ ||೬೪||

ಮತ್ತಂ,

ಕಂ || ಅವಗಮುಂ ಶ್ರೀಮತ್ಕೃ |
ಷ್ಣಾವನಿಪನುದಾರಬಾಹುದಂಡದೆ ಸುಖದಿಂ ||
ದಾವಾಸಿಸುತಿರ್ಪ್ಪ ಮಹೀ |
ದೇವಿಗೆ ನೆನೆಪಿನಿಸುಮಿಲ್ಲನಂತಾಹಿಪನಾ ||೬೫||

ಮತ್ತಂ,

ಕಂ || ಪರಿಚಿಂತಿಸಿ ಮಂತ್ರಿಗಳೊ |
ಳ್ಪರಿಚಿಂತಿಸಿ ತಾನುಮರಸುಗೆಯ್ಯುತ್ತಿರಲಾ ||
ನರಪಾಲಂ ಪ್ರಕೃತಿಗಳೆ |
ಲ್ಲರುಮತಿಸುಖದಿಂ ಸ್ವಧರ್ಮರತರಾಗಿರ್ಪರ್ ||೬೬||
ವಿನುತಶರತ್ಕಾಲಂ ಸ |
ಜ್ಜನಹಂಸಕುಲಕ್ಕೆಸಿಕ್ಕುಮೇನೆಂದಪೆನಾ ||
ಜನಪಾಲಪುಂಗವಂ ದು |
ರ್ಜನಸರ್ಪ್ಪಕುಲಕ್ಕೆ ಗರುಡಪಜ್ಜೆಯೆನಿಕ್ಕುಂ ||೬೭||

ಜೋರಭಯಂ ವೈರಿಭಯಂ |
ದಾರಿದ್ರ್ಯಭಯಂ ಶರಾರುಭಯಮೀತಿಭಯಂ ||
ಸಾರಮತಿಶಾಲಿ ಕೃಷ್ಣಮ |
ಹೀರಮಣನ ರಾಜ್ಯದಲ್ಲಿ ತೋರದುದಿಲ್ಲಂ ||೬೮||

ಜನರಾನಾಡೊಳ್ಪರಹಿಂ |
ಸನಮಿಲ್ಲದೆ ತಮ್ಮ ತಮ್ಮ ಧರ್ಮದೊಳರ್ತ್ಥ ||
ರ್ಜನಮಂ ಗೆಯ್ಯುತೆ ಸುಖಜೀ |
ವನಮೆಸಗುವರಾತನಾಳ್ಕೆಯೇನೊಪ್ಪುಗುಮೋ ||೬೯||

ಅರಸನವಂ ಪ್ರಜೆಗಳನೆ |
ಲ್ಲರುಮಂ ಜೇಳಂಬಮಿಲ್ಲದಂತೊಲವಿಂದಂ ||
ಪರಿಪಾಲಿಸುತಿರಲಾಧರೆ |
ಸುರಧೇನುವೊಲೆಳಸಿದರ್ಥಮಂ ನೆರೆ ಕರೆಗುಂ ||೭೦||

ಪಲವುಂ ಬಿಜ್ಜೆಗಳಂ ಪಲ |
ಪಲವುಂ ಶಿಲ್ಪಂಗಳಂ ಬಳವಿಯೊಂದಿಸುತಾ ||
ನೆಲದೊಡೆಯಂ ಪಟುತರಮತಿ |
ಬಲದಿಂ ನಿಜರಾಜ್ಯಕುನ್ನತಿಯನಾಗಿಸಿದಂ ||೭೧||

ವ|| ಮತ್ತಮೀನರೇಂದ್ರನಂದಂದು ರಾಜ್ಯದಾರಯ್ಕೆಗೆಂದನುಕ್ರಮದಿಂ ತನ್ನನಾಡಿನ ಗಡಿಗಡಿಯುಂ ಸಾರ್ದಲ್ಲಲ್ಲಿಯ ಸಕಲಪ್ರಜೆಗಳುಮೇಳ್ಗೆವಡೆದು ಸುಖಸಮೃದ್ಧಿಯನಾಂಪಂತವರವರ್ಗಭಿಮತಮಾದ ಪಲವುಂ ಕಜ್ಜಂಗಳನಧಿಕೃತರ್ಗೆ ನೇಮಿಸುತುಮುಲ್ಲಲ್ಲಿ ಮುನ್ನಿನರಸುಗಳ್ನಿಗಳ್ದಿದ ಪೂರ್ತಂಗಳಂ ಜೀರ್ಣೋದ್ಧಾರಂಗೆಯ್ಯುತುಂ ರಾಜಾದಾಯಂ ಪೆರ್ಚುವಂತು ಕೆಲವಾನುಂ ಪೊಸಪೊಸತಪ್ಪ ಪೂರ್ತಂಗಳನಾಗಿಸುತ್ತುಮಿವಂ ತನ್ನವನಿವಂ ಲೋಗನೆನ್ನದೆ ನಯಂಬಿಡಿದು ದುಷ್ಟರಂ ಶಿಕ್ಷಿಸುತ್ತುಂ ಶಿಷ್ಟರಂ ರಕ್ಷಿಸುತ್ತುಂ ಪಾತ್ರವರಿತು ದಾನಂಗೆಯ್ಯುತುಂ ಮಿತವಚನನಾಗಿಯುಂ ಶ್ರಿತಸಹನನಾಗಿಯುಂ ಸ್ಮಿತವದನನಾಗಿಯುಂ ಸತ್ಯಸಂಧನಾಗಿಯುಂ ದೀನಬಂಧುವಾಗಿಯುಂ ದಯಾಸಿಂಧುವಾಗಿಯುಂ ಸೇವದಿಂದರಸುಗೆಯ್ಯುತುಮಿರ್ಕುಮಂತುಮುಲ್ಲದೆ ||೭೦||

ವೃ|| ಉರಗಾಧೀಶ್ವರತಲ್ಪದೊಳ್ಪವಡಿಸಿರ್ಪಂಭೋಧಿಜಾಕಾಂತನಂ |
ಗರುಚಿಸ್ತೋಮದೆ ನೈಲ್ಯಮಂ ಪಡೆದ ದುರ್ಗಾಂಭೋಧಿಯಂ ನೈಜಪಾಂ ||
ಡರಕೀರ್ತಿಪ್ರಸರಂಗಳಿಂದೆ ಮಗುಳ್ದಂ ಮುನ್ನಿರ್ದತದ್ರೂಪಮಂ |
ಭರದಿಂ ಪೊರ್ದಿಸುತಿರ್ಪ್ಪನೀನೃಪವರಂ ಶ್ರೀಕೃಷ್ಣಭೂಮೀಶ್ವರಂ ||೭೫||

ವ|| ಮತ್ತಮೀವಸುಧಾಧಿಪತಿ ವಾಸುದೇವನಂತೆ ಯದುಪುಂಗವನುಮುದ್ಧವಪ್ರಿಯನುಂ ಬಲಾನ್ವಿತನುಂ ಶಂಕರನಂತೆ ಕಲಾನಿಧಿಶೇಖರನುಮವಧೀರಿತಕಂದರ್ಪನುಂ ಸದಾರ್ಯೋಪಾಶ್ರಿತನುಂ ಮಹೇಂದ್ರನಂತೆ ಸಮಾಶ್ರಿತಸುಧರ್ಮನುಂ ಪ್ರಭಾಕರನಂತೆ ಲೋಕಾನುಕೂಲಕರಪ್ರಸಾರನುಂ ಸುಧಾಕರನಂತೆ ಕಾಮಾಹಿತವಮೌಳಿಕೃತಪದನುಂ ವಾರಿಧಿಯಂತೆ ನಿತಾಂತಗಂಭೀರಾಶಯನುಂ ನಳನಂತಧಿಗತವೀರಸೇನಾಭ್ಯುದಯನುಮೆನಿಸಿರ್ಕುಮಂತುಮುಲ್ಲದೆ ರಾಘವನಂತೆ ಸತ್ಯಸೌಶೀಲ್ಯಾದಿಗುಣೋಪೇತನಾದೊಡಂ ಪುಣ್ಯಜನವಿರೋಧಿಯುಲ್ಲದೆಯುಮನಂತನಂತೆ ಧರಣೀಧರಣಧುರೀಣನಾದೊಡಂ ಸಮುದಗತ

ದ್ವಿಜಿಪ್ವಭಾವನೆಸಿಸದೆಯುಂ ವರುಣನಂತೆ ಪ್ರಜೇತನಾದೊಡಂ ಜಡಪ್ರಕೃತಿಯಲ್ಲದೆಯುಮಾಶ್ರಯಾಶನಂತೆ ಶುಚಿಯಾದೊಡಂ ಸ್ವಾಶ್ರಿತಸಂತಾಪಕರನೆನಿಸದೆಯುಂ ನಾರಾಯಣನಂತೆ ಲಕ್ಷ್ಮೀವಿಲಾಸಲೋಲನಾದೊಡಮಸಂಖ್ಯೇಯನಲ್ಲದೆಯುನೊಪ್ಪುತಿರ್ಪಂ ॥೭೨॥

ಮತ್ತಂ,

ಕಂ ॥ ಸ್ಥೈರ್ಯಂ ಧೈರ್ಯಂ ವಿನುತೈ ।
ಶ್ವರ್ಯಂ ಸಚ್ಚರ್ಯಮಂತು ಗಾಂಭೀರ್ಯಂ ಚಾ ॥
ತುರ್ಯಂ ಶೌರ್ಯಂ ಪರಮೌ ।
ದಾರ್ಯಮುಮೀಕೃಷ್ಣನೃಪನ ಸಹಜಗುಣಂಗಳ್ ॥೭೫॥

ವ॥ ಇಂತಿಪ್ಪಾಗಳ್ವಿಕ್ಟೋರಿಯಾಚಕ್ರವರ್ತಿನಿಯ ತನಯನಾದೆಡ್ವರ್ಡುಮಹಾವಿಭು ಭರತಖಂಡಚಕ್ರವರ್ತಿಪದವಿಯಂ ಕಯ್ಕೊಂಡ ಮಹೋತ್ಸವಕ್ಕೆಂದು ನೆಗಳ್ತೆವಡೆದ ದೆಹಲೀಮಹಾನಗರಕ್ಕೆ ನಿಜಾಮಾತ್ಯಬಲಪರಿವಾರಂಬೆರಸು ಪೋಗಿರ್ದೀಕೃಷ್ಣರಾಜೇಂದ್ರನಲ್ಲಿ ಪಲವುಂ ನಾಡುಗಳಿಂ ಬಂದು ನೆರೆದಿರ್ದ ನಾಡೆರೆಯರೊಳ್ಗಣಾಧಿಕನೆಂಬೆಣಿಕೆಗೆವಂದುದರಿಂದಾಚಕ್ರವರ್ತಿಯಾತಂಗೊಲ್ದು ಭರತಖಂಡದೊಳ್ಗಣಾಢ್ಯನಾಗಿ ತಾರಗೆಯಂತೆಸೆವನೆಂಬಭಿಪ್ರಾಯದಿಂ ಗರ್ಭಿತಮಾವ "ಸ್ಟಾರ್, ಆಫ್, ಇಂಡಿಯಾ." ಎಂಬಾಂಗ್ಲೇಯಭಾಷೆಯ ಬಹುಮಾನದ ಪೆಸರನಾಳ್ದರ ನೆರವಿಯೊಳ್ನೆರೆ ಪಿರಿಯನೆಂಬ ಪುರುಳನೀವ "ಜಿ, ಸಿ, ಎಸ್, ಐ" ಎಂಬ ಬಿರುದನೀವುದುಮದನಭಿನಂದಿಸಲೀ ಮಹಿಶೂರರಾಜಧಾನಿಯ ಪಂಡಿತಮಂಡಲಂ ಸರಸ್ವತೀಪ್ರಾಸಾದಮೆಂಬ ಸಂಸ್ಕೃತಮಹಾಪಾಠಶಾಲೆಯ ವಿದ್ವನ್ಮಹಾಸಭೆಗೀಮಹಾರಾಜನಂ ಪ್ರಾರ್ಥನಾಪೂರ್ವಕಂ ಬರಿಸಲೊಡಂ ॥೭೬॥

ಕಂ ॥ ಧೀಮದ್ರತ್ನಾಭರಣೋ ।
ದ್ದಾಮಶ್ರೀಯುತೆಯ ಸರಸವಾಣಿಯ ತದ್ಗೋ ॥
ಷ್ಮೀಮಹಿಳೆಯ ಮುಖದೆಡೆಗಾ ।
ಭೂವಿಭಾಪತಿಮೌಳಿ ತಿಲಕಮೆಂದೆನಿಸಿರ್ದಂ ॥೭೭॥

ವ॥ ಆಗಳಾ ಪಂಡಿತಮಂಡಲದನುಜ್ಞೆಯಿಂ ಕವಿಪುಂಗವನುಂ ಸಾಹಿತ್ಯಸಾರಜ್ಞನುನೆನಿಸಿದ ಚಾಮರಾಜನಗರದ ರಾಮಶಾಸ್ತ್ರಿಯೆಂಬ ಪುಣ್ಯಾ

ವಿದ್ವಾಂಸಂ ಮಹಾರಾಜನಂ ಮನವೊಲ್ದು ಸಂಸ್ಕೃತಪದ್ಯಂಗಳಿಂದಭಿನಂದಿಸಿ ದತೆರನದೆಂತೆನೆ ॥೭೪॥

ವೃ॥ ಅಸ್ಮೆ ಭಾರತಭೂತಲೇತಿಸುಗುಣೈಸ್ತಾರಾವದಾಭಾಂತಿ ಯೇ ।
ತದ್ವರ್ಗಸ್ಯ ಮಹಾನಧೀಶ್ವರಇತಿ ಸ್ಯಾದರ್ಥಬೋಧೋಯಥಾ ॥
ತಾದೃಕ್ಪ್ಲಂ ಬಿರುದಾಯಮಾನಮತುಲಂ ನಾಮಾಭ್ಯಗಾನ್ನಃ ಪ್ರಭು ।
ಶ್ರೀಕೃಷ್ಣಕ್ಷ್ಮಿತಿಪಾಲಇತ್ಯತಿತರಾಂ ಸರ್ವೇ ಪ್ರಮೋದಾಮಹೇ ॥೭೯॥

ಶ್ರೀಕೃಷ್ಣ ಕ್ಷ್ಮಿತಿಪಾಲಶೇಖರಮಣೇಸ್ಸಮ್ಮಾನಮುಸ್ಮತ್ಪ್ರಭೋ ।
ರ್ಯಃ ಕಲ್ಯಾಣಗುಣಾನುರೂಪಮತನೋನ್ನಾಮ್ನಃ ಪ್ರಶಸ್ತ್ಯಾ ಭುವಿ ॥
ಎಡ್ವರ್ಡಾಹ್ವಯಭಾಕ್ಸಭಾರತಮಹೀಸಮ್ರಾಣ್ನಿಜಾಂ ಭೂತಲೇ ।
ಸರ್ವತ್ರಾತ್ರ ಗುಣಜ್ಞತಾಂ ಪ್ರಕಟಯನ್ನಾನಂದಯತ್ಯೇವನಃ ॥೮೦॥

ಶ್ರೀಕೃಷ್ಣಪ್ರಬುಣಾರ್ಜಿತಾದಭಿನವಾನ್ನಾಮ್ನಶ್ಶುಭಾದುತ್ಥಿತಾ ।
ಪ್ರೀತಿರ್ನಸ್ತದುದಾರದೃಕ್ಪಥಗತಾಂ ಶಾಲಾಂ ವ್ಯತಾನೀದಿಮಾಂ ॥
ಶ್ರೇಯೋಭ್ಯುಜ್ಜಯಏತದಾದಿಸಕಲೋಪ್ಯಸ್ಯಾಂ ಸ್ಥಿತಸ್ಸಂಭವೇ ।
ದಿತ್ಯಸ್ಮದ್ಬೃಹನಿಶ್ಚಯಸ್ಸಫಲತಾಮವ್ಯಾಹತಾಂ ಪ್ರಾಪ್ನುಯಾತ್ ॥೮೧॥

ಅತ್ರತ್ಯೈರಿಹ ಕಾಪಿ ಪಂಡಿತಸಭಾ ವಿದ್ವತ್ಪರೀಕ್ಷಾಂಬುಧೇ ।
ರುತ್ತೀರ್ಣೈರ್ಭುವನೋಪಯೋಗಿವಿಷಯೋಪನ್ಯಾಸಿನೀ ಸ್ಥಾಪಿತಾ ॥
ಸದ್ಯಃ ಪಲ್ಲವಿತಾಚ ಸಾ ಸಕುಸುಮಾ ಶ್ರೀಕಾಂತರಾಜಾದರಾ ।
ಚ್ಛ್ರೀಕೃಷ್ಣೇಂದ್ರಕೃಪಾರಸಂ ನಿಜಫಲಾವಿರ್ಭೂತಯೇ ವಾಂಛತಿ ॥೮೨॥

ಪ್ರತ್ಯಗ್ರಾಭ್ಯುದಯಾಗಮೇ ಗೃಹಪತೇಸ್ಸರ್ವೇಪಿ ಗೃಹ್ಯಾಯಥಾ ।
ಮೋದಂತೇತ್ರತಥಾಸ್ಮದೀಯನೃಪತೇ ರಭ್ಯಾಗತೇಭ್ಯುಜ್ಜಯೇ ॥
ಸರ್ವೇ ಸ್ಮಃ ಪರಮಪ್ರಹರ್ಷಭರಿತಾಯಸ್ಯ ಪ್ರಸಾದಾದ್ವಯಂ ।
ಸಶ್ರೀವರ್ಧ ಭಗವಾನಿತೋಪ್ಯತಿಮುದಂ ದತ್ವಾನುಗೃಹ್ಣಾತು ನಃ ॥೮೩॥

ವ॥ ಇಂತಭಿನಂದಿಸಿದ ಸಮನಂತರದೊಳೀಮಹಾರಾಜಂ ಪಿರಿದುಂ ಸಂತಸಂಗೊಂಡು ತನ್ಮಹಾಸಭೆಯೊಳ್, "ಕೇಳಿಂ ಪಂಡಿತರಿರಾ ಜೀರಕಾಲದಿಂದೀಮಹಾಪಾಠಶಾಲೆಗೆಯ್ತರಲೆಳಸಿರ್ದೆವಿಂದು ಬೇರೊಂದು ಕತದಿಂದಾ ಮನೋರಥಂ ಕಯ್ಗೂಡಿದುದರ್ಕೆ ನೀಡುಂ ಸಂತಸಂಗೊಂಡೆವು, ನೀಮೀ ಪಾಠಶಾಲೆಯೊಳ್ನೆಡೆಯಿಸುತಿರ್ಪ್ಪ ಲೋಕಹಿತಾರ್ಥವಾದ ಕಾರ್ಯಂಗಳಂ

ಕೇಳ್ದು ತಣಿವಾಂತೆವು. ಪಾರ್ಯಿಕವಾಗೆ ಪಲವುಂ ನಾಡಿನೊಳ್ಳಲವಾಗು ತಿಪ್ಪ ಗೀರ್ವಾಣಭಾಷೆಯೆವ್ಮ ನಾಡೊಳನಿತಾನುಂ ನೆಲೆಯೊಳಪ್ಪುದರ್ಕೆ ನೀಮೆಕಾರಣಭೂತರೆಂದು ನಂಬಿರ್ದಪೆವು. ಮತ್ತಮಾಕಾಲದೊಳೆಲ್ಲೆಲ್ಲಿಯುಂ ಲೋಕದೊಳಾಸ್ತಿಕ್ಯಮೇಳ್ಗೆವಡೆಯುತ್ತಿಪ್ಪುದರಿಂದಾಸ್ತಿಕ್ಯಮುಸಿದಾಗುತ್ತಿಪ್ಪುದಂ ನೋಡೆ ನೀಡುಂ ಮನಂ ಮರುಕಂಗೊಳ್ಗುಮಿಂತಹ ದುರ್ದಶೆಯಂ ಪರಿಹರಿಸಲೆವ್ಮ ರಾಜಧಾನಿಯೊಳ್ನೀವೊಂದು ಪಂಡಿತಸಭೆಯಂ ನೆಲೆಗೊಳಿಸಪ್ಪುದು ಪಿರಿದುಂ ಶ್ಲಾಘನೀಯವಾಗಿರ್ಕುಮಿಂತಹ ನಿವ್ಮೊಳ್ಗ ಜ್ಜಮನಾವುಣಿಯರಮನುವೋದಿಪೆವಂತುಮಲ್ಲದಿದರ್ಕೆ ತಕ್ಕನಿತು ಸಾಹ್ಯಮನಾಚರಿಸಲು ಮೊಲ್ದಿರ್ಪೆವು. ಇಂತುನೀಮಿಂದೆಮಗೊಡರ್ಚಿದ ಮನ್ನಣೆಗಾದಂ ಸಂತಸಮನಾಂತೀಪಾಠಶಾಲೆಗಮಂತೀಸಭೆಗಂ ಶ್ರೀಮಂತಂ ಭಗವಂತನಿನ್ನುಮಧಿಕವಾದುಚ್ಚಾರ್ಯಮಸಿತಾ ಚಂದಾರ್ಕಂ ನಡೆವಂತು ಮಾಡುಗೆಂದು ಸಂಪಾರ್ಥಿಪೆವೆನುತತ್ಯುದಾರಸೂಕ್ತಿಮುಕ್ತಾಫಲಂಗಳಂ ಸೂಸಲೊಡಂ ॥೮೪॥

ವೃ॥ ಸರಸಂ ಸುಷ್ಠು ಮಿತಾಕ್ಷರಂ ಸಮಧಿಕಾರ್ಥಂ ಮಂದಹಾಸಾಂಚಿತಂ ।
ಸ್ಫುರದುತ್ಕೃಷ್ಟನಿಜಾಶಯಂ ಶ್ರುತಿಹಿತಂ ನಿಸ್ಸಂಶಯಂ ಮಂಜುಳ ॥
ಸ್ವರಗಂಭೀರಮೆನಿಪ್ಪ ಕೃಷ್ಣಧರಣೀಸುತ್ರಾಮನಾ ವಾಕ್ಸುಧಾ ।
ಝರಿಯಂ ಪೀರ್ದು ಬುಧರ್ಕಳೆಯ್ದೆ ತಲೆಯಂ ತೂಗುತ್ತೆ ಕೊಂಡಾಡಿದರ್ ॥೮೫॥

ವ॥ ಇಂತಾವಿದ್ವತ್ಸಭೆಯೊಳ್ಮನ್ನಣೆಯಂ ಕಯ್ಕೊಂಡು ಮಹಾರಾಜಂ ಸೊಗದಿಂದರಸುಗೆಯ್ಯುತುಮಿರ್ಪಂದು ಕೆಲವಾನುಂ ದಿನದೊಳನಂತಗುಣನಿಕಾಯಂ ಮಹಾಮಾತ್ಯಂ ಕೃಷ್ಣಮೂರ್ತಿರಾಯಂ ವಿಶ್ರಾಂತಿಸುಖಕ್ಕೆಳಸುವುದುಮಂದಿಂಗನಂತಶಯನದೊಳ್ಮಹಾಮಾತ್ಯಪದವಿಯೊಳರ್ದ ಮಾಧವರಾಯನಂ ಕರೆಯಿಸಿ ಮಹಾರಾಜನಾತನಂ ನಿಜರಾಜ್ಯದ ಮಹಾಮಾತ್ಯಪದವಿಯೊಳ್ನಿರಿಸಲೊಡಂ ॥೮೬॥

ಕಂ ॥ ಪ್ರವಿದಿತವರಕರ್ಣಾಟೋ ।
ಪವನಮಿದಭಿನಂದ್ಯಮಾಧವಾಗಮದಿಂದಂ ॥
ವಿವಿಧಫಲೋದಯವತತೋ ।
ತ್ಸವಮೆನಿಸುತೆ ಮೆರೆಗುಮೆಂದು ನುಡಿದುದು ಲೋಕಂ ॥೮೭॥

ಇದು ಜಗದ್ವಿದಿತ ಶ್ರೀಕಾಶ್ಯಪವಂಶಮುಕ್ತಾಮಣಿ ಶ್ರೀಗರಳಪುರೀಶಶಾಸ್ತ್ರಿ
ತನೂಭವನುಂ ಶ್ರೀಮದಖಂಡ ಮಹೀಮಂಡಲ ಮಂಡನಾಯಮಾನ ಕರ್ಣಾ
ಟಜನಪದ ಲಕ್ಷ್ಮೀವಿಹಾರೈಕರಂಗಮಹೀಭೂತ ಮಹೀಶೂರರಾಜಧಾನೀ
ರತ್ನಸಿಂಹಾಸನಾಧೀಶ್ವರ ಯದುಕುಲಪಯೋನಿಧಿ ಪೂರ್ಣಚಂದ್ರಾಯಮಾಣ
ಶ್ರೀಚಾಮರಾಜೇಂದ್ರ ತನಯ ಶ್ರೀಕೃಷ್ಣರಾಜಮಹಾರಾಜ ಸಂಸ್ಕೃತ
ಕರ್ಣಾಟೋಭಯಪ್ರವಚನೋಪಾಧ್ಯಾಯನುಂ ಮಹಾವಿದ್ವ
ತ್ಪದಲಾಂಛನನುಂ ತನ್ಮಹಾರಾಜ ಕೃಷ್ಣರಾಜವಿತೀರ್ಣ
ಕವಿತಿಲಕ ಬಿರುದಾಂಕಿತನುಮಪ್ಪ ಸೋಸಲೆ,
ಅಯ್ಯಶಾಸ್ತ್ರಿಯಿಂ ವಿರಚಿತಮಾದ
ಮಹೀಶೂರ ಮಹಾರಾಜ ಚರಿತ್ರ
ಮೆಂಬ ಕರ್ಣಾಟ ಚಂಪೂ
ಮಹಾಕಾವ್ಯದೊಳ್
ಏಕಾದಶಾಶ್ವಾಸಂ
ಸಂಪೂರ್ಣಂ.



ದ್ವಾದಶಾಶ್ವಾಸಂ.

ಕಂ || ಅವತೆರನಪ್ಪ ರೂಪಿಂ |
ಭಾವಿಪರಾರ್ತ್ತನವರನಾಕಾಂಕ್ಷಿತವಿ ||
ತ್ತಾವಿಧದ ರೂಪಿನೋವುವ |
ದೇವಂ ಚಿನ್ಮೂರ್ತಿ ಸಲವುಗೆವ್ಮಯ ನೃಪನಂ ||೧||

ನಿಜವಂಶಖ್ಯಾತಮಹೀ |
ಭುಜರಂ ನಿಜಸದ್ಗುಣಂಗಳಿಂ ನೆನೆಯಿಸುತುಂ ||
ಸುಜನಾಗ್ರಣಿ ಕೃಷ್ಣನೃಪಂ |
ಪ್ರಜೆಗಳನಾಬಳಿಕೆ ಸೊಗದೊಳೋವುತ್ತಿರ್ದಂ ||೨||

ವೆ|| ಆಗಳ್ಮಹಾಮಾತ್ಯನೆನಿಸಿದ ಮಾಧವರಾಯಂ ಸ್ವಾಯತ್ತಸಿದ್ಧಿ
ಯಪ್ಪ ಮಾರಾಯನ ಶಾಸನಮನಿನಿಸಾನುಂ ಮೀರದೆ ರಾಜಕೀಯಕಾರ್ಯಂಗಳ
ನತಿಪ್ರಬುದ್ಧನಾಗಿ ನಡೆಯಿಸುತ್ತಿರ್ಪನ್ನೆಗಂ ಕೇವಾನುಂ ದಿನದೊಳ್ಮಂ
ಮಾರಾಣಿಯಾಣವಿಸಿರ್ದಂತರಮನೆಯನಧಿಕಾರಿಜನಂ ಪಲವುಂ ಬಣ್ಣದ ಕಲ್ಗ
ಳಿಂದಮೆ ಕುಶಲರಪ್ಪ ಶಿಲ್ಪಿಗಳಂ ಪೊಚ್ಚಪೊಸತಾಗೆ ನಿರ್ಮಾಣಂಗೆಯಿಸಲೂಡಂ||

ಕಂ || ಧರೆಯೊಳಡಗಿರ್ದು ಕರ್ಣಾ |
ಟರಸೇಂದ್ರರ ಪುಣ್ಯವಶದೆ ಪೊರವಂದ ಮಹಾ ||
ಹರಿಪೀಠದಂತಿರೆ ಯುಧಿ |
ಷ್ಠಿರನರಮನೆಯುಮೊಗೆತಂದುದೆನಲದು ತೋರ್ಕುಂ ||೪||

ವೃ|| ಮರದೊಳಮಂತು ಲೋಹದೊಳಮಿಂತೆಸಗಲ್ಕರಿದೆಂದೆನಲ್ಕೆ ಕಂ |
ಡರಸಿದನೇಕರೂಪದುಪಲಂಗಳ ಸಂಕುಲದಿಂದೆ ಗೆಯ್ದು ಚಿ ||
ತ್ತರಿಸಿದ ಭಿತ್ತಿ ಬಾಗಿಲಮಳ್ಗಂಬದ ಹಂತಿ ಗವಾಕ್ಷಮು |
ಪ್ಪರಿಗೆಯಗುಮ್ಮಟಂ ಮೆರೆಗುಮೇಂಕಡುಜಾಣರೊ ಶಿಲ್ಪಿಗಳ್ ||೫||

ವೆ|| ಮತ್ತಂ ತರವೇರಿದೇಳುಂ ಮೇಲುಪ್ಪರಿಗೆಗಳಂದೆಸೆವಾಪೊಸತಪ್ಪರ
ಮನೆಯೊಳಲ್ಲಲ್ಲಿ ಸರಸ್ವತೀಭಂಡಾರಮಾಯುಧಶಾಲೆ ಮೊದಲಪ್ಪ ಸುತ್ತಣ

ಪಲವುಮುಪಶಾಲೆಗಳಂದೊಪ್ಪುವ ನಾನಾವಿಧಶಿಲಾಮಯಮುಪ್ಪ ವೊತ್ತವೊ
ದಲನೆಯ ಬಿತ್ತರವಾಳ್ದ ತೊಟ್ಟಯ ತೆಂಕಲತಿಮನೋಹರಮೆಂಬಿನಂ
ನಿರ್ಮಾಣಂಗೆಯ್ದ ಕಲ್ಯಾಣಮಂಟಪಮೆಂಬ ಕಲ್ಯಾಣಶೋಭಾಸಂಜೀವನಂ
ಸಂಜವನಂ ॥೬॥

ವೃ॥ ವರಚಿತ್ರಸ್ಫಟಿಕೋರ್ದ್ವಜಕ್ರವೃತಿಯಿಂ ಪೊಂಬಟ್ಟಿಯಿಂ ಗೆಯ್ದ ಚಿ ।
ತ್ತರದಿಂದೊಪ್ಪುವ ಲೋಹಧಾರಣೆಗಳಿಂ ಸೌಂದರ್ಯವದ್ವಿಗ್ರಹೋ ॥
ತ್ಕರದಿಂದಂ ಪೊರಸುತ್ತಿನೊಳ್ಮೆರೆವ ಕಲ್ಗಂಬಂಗಳಿಂ ಚಿತ್ರಬಂ ।
ಧುರದಿಂ ಕುಟ್ಟಿಮದಿಂದಮಂತೆಸೆಗುಮಾಲೇಖ್ಯೋಲ್ಲಸದ್ಭಿತ್ತಿಯಿಂ ॥೭॥

ವೆ॥ ಮತ್ತಂ ಕುದುರೆವಾಗಿಲ ಮೇಲುಪ್ಪರಿಗೆಯೊಳ್,

ವೃ॥ ವರಕೃಷ್ಣೇಂದ್ರಸಮಾಜಶಾಲೆ ಸಮುದಂಬಾವಿಲಾಸಾಖ್ಯಮಾಂ ।
ತುರುನಾನಾವಿಧಶಿಲ್ಪಕಲ್ಪನೆಗಳಿಂ ರಾರಾಜಿಸುತ್ತಿರ್ಪ್ಪನಂ ॥
ಸುರಪಾಸ್ಥಾನದಪೆಂಪದಾವುದು ಧನಾಧೀಶಾಸನಾಸ್ಥಾನದಾ ।
ಸಿರಿಯೇಂ ಮಾಣವನೀಸುತಾಪತಿಸಭಾಸೌಭಾಗ್ಯಮೇಂ ಗಣ್ಯಮೇ ॥೮॥

ವ॥ ಮತ್ತಮಾನೆವಾಗಿಲೆರಡನೆಯ ಮೇಲುಪ್ಪರಿಗೆಯ ಮುಂದೆಸೆಯೊಳ್,

ವೃ॥ ಏನಿರ್ಮಿಸಿದನೋ ಏನಿರ್ಮಿಸಿದನಲ್ತೊ ಮುಂ ಧರ್ಮಜಾ ।
ವನೀಂದ್ರಸಭೆಯಂ ಮನೋಹರಮೆನಲ್ಕಯಂ ಬಲ್ಲರಾರ್ ॥
ಮನೋಜ್ಞಮೆನೆ ಶಿಲ್ಪಕಲ್ಪಚಣರಿಂ ಮಹೀಶೂರಮೇ ।
ದಿನೀಂದ್ರಸಭೆ ನಿರ್ಮಿತಂ ದಿಟವಿದಾಯ್ತಿದಂ ಬಲ್ಲೆನಾಂ ॥೯॥

ಕಂ ॥ ಜಗದೊಳಗಿರ್ಪ್ಪದ್ಭುತವ ।
ಸ್ತುಗಳೊಳ್ಪರಿಗಣಿಸಲಿದು ಮಹಾದ್ಭುತಮೆಂಬ ॥
ನ್ನೆಗವಿಸಾಯುರಮನೆಯಂ ಶಿ ।
ಲ್ಪಿಗಳತಿರಮಣೀಯಶಿಲೆಗಳಿಂ ನಿರ್ಮಿಸಿದರ್ ॥೧೦॥

ಮತ್ತಂ,

ವೃ॥ ಧರಣಿಯೊಳಿಂತು ಜೆಲ್ವುವಡೆದಿರ್ಪ್ಪ ನೃಪಾಲಯಮೊಂದುಮೆನ್ನವೋ ।
ಲ್ಪರಿಕಿಪೊಡಿಲ್ಲಮೆಂದು ಪಲವುಂ ಕಳಸಂಗಳನಾಂತುದೆಂಬಿನಂ ॥
ನರಪತಿಗೇಹಗಾರವಕೆ ತಕ್ಕವೊಲುದ್ಯುಚಿಥಾಳಥಳ್ಯಬಂ ।
ಧುರಕಳಶಂಗಳಂ ತಳೆದು ರಾಜಿಕುಮಾಜಗತೀಂದ್ರಮುಂದಿರಂ ॥೧೧॥

ಕೆಂ || ನಿನ್ನನ್ವಯದೀನೃಪತಿ ಮ |
ಹೋನ್ನತಿಯಂ ಪಡೆದನೆಂಬುದಂ ಸಸಿಗರಿಪ ||
ಲ್ಲುನ್ನತಿಯಂ ಪಡೆದುದೆನ |
ಲ್ಲನ್ನುತನೃಪಗೇಹಮೆಸೆವುದತ್ಯುನ್ನತಿಯಿಂ ||೧೨||

ಕಂ || ತುಂಗನೃಪಗೃಹಕೆ ಬಂಡೆಗ |
ಳುಂ ಗುಂಡುಗಳುಂ ಕರಂ ನಯಂಗೊಂಡು ಮನೋ ||
ಜ್ಞಂಗಳೆನಿಸಿದುವಪಾಯದ |
ಪಾಂಗಿಂ ಕಟ್ಟೋಜಿಯಿಂದೆ ಕಡುಮೂಢರ್ಪೋಲ್ ||೧೩||

ಕಂ || ನೆಲನುಂ ನೆಲಬುಗುಟುಂ ಮೆ |
ಟ್ಟಿಲುಮುರರಮಳಿಂದಮುಂ ಪೊಸಂತಿಲುಮಾಕಿ ||
ಳ್ನೆಲ ಸೊಗದಸಾಲೆ ಕಂಬಂ |
ತೊಲೆ ಜೋದುಗೆಯಿಪರ ಪೂಜನಾರ್ಬಣ್ಣಿಸುವರ್ ||೧೪||

ನೃ|| ಮೊದಲೊಳದೊಂದು ಕಲ್ಮಹಿಳೆಯಾದುದನಾಲಸಿ ಕಲ್ಗಳೆಲ್ಲಮುಂ |
ಯದುಕುಲವಾರಿಕೃಷ್ಣನೃಪರೂಪದೆ ಪುಟ್ಟಿದ ಕೋಸಲೇಂದ್ರನಾ ||
ಮೃದುಜನಪಾಲನುರ್ವಿನದೆ ಪೆಣ್ಗಳ ರೂಪಮಾಂಪಮೆಂದು ಪೆ |
ರ್ಚಿದ ಪದಪಿಂದೆ ಬಂದು ನೃಪಮುಂದಿರದೊಳ್ನೆರೆದೊಡ್ಡುಗೊಂಡುವೋ ||೧೫||

ಕಂ || ಸಕಲಜಗಚ್ಚರಿತಮುಮಂ |
ಬಕಗೋಚರಮಕ್ಕೆ ನೃಪತಿಗೆಂದೋಜರ್ಕ್ತೆ ||
ತುಕದೆ ಸಮೆದೈತಿಹಾಸಿಕ |
ಸಕಲಪ್ರತಿನೆಗಳುಮೆಸೆವುವೀಯರಮನೆಯೊಳ್ ||೧೬||

ವ|| ಮತ್ತಮೀರಾಜಗೃಹಂ ತನ್ನಂತೆ ಕಳಾನಿಧೀನಗುರುಬುಧಕವಿಯುತನುಂ ಮುಂಗಳವಿಧುಂತಾದಕೇತುಮುಂದಚಲನೋಪಲಕ್ಷಿತಮುಮಾಗಿ ಪ್ರ್ಫುದಿಂದಾಗಸನುಮುಂ ವಿರಾಜಮಾನಶರಭಸಾಳ್ವಗಂಡಭೇರುಂಡಧರಣೀವರಾಹಪದಮುಂ ರತ್ನಪ್ರಕುರಮುಮಾದುದೆಂದು ಮೇರುಗಿರಿಯುಮುಂ ಪ್ರರುಡಿಸುತ್ತುಂ ನುಣ್ಪುವೆತ್ತ ಹೊರಮೆಯ್ಯ ಕರ್ಗಲ್ಲ ಕೇರ್ಗಳೆ ಕರ್ಮೆಯ್ಯಾಗೆ ಚಂದ್ರಶಾಲೆಯು ಮತ್ತಮೆರಡನೆಯ ನೆಲೆವಾಡದನಿತುಂಗುಮ್ಮಟಿಂಗಳ

ತುತ್ತತುದಿಯೊಳ್ನಿಲೆಗೊಳಿಸದತಿರವ ಣೀಯುಂಗಳಾದ ಪೊಂಗಳಸಂಗಳ ಕದಿ
ರ್ಗಳೆ ಮಿಂಚುಗಳಾಗೆ ತನ್ನೊಳ್ಪಿರಂಬೊಳೆವ ಕುಲಕ್ರಮಾಗತಮಾದ ರತ್ನ
ಸಿಂಹಾಸನಮನಲಂಕರಿಪ ಮಹಾರಾಜಶ್ರೀಕೃಷ್ಣರಾಜನ ಬಿರುದಾವಳಿಯಂ
ಪೊಗಳ್ವ ವಂದಿಗಳ ಪೊಗಳ್ಕೆಯ ರವವೆ ಮೊಳಗಾಗೆ ಮತ್ತಮೊಡ್ಡೋಲಗ
ದೊಳಾಮಹಾರಾಜನ ಮೇಲೆವನ್ನೆಯರಲರ್ಗಳಂ ಸೂಸುವ ಪದದೊಳ್ಮೀಗ
ಣತ್ತಣಿಂದುದಿರ್ವ ಪೂಗಳೆ ಮುಂಬನಿಗಳಾಗೆ ತಾನುಂ ಮುಗಿಲಾದೆನೆಂದಳ್ಕಜಂ
ಬಟ್ಟು ಮುಗಿಲೊಡ್ಡಂ ಪಳಂಚುತ್ತುಂ ಮತ್ತಮನಿತುಂ ಶಾಲೆಗಳತ್ತಿತ್ತಣೆರಡೆ
ರಡುಮುಮಳ್ಗಂಬಗಳ ಮೇಗೆಡೆಯೊಳ್ಪಲವ್ರಮಟ್ಟವೆಯ ಪೆರೆಗಳಂ ಪಿಡಿಪಿಡಿ
ದೊಟ್ಟರ್ದವಂ ತಳವಗುಳ್ಚಿ ಟ್ಟೋರೊಂದರ ಕೋಡುಮೊನೆಗಳ್ಪತ್ತುಗೊ
ಳ್ವನ್ನಂ ಬಾಗಿಸಿ ಸಿಂಗರಿಸಿರ್ಪಂತೆ ತೋಪ್ಪರವಟ್ಟನ ಕಟ್ಟಣಂಗಳ ಮೇಗೆ
ಸಮೆದ ಬಗೆವಗೆಯ ಕುಸುರಿವೆಸದೊಳಂ ಪಟಲದೂರ್ಧ್ವಪ್ರದೇಶಂಗಳ
ಚೌಮೂಲೆಗಳೊಳ್ಪಯ್ಯಮೆನೆ ಕಯ್ಗೊಯ್ದು ನೆಲೆಗೊಳಿಸಿದ ಕಿರಿವಿರಯು ಬು
ಗುರಿಗಳಂತಿರ್ಪ ಗುಮ್ಮಟಂಗಳ ತುತ್ತತುದಿಯೊಳಿಂಬುವಡಿಸಿರ್ಪ ಪೊಂಗಳ
ಸಂಗಳ ಬೆಡಂಗಿನೊಳಂ ನೆಲೆನೆಲೆಯುಂಕಣಿದುಂಕಣಿದ ಪಲವ್ರಂಬಣ್ಣದ ಗುಂಡಿ
ತ್ತಹ ಮೇಲ್ಮೈಯ್ಯೊಳಲ್ಲಲ್ಲಿ ಪೊಂಬಟ್ಟೆಯಿಂದಂತು ಬೆಳ್ಳಿವಟ್ಟೆಯಿಂ ರಚಿಸಿದ
ಪರಿವಡೆದ ಪೂವಳ್ಳಿ ಪೊಂದಾವರೆ ತಾವರೆ ಮೊದಲಪ್ಪ ಚಿತ್ತರದೊಳಂ ಮೇಲು
ಪ್ಪರಿಗೆಗಳ ನೆಲಗಟ್ಟನೊಳಲ್ಲಲ್ಲಿ ಕಾಣ್ಬರವೇಳ್ದೊರೊಂದು ಬಣ್ಣದಿಂದೆ
ಯುಂ ಚಿತ್ರಿಸುವೆಡೆಗಳೊಳ್ಕಂಡರಿಸಿದಂತಂತಪ ಬಣ್ಣದ ನುಣ್ಗಲ್ಲಳ ಕಿರಿವಿರಿ
ಯ ತುಣುಕುಗಳನೆ ಪವಣರಿದು ಕೊರೆದೊಳವ್ಗಿಸಿ ಚಿತ್ರಿಸಿದ ಚಂದ್ರಕಾಂ
ತಶಿಲಾಫಲಕಂಗಳೊಳಂ ಮತ್ತಮನಿತುಂ ನೆಲೆವಾಡಂಗಳ ಮತ್ತವಾರಣಂಗ
ಳಂಚುಗಟ್ಟಿನೊಳ್ಕಡುಸೊಬಗಿಂಗಿಂಬೆನಿಸಿ ಕಣ್ಗೊಳಿಸುವ ಕಿರುಗಂಬುಗಳ
ಸಾಲ್ಗಳೊಳಂ ಪಲವು ಮುಕ್ಕಳ ತಾಯಂತೆ ಬೃಹದೇವತೆ ತಳ್ತುಕೊಂಡಿರ್ಪ್ಪ
ಪಲವುಂ ಪಸುಳೆಗಳಿಂಬಂತೆ ತೋಪ್ಪರ ಮೇಲ್ಗಣ ನೆಲೆವಾಡಂಗಳ ಕೇರ್ಗ
ಳೊಳಗಣಿಂದಿನಿಸು ಪೊರವಂದು ಕಟ್ಟಂಪಂಬಡೆದ ಕಿರುಮಂಟಪಂಗಳೊಳ
ಮಾಲೇಖ್ಯಕಾರನಿರ್ಮಿತಪತ್ರಮುಮಚಿತ್ರಮುಂಟಪಂಗಳನೇಡಿಸುತ್ತುಂ ಸಂ
ಮಗಾಣದಿರ್ಪ್ಪಂತು ಕಲ್ಲಿಂ ಸಮೆದಿಟ್ಟಗೆಗಳಂ ಮಟ್ಟಿರ್ಪ್ಪುದರಿಂದೊರ್ಕಲ್ಲನೆ
ಕ್ಕಂಡರಿಸಿ ಸಮೆದುದೆಂಬಂತೆಯುಂ ವಿಶ್ವಕರ್ಮನೆ ಪಲವುಂ ಕಲ್ಗಳಂ ಪೇರ್ಗ

ರಗದೊಳ್ಕರಗಿಸಿ ಪೇರಚ್ಚಿನೊಳೆರಕಂಬೊಯ್ದನೆಂಬಂತೆಯುಂ ಸಮಸ್ತ ಲೋಕದ ಚಿತ್ರವಿದ್ಯೆಯು ಬಿತ್ತರಮೆ ರಾಜಗೃಹದ ಪರಿಜಂ ತಳೆದುದೆಂಬಂತೆಯುಮಮಾನುಷಕೃತಮೆನೆ ತಾನೆ ಧರೆಯೊಳಗಣಿಂದೊಡೆದು ಮೂಡಿತೆಂಬಂತೆಯುಂ ಪಿರಿದುಂ ರಮಣೀಯವಾಗಿ ಪೊಳಲೊಳೆಡೆಯಾಡುವ ಜನದ ಕಣ್ಮನಂಗಳಂ ಸೆರೆಗೆಯ್ಯುತ್ತುಂ ಕವಿಜನದನಿತುಂ ವಾಗ್ಭರಿಗಳಿಂದಿನಿಸುಂ ತೋಯದತಿಶ್ಲಾಘ್ಯವಾಗಿಪ್ಪುದಂತುಮಲ್ಲದೆಯುಂ ॥೧೩॥

ಕಂ॥ ಯೂಥಪನಿಭಕುಲದೊಳ್ಪರ।
ಭೂಧರಮಗನಿಕರದೊಳ್ಪ್ರಹಾವಳಿಯೊಳ್ಪು ॥
ಸ್ವಾಧಿಪನೆಂತಂತೆಸೆಗುಂ।
ಪ್ರಾಧಾನ್ಯದೆ ಕಲಶತತಿಯೊಳಾತುದಿಗಳಸಂ ॥೧೪॥

ವ॥ ಇಂತು ಪೊಚ್ಚಪೊಸತೆನಿಸಿದರಮನೆಗೆ ಶುಭಮುಹೂರ್ತದೊಳ್ಗೃಹಪ್ರವೇಶಮಂಗಳಮುಂ ಬಳಯಿಸಲ್ಮಹಾರಾಜಂ ಬೆಸನಿತ್ತಂದದಿಂ ಕಾರ್ಯಾಧ್ಯಕ್ಷನಪ್ಪ ರಾಮಕೃಷ್ಣರಾಯಂ ಸಕಲಶುಭಸಂಭಾರಂಗಳಂ ತತ್ತದಧಿಕಾರಿಗಳಿಂ ಸಜ್ಜುಗೊಳಿಸಲೊತಂ ॥೧೯॥

ವೃ॥ ಬಳಿಯಿಸೆ ವಾಸ್ತುಶಾಂತಿವಿಧಿಪೂರ್ವಕಮಾಗಿ ಪ್ರಯೋಜಯಂ ಪರವೈದಿಕಾಳಿಮಂ।
ಗಳಕರಲಗ್ನದೊಳ್ಪಿಗಿಸಿ ಮುಂ ಕುಲದೇವತೆಯುಂ ತದಾತ್ಮದೊ ॥
ಳ್ಮೊಳಗುತಿರಲ್ಕನೇಕವಿಧನುಂಗಳವಾದ್ಯಗಣಂ ಸ್ವಬಂಧುಸಂ।
ಕುಳದೊಡಗೂಡಿ ಕೃಷ್ಣನೃಪನಾಗೃಹಮುಂ ಪುಗುತಂದನೊಲ್ಮೆಯಿಂ ॥೨೦॥

ಕಂ॥ ಅಂತಹಗೃಹಪ್ರವೇಶದ।
ಸಂತರ್ಪಣೆಯಿಂದೆ ತೃಪ್ತಿಯಾಂತಬಿಲಜನಂ ॥
ಸಂತಸದೊಳಾನೃಸಂಗ।
ತ್ಯಂತವೆನಲ್ವರಸಿದತ್ತು ಶುಭಸಂತತಿಯಂ ॥೨೧॥

ವ॥ ಅಲ್ಲಿಂಬಳಿಯಂ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯರುಂ ತುಂಗಭದ್ರಾತರಂಗಿಣೀತೀರಗತಶೃಂಗಗಿರಿಪುರವಿರಾಜಮಾನ ಶ್ರೀಶಂಕರಾಚಾರ್ಯಪೀಠಸ್ಥರುಮಪ್ಪ ಜಗದ್ಗುರುಶ್ರೀಶಿವಾಭಿನವಸಚ್ಚಿದಾನಂದನರಸಿಂಹಭಾರತೀಸ್ವಾಮಿಗಳ್ತಂಕಣನಾಡೊಳ್ಜಗದ್ವಿದಿತಶ್ರೀಶಂಕರಾಚಾರ್ಯಗುರುವರೇಣ್ಯರ

ಪುಣ್ಯತಮಜನ್ಮಭೂಮಿಯಪ್ಪ ಕಾಲಟಿಯೆಂಬೂರೊಳಾಮುಹನೀಯರ ವಿಗ್ರ
ಹಮುಂ ಪ್ರತಿಷ್ಠಿಸಲತ್ತಲ್ಪಯಣಂಗೆಯ್ವವಸರದೊಳಾಮುಹಾರಾಜಂ ನಾಲ್ವ
ಡಿಯು ಕೃಷ್ಣರಾಜಂ ಪ್ರಾರ್ಥಿಸಿದಂದಕ್ಕೆ ಶಿಷ್ಯಪರಿವಾರಂಬೆರಸು ಮಹೀಶೂರ
ನಗರಿಯನೆಯ್ದೆವರ್ಪ್ಪುದುಂ ॥೨೦॥

ಕಂ ॥ ನಿರವಧಿಕಭಕ್ತಿಯಿಂದಾ ।
ಗುರುವರ್ಯರನಾನೃಪಾಲಪುಂಗವನಿದಿರ್ಗೊಂ ॥
ಡರಮನೆಗೆ ಕರೆದುತಂದಂ ।
ನಿರತಿಶಯಾನೇಕರಾಜಮರ್ಯಾದೆಗಳಿಂ ॥೨೩॥

ವ॥ ಅಂತು ಕರೆತಂದು ಸಕುಟುಂಬಪರಿವಾರನಾಗಿ ಧೂಳಪಾದಪೂಜೆ
ಯಂ ಮಾಡಿ ಸರಸ್ವತೀಪ್ರಸಾದಮಹಾಪಾಠಶಾಲೆಯೊಳಿಳಯಿಸಲೊಡಂ ॥

ವೃ॥ ದಿನದಿನಮಾಯತೀಶ್ವರರ ಸನ್ನಿಧಿಯೊಳ್ನಡೆಯುತ್ತುಮಿರ್ದ ಭೂ ।
ಜನನುತಚಂದ್ರಮೌಳಿಯ ಸನುರ್ಜನವೈಖರಿಯಂ ಮಹೀಸುರ ॥
ರ್ಗನುಪಮಮೆಂಬಿನಂ ನಡೆದ ಭೋಜನದೊಳ್ಪನಶೇಷಶಿಷ್ಯರುಂ ।
ವಿನಯದೆ ಮಾಡುತಿರ್ದ ಗುರುಪಾದಸಪರ್ಯೆಯನೇನನೆಂಬೆನಾಂ ॥೨೪॥

ವ॥ ಇಂತಿಪ್ಪಿನವೊಂದುದೆವಸಂ ಮಹಾರಾಜಂ ಭಿಕ್ಷಾವಂದನಂಗೆ
ಯ್ಯಲಾಯತಿವರೇಣ್ಯರೊಲ್ದು ತಮ್ಮುಪಾಸ್ಯರಪ್ಪ ಶಾರದಾಚಂದ್ರಮೌಳೀಶ್ವ
ರರ ಮಹನೀಯವಿಗ್ರಹಂಗಳ್ವೆರಸು ಶಿಷ್ಯಪರಿವಾರದಿಂದೊಡವೆರೆದರಮನೆಗೆ
ಬಿಜಯಂಗೆಯ್ದು ನಿಜನಿಯಮಾನುಸಾರದಿಂ ನಿರ್ವರ್ತಿತಸ್ನಾನಾಹ್ನಿಕರಾಗಿ
ಪೊಸತಪ್ಪ ಕಲ್ಯಾಣಮಂಟಪದೊಳಪ್ಪರ್ವಾಭಿಮುಖವಾಗಿ ಸಜ್ಜೀಕರಿಸಿರ್ದ
ಕನತ್ಕನಕಮಂಟಪದೊಳ್ವೀವರಂ ಬಿಜಯಂಗೆಯಿಸಿ ಮಹಾರಾಜಂ ಯುವ
ರಾಜಂಬೆರಸು ಸನ್ನಿಹಿತನಾಗಿರೆ ವಿದ್ವಜ್ಜನರುಂ ಲೌಕಿಕಾಧಿಕಾರಿಗಳುಂ
ತಮ್ತಮ್ಮ ಸಮುಚಿತಸ್ಥಾನಂಗಳೊಳ್ನೆರೆದಿರ್ಪ್ಪಿನಂ ವೈದಿಕಲೋಕಂ ವೇದ
ಪಾರಾಯಣಂಗೆಯ್ಯುತ್ತಿರ್ಪ್ಪಿನೆಗಂ ಸಕಲಪೂಜೋಪಕರಣಂಗಳುಮಣಿಯಾ
ಗಿರ್ಪ್ಪನ್ನಂ ಕಲ್ಪೋಕ್ತಪ್ರಕಾರದಿಂದಮುಂದವಿಭವದಿಂ ದೇವರ್ಗಭಿಷೇಕಾ
ದಿಸಮಗ್ರಪೂಜೆಯಂ ನಿರ್ವರ್ತಿಸಿದ ಸಮನಂತರದೊಳನೇಕವಿಧಮುಂಗಳ
ವಾದ್ಯಂಗಳ್ಮೊಳಗೆ ಭಕ್ತಿಭರದಿಂದೆಲ್ಲರುಂ ತಲೆವಾಗಿ ಬದ್ಧಾಂಜಲಿಸಂಪುಟ

ರಾಗಿ ನಿಂದಿಪ್ಪನ್ನೆಗಮುತ್ತರನೀರಾಜನಂಗೆಯ್ದು ಮಂತ್ರಪುಷ್ಪಪ್ರದಕ್ಷಿಣ ನಮಸ್ಕಾರಂಗಳಂ ಸಮರ್ಪಿಸುವಾಗಳ್ ॥೨೬॥

ವೃ॥ ಲೀನಮನಸ್ಕರಾಗುತೆ ಮಹತ್ತರವೈಭವದಿಂದಮಾಮಹಾ ।
ಸ್ಥಾನದೆ ತಜ್ಜಗದ್ಗುರುಕರಾಂಬುಜಪೂಜಿತಜಂದ್ರಶೇಖರೇ ॥
ಶಾನನೊಳರ್ಧನಿಮೀಲಿತವಿಲೋಚನರಾಗಿಸಿಸುಂ ಮಿಡುಂಕದಂ ।
ತಾನೃಪಮುಖ್ಯರಾಭಗವದರ್ಚೆಯನೀಕ್ಷಿಸುತಿರ್ದ್ದರೆಲ್ಲರುಂ ॥೨೭॥

ವ॥ ಅಂತುದಾರವೈಭವದಿಂ ದೇವತಾರ್ಚನೆ ಬಳೆದೊಡನೆ ಮಹಾರಾಜನನರ್ಘ್ಯಮಣಿಕನಕಪೀತಾಂಬರಫಲಪುಷ್ಪಾದಿಗಳಿಂ ಶ್ರೀಜಗದ್ಗುರುಪಾದಪೂಜೆಯಂ ಭಕ್ತಿಯುಕ್ತನಾಗಿ ಮಾಡಲಾಮಹಾಯೋಗೀಶ್ವರರ್ಸುಪ್ರೀತರಾಗಿ ಮೊಗದೊಳಾನಂತಿರಸಂ ತುಳುಕಾಡೆ ದೃಷ್ಟಿಯೊಳಾದಂ ಪ್ರಸಾದಂ ಮೆಯ್ದೋರೆ ಮಹಾರಾಜಂಗಂ ಯುವರಾಜಂಗಂ ಮಾರಾಣಿ ಮೊದಲಪ್ಪರಾಣಿವಾಸದವರ್ಗಮುತ್ತರೋತ್ತರಶ್ರೀಯೋಭಿವೃದ್ಧಿಯಂ ಪರಸಿ ನಿಜಹಸ್ತದಿಂ ಫಲಮಂ ತಾರ್ಕ್ಷತೆಯಂ ಕಯ್ಕೊಳಿಸಿ ಮಹಾಯೋಗಿಜನೋಜಿತಮಪ್ಪ ಭಿಕ್ಷೆಯಂ ನಿಯಮಾನುಸಾರದಿಂ ಸ್ವೀಕರಿಸಿ ಪರಮಾನಂದಭರಿತರಾಗಿ ಮಹಾರಾಜನಂ ಪುನರಾಶೀರ್ವಾದಪೂರ್ವಕಂ ಬೀಳ್ಕೊಂಡರವನಿಯುಂ ಪೊರಮಟ್ಟು ಸರಸ್ವತೀಪ್ರಸಾದಕ್ಕೆ ಬಿಜಯಂಗೆಯ್ದು ಶಿಷ್ಯಲೋಕಾನುರೋಧದಿಂ ಕೆಲವಾನುಂ ದಿನಮಿರ್ದಸಂಖ್ಯಾಕರಪ್ಪ ಪಂಡಿತಪ್ರಕಾಂಡರ್ಗೆ ಸಮುಚಿತಸನ್ಮಾನಂಗೆಯ್ದು ಶೇಷಲೌಕಿಕವೈದಿಕಶಿಷ್ಯರ್ಗಸುಗ್ರಹಪೂರ್ವಕಂ ಫಲಮಂತಾರ್ಕ್ಷತೆಯನಿತ್ತ ಸನುನಂತರಮೆ ರಾಜಕೀಯಮರ್ಯಾದಾನುಸಾರದಿಂದಲ್ಲಿಂ ಪೊರಮಟ್ಟು ಗರಳಪುರೀಕ್ಷೇತ್ರಮಾರ್ಗದಿಂ ದ್ರಮಿಡದೇಶದತ್ತಲ್ಪಯಣಂಗೆಯ್ವುದುಂ ॥೨೮॥

ಕಂ॥ ಅರಮನೆಯಂ ಪೊಸತೆನಲೆ ।
ಮ್ಮರಸಂ ಕಟ್ಟಿಸಿದ ತಡಮೆ ಮಹನೀಯಜಗ ॥
ದ್ಗುರುಗಳನಲ್ಲಿಗೆ ಬರಿಸಿದು ।
ದುರುತರಮುಂಗಳನಿದಾನಮೆಂದುದು ಲೋಕಂ ॥೨೯॥

ವ॥ ಅಲ್ಲಿಂಬಳಿಯಮಾಯಿಳೆಯಾಣ್ಮನೊಂದು ದೆವಸಂ ಕುಲಗುರುಗಳಪ್ಪ ಪರಮಹಂಸಪರಿವ್ರಾಜಕಾಚಾರ್ಯಶ್ರೀಕೃಷ್ಣಬ್ರಹ್ಮತಂತ್ರಪರಕಾಲ

ಯತೀಂದ್ರರ್ಗೆ ಭಿಕ್ಷಾವಂದನಂಗೆಯ್ವುದುಮಾಯೋಗೀಂದ್ರರೊಲ್ದು ತಮ್ಮ ಪಾಸ್ಯರಪ್ಪ ಭಕ್ತಾನುಗ್ರಹೈಕತಾನ ಶ್ರೀಹಯವದನಲಕ್ಷ್ಮೀನಾರಾಯಣದೇವ ತಾವಿಗ್ರಹಂಗಳ್ವೆರಸು ರಾಜನುರ್ವ್ವಾದಾನುಸಾರದಿಂದರಮನೆಗೆ ಬಿಜಯಂಗೆಯ್ದು ವಿನುತಾವನವನ್ಯನಪ್ಪ ಮಹಾರಾಜನಿಂದಭಿವಂದಿತರಾಗಿ ನಿಯಮಾನುಸಾರದಿಂ ಸ್ನಾನಾಹ್ನಿಕಂಗಳಂ ತೀರ್ಚಿ ಸುವಿಶಾಲರಮಣೀಯಕಲ್ಯಾಣಮಂಟಪದೊಳ್ಮಹಾರಾಜಂ ಯುವರಾಜನೊಡನೆ ಸನ್ನಿತನಾಗಿರೆಯುಮನೇಕವೈದಿಕಲೌಕಿಕಸಾಮಾಜಿಕರ್ವಮ್ತಮ್ಮ ಸಮುಚಿತಸ್ಥಾನಂಗಳೊಳ್ನೆರೆದಿರೆಯುಂ ವಿವಿಧಮಂಗಳವಾದ್ಯಂಗಳೊಳ್ಮೊಳಗುತ್ತಿರೆಯುಂ ಸಮಸ್ತಪೂಜೋಪಕರಣಂಗಳುಂ ಸಜ್ಜೀಕೃತಂಗಳಾಗಿರೆಯುಂ ಕಲ್ಪೋಕ್ತಪ್ರಕಾರದಿಂದನವಧಿಕಭಕ್ತಿಯಿಂದತಿವಾತ್ಸಲ್ಯವಿಭವದಿಂ ಭಗವದಾರಾಧನಂಗೆಯ್ವಾಗಳ್ ॥೩೦॥

ಕಂ ॥ ಅರಸಂ ಮೊದಲಾದೆಲ್ಲ ।
ರ್ನಿರುಕಿಸುತಾ ಭಗವದರ್ಚನಾವೈಭವಮಂ ॥
ಪರಿಹೃತಮಾಯ್ತಿಂದೆಮ್ಮಘ ।
ಮುರುಧಸ್ಯತೆಯಾಂತೆನೆಂದು ದಲ್ಬಾವಿಸಿದರ್ ॥ ೩೧ ॥

ವ॥ ಅಂತು ಭಗವದಾರಾಧನಂ ಬಳೆದ ತಡಂ ಮಹಾರಾಜನುರುತರ ಭಕ್ತಿಯಿಂದುದಾರಸಂಪತ್ತಿಯಿಂ ಶ್ರೀಗುರುಪಾದಪೂಜೆಯನೊಡಬರ್ಚ್ಚುವ್ರುದು ಮಾಯೋಗೀಂದ್ರರಾದಂ ಸುಪ್ರೀತರಾಗಿ ಮಹಾರಾಜಯುವರಾಜರ್ಗಂ ಮಹಾರಾಣಿ ಮೊದಲಪ್ಪ ರಾಣಿವಾಸದವರ್ಗಮನುಕ್ರಮದಿಂ ಪರಮಾನುಗ್ರಹದಿಂ ಫಲಮುಂತಾಕ್ಷತೆಯನಿತ್ತ ಸಮನಂತರದೊಳ್ನಿಯಮಾನುಸಾರದಿಂ ಸಾರತರಮುಂ ಯೋಗಿಜನೋಚಿತಮುಮಪ್ಪ ಭಿಕ್ಷೆಯಂ ಪರಿಗ್ರಹಿಸಿ ಮಹಾರಾಜನಂ ಶುಭಾಶಂಸನಪೂರ್ವಕಂ ಬೀಳ್ಕೊಂಡರಮನೆಯಿಂ ಮರಲ್ದು ಸಮುಚಿತರಾಜಮರ್ಯ್ಯಾದಾನುಸಾರದಿಂ ಶ್ರೀಮಠಮಂ ಸೇರಲೊಡಂ ॥೩೨॥

ಕಂ ॥ ಎಂತಹ ಭಕ್ತಿಯೊ ಗಿರಿಜಾ ।
ಕಾಂತನೊಳಂತಪ್ಪ ಭಕ್ತಿಯನೆ ಸಿಂಧುಸುತಾ ॥
ಕಾಂತನೊಳುಂ ತೋರಾದ್ಭೂ ।
ಕಾಂತನ ಸಮಮತಿಯನೆಲ್ಲರುಂ ಶ್ಲಾಘಿಸಿದರ್ ॥೩೩॥

ವ|| ಅಲ್ಲಿಂಬಳಿಯಂ ಮಹಾಮಾತ್ಯಂ ಮಾಧವರಾಯಂ ನಿಜಾಧಿಕಾರದ ಮೂರುಂಬರಿಸದ ಗಡುವಿನೊಳ್ವಿಶ್ರಾಂತಿಸುಖಕ್ಕೆಳಸಲೊಡಂ ಮಹಾರಾಜಂ ಶ್ರೀಕೃಷ್ಣರಾಜನಂದಿಂಗುಪಮಂತ್ರಿಪದದೊಳಿರ್ದಾನಂದರಾಯನಂ ಬರಿಸಿ ಮನ್ನಣೆಗೆಯ್ದು ಮಹಾಮಾತ್ಯಪದದೊಳ್ನಿರಿಸಿದಂ ||೩೪||

ಕಂ|| ಆನಂದರಾಯನತಿಶಯ |
ಮಾನಿತನಿರವದ್ಯಗುಣನಿಕಾಯ ನಮಾತ್ಯ ||
ಸ್ಥಾನಕ್ಕೆ ಬರಲ್ರಾಜ್ಯಮ |
ದೇನೆಂದಪೆನೇಗಮಾದುದಾನಂದಮಯಂ ||೩೫

ವ|| ಆಗಳಾಮಹಾರಾಜಂ ಶ್ರೀಕೃಷ್ಣರಾಜಂ ಕುಟುಂಬಪರಿವಾರಂಬೆರಸಾಪೊಸಅರಮನೆಯೊಳ್ನಿರತಿಶಯಸುಖಸಾಮ್ರಾಜ್ಯಪದವಿಯನನುಭವಿಸುತ್ತಿರ್ಪ್ಪನೆಗಂ ||೩೬||

ಕಂ|| ನವಮನ್ಮಥಲಲಿತಾಂಗನ |
ಯುವಕಂಠೀರವನೃಸಿಂಹರಾಜನ ತನುವಂ ||
ನವತಾರುಣ್ಯಶ್ರೀ ಪದೆ |
ದವಲಂಬಿಸಿ ಜೆಲ್ವುವೆತ್ತದೇನೊಪ್ಪಿದಳೋ ||೩೭||

ವೃ|| ಶರದದೊಳೊಪ್ಪುತಿರ್ಪ್ಪ ಕುಮುದಕ್ಕೆಣೆಯಾದುವು ಕಣ್ಗಳಾನನಂ |
ಪರಿವಡೆದತ್ತು ತುಂಬುವೆರೆಯಂತೆವೊಲಾನೆಯ ಸೊಂಡಿಲಂತೆ ತೋ ||
ಳಿರಡುಮಳುಂಬಮೊಪ್ಪಿದುವು ತೋಳ್ದಲೆಗಳ್ವೃಷಭೇಂದ್ರನಂಸಮಂ |
ಸರಿಗೊಳುತಿರ್ದುವಂತವುರಮಾದುದುರಂ ಸಿರಿಗಾಯುವೇಂದ್ರನಾ ||೩೮||

ಕಂ|| ಸಸಿಯೆನಿಸಿದ ಸುರಸಾಲಂ |
ಸುಸಮಗ್ರಾವಯವವೃತ್ತತೆಯಿನೊಪ್ಪುವವೋಲ್ ||
ಸಿಸುವಾಗಿರ್ದಾಯುವನೃಪ |
ನೆಸೆದಂ ಪರಿಪೂರ್ಣಯೌವನೋದಯದಿಂದಂ ||೩೯||

ವ|| ಇಂತು ನಿಜಾನುಜಂ ಯುವರಾಜಂ ಕಂಠೀರವನರಸಿಂಹರಾಜಂ ಯುವಕೇಸರನಾದುದಂಬಗೆದಂದು ಮಹಾರಾಜನಾತಂಗೆ ಪರಿಣಯಸಮಯಂ ಸಮನಿಸಿತ್ತೆಂಬನಿಜಾಶಯಮುಂ ಮಹಾಮಾತ್ಯಶ್ರೀವಾಣೀವಿಲಾಸಮಹಾರಾಜ್ಞಿಯ ಸನ್ನಿಧಾನಕ್ಕರಿಕೆಮಾಡುವುದುಂ ||೪೦||

ಕಂ || ಅಮಾತನಾಮಹಾರಾ |
ಜ್ಞೀಮಣಿ ಕೇಳ್ದು ಮಿಗೆ ಹರಿಸಮಭಿನಂದಿಸುತುಂ ||
ಶ್ರೀಮದ್ವರಾನುಗುಣೆ ಕ |
ನ್ಯಾಮಣಿಯೆಲ್ಲಿರ್ದಳೆಂದು ನೆರೆ ಚಿಂತಿಸಿದಳ್ ||೪೧||

ವ|| ಅಂತು ಚಿಂತಿಸಿ ನಾಡುನಾಡಿನೊಳಪ್ಪ ನಿಜಬಂಧುಸಂಬಂಧಿಗಳ ಕುಲಕುಲದೊಳಂ ಮಂತ್ರಿಸಚಿವಾದಿಗಳ ಮುಖದಿಂ ವಿಚಾರಿಸುವಲ್ಲಿ ವರಾನುಣಿಯುಪ್ಪ ಕನ್ಯಾಮಣಿಯೆಲ್ಲಿಯಂ ಗೋಚರಿಸದಿರ್ಪಿನಮನಿತರೊಳ್ಮಹಾರಾಜನತಿಪ್ರಮೋದದಿಂ ಸಾರ್ತ್ತಂದಡಿಗೆರಗಿ ಮಾತ್ಯಶ್ರೀ ಕೇಳ್ವುದೆಮ್ಮ ದಳಪತಿಯುಪ್ಪ ದೇವರಾಜನ ಕುವರಿಯರೊಳ್ಮಾದನೆಯುಳಪ್ಪ ಚೆಲ್ವಾಜಮ್ಮಣಿಯೆಂಬ ಕನ್ಯಕಾಮಣಿಯೆಮ್ಮ ಯುವರಾಜಂಗೆ ಕುಲವಯೋರೂಪಾದಿಗುಣಂಗಳಿಂದನುರೂಪೆಯಾಗಿರ್ಪಳೆಂದೆನ್ನ ಬಗೆಯೊಪ್ಪುಗೊಂಡಿರ್ಪುದೆಂದು ಬಿನ್ನವಿಸಿದೊಡದಂ ಕೇಳ್ದು ಮಾರಾಣಿ ಕಡುಸಂತಸಂಗೊಂಡು ಕುವರಾರಾಸನ್ನಿಹಿತವಾಗಿರ್ದೊಡಮಿನ್ನೆವರಂ ಗೋಚರವಾಗದೆಮ್ಮ ಚಮೂಪತಿಯ ಭಿಜನದೊಳ್ಗೂಢವಾಗಿರ್ಪ್ಪ ಕನ್ಯಾರತ್ನಮೆಲ್ಲಂದದೊಳೆಮಗೆ ಪರಿಗ್ರಾಹ್ಯವಾಗಿರ್ಪ್ಪುದರಿಂದೆಮ್ಮ ಕುಲದೇವತೆಯುಪ್ಪ ಚಾಮುಂಡಾಂಬೆಯಿಂತವಧೂವರರ ಪರಿಣಯಮಹೋತ್ಸವಮನವಿಳಂಬದಿಂ ಬಳೆಯಿಸುಗೆಂದು ಭಕ್ತಿಭರದಿಂ ಪ್ರಾರ್ಥಿಸಿ ಯುವರಾಜಂಗಾಹದನೆಲ್ಲಮನರಿಪಲಾತನೊಲ್ದೊಡಂಬಟ್ಟು ಸಮುಲ್ಲಸಿತವದನಾರವಿಂದನಾಗಲಂತದಂ ಕೇಳ್ದು ನಿಜಸಹೋದರಿಯರುಮಾದಮನುವೋದಿಸುವುದುಂ ||೪೦||

ಕಂ || ಅರಸಂ ಮಾತ್ಯಾಜ್ಞೆಯೊಳಾ |
ಪರಿಣಯಸನ್ಮಹಕೆ ಲಗ್ನಪತ್ರಿಕೆಯಂ ಸಿ ||
ರ್ಧರಮುದದಿಂ ಜೋಯಿಸರಂ |
ಕರೆಯಿಸಿ ಬರೆಯಿಸಿದನಣಿಯರಂ ಸಂತಸದಿಂ ||೪೧||

ವ|| ಅಂತು ಬರೆಯಿಸಿದ ಲಗ್ನಪತ್ರಿಕೆಯಂ ನಾಡುನಾಡಿನರಸರ್ಗಂ ನಿಜಬಂಧುಸಂಬಂಧಿವರ್ಗಕಂ ಪೌರಜಾನಪದಪ್ರಮುಖರ್ಗಮಧಿಕಾರಿಲೋಕಕ್ಕಂ ಪಂಡಿತ ಪ್ರಕಾಂಡಮಂಡಲಕ್ಕ ಮುಚಿತಪ್ರಕಾರದಿಂ ಕಳಿಪಿ ಮಹಾಮಾತ್ಯನಪ್ಪನಂದರಾಯಂ ಮೊದಲಪ್ಪ ಮಹಾಧಿಕಾರಿಗಳಂ ಬರಿಸಿ ||೪೪||

ಕಂ ॥ ಯುವರಾಜವಿವಾಹಮಹೋ ।
ತ್ಸವಕೆ ಸಮಗ್ರಪ್ರಶಸ್ತಸಂಭಾರವನೆ ॥
ಲ್ಲವನಣಿಮಾಡಿಸುವುದು ನಗ ।
ರವಿದನಲಂಕರಿಪುದೆಂದು ಶಾಸನವಿತ್ತಂ ॥೪೫॥
ಆರಾಜಶಾಸನಮನಧಿ ।
ಕಾರಿಜನಂ ಶಿರದೊಳಾಂತು ಬಹುವಿಧಶುಭಸಂ ॥
ಭಾರಮನಣಿಗೆಯ್ದು ಮಹೀ ।
ಶೂರಮಹಾಪುರವನೇನಲಂಕರಿಸಿದರೋ ॥೪೬॥

ವ॥ ಆಗಳಾಮಹೀಸುರಪ್ರರಂ ಬೀದಿವೀದಿಯ ಚೌಪಟಚೌಪಟದೊಳಂ ವಿಚಿತ್ರವಿಚಿತ್ರಂಗಳಪ್ಪ ಬಹುವಿಧರಚನೆಗಳಂ ಕಲ್ಪಿಸಿದ ಪಲವುಂ ಕಾಯು ಮಾನಂಗಳೆ ಭಾಸುರಸುರವಿವಿಮಾನಂಗಳಾಗೆಯುಂ ಮಹೋತ್ಸವಕ್ಕೆಂದು ನಾಲ್ಕಯ್ದುತಿಂಗಳಿಂದೆಯುಂ ದೋಹಳವನೊಡಚ್ಚಿ ಬೆಳೆಯಿಸಿದ ಪೂವಣ್ಗಳಿಂದಿಡಿದು ಸೊಂಪ್ರವಡೆದ ಗಿಡುವಳ್ಳಿಗಳಿಂದಲ್ಲಲ್ಲಿ ಕಣ್ಗೊಳಿಸುವ್ರಪವನಂಗಳೆ ಪಲವುಂ ನಂವನನವನಂಗಳಾಗೆಯುಂ ನಾನಾವಿಧಮಣಿಮಯಕನಕಾಸನ ಶಯನವಾಹನಭೂಷಣಾಂಬರಗಂಧಪುಷ್ಪಫಲತಾಂಬೂಲಾದಿಭೋಗ್ಯವಸ್ತುಗಳಂ ನಿರಂತರಪರಿಕಲಿತಂಗಳಾಗಿ ಹಿರಣ್ಮಯಕಳಶಧ್ವಜತೋರಣಂಗಳ ಮುಂಗಳಾಲಂಕಾರದಿಂದೆಸೆವ ಕರುಮಾಡಗಳೆ ವೈಶ್ರಯಂತಾದಿಸೌಧಂಗಳಾಗೆಯುಂ ದೇಶದೇಶದಿಂದುತ್ಸವಾರ್ಥಂ ಬಂದಲ್ಲಲ್ಲಿ ನೆಲೆಗೊಂಡು ಶಂದಿಂದುಬಿಂಬಿಡಂ ಬರಹರಸುಂದರಾನನದೊಳ್ಪಸರಿಸುವೆಳನಗೆಯಿಂಬೆಳ್ದಿಂಗಳಂ ಪವಳದಕಳಿಗಾ ಗರಮೆನಿಪ ಚೆಂದುಟಿಯ ತಳತಳಪತೊಳಪದಿಂ ಸಂಜೆಗೆಂಪಂ ಮರಿದುಂಬಿಗಳ ಬಂಬಲೊಡವುಟ್ಟಿನಿಪ ಜೆಕ್ಕುರಜಾಲದ ನೀಲಮುಚಿಯಿಂ ಕಳ್ತಲೆಯುಂ ಕಂದಣದ ರೂಪಂ ನಿಂದಿಸುವ ಮೆಯ್ವೆಳಗಿಂದೊಡವೆರೆದ ವಿವಿಧಮಣಿಭೂಷಣ ಪ್ರಭಾಪಟಲದಿಂದಿಂದ್ರಚಾಪವನಾನವಮೊಡರ್ಚುವ ಸಚ್ಚಣಿಯರೆ ಮೇನಕಾರಂಭಾದಿಬೃಂದಾರಕಪ್ರಾಂಗನೆಯರಾಗೆಯುಂ ಮತ್ತಮಂತುತ್ಸವಾರ್ಥದಿಂ ಬಂದಲ್ಲಲ್ಲಿ ನೆರೆದು ಬಗೆಗೊಳ್ವ ಬಗೆವಗೆಯ ಪಾಡುಗಳಂ ಪಾಡುತ್ತುಂ ವೀಣಾವೇಣುಮೃದಂಗಾದಿವಾದ್ಯಂಗಳಂ ಬಾಜಿಸುತ್ತುಮಿರ್ಪ್ಪ ಗಾಯಕವಾದ ಕಜನಂಗಳೆ ಗಂಧರ್ವರುಂ ಕಿನ್ನರರುಮಾಗೆಯುಂ ಮಹೋತ್ಸವಾರ್ಥವು

ಪಾರಧನರಾಶಿಗಳಂ ಬೀಯಂಗೆಯ್ವ ಧನಾಧ್ಯಕ್ಷರೆ ನೈಕಯುಕ್ತಾಧಿಪರಾ
ಗೆಯುಂ ಲೋಕಪಾಲನತತ್ಪರನುಂ ಸರ್ವಭೂತಹಿತಾಶಂಸಿಯುಂ ಸಕಲಕಲ್ಯಾ
ಣಗುಣಶಾಲಿಯುಮಪ್ಪ ಮಹಾರಾಜಕೃಷ್ಣರಾಜೇಂದ್ರನೆ ಮಹೇಂದ್ರನಾಗೆ
ಯುಂ ನೋಡಿದೊಡೆ ಮಹಿಯೊಳಿದೆ ದಿಟಂ ಸುರಪುರಮೆನಿಸಿ ರಾಜಿಸುತಿರ್ದು
ದಂತುಮಲ್ಲದೆ ॥೪೭॥

ವೃ ॥ ಏನುತಾಲಂಕೃತಿಶಾಲಿಪೌರಜನಗೇಹಶ್ರೇಣಿಯಿಂ ತುಂಗಕೇ |
ತನಸಂದಾಸಿತಚಿತ್ರತೋರಣವಿರಾಜದ್ರಾಜಮಾರ್ಗಂಗಳಿಂ ||
ಮನವೊಲ್ದುತ್ಸವಕಾರ್ಯಸಿದ್ಧಿಗೆಡೆಯಾಡುತ್ತಿರ್ಪನೇಕಾಧಿಕೃ |
ಜ್ಜನದಿಂದಾಗಳದೇಂ ವಿರಾಜಿಸಿತೊ ಸೋಡಲ್ಕಾಪುರಂ ಶ್ರೀಕರಂ ||೪೮||

ಮತ್ತಂ,

ವಿಳಸದ್ಭೂಷಣಮಂ ನವಾಂಬರಮನಂತುತ್ಸಾಹದಿಂದಾಂತು ಕ |
ಣ್ಗೊಳಿಸುತ್ತಿರ್ಪ ಜನಂಗಳಿಂ ಪರಿಮಳದ್ರವ್ಯಂಗಳಾಮೋದಮಂ ||
ತಳೆದಿರ್ಪೆಲ್ಲೆಡೆಯಿಂದಮೆಲ್ಲಿಯುಮನೇಕಾತೋದ್ಯಹೃದ್ಯಸ್ವನಂ |
ಗಳಿನಂದೇನಿಸೆದತ್ತೊ ಮಂಗಳಮಯಂ ತಾನಾಗಿ ತತ್ಪತ್ತನಂ ||೪೯|

ಮತ್ತಂ,

ಕಂ ॥ ಅವಿರತಮುಂ ಬಾಲಸ್ತ್ರೀ |
ಸ್ಥವಿರಾಸ್ತತಜನಸಮೂಹವಿಂ ಸವಿಡಂಗಳ್ ||
ಪ್ರವಿತತರಾಜಪಥಂಗ |
ಳ್ತವೆ ಮೊರೆಯುತ್ತಿರ್ದುವಲ್ಲಿ ವಾರಿಧಿಗಳ್ವೋಲ್ ||೫೦||

ಮತ್ತಮಾಗಳ್,

ಕಂ ॥ ಜನಪತಿಯನುಶಾಸನದಿಂ |
ದನುಗೊಳಿಸಲ್ಸಿಂಗರಂಗೊಳಿಸಿದ ಜಗಸ್ಮೋ ||
ಹನಸೌಧಮನಧಿಕೃತಜನ |
ರನುಪಮಮದುನೈಜಯಂತಕಾಯುತ್ಸವಮಾನಂ ||೫೧||

ಆಗಳಾರಾಜಧಾನಿಯೊಳ್,

ವೃ ॥ ಬರುಬರುತಿರ್ದ ಭೂಮಿಪರ ಮನ್ನಣೆಗಪ್ಪ ಶತಘ್ನಿಕಾರವಂ |
ತರತರದಿಂದೆ ಬಪ್ಪ ಚತುರಂಗಬಲಂಗಳ ಕಾಹಳೀರವಂ ||

ನಿರುಕಿಸಲಾಮಹೋತ್ಸವಮನೆಯ್ತರುತಿರ್ಪ ಜನಂಗಳಂ ಕರಂ |
ಬರಿಸುತುಮಿರ್ಪ ಧೂಮರಥದುದ್ಧ್ವನಿ ಕೇಳಿಸುತಿರ್ದುದಾವಗಂ ||೫೨||

||ವ|| ಇಂತು ಮಹೋತ್ಸವಶುಭಸನ್ನಾಹಂ ಮೆರೆಯುತ್ತಿರ್ಪಿನಮಾ ಮಹಾರಾಜದಂಪತಿಗಳ್ವಿವಾಹಮಂಗಳಂ ನಾಡಿದೆಂಬಂದಿನ ಪೊಳ್ತಡಮೆ ಕುಮಾರನಪ್ಪ ಯುವರಾಜನೊಡನೆ ಸುಮುಹೂರ್ತದೊಳ್ಮಂಗಳಮಜ್ಜನಂ ಬೊಕ್ಕು ಕನಕಾಂಬರಮಣಿಭೂಷಣಾದಿಗಳಿಂದಲಂಕೃತರಾಗಿ ಕುಲದೇವತೆಯಂ ಕಲ್ಯಾಣಮಂ ಪ್ರಾರ್ಥಿಸಿ ಪೂರ್ವಾಚಾರಾನುಸಾರದಿಂ ಕುಲಗುರುಶ್ರೀ ಬ್ರಹ್ಮತಂತ್ರಪರಕಾಲಯತೀಂದ್ರರಂ ರಾಜಮರ್ಯಾದೆಯಿಂದರಮನೆಗೆ ಬರಿಸಿ ಭಕ್ತಿಯಿಂದೆರಗಿ ಕನಕಪುಷ್ಪಾದಿಗಳಿಂ ಪಾದಪೂಜೆಯುಂ ಮಾಡಿ ಯುವರಾಜನ ಪರಿಣಯಮಹೋತ್ಸಕ್ಕವರಭ್ಯನುಜ್ಞೆಯುಂ ಪಡೆದ ಸಮನಂತರದೊಳ್ಪುರೋಹಿತಾದಿವೈದಿಕಜನಂ ಸನ್ನಿಹಿತಮಾಗಿರೆ ನಾಂದೀಗ್ರಹಾರಾಧನಾದಿಶುಭಕರ್ಮಂಗಳಂ ನಿರ್ವರ್ತಿಸುವುದುಂ ||೫೩||

ಕಂ || ಅಂದು ಮೊದಲಾಗಲೂರೂ |
ರಿಂದೆಯ್ತಂದಿರ್ದನೇಕಲಕ್ಷಜನಂ ರಾ ||
ಜೇಂದುವಿನವೃತಣದೆ ಮಹಾ |
ನಂದಂಬಡುತೆಯ್ದೆ ಪೊಗಳ್ದುದಾವರ್ಷ್ಮನಮಂ ||೫೪||

||ವ|| ಮರುದಿವಸಂ ಮುಸಲಾರಾಜಂ ತಸ್ಮನಸಿವೆರಸು ಮಾತೃಶ್ರೀಯರ ಡಿಗೆರಗಿ ಹರಕೆಯಂ ಕಯ್ಕೊಂಡು ಕಲ್ಯಾಣವಂಟಪಕ್ಕೆ ಸಾರ್ತಂದು ವೈದಿಕಲೌಕಿಕಸಮಾಜಿಕರೆಲ್ಲರುಂ ತಮ್ತಮ್ಮ ಸಮುಚಿತಸ್ಥಾನಂಗಳೊಳ್ತರತರದಿಂ ಸಾಲ್ಗೊಂಡು ಕುಳ್ಳಿರೆಯುಂ ಬಹುವಿಧಮಂಗಳವಾದ್ಯಕೋಲಾಹಲಂ ದೆಸೆದೆಸೆಯೊಳ್ಮೊಳಗೆಯುಂ ನಿಜಾನುಜಂಗೆ ಕಂಠೀರವನರಸಿಂಹರಾಜಂಗೆ ವಿಧಿವಿಹಿತಪ್ರಕಾರದಿಂದುಪನಯನಸಂಸ್ಕಾರಮುಂ ಬಳೆಯಿಸಲೊಡಂ ||೫೫||

ಕಂ || ಉಪನೀತನಾದ ತದ್ಯುವ |
ನೃಪನಾತ್ತಕ್ಷಾತ್ರತೇಜನತಿದುರ್ಧರ್ಷಾ ||
ನುಪಮಾನಶಕ್ತಿಯಂ ಪಡೆ |
ದಪರನುಮಾತನಯನೆಂಬಿನಂ ನೆರೆ ಮೆರೆದಂ ||೫೬||

॥ವ॥ ಇಂತು ಪನೆಯನಸಂಸ್ಕಾರಂ ಒಳೆದ ಬಳಿಯುಂ ಸಮಗ್ರನಿಜ ತೇಜಃಪ್ರಾಜಿಪರಾಜಿತಗ್ರಹರಾಜನಾಯುವರಾಜಂ ಮಹೋತ್ಸವದಿಂ ಕಾಶೀ ಯಾತ್ರೆಗರಮನೆಯಂ ಪೊರಮಟ್ಟು ಪೊಳಲ ರಾಯವೀದಿಯೊಳ್ನಡೆತರುತ್ತಿರ ಲಾತನಂ ಕನ್ಯಾಜನಕಂ ದೇವರಾಜಸಿದಿರೆವಂದು ತಡೆದಡಿಗೆರಗಿ ತನ್ನಯ ಕನ್ನೆಯುಂ ಕಯ್ಕೊಳವೇಳ್ಕಮೆಂದೆರೆದು ಫಲಮುಂ ಕಯ್ಗಾವುದುಮದರ್ಕೆ ಕಟ್ಟಳ್ಕರಿಂದೊಪ್ಪುಗೊಟ್ಟು ಯುವರಾಜನಲ್ಲಿಂ ಮರಲ್ದೈದೆಯರಾರತಿಯ ನೆತ್ತಿ ಶುಭಾಶಂಸನಂಗೆಯ್ಯಲಾಹರಕೆಯುಂ ಕಯ್ಕೊಂಡರಮನೆಯುಂ ಪುಗು ತಂದು ಸಾಯಂತನಸಂಧ್ಯಾನಿಯಮಂಗಳಂ ನಿರ್ವರ್ತಿಸುವುದುಂ ॥೫೭॥

ಕಂ ॥ ಇರುಳದು ತಾಂ ಕಳೆಯಲ್ಸಾ ।
ರ್ತರೆ ಮರುದೆವಸಂ ಪ್ರಭಾಕರಂ ತದ್ಯುವಭೂ ॥
ವರನ ವಿವಾಹೋತ್ಸವಮುಂ ।
ನಿರುಕಿಸಲೆನಲುದಯಶೈಲಶೃಂಗವನಡರ್ದಂ ॥೫೮॥

॥ವ॥ ಆಗಳಾಯುವರಾಜಂ ಮುಂಗಳಮಜ್ಜನಂಜೊಕ್ಕು ಪೀತಾಂಬರ ಮನುಟ್ಟು ಲಲಾಟಪಟ್ಟಕ್ಕೆ ಲೋಹಿತಚಂದನತಿಲಕಮನಂದಂಗೊಳಿಸಿ ಮಣಿ ಮಕುಟಾಂಗದ ಕಟಿಕಾಂಚಳೀಯಕಹಾರಾದಿಭೂಷಣಂಗಳಿಂ ಭೂಷಿತಾಂಗ ನಾಗಿ ಮತಂಗಜಮನೇರಿ ನಾನಾವಿಧವುಂಗಳವಾದ್ಯಂಗಳ ಬ್ಬರದುಬ್ಬರಂ ದೆಸೆ ದೀವೆ ಬಂಧುಮಿತ್ರಾಮಾತ್ಯಪ್ರಮುಖಸಿಖಿಲಪರಿವಾರಂಬೆರಸು ನಿರತಿಶಯ ಮಹೋತ್ಸವದಿಂದರಮನೆಯಂ ಪೊರಮಟ್ಟು ಕಟ್ಟಳ್ಕರಿಂ ಜಗನ್ಮೋಹನವಾ ಸಾದಕ್ಕೆ ಬಿಜಯಂಗೆಯ್ದಾನೆಯಿಂದಿಳಿದು, ಒಂಬೆಡೆಯೊಳ್ನಿಜನಿಜದೇಶಾನು ಗುಣಮಪ್ಪ ವಸ್ತ್ರಭೂಷಣಾಲಂಕಾರದಿಂದೊಪ್ಪುವ ಮಾನವೇಂದ್ರರಿಂದೆಯುಂ ರಾಜಬಂಧುಗಳಿಂದೆಯುಂ ರಾಜಭಾರಿಗಳಿಂದೆಯುಂ ಪೆರತೊಂದೆಡೆಯೊಳ್ವೀ ದವೇದಾಂಗಪಾರಂಗತರಪ್ಪ ವೈದಿಕಭೂಸುರರಿಂದೆಯುಂ ಮತ್ತೊಂದೆಡೆಯೊ ಳ್ನಿರವದ್ಯವಿದ್ಯಾನಿಧಿಗಳಪ್ಪ ವಿಬುಧೋತ್ತಮರಿಂದೆಯುಂ ಮತ್ತವೊಂದೆಡೆ ಯೊಳ್ಮಂತ್ರಿಸಜಿವಾದಿಲೌಕಿಕಾಧಿಕಾರಿಗಳಿಂದೆಯುಮಿನ್ನೊಂದೆಡೆಯೊಳ್ನಾಡಿಗ ರಿಂದೆಯುಂ ಪೌರಮುಖ್ಯರಿಂದೆಯುಂ ಮೇಲುಪ್ಪರಿಗೆಯ ಬಡಗಣ ನಿಟ್ಟನೊಂ ದೆಡೆಯೊಳ್ಭರತಚಕ್ರವರ್ತಿ ಪ್ರತಿನಿಧಿಯುಂಚೆನ್ನಪುರೀಜನಪದಾಧೀಶ್ವರನುಂ ಸಕುಟುಂಬಪರಿವಾರನುಮಪ್ಪ ಲಾಲಿಯೆಂಬಾಂಗ್ಲೇಯಪ್ರಭುವರನಿಂದೆಯುಂ

ಮುತ್ತಮಲ್ಲಿಪಲವೆಡೆಯೊಳ್ಪೌರಮುಖ್ಯಾಂಗನೆಯರಿಂದೆಯುಮುಂತು ಮೇಲು ಪ್ಪರಿಗೆಯ ತೆಂಕಣ ಸಿಟ್ಟನೊಳ್ಪೊಳೆವ ಪೊಂದೆರೆಯ ಮರೆಯೊಳಂತಃಪುರ ಪುರಂಧ್ರಿಯರಿಂದೆಯುಂ ನೆರೆಮೆರೆವ ವಿವಿಧಪರಿಮಳದ್ರವ್ಯಾವೋದಕರಂಡಕ ಮೆನಿಸಿದ ವಿವಾಹಮಂಡಪಕ್ಕೆ ಗಜರಾಜಗಮನದಿಂ ನಡೆತಂದು ವೇದಿಕಾಮ ಧ್ಯದೊಳ್ಶೋಭಿಸುವ ಭದ್ರಪೀಠದೊಳ್ಕುಂಡಿಸಿದ ಸಮನಂತರದೊಳ್ದೇವರಾ ಜಂ ತನ್ನರಸಿಯೊಡನೆ ವಿಧಿವಿಹಿತಪ್ರಕಾರದಿಂ ಸನ್ನಿಹಿತನಾಗಿರ್ದಿನೆಗಂ ॥೫೯॥

ಕಂ ॥ ಮಂಗಳಮಜ್ಜನಮಾಗ ।
ಲ್ಸಿಂಗರಗೊಂಡುಚಿತರೀತಿಯಿಂ ನಿಜಪತಿಯಿಂ ॥
ಸಂಗಡಿಸಿ ತದ್ವಿವಾಹಸ ।
ಭಾಂಗಣಕೈತಂದನೊಲ್ದು ಕೃಷ್ಣಮಹೀಂದ್ರಂ ॥೬೦॥

ವ॥ ಇಂತೆಯ್ತಂದು ಮಹಾರಾಜಂ ರಾಜಮರ್ಯಾದಾನುಸಾರದಿಂ ವಂದನಂ ಗೆಯ್ದ ಸಾಮಾಜಿಕರಂ ಸಮುಚಿತಕ್ರಮದಿಂ ಕಟಾಕ್ಷಿಸಿ ಮನ್ನಣೆಗೆಯ್ದು ಕನ್ಯಾಪಿತರಂ ದೇವರಾಜಂ ವಿನಯದಿಂದೆರಗಿ ಸಮರ್ಪಿಸಿದೊಪ್ಪುವೀಳಯ ಮಂ ಕಯ್ಕೊಂಡು ತಾನುಮಾತಂಗಮುಚಿತಪ್ರಕಾರದಿಂದೊಪ್ಪುವೀಳಯಂ ಗೊಟ್ಟ ಸಮನಂತರದೊಳ್ಸನ್ನಿಹಿತಂ ಪುರೋಹಿತಂ ಸ್ವಸ್ತಿವಾಚನಪೂರ್ವಕಂ ಮಧುಪರ್ಕಾದಿಶುಭಕರ್ಮಂಗಳಂ ಬಳೆಯಿಸಲೊಡಂ ನಿಖಿಲಸಾಮಾಜಿಕರು ಮುಂತಃಪುರಸೀಮಂತಿನಿಯರುಂ ಸೀಡುಂ ಕುತೂಹಲದಿಂ ನಿಜಾಗಮನಮನೆ ಪಾರುತ್ತಿರೆ ಸಖೀಜನವೊಲ್ದೆಸಗಿದ ಮಂಗಳಾಲಂಕಾರದಿಂ ಮಂಗಳದೇವತೆ ಯಂತೆ ಕಣ್ಗೊಳಿಸುತ್ತೆ ಕಾತ್ಯಾಯನಿಯನಾರಾಧಿಸಿದ ಕನ್ಯಾಮಣಿ ॥೬೧॥

ಕಂ ॥ ನುತರತ್ನಾಭರಣವಿರಾ ।
ಜಿತೆ ಚೆಲ್ವಾಜಂಬೆಯೊಲ್ದು ಮೆಲ್ನಡೆಯಿಂ ಪು ॥
ಷ್ಪಿತಜಂಗಮಕಲ್ಪಲತಾ ।
ಕೃತಿಯಿಂದೆ ವಿವಾಹಮಂಡಪಕೆ ನಡೆತಂದಳ್ ॥೬೨॥

॥ವ॥ ಅಂತು ನಡೆತಂದು ಕಲ್ಯಾಣಪೀಠದೊಳ್ನಿಂದು ಪೊಂದೆರೆಮರೆ ಯೊಳ್ಕ್ರಮದೋರ್ದೆಳನಾಣಿಂ ತಲೆವಾಗಿ ಸಮುಲ್ಲಸಿತವದನದಿಂ ಪರಿಫುಲ್ಲನವ ತಾಮರಸಮಂ ಪರಿಭವಿಸುತ್ತಿರ್ಪಿನಂ ಪುರೋಹಿತಂ ಮಹಾಸಂಕಲ್ಪಮುಂ ಪೇಳೆ ಕಲ್ಯಾಣವೇದಿಕಾಪರಿಸರದೊಳ್ಪಲವುಂ ರಜತಮಯಸ್ತಂಭಂಗಳ ದೀ

ಪಂಗಳುಂ ಮೇಗೆಡೆಯೊಳ್ತಗುವಿಟ್ಟರ್ದ ಪಲವುಂತೆರದ ಯಂತ್ರದೀಪಂಗಳುಂ ದೇದೀಪ್ಯಮಾನಂಗಳಾಗಿರೆ ॥೬೩॥

ವೃ ॥ ವಿವಿಧಮನೋಜ್ಞಸುಸ್ವರವಿರಾಜಿತಮಂಗಳವಾದ್ಯನಿಕುಲಾ ।
ರವಮುವಿರಾಮದಿಂದೆ ದೆಸೆದೀವೆ ಸಮಸ್ತಸಭಾಜನಂ ನಿಮೇ ॥
ಷವನುಳಿದಕ್ಷಿಯಿಂ ಮಿಗೆ ಕುತೂಹಲಪೂರ್ಣಿಸೆ ದೇವರಾಜನಾ ।
ಯುವಜನಸಂಗೆ ಧಾರೆಯೆರೆದಿತ್ತನಲಂಪಿನೊಳಾತ್ಮಜಾತೆಯಂ ॥೬೪॥

॥ವ॥ ಬಳಿಕೆ ವಿವಾಹಾಂಗಮಪ್ಪಕ್ಷತಾರೋಪಣಮನಾವಧೂವರರ ತ್ಯುತ್ಸಾಹದಿಂ ನಿರ್ವರ್ತಿಸಿ ॥೬೫॥

ಕಂ ॥ ಓರೊರ್ವರ್ತಮ್ಮನ್ಮ ಮ ।
ನೋರಮುಕಂಧರದೊಳಿರ್ದ ಸುಮಮಾಲೆಯನೊ ॥
ಲ್ದೋರೊರ್ವರ ಕೊರಲೊಳ್ಕರ ।
ಸಾರಸವಿ ಸ್ಮೇರಪದನಂತಾಗಪ್ಪಿಸಿದರ್ ॥೬೬॥

॥ವ॥ ಅಂತಾಮಹೋತ್ಸವಮಂ ನಿಟ್ಟಿಸಿ ಕಪ್ಪುರೆಗುಟ್ಟುತ್ತಾ ಸಭಾಸದರೆಲ್ಲರುಂ ನೆರೆ ಸಂತಸಂಬಡ ತ್ತಿರ್ಪಾಗಳಾರಾಜದಂಪತಿಗಳ ಮುಂದೊಂದೆಡೆಯೊಳ್ ॥೬೭॥

ವೃ ॥ ರಸವದ್ಗೀತದೆ ಭಾವಬೋಧನಜಣಾನೇಕಾನುಭಾವಂಗಳಿಂ ।
ದಸದೃಕ್ಪಾಂಗಿಕಸಾತ್ವಿಕಾಭಿನಯಸಂಪತ್ತಿಂ ತಟಿದ್ವಲ್ಲಿಯಂ ॥
ತೆಸೆಯುತ್ತಿರ್ಪ್ಪಿನೆಗಂ ಕನತ್ಕನಕಸಚ್ಛಾಯಂ ಜಲನ್ಮೂರ್ತಿ ನ ।
ರ್ತಿಸಿದರ್ವೇಸೆಯರರ್ವರೊಪ್ಪೆ ಸಭೆಯೆಲ್ಲಂ ಚಿತ್ರಿತಾಕಾರದಿಂ ॥೬೮॥

ಮತ್ತಮೊಂದೆಡೆಯೊಳ್,

ಕಡುಜಿಲ್ವಿಂ ನವಯೌವನಾತಿಶಯದಿಂದನ್ಯೋನ್ಯಸಾದೃಶ್ಯಮಂ ।
ಪಡೆದರ್ಭಿತಲಮೆಯ್ದಿದರ್ಜ್ಜರಿಯರೆಂಬಂತೊಪ್ಪುವರ್ವೇಷದಿಂ ॥
ದೆಡಗಯ್ಯೊಳ್ಜಡೆನೇಣನಾಂತು ಬಲಗಯ್ಯೊಳ್ತಾಳ್ದು ಪೊಂಗೋಲನೇಂ ।
ಜಡೆಕೋಲಾಟಮನೆಣ್ಬರಾಡಿದರೊ ನಾನಾಭೇದದಿಂ ವೇಸೆಯರ್ ॥೬೯॥

ಪೆರತೊಂದೆಡೆಯೊಳ್,

ಕಂ ॥ ವೈಣಿಕವರನೊರ್ವಂ ಕಡು ।
ಜ್ಞಾಣಿಂದಂ ಸಾರವೀಣೆಯಂ ಬಾಜಿಸಲ ॥

ಕ್ಷೀಣಾನಂದಾಂಭೋನಿಧಿ ।
ವೇಣಿಯೊಳೇನಾಳುತೇಳುತರ್ಪರೊ ಸಭ್ಯರ್ ॥೬೦॥

ಬೇರೊಂದೆಡೆಯೊಳ್,

ಕಂ ॥ ವಾದಿಸುತೆ ವೀಣೆಯಂ ನು ।
ಸ್ವಾದಮೆನಲ್ಪಾಡೆ ವೈಣಿಕಾಗ್ರಣಿಯೊರ್ವಂ ॥
ಸಾದರಮಾಲಿಸುತಾಸಭೆ ।
ಯಾದಂ ತಲೆದೂಗುತೆಯ್ದುದುದು ಮೆಯ್ಮರವಂ ॥೬೧॥

ಅಂತಿನ್ನೊಂದೆಡೆಯೊಳ್,

ಕಂ ॥ ಗಾನವಿಚಕ್ಷಣನೊರ್ವನ ।
ನೂನಸ್ವರಪುಷ್ಟಿಯಿಂ ಪಳಂಬದ್ಭುತಮ ॥
ಧ್ಯಾನುಕ್ರಮದಿಂ ಪಾಡ ।
ಲ್ಕಾನೃಪಸಭೆಯಿರ್ಪುದೋ ವಿಂವಬ್ಬೆನಸುಂ ॥೬೨॥

ಇನ್ನುವೊಂದೆಡೆಯೊಳ್,

ಕಂ ॥ ಕಾರ್ಣಾಟಿಕಹಾಣಾದಿಮ ।
ಕರ್ಣಾಮೃತಪೂರವಾದ್ಯರವಮಾಸಭೆಯೊಳ್ ॥
ಪೂರ್ಣಂ ತಾನಾಗಿರಲೇಂ ।
ವರ್ಣಿಪೆನಾಪಥವಾದ್ಯಕೋಲಾಹಲಮುಂ ॥೬೩॥

ವ॥ ಆಗಳಾವಧೂವರರ್ಗ್ಗೆ ವೈದಿಕಲೋಕಂ ಮುಂಗಳಾಶೀರ್ವಾದುಗೆಯ್ವುದುಂ ಪುರೋಹಿತಂ ಪುರೋವರ್ತ್ತಿಯಾಗಿ ಜಗದ್ಗುರುಶ್ರೀಶೃಂಗಗಿರಿಯಂತೀಂದ್ರಾದಿತತ್ತನ್ಮತಗುರುವರೇಣ್ಯರತ್ನಂದೆಯುಂ ಶ್ರೀಭರತಖಂಡಚಕ್ರವರ್ತ್ತಿಯತ್ತಣಿಂದೆಯುಂ ಬಡೋದಾಮಹಾರಾಜಾದಿಮಹಾರಾಜರತ್ನಣಿಂದೆಯುಂ ಕಾಂತರಾಜಂ ಮುಂತಪ್ಪರಸುಗಳತ್ತಣಿಂದೆಯುಂ ಮಹಾಮಾತ್ಯನಪ್ಪಾನಂದರಾಯನತ್ತಣಿಂದೆಯುಂ ಬಂದಿದ್ದನರ್ಘ್ಯರತ್ನಾಭರಣಕನಕಾಂಬರಾದಿಗಳ ಮುಯ್ಗಳನವರವರ ಪೆಸರಂ ನುಡಿದು ಸಮರ್ಪಿಸಿದೊಡನೆ ॥೬೪॥

ಕಂ ॥ ಸರಸಿಜಮನಲೆವ ವಧುವಿನ ।
ಕರಮಂ ಕರದಿಂದೆ ಪಿಡಿದು ಮೆಲ್ನಡೆಯಿಂದಾ ॥
ವರನುಜ್ವಲಿಸುವ ವೈಶ್ವಾ ।
ನರನಂ ಬಲವಂದನೊಲ್ದು ನೋಳ್ಪಿನಮೆಲ್ಲರ್ ॥೬೫॥

ವ॥ ಅನಂತರಂ ಮಹಾರಾಜಂ ಶ್ರೀಕೃಷ್ಣರಾಜಂ ಸಕಲಸಭಾಸದರು ಮನವರವರ ತಕ್ಕುಮೆಯುಂ ವಿಾರದೆ ರಾಜಮರ್ಯಾದಾನುಸಾರದಿಂ ಪುಷ್ಪ ಹಾರತಾಂಬೂಲಾದಿಗಳನಿತ್ತು ಮನ್ನಿಸುವುದುಂ ॥೭೬॥

ಕಂ ॥ ಅನವದ್ಯರೂಪಕುಲಯೌ |
ವನಗುಣಸಂಪದದೆ ರಾಜದಾಂಪತ್ಯಮಿದಂ ॥
ತನುರೂಪಮಾದುದೆಂದಾ |
ಜನಂಗಳೀಂ ನೋಡಿ ನೋಡಿ ಕೊಂಡಾಡಿದರೋ ॥೭೭॥

ವ॥ ಅಂತಪ್ಪ ಮಹೋತ್ಸವದೊಳಾರಾಜಧಾನಿಯೊಳೆಲ್ಲೆಲ್ಲಿಯುಂ ಮಹಾರಾಜನೆಸಗಿರ್ದ ಕಟ್ಟಳೆಗಳಂ ॥೭೮॥

ಕಂ ॥ ಎಣಿಕೆಯೆ ತಾನಿಲ್ಲದ ದ |
ಕ್ಷಿಣೆಯುಂ ಮೃಷ್ಟಾನ್ನಭಕ್ಷ್ಯಭೋಜ್ಯಾಶನದಿಂ ॥
ತಣಿದರಸಂಖ್ಯಾತಬ್ರಾ |
ಹ್ಮಣರುಂ ದೀನಾಂಧಬಧಿರಕುಬ್ಜಾದಿಗಳುಂ ॥೭೯॥

ವ॥ ಬಳಿಯುವಮಾರಾಜದಂಪತಿಗಳಾಚಾರಾನುಸಾರಮಪ್ಪುತ್ಸವಪರಂಪರೆಯುಂ ಬಿನದಿಸುತ್ತಿರ್ದಯ್ದನೆಯುದಿನದೊಳ್ಮಹಾರಾಜಂ ಸನ್ನಿಹಿತನಾಗಿರೆ ॥೮೦

ವೃ ॥ ನೆರೆಯೆ ವಿವಾಹಮಂಟಪದೆ ವೈದಿಕಲೌಕಿಕಸಭ್ಯರೆಲ್ಲರುಂ |
ನಿರುಪಮವಸ್ತ್ರಭೂಷಣವಿರಾಜಿತಸುಂದರಗಾತ್ರರಾಗಿ ಮಂ ॥
ಥರಗತಿಯಿಂದೆ ಬಂದೊಡನೆ ಮಂಡಿಸಿ ಮಂಗಳವೇದಿಮಧ್ಯದೊ |
ಳ್ಪಿರಿಯೊದವಿಂದೆ ನಾಕಬಲಿಯುತ್ಸವಮುಂಮೆರೆದರ್ವಿಧಾನದಿಂ ॥೮೧॥

ವ॥ ಅಲ್ಲಿಂಬಳಿಯವೊಂದುದಿವಸಂ ಸಂಧ್ಯಾಸಮಯದೊಳಾವಧೂವರರಂ ರಾಜಧಾನಿಯೊಳುತ್ಸವಮೆರೆಯಿಸಿ ಸುಮೂರ್ತದೊಳರಮನೆಗೆ ವಧೂಪ್ರವೇಶಮಂಗಳಮಂ ಬಳೆಯಿಸಲ್ಕೆ ಸಂಕಲ್ಪಿಸಿದ ಮಹಾರಾಜಂ ಬೆಸಸಿತ್ತಂದಕ್ಕರಮನೆಯ ಕಾರ್ಯಾಧ್ಯಕ್ಷಂ ತತ್ತದಧಿಕಾರಿಗಳಿಂದದಕ್ಕೆ ತಕ್ಕಂತುಸಕಲಶುಭಸಂಭಾರಂಗಳಂಸಜ್ಜೀಕರಿಸಲಾಮಹೋತ್ಸವಮನತ್ಯುತ್ಸುಕರಾಗಿ ನಿರೀಕ್ಷಣೆಗೆಯ್ತಿರ್ದ ಲಕ್ಷೋಪಲಕ್ಷಪೌರಜಾನಪದಜನಂಗಳ ಶಾಪವಶದಿಂದೆನಲಂದಿನ ಪಗಲ್ಬೀಯಲೊಡಂ ಸಂಧ್ಯಾಸಮಯದೊಳಾರಾಜಧಾನಿಯೊಳ್ ॥೮೨॥

ವೃ ॥ ವಿಳಸತ್ತೋರಣರಾಜಿರಾಜಿತಸಮುತ್ತುಂಗಧ್ವಜಶ್ರೇಣಿಯಿಂ ।
ಪೊಳೆಯುತ್ತಿರ್ಪ್ಪಗಣೇಯದೀಪಿಕೆಗಳಿಂ ಬಂದುತ್ಸವಾಲೋಕನ ॥
ಕ್ಕೆಳಸುತ್ತಿಟ್ಟಣಿಸಿರ್ಪ್ಪ ಸಂಖ್ಯಜನದಿಂದೆಲ್ಲೆಲ್ಲಿಯುಂ ಸಿಂಗರಂ ।
ಗೊಳಿಸಿಪ್ಪುರ್ವ್ವನ್ನತಹರ್ಮ್ಯಸಜ್ಜಿತಗಳಿನೇನೊಪ್ಪಿರ್ದುವೋಬೀದಿಗಳ್ ॥೮೩॥

ವ॥ ಆಗಳಾರಾಜದಂಪತಿಗಳಲಂಪಿನಿಂ ಸಿಂಗರಂಗೊಂಡು ಸಮುತ್ತುಂಗಮತುಂಗಜದ ಬೆಂಗಡೆಯೊಳಗಳವಡಿಸಿರ್ದ ವಿಚಿತ್ರತರಹರಣ್ಮಯಮುಂಟಪದೊಳ್ಮಂಡಿಸಿ ಬೇರೊಂದು ಸನ್ನುದ್ದಂಡವೇತಂಡವನಡರ್ದ ಮಹಾರಾಜನೊಡವರುತ್ತಿರೆಯುಂ ಚತುರಂಗಬಲಂ ಮುಂದುಂ ಪಿಂದುಂ ಬಹುಳದೂರಂಬರಂ ಸೇಣಿಗೊಂಡು ಮೆಲ್ಲಮೆಲ್ಲನೆಯುದ್ದತಿರೆಯುಂ ನಾನಾವಿಧಮಂಗಳವಾದ್ಯಂಗಳಕಲಕಲಮೆಂಟುಂದೆಸೆಗಳೊಳಿಮ್ಮಳಮೊಳಗೆಯುಂ ವಂಗಡವಂಗಡಂಗೊಂಡು ಚೌಪಟಚೌಪಟದೊಳಂ ವಾರಾಂಗನೆಯುರತಿಮನೋಹರಮಪ್ಪಭಿನವನಾಟ್ಯಂಗಳಿಂ ನೋಟಕರ ಕಣ್ಮನಂಗಳನೆಳೆಯುತ್ತಿರೆಯುಂ ಮುಂಮುಂದೆ ಕಿಡಿದೋರಿ ಪೊತ್ತಿಸಿದ ಬಾಣಬಿರುಸುಗಳ್ತರುಲತಾದಿಗಳಾಕೃತಿಯಿಂದೆಯುಂ ಕೆದಕೆದರಿದ ಪೂಗಳಂದದಿಂದೆಯುಮೊಗ್ಗಾಗಿ ಮೂಡಿದ ತಾರಗೆಗಳ ಚಂದದಿಂದೆಯುಮಾದಮೆಸೆಯುತ್ತಿರೆಯುಮೆತ್ತೆತ್ತಲುಂ ಪತ್ತಿಸಿದನೇಕಲಕ್ಷದೀಪವಾಲೆಗಳ ನುಳ್ವೆಳಗು ಬೆಳ್ದಿಂಗಳಂತೆ ಕಣ್ಗೊಳಿಸುತ್ತಿರೆಯುಮುಲ್ಲಲ್ಲಿನಿರ್ಮಿಸಿದತಿವಿಚಿತ್ರಂಗಳಪ್ಪಕಾವಣಂಗಳೊಳ್ಪಾರಮುಖ್ಯರ್ನಿರತಿಶಯರಾಜಭಕ್ತಿಯಿಂದರ್ಪ್ಪಿಸಿದ ಕುಸುಮಹಾರಫಲತಾಂಬೂಲಂಗಳನೊಲ್ದು ಕಯ್ಕೊಳುತ್ತತಿಮಾತ್ರವೈಭವದಿಂ ರಾಯುವೀದಿಗಳೊಳುತ್ಸವಮೆರೆವಾಗಳ್ ॥೮೪॥

ವೃ ॥ ಯುವರಾಜದಂಪತಿಗಳಂದಿನೀಮಹೋ ।
ತ್ಸವಮಂ ವಿಲೋಕಿಸಿದ ತಮ್ಮ ಕಣ್ಗಳೇ ॥
ಭುವನಂಗಳೊಳ್ನಿಜದೆ ಕಣ್ಗಳೆಂದು ನೋ ।
ಡುವ ಲೋಕಮೊಲ್ದು ನುಡಿದತ್ತದೆಲ್ಲಿಯುಂ ॥೮೫॥

ವ॥ ಇಂತುತ್ಸವಮೆರೆದಾನೆಯಿಂದಿಳಿದರಮನೆಯಂಪುಗುತಂದಾಯುವರಾಜದಂಪತಿಗಳ್ಗೆ ಮುತ್ತೈದೆಯರಾರತಿಯನೆತ್ತಿ ಶುಭಮಂ ಪರಸಲಾಶುಭಮುಹೂರ್ತದೊಳ್ ॥೮೬॥

ಕಂ || ಯುವರಾಜನ ಕರಮಂ ಪಿಡಿ |
ದವಿರಳಮುದವಾಂತು ಭಾಗ್ಯದೇವತೆಯಂತಾ ||
ಯುವರಾಜ್ಞೀಮಣಿ ಜೆಲ್ವಂ |
ಬೆ ವಿಲಾಸದಿನಡಿಯನಿಟ್ಟಳಾಅರಮನೆಯೊಳ್ ||೮೭

ವ|| ಇಂತು ವಧೂಪ್ರವೇಶಮುಂ ತದಂಗನಿಖಿಲಶುಭಕರ್ಮಂಗಳುಂ ಬಳೆಯಲೊಡಂ ಮಹಾರಾಜನತ್ಯುತ್ಸಾಹದಿಂದಾಮಹೋತ್ಸವಕ್ಕೆ ದೇಶದೇಶದಿಂ ಬಂದಿರ್ದರಸುಗಳ್ಗಮಾಂಗ್ಲೇಯಪರಿವೃಢರ್ಗಂ ರಾಯಭಾರಿಗಳ್ಗಂ ಸಿರಿವಂತರ್ಗಂ ಪಂಡಿತೋತ್ತಂಸರ್ಗಮಿತರವೈದಿಕಲೌಕಿಕಪೌರಜಾನಪದಪ್ರಮುಖರ್ಗಮನುದಿನಮತ್ಯುದಾರಮಪ್ಪ ಸತ್ಕಾರಮುಮನನರ್ಘಮಣಿಭೂಷಣಾಂಕನಕಾಂಬರರಾಂಕವಾದಿಗಳ ಸನ್ಮಾನಮುಮುಂ ನೆಗಳ್ದೆಲ್ಲರಂ ಬೀಳ್ಕೊಟ್ಟ ಬಳಿಕ್ಕಮೊಂದುದಿವಸಂ ವಿವಾಹಮಹೋತ್ಸವಾಂಗಮಪ್ಪೋಕುಳಿಯಾಟವನನುಪಮವೈಭವದಿಂ ನಿರ್ವರ್ತಿಸಿದ ಸಮನಂತರದೊಳ್ಪಾರಜಾನಪದಜನಂಗಳಂದಂದು ನಿಜನಿಜಮನಸ್ಸಮುಲ್ಲಾಸದಿಂದಾಪರಿಣಯಮಹೋತ್ಸವಮಂ ರಾಜಸಭೆಯೊಳ್ಪರಿಪರಿಯಿಂದಭಿನಂದಿಸುತ್ತಿಪ್ಪಾಗಳಾಯುವರಾಜಕಂಠೀರವನರಸಿಂಹರಾಜನಂ ಪರಸಿದಸ್ಮದೀಯಪದ್ಯಂಗಳಿಂತೆನೆ ||೮೮||

ವೃ || ಸಿಂಹಾಸನಾಧಿಪತಿಕೃಷ್ಣನೃಪಾನುಜಾತ |
ಕಂಠೀರವೋಪಪದಭಾಜ್ಜರಸಿಂಹರಾಜ ||
ಆಶಾಸ್ಮಹೇಪರಿಣಯೇ ಜೆಲುವಾಂಬಿಕಾಯಾಃ |
ಶ್ರೇಯಾಂಸಿತೇ ಸ್ವಸದೃಶಾತ್ಮಜಸಂತತಿಂಚ ||೮೯||

ಸಂಪ್ರಾಪ್ತಸದ್ಗುರುಸುಶಿಕ್ಷಣಶಾಣಘರ್ಷಂ |
ಜೆಲ್ವಂಬಿಕಾವಿಮಲಕಾಂಚನಸನ್ನಿಬದ್ಧಮ್ ||
ಕಂಠೀರವೋಪಪದಭಾಜ್ಜರಸಿಂಹರಾಜ |
ರತ್ನಂ ಚಿರಂಜಯತು ಸರ್ವಜನಾಭಿನಂದ್ಯಮ್ ||೯೦||

ನಾಮ್ನಾ ನಕೇವಲಮಯಂ ಯುವರಾಣ್ಣೃಸಿಂಹಃ |
ಶೌರ್ಯೋಜ್ಜ್ವಯೇನಚ ನೃಸಿಂಹಇತಿ ಪ್ರತೀತ್ಯೈ ||
ಕಂಠೀರವೋಪಪದಭಾಗ್ಯುವರಾಜ ಏಷ |
ಜೀಯಾಚ್ಚಿರಾಯ ಜೆಲುವಾಂಬಿಕಯಾ ಸಮೇತಃ ||೯೧||

ಪಾಣಿಗ್ರಹೇದ್ರಿದುಹಿತರ್ಯನುರಾಗಪೂರ್ವಂ |
ಸ್ವಂ ಸತ್ರಪೇಣ ಕುತುಕೇನ ವಿಲೋಕಯಂತ್ಯಾವ್ ||
ಸ್ನಿಹ್ಯನ್ಮನಾಸ್ಸದೃಶದಂಪತಿಭಾವಭಾಜೋ |
ರೀಶಶ್ಯುಭಾನಿ ಯುವಯೋರ್ಯುವರಾಜ ದದ್ಯಾತ್ ||೯೭||
ಶಚ್ಯಾಮಹೇಂದ್ರಇವ ಶೈಲಜಯೇವಶಂಭುಃ |
ಶ್ರೀರಾಘವೋವಸಜಯೇವ ಹರಿಶ್ಚಿಯೇವ ||
ಜೆಲ್ವಂಬಯಾನುಪಮಸದ್ಗುಣಯಾ ಸಮೇತಃ |
ಸಂಪ್ರಾಪ್ತಸಂತತಿಸುಖೋ ಯುವರಾಜ ಜೀಯಾಃ ||೯೮||

ವ|| ಇಂತನುಜಾತಶ್ರೀಯುವರಾಜಕಂಠೀರವನರಸಿಂಹರಾಜಂಗೆ ವಿವಾಹಮಹೋತ್ಸವಂ ನಿರವಧಿಕವಿಭವದಿಂ ಬಳೆದ ಸಮನಂತರದೊಳ್ಮಹಾಮಾತ್ಯನಾನಂದರಾಯಂ ವಿಶ್ರಾಂತಿಸುಖಕ್ಕೆಳಸುವುದುಂ ಮಹಾರಾಜಂ ಶ್ರೀಕೃಷ್ಣರಾಜನಾಂಗ್ಲೇಯಾದಿನಾನಾವೇಶಸಂಚಾರಂಗೆಯ್ದು ತತ್ತದ್ರಾಜ್ಯಭಾರಂಗಳಭ್ಯುಚ್ಚ್ರಯಮುಂ ನೆರೆ ತಿಳಿದು ನಿರತಿಶಯವಿದ್ಯಾಬುದ್ಧಿಪ್ರಾಚುರ್ಯದಿಂ ನೆಗಳ್ದ ವಡೆದ ವಿಶ್ವೇಶ್ವರಯ್ಯನೆಂಬಧಿಕಾರಿಮುಖ್ಯನಂ ಮಹಾಮಾತ್ಯಪದವಿಯೊಳುಂ ಪ್ರಾಜ್ಞಪುಂಗವರಪ್ಪ ನಂಜುಂಡಯ್ಯ ಕಾಂತರಾಜನನುಪಮಂತ್ರಿಪದವಿಯೊಳುಂ ಕ್ಯಾಂಬಲೆಂಬಾಂಗ್ಲೇಯಾಧಿಕಾರಿಯುಂ ಮುನ್ನಿರ್ದಂತೆ ಸನ್ನಿಧಿಸಚಿವಾಧಿಕಾರದೊಳುಂ ಜೆಕ್ಕಂದು ತನ್ನೊಡನಾಂಗ್ಲೇಯವಿದ್ಯಾಭ್ಯಾಸಂಗೆಯ್ಯುತಿರ್ದ ವಿಜಾ ಮಹಮ್ಮದ್ ಇಸ್ಮಾಯಿಲೆಂಬ ಮಹಮ್ಮದೀಯಾಧಿಕಾರಿಯುಂ ಸನ್ನಿಹಿತಕಾರ್ಯದರ್ಶಿಪದದೊಳುಂ ರಾಮಕೃಷ್ಣರಾಯನಂ ಮುನ್ನಿರ್ದಂತರಮನೆಯ ಕಾರ್ಯಾಧ್ಯಕ್ಷಸ್ಥಾನದೊಳುಂ ಮುನ್ನಿರ್ದಾಸ್ಥಾನಕಾರ್ಯದರ್ಶಿಲಿಂಗರಾಜಸಸುಬುಂಧಿಯಪ್ಪ ಲಿಂಗರಾಜನನಾಸ್ಥಾನಕಾರ್ಯದರ್ಶಿಪದದೊಳುಂ ನಿರಿಸಿ ಕನ್ನಡನಾಡಂ ನೀಡುಮೇಳ್ಗೆಗೊಳಸಲ್ಕೆ ದೃಢಸಂಕಲ್ಪಂಗೆಯ್ದು ಸಂಪದಭ್ಯುದಯಸಮಾಜಮನ್ಯೋನ್ಯಸಹಾಯಸಂಘಂ ನ್ಯಾಯವಿಧಾಯಕಸಭೆ ಮುಂತಪ್ಪ ಪಲವುಂ ಸಂಘಂಗಳಂ ಕಲ್ಪಿಸಿ ರಾಜಧಾನಿಯೊಳ್ಸಕಲವಿದ್ಯಾನಿಲಯಮುಂ ಪೊಸತೆಸಲಾಗಿಸಿ ರಾಜಧಾನಿಯೊಳುಮುಪರಾಜಧಾನಿಯೊಳುಂ ತಲೆಯೂರ್ತಲೆಯೂರೊಳುಂ ಮಾಗಣಿಮಾಗಣಿಯೊಳುಂ ಪಳ್ಳಿಪಳ್ಳಿಯೊಳುಮಲ್ಲಲ್ಲಿಗೆ ತಕ್ಕಂತು ವಿದ್ಯಾಶಾಲೆಗಳನಿಂಬುಗೊಳಿಸುತ್ತುಮಲ್ಲಲ್ಲಿ ಕೆಲವೆಡೆಯೊಳ್ಪುಸ್ತಕಾಲಯಂಗಳಂ

ಸ್ಥಾಪಿಸುತ್ತುಮಲ್ಲಲ್ಲಿ ಪಲವೆಡೆಯೊಳ್ಯಲ್ಪಿಗಳಂ ಸಮುಜಿತಸನ್ಮಾನದಿಂ ಪ್ರೋತ್ಸಾಹಿಸಿ ಶಿಲ್ಪವುಂ ಪ್ರಜ್ಞುರಂಗೊಳಿಸುತ್ತುಂ ರಾಜಧಾನಿಗೆ ಕಿರಿದು ದೂರದೊಳಿಪ್ಪ ಕನ್ನಂಬಾಡಿಯೆಂಬೆಡೆಯೊಳ್ಪರಿವ ಕಾವೇರೀಮಹಾನದಿಗೆ ಬರಿಸದೊಳಪಾರಮಾಗಿ ಬಪ್ಪ ನೀರಂ ತಡೆದಾವಗವೊಂದೆತೆರದಿಂ ನೀರಂ ಪರಿಯಿಸಲನುವಾದ ರಚನಾವಿಶೇಷಂಗಳಂ ಪರ್ವತಾಕಾರಮಪ್ಪ ಕಟ್ಟೆಯೊಂದಂ ಕಟ್ಟಿಸುತ್ತುಂ ಪೊಂಗಣಿ ಮೊದಲಪಪ್ಪಾಕರಂಗಳನಾನೆಗಾಡು ಮೊದಲಪ್ಪ ಪೇರಡವಿಗಳಂ ರಕ್ಷಿಸುತ್ತುಂ ಭೋಂಕನೂರಿಂದೂರ್ಗೆ ಜನಂಗಳುಂ ಧಾನ್ಯಾದಿಗಳುಂ ಪೋಗಿವರಲ್ಕನುಕೂಲಮಾಗಿಪ್ಪಂತಲ್ಲಲ್ಲಿ ಪೊಗೆವಂಡಿಯ ಮಾರ್ಗಮುಂ ಪೊಸಪೊಸತೆನಲಾಗಿಸುತ್ತುಮಲ್ಲಲ್ಲಿ ಪೊಸಪೊಸತೆನೆ ಪೊಲಗರ್ದೆತೋಂಟಂಗಳಪ್ಪಂತು ನೆಲನಂ ಗೊತ್ತುಗೆಯ್ಯುತ್ತುಂ ಪ್ರಜೆಗಳಿಂದವರ ವರ ಸುಖಸಮೃದ್ಧಿಗೆ ತಕ್ಕಂತು ಧರ್ಮದಿಂ ಕರಮುಂ ತೆಗೆಯುತ್ತುಂ ಮತ್ತಮುಂದಂದಲ್ಲಲ್ಲಿ ನಡೆವ ಜಾತ್ರೆಗಳೊಳ್ಕೃಷಿಜೀವಿಗಳ್ಬೀಹಾರಕ್ಕೆ ತಪ್ಪಗೋಕುಲಂಗಳಂ ಪರಿಕಿಸಿ ಮೇಲಾದುವರ್ಗೆ ಸನ್ಮಾನಂಗೆಯ್ದವರಂ ಪ್ರೋತ್ಸಾಹಂಗೊಳಿಸಿ ಗೋಕುಲಮನೆಲ್ಲೆಲ್ಲಿಯುಂ ವೆರ್ಚಿಸುತ್ತುಮಾಸ್ತಿಕ್ಯದಿಂ ಜಾತಿಮತಾಚಾರಂಗಳಂ ಪುಪಾಲಿಸುತ್ತುಂ ದುಷ್ಟರಂ ಶಿಕ್ಷಿಸುತ್ತುಂ ಶಿಷ್ಟರಂ ರಕ್ಷಿಸುತ್ತುಮಲ್ಲಲ್ಲಿ ಗಡಿಗಡಿಯೊಳ್ದೇಶಕೋಶಾದಿಗಳಂ ರಕ್ಷಿಸಲ್ಕೆ ತಕ್ಕಂತು ಸೈನ್ಯಮುಂ ನೆಲೆಗೊಳಿಸುತ್ತುಂ ಪ್ರಜೆಗಳೆಲ್ಲರುಮಂ ಭೇದಮಿಲ್ಲದೆ ಸಾಜನ್ಯದಿಂಕಾಣುತ್ತುಮಾವಗವುಂಹಿತಚಿಂತಕರಪ್ಪಾಂಗ್ಲೇಯರೊಳ್ನೇಹಮುಂ ಬಳೆಯಿಸುತ್ತುಂ ಪ್ರಜೆಗಳಾರೋಗ್ಯಕ್ಕಂ ಮನಸ್ಸಮಾಧಾನಕ್ಕಂ ತಕ್ಕಂತು ಸುಖವಸತಿಗಳಂ ಕಲ್ಪಿಸಿ ನಗರನಗರಮುಂ ಸುಂದರಾಕಾರದಿಂ ವಿಸ್ತರಿಸುತ್ತುಂ ಪ್ರಜ್ಞೆಯುಂ ಕಾರ್ಯನಿರ್ವಹಣಶಕ್ತಿಯುಂ ರಾಜಭಕ್ತಿಯುಮೊಂದುಗೂಡಿಪ್ಪಧಿಕಾರಿಗಳನಧಿಕಾರಸ್ಥಾನಂಗಳೊಳ್ನಿಯೋಜಿಸುತ್ತುಂ ಸ್ವಾಯತ್ತಸಿದ್ಧಿಯಾದೊಡಂ ಕಾರ್ಯಾಕಾರ್ಯಂಗಳಂ ಮಂತ್ರಿಗಳೊಳ್ಚಿಂತಿಸಿ ಸರ್ವಸಮ್ಮತಮಾದರ್ಥಮನೆ ಕಟ್ಟುವಡೆಯಿಸುತ್ತುಮನುದಿನಮಿನಿಸುಮಲಸಿಲ್ಲದಧಿಕಾರಸ್ಥಾನಮನಲಂಕರಿಸುತ್ತುಮಧಿಕಾರಿಗಳ್ಗಂ ಸೇವಕರ್ಗಂ ನಿಯತಕಾಲಮಂ ಮೀರದೆ ವೇತನಮನೀಯುತ್ತುಮುಂದಂದುದೇಶದೇಶದಿಂ ಬಪ್ಪ ಬಿಜ್ಜವಳರಂ ಪರಿಕಿಸಿ ತಕ್ಕುಮೆಗೆ ತಕ್ಕಂತು ಧನಕನಕವಸ್ತ್ರಮಣಿಭೂಷಣಾದಿಗಳಂ ಸನ್ಮಾನಿಸಿ ದಿಗಂತ

ವಿಶ್ರಾಂತಕೀರ್ತಿಯುಂ ಪಡೆಮುತ್ತುಂ ದೀನವತ್ಸಳನಾಗಿಯುಂ ಶ್ರುತಸಹನನಾ
ಗಿಯುಂ ಮಿತವಚನನಾಗಿಯುಂ ಸ್ಮಿತವದನನಾಗಿಯುಂ ಧೃತವಿನಯಭಾರನಾ
ಗಿಯುಂ ಧೀರನಾಗಿಯುಂ ಗಂಭೀರಹೃದಯನಾಗಿಯುಂ ಮಹೋದಾರನಾ
ಗಿಯುಂ ಸತ್ಯಸಂಧನಾಗಿಯುಂ ದುಷ್ಕೃತ್ಯಪರಾಙ್ಮುಖನಾಗಿಯುಂ ಲೋ
ಕೋಪಕಾರನಿರತನಾಗಿಯುಂ ಸದಾಚಾರಶೀಲನಾಗಿಯುಂ ಶರಣಾಗತತ್ರಾಣ
ಧುರೀಣನಾಗಿಯುಂ ಶ್ರೀಚಾಮುಂಡಿಕಾಚರಣಾರವಿಂದಪರಿಚರಣಾನಂದನಿರಂ
ತರಭರಿತಾಂತರಂಗನಾಗಿಯುಂ ಪ್ರಜಾನುರಾಗಕ್ಕೆ ಪಾತ್ರನಾಗಿ ನಿಜಧರ್ಮದಿಂ
ರಾಜ್ಯಭಾರಂಗೆಯ್ಯುತಿಪ್ಪರ್ಪ್ಪುದಗಳ್ ॥೯೪॥

ವೃ॥ ಮಳೆಯಕ್ಕುಂ ಕಾಲಕಾಲಕ್ಕೆಳಸದಪೆಳೆಯಿಂದಂ ನೆಲಂ ಕಣ್ಗೊಳಕ್ಕುಂ |
ಕಳಿಯೇರುತ್ತಿರ್ಕ್ಕುಮೂರೂರುವಿಭವದೆ ಕಯೆ್ಕೊಂಡು ತಮ್ತಮ್ಮ ವರ್ಣಂ ||
ಗಳ ಸದ್ಧರ್ಮಂಗಳಂ ಸತ್ಪಥದೆ ನಡೆಯುತಿರ್ಕ್ಕುಂ ಜನಂ ಸೌಖ್ಯದಿಂದಂ |
ವಿಸತ್ಕರ್ಣಾಟಭೂಜಕ್ರಮೆ ಸತತಮುಮಕ್ಕುಂ ಪ್ರಶಸ್ತೋತ್ಸವಂಗಳ್ ॥೯೫॥

ಇದು ಜಗದ್ವಿದಿತ ಶ್ರೀಕಾಶ್ಯಪವಂಶಮುಕ್ತಾಮಣಿ ಶ್ರೀಗರಳಪುರೀಶಶಾಸ್ತ್ರಿ
ತನೂಭವನನುಂ ಶ್ರೀಮದಖಂಡ ಮಹೀಮಂಡಲ ಮಂಡನಾಯಮಾನಕ
ರ್ಣಾಟಜನಪದಲಕ್ಷ್ಮೀವಿಹಾರೈಕರಂಗಮಹೀಭೂತ ಮಹಿಶೂರರಾಜಧಾನೀ
ರತ್ನಸಿಂಹಾಸನಾಧೀಶ್ವರ ಯದುಕುಲಪಯೋನಿಧಿ ಪೂರ್ಣಚಂದ್ರಾಯಮಾಣ
ಶ್ರೀಚಾಮರಾಜೇಂದ್ರ ತನಯ ಶ್ರೀಕೃಷ್ಣರಾಜಮಹಾರಾಜಸಂಸ್ಕೃತ
ಕರ್ಣಾಟೋಭಯಪ್ರವಚನೋಪಾಧ್ಯಾಯನುಂ ಮಹಾವಿದ್ವ
ತ್ಪದಲಾಂಛನನುಂ ತನ್ಮಹಾರಾಜ ಕೃಷ್ಣರಾಜವಿತೀರ್ಣ
ಕವಿತಿಲಕಬಿರುದಾಂಕಿತನುಮಪ್ಪ ಸೋಸಲೆ
ಅಯ್ಯಶಾಸ್ತ್ರಿಯಿಂ ವಿರಚಿತವಾದ
ಮಹಿಶೂರಮಹಾರಾಜ ಚರಿತ್ರ
ಮೆಂಬ ಕರ್ಣಾಟ ಚಂಪೂ
ಮಹಾಕಾವ್ಯದೊಳ್
ದ್ವಾದಶಾಶ್ವಾಸಂ
ಸಂಪೂರ್ಣಂ.

ಶೋಧನಪತ್ರಿಕೆ.

ಪುಟ	ಪಙ್ತಿ	ಅಶುದ್ಧ	ಶುದ್ಧ
೬	೧೯	ನಳವಿಂಗಾ	ನಳವಿಂಗಾ
೯	೧೦	ಸುಗಣ	ಸುಗುಣ
೨೪	೧೫	ಸಮಗಟ್ಟ	ಸಮಕಟ್ಟ
೪೪	೬	ಟೀಪು	ಟೀಪು
೬೫	೪	ನಡರಿ	ನಡರ್ದು
೬೬	೩	ಮೆಲ್ಮೆಲ್ಲನಡಿ	ಮೆಲ್ಲಮೆಲ್ಲನಡಿ
೬೭	೨೪	ಗೆಳಸುವುದುವಾ	ಗೆಳಸುವುದುಂ
೭೩	೧೭–೧೪	ಸಿದ್ಧ। ಪೊರೆದುದು	ಸಿದ್ಧಂ। ಪೊರೆದುದು
೭೫	೧	ಭೂರುಹಕ್ಕ	ಭೂರುಹಕ್ಕೆ
೪೩	೧೬	ಚಾವಂ	ಚಾಮ
,,	೧೪	ಮಹೋತ್ಸವಮು	ಮಹೋತ್ಸವಮಂ
೪೭	೬	ಅಂದಿಗೀ	ಅಂದಿಂಗೀ
,,	೧೧	ವಸತಂ	ವಸಂತಂ
೯೫	೪	ಮೆಲ್ಮೆಲ್ಲ	ಬಲ್ಮೆಲ್ಲ
,,	೧೭	ವೇಸಿ	ವೇಸೆ
೯೯	೫	ಯೊಡ ಸುರ	ಯೊಡನೆ ಸುರ
೧೦೫	೧೯	ಪೇರೂಲವಿಂ	ಪೇರೊಲವಿಂ
೧೨೦	೨೬	ಪಾರಾಯಣಮಾಡು	ಪಾರಾಯಣಮೆಸಗು
೧೩೩	೧೦	ಭಕ	ಭಕ್ತ
೧೪೨	೬	ಮಂಜುಳರ	ಮಂಜುಳತರ
೧೪೪	೧೭	ಗಳೊಳು	ಗಳೊಳಂ
೧೪೯	೨೦	ಮೆಲ್ಮೆಲ್ಲ	ಬಲ್ಮೆಲ್ಲ
,,	೨೬	ಯಾಗದೇ	ಯಾಗುತೇ
೧೬೭	೩	ದೆಂದಿಗಂ	ದೆಂದಿಂಗಂ
೧೭೫	೧೦	ನಿನಾನ	ನಿನಾದ
೨೦೫	೨೭	ಬೀಳ್ಕೊಟ್ಟ	ಬೀಳ್ಕೊಂಡ
೨೧೬	೯೦	ಹಂತಿ	ಹಂತಿ ನೆಲಂ
,,	೨೧	ಶಿಲ್ಪಿಗಳ್	ಗೆಯ್ದ ಶಿಲ್ಪಿಗಳ್
೨೨೩	೬	ಸನ್ನಿತ	ಸನ್ನಿಹಿತ

ಪ್ರಕಟನೆ.

ಈ ಗ್ರಂಥಕರ್ತರಿಂದ ರಚಿಸಲ್ಪಟ್ಟಿರುವ ಇತರ ಪುಸ್ತಕಗಳು.

೧. ಕರ್ಣಾಟ ಪದ್ಯಮಹಾಕಾವ್ಯಂ ಶೇಷರಾಮಾಯಣಂ ... ೧—೪—೦

ಇದರಲ್ಲಿ ರಾಮಾಶ್ವಮೇಧದ ಕಥೆಯು ಪದ್ಮಪುರಾಣೋಕ್ತರೀತಿಯಿಂದ ವಾರ್ಧಿಕಪಟ್ಟಿಯಲ್ಲಿ ಬರೆಯಲ್ಪಟ್ಟಿರುವುದು.

೨ ಕರ್ಣಾಟಕ ರಾಮಾಯಣ ನಾಟಕಂ ... ... ೧—೦—೦

ಇದರಲ್ಲಿ ಶ್ರೀಮದ್ರಾಮಾಯಣದ ಆರುಕಾಂಡಗಳ ಕಥೆಯು ಅಡಕವಾಗಿರುವುದು.

೩. ಕರ್ಣಾಟಕ ವಿಕ್ರಮೋರ್ವಶೀಯ ನಾಟಕಂ ... ೦—೮—೦

ಇದು ಕಾಳಿದಾಸನಿಂದ ರಚಿಸಲ್ಪಟ್ಟ ಸಂಸ್ಕೃತ ವಿಕ್ರಮೋರ್ವಶೀಯನಾಟಕದ ಭಾಷಾಂತರವಾಗಿದೆ.

೪. ನಳಚರಿತ್ರ ನಾಟಕಂ ... . ೦—೧೨—೦

ಇದು ಸಂಸ್ಕೃತ ಮಹಾಭಾರತದಲ್ಲಿರುವ ನಳೋಪಾಖ್ಯಾನದ ಕಥಾಸರಣಿಯನ್ನು ಅನುಸರಿಸಿರುವುದು. ಈ ಮೂರು ನಾಟಕಗಳೂ ಓದುವವರಿಗೂ ಆಡುವವರಿಗೂ ಸಹ ಅನುಕೂಲವಾಗಿವೆ.

೫. ಈ ಪುಸ್ತಕಗಳಲ್ಲದೆ ಈ ಗ್ರಂಥಕರ್ತರಲ್ಲಿರುವ ಇವರ ತಂದೆಗಳಾದ ಲೇಟ್ ಅಸ್ಥಾನ ಮಹಾ ವಿದ್ವಾಂಸರು ಸೋಸಲೆ, ಗರಳಪುರೀ ಶಾಸ್ತ್ರಿಗಳಿಂದ ರಚಿಸಲ್ಪಟ್ಟ ಚಂಪೂ ರಾಮಾಯಣ ಯುದ್ಧಕಾಂಡವೆಂಬ (ಸವ್ಯಾಖ್ಯಾನ) ಸಂಸ್ಕೃತ ಗ್ರಂಥವು. ... ೦—೧೨—೦

ಈ ಪುಸ್ತಕಗಳೂ ಮಹಿಶೂರ ಮಹಾರಾಜ ಚರಿತ್ರೆಯೂ ಸಹ ಗ್ರಂಥಕರ್ತರಲ್ಲಿಯೂ ಈ ಕೆಳಗೆ ಕಾಣಿಸಿರುವ ಸ್ಥಳಗಳಲ್ಲಿಯೂ ದೊರೆಯುವುವು:—

೧. ದಿ ಜನರಲ್ ಏಜನ್ಸಿ,

ಲಕ್ಷ್ಮೀವಿಲಾಸ ರೋಡ್,

ಮೈಸೂರು.

೨. ವಾಜಪೇಯಂ ಕೃಷ್ಣಯ್ಯನವರ ಬುಕ್‌ಡಿಪೋ,

ಚಿಕ್ಕಪೇಟೆ,

ಬೆಂಗಳೂರು.

೩. ಎಮ್. ಎಸ್. ರಾವ್ ಬುಕ್‌ಡಿಪೋ,

ದೊಡ್ಡಪೇಟೆ,

ಬೆಂಗಳೂರು.

ಪೋಸ್ಟೇಜ್ ಅಲಾಯಿದಾ

ಎಸ್. ಕೃಷ್ಣಸ್ವಾಮಿಶಾಸ್ತ್ರಿ,

ಕವಿತಾವಿಲಾಸಂ,

ಮೈಸೂರು.